ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೭೧
ವಿಚಾರ ಸಾಹಿತ್ಯಮಾಲೆ – ೮೪
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಭಾರತೀಯ ರಾಜಕೀಯ ಚಿಂತನೆಯಲ್ಲಿ ಪರಮಾಧಿಕಾರ ಮತ್ತು ರಾಜ್ಯದ ಕಲ್ಪನೆಗಳು

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಭಾರತೀಯ ರಾಜಕೀಯ ಚಿಂತನೆಯಲ್ಲಿ ಪರಮಾಧಿಕಾರ ಮತ್ತು ರಾಜ್ಯದ ಕಲ್ಪನೆಗಳು

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧

ಮೂಲ
ಕೆ. ಎಂ. ಪಣಿಕ್ಕರ್

ಅನುವಾದ
ಎ. ಆರ್. ರಂಗರಾವ್

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Bharatiya Rajakiya Cintaneyalli Paramadikara mattu Rajyada Kalpanegalu: Kannada translation of *The Ideas of Sovereignty and State in Indian Political Thought* : **K.M. Panikkar;** Kannada translation by **A.R. Rangarao;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xx + 108. Price : Rs. 10/-

ಮುದ್ರಣ : ೨೦೧೩
ಪುಟಗಳು : xx + ೧೦೮
ಬೆಲೆ : ರೂ. ೧೦/-

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೪೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು - ೫೬೦ ೦೦೧

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ-ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ-ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ-ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

'ಕನಕದಾಸರ ಕೃತಿ'ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)

ಕರ್ನಾಟಕ ಸರ್ಕಾರ

ಕೆ.ಆರ್. ರಾಮಕೃಷ್ಣ, ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.



(ಕೆ. ಆರ್. ರಾಮಕೃಷ್ಣ)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು

ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

'ಭಾರತೀಯ ರಾಜಕೀಯ ಚಿಂತನೆಯಲ್ಲಿ ಪರಮಾಧಿಕಾರ ಮತ್ತು ರಾಜ್ಯದ ಕಲ್ಪನೆಗಳು' ಕೆ. ಎಂ. ಪಣಿಕ್ಕರ್ ಅವರ *The Ideas of Sovereignty and State in Indian Political Thought* ಕೃತಿಯ ಕನ್ನಡ ಅನುವಾದ. ಇದನ್ನು ಎ. ಆರ್. ರಂಗರಾವ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ-ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

ಕೆ. ಎಂ. ಮುನ್ಷಿ

ಪರಿವಿಡಿ

Blank

ಭಾರತೀಯ ರಾಜಕೀಯ ಚಿಂತನೆಯಲ್ಲಿ ಪರಮಾಧಿಕಾರ ಮತ್ತು ರಾಜ್ಯದ ಕಲ್ಪನೆಗಳು

೧. ಪೀಠಿಕೆ

ರಾಜನೀತಿ ಅಥವಾ ರಾಜಕೀಯ ವ್ಯವಹಾರ, ಗಹನವಾದ ಅಧ್ಯಯನಕ್ಕೆ ಯೋಗ್ಯವಾದ ವಿಷಯವಲ್ಲವೆಂದು ಹಿಂದೂಗಳು ಭಾವಿಸಿದ್ದರು. ಕೆಲವು ವರ್ಷಗಳ ಹಿಂದಿನವರೆಗೆ, ಐರೋಪ್ಯ ವಿದ್ವಾಂಸರಲ್ಲಿ ಮಾತ್ರವಲ್ಲದೆ ಸುಶಿಕ್ಷಿತ ಭಾರತೀಯರಲ್ಲೂ ಇಂತಹುದೇ ಅಭಿಪ್ರಾಯವಿತ್ತು. ಆಗಿನ ಕಾಲದಲ್ಲಿ ಜನರು ಆಧ್ಯಾತ್ಮಿಕ ವಿಚಾರಗಳಲ್ಲೇ ಹೆಚ್ಚು ಮಗ್ನರಾಗಿರುತ್ತಿದ್ದರು. ಆದ್ದರಿಂದ, ಪರಮಾಧಿಕಾರ (Sovereignty) ಸಿದ್ಧಾಂತ, ನಿಷ್ಠಾವಂತಿಕೆಯ ತತ್ವ, ರಾಜ್ಯ ಮತ್ತು ಸಮಾಜದ ಸ್ವರೂಪ– ಇವೆಲ್ಲವೂ ತೀವ್ರ ಪರಿಶೀಲನೆಗೆ ಅರ್ಹವಾದಂತಹ ವಿಷಯಗಳೆಂದು ಅವರು ಭಾವಿಸಿರಲಿಲ್ಲ. ರಾಜಕೀಯಶಾಸ್ತ್ರ ಗ್ರೀಸ್ ದೇಶದಿಂದ ಬಂದ ಒಂದು ಕೊಡುಗೆ ಎಂಬುದು ಆ ಕಾಲದ ಜನರ ದೃಢನಂಬಿಕೆಯಾಗಿತ್ತು. 'ರಾಜ್ಯ' ಎನ್ನುವುದು, ನೀತಿ ಮತ್ತು ತತ್ವಗಳ ಪ್ರತಿಪಾದನೆಯ ಫಲಸ್ವರೂಪವಾಗಿ ರೂಪುಗೊಂಡ ಒಂದು ವ್ಯವಸ್ಥೆ. ಇವು ಒಂದು ರಾಜ್ಯದ ಅಸ್ತಿತ್ವಕ್ಕೆ ಮತ್ತು ಅದರ ಕಾರ್ಯಕಲಾಪಗಳಿಗೆ ತಾತ್ತ್ವಿಕ ಆಧಾರವನ್ನು ಕಲ್ಪಿಸಿಕೊಡುತ್ತದೆ ಎಂಬ ವಿಚಾರ ಭಾರತಕ್ಕೆ ಇನ್ನೂ ತಿಳಿದಿರಲಿಲ್ಲ.

ರಾಜಕೀಯಶಾಸ್ತ್ರ ಕುರಿತ ಮುಂಚಿನ ಕಾಲದ ಲೇಖಕರಿಗೆ ತಿಳಿದಿದ್ದ ಏಕಮಾತ್ರ ರಾಜ್ಯವ್ಯವಸ್ಥೆಯೆಂದರೆ ಪರ್ಶಿಯನ್ ಸಾಮ್ರಾಜ್ಯವಾಗಿತ್ತು. ಆದ್ದರಿಂದ, ಇದೇ, ಆಗಿನ ಜನರಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದ್ದ ಒಂದು ತಪ್ಪು ಭಾವನೆಗೆ ಕಾರಣವಾಗಿತ್ತು. ಪರ್ಶಿಯನ್ ಚಕ್ರಾಧಿಪತ್ಯದ ಸಿದ್ಧಾಂತ ಮತ್ತು ರಾಜ್ಯವ್ಯವಸ್ಥೆಯ ಸ್ವರೂಪವನ್ನು ಗ್ರೀಕ್ ಮತ್ತು ರೋಮನ್ ಇತಿಹಾಸಕಾರರು ಐರೋಪ್ಯ ದೇಶಗಳ ವಿದ್ವಾಂಸರುಗಳಿಗೆ ಪರಿಚಯಿಸಿಕೊಟ್ಟಿದ್ದರು. ಆದ್ದರಿಂದ ನಿರಂಕುಶಾಧಿಕಾರವೇ ರಾಜ್ಯದ ಅಥವಾ ಸರ್ಕಾರದ ಏಕೈಕ ಗುಣಲಕ್ಷಣವೆಂಬ ಅಭಿಪ್ರಾಯ ಎಷ್ಟೋ ಕಾಲದವರೆಗೆ ಮುಂದುವರಿದುಕೊಂಡು ಬಂದಿತ್ತು. ಬೈಜ಼ಂಟೈನ್ ಸಾಮ್ರಾಜ್ಯದ ನಿರಂಕುಶ ಪ್ರಭುತ್ವವು ಪೌರ್ವಾತ್ಯ ರಾಜ್ಯಭಾರ ಪದ್ಧತಿಯನ್ನು ಪ್ರತಿಬಿಂಬಿಸುವುದೆಂದು ಪರಿಗಣಿಸಲಾಗಿತ್ತು. ಈ ವಿಚಾರವು ಸಾಮಾನ್ಯವಾಗಿ ಎಲ್ಲೆಡೆಯೂ ಅಂಗೀಕೃತವಾಗಿತ್ತು. ಭಾರತದಲ್ಲೂ ಇದೇ ಅಭಿಪ್ರಾಯವಿತ್ತು. ಆದ್ದರಿಂದ ಪರಿಶೀಲನಾರ್ಹವಾದಂತಹ ರಾಜಕೀಯ ಅಥವಾ ಸಾಮಾಜಿಕ ತತ್ವ ಭಾರತದಲ್ಲಿರಲು ಸಾಧ್ಯವಿರಲಿಲ್ಲ.

ಪಾಶ್ಚಾತ್ಯ ವಿದ್ವಾಂಸರು ಭಾರತೀಯ ನಾಗರಿಕತೆ ಕುರಿತು ಅಧ್ಯಯನ ನಡೆಸಿದ್ದರು. ಆದರೆ ಅವರು ಇತಿಹಾಸವನ್ನಾಗಲಿ ಅಥವಾ ರಾಜಕೀಯ ಶಾಸ್ತ್ರವನ್ನಾಗಲಿ ಅಭ್ಯಾಸ ಮಾಡಿರಲಿಲ್ಲವೆಂಬುದನ್ನು ನಾವು ಮರೆಯಬಾರದು. ಸಾಹಿತ್ಯ ಮತ್ತು ತತ್ವಜ್ಞಾನದ ಅಧ್ಯಯನದೊಂದಿಗೆ ಸಂಸ್ಕೃತ ಭಾಷೆಯಲ್ಲಿ ವಿದ್ವಾಂಸರ ಪ್ರೌಢಿಮೆ ಆರಂಭವಾಯಿತು. ಸಂಸ್ಕೃತವು ಮ್ಯಾಕ್ಸ್ ಮ್ಯುಲ್ಲರ್‌ನ ತರುವಾಯ ಒಂದು ಭಾಷೆಯಾಗಿ ಅತಿ ಹೆಚ್ಚಿನ ಪ್ರಾಮುಖ್ಯ ಪಡೆಯಿತು. ಪೌರ್ವಾತ್ಯ ಪಂಡಿತರುಗಳು ಪ್ರಾಚೀನ ಭಾರತದ ಬಗ್ಗೆ ಅಧ್ಯಯನ ನಡೆಸಿದರು. ಈ ಪಂಡಿತರುಗಳನ್ನು ಅವರು ನಡೆಸಿದ ಅಧ್ಯಯನದ ಆಧಾರದ ಮೇಲೆ ಮೂರು ವರ್ಗಗಳಾಗಿ ವಿಂಗಡಿಸಬಹುದು. ಸಂಸ್ಕೃತ, ಪಾಳಿ ಅಥವಾ ಪ್ರಾಕೃತದ ಬಗ್ಗೆ ಅಧ್ಯಯನ ಮಾಡಿದ ಪಂಡಿತರುಗಳ ವರ್ಗವೊಂದಾದರೆ, ಧರ್ಮ, ತತ್ವಜ್ಞಾನ ಅಥವಾ ಆಧ್ಯಾತ್ಮಿಕ ವಿಷಯಗಳ ಕುರಿತು ಅಧ್ಯಯನ ನಡೆಸಿದ ವಿದ್ವಾಂಸರ ಮತ್ತೊಂದು ವರ್ಗವಿತ್ತು. ಮೂರನೆಯ ವರ್ಗಕ್ಕೆ ಸೇರಿದ ವಿದ್ವಾಂಸರು ಭಾಷಾ ಶಾಸ್ತ್ರದ ಅಧ್ಯಯನದಲ್ಲೇ ನಿರತರಾಗಿದ್ದರು. ಅವರಲ್ಲಿ ಯಾರೂ, ಭಾರತೀಯ ನಾಗರಿಕತೆ ಬಗ್ಗೆ ಸಮಗ್ರ ಅಧ್ಯಯನ ನಡೆಸಲಿಲ್ಲ. ಭಾರತೀಯ ಇತಿಹಾಸ ಆಗ ಬಹುಮಹತ್ವದ ವಿಷಯವಾಗಿತ್ತು. ಆದರೂ ಈ ವಿದ್ವಾಂಸರುಗಳು ಶಾಸನಗಳಲ್ಲಿದ್ದ ಲಿಪಿಯ ಮತ್ತು ನಾಣ್ಯಗಳ ಅಧ್ಯಯನಕ್ಕೆ ಅತಿ ಹೆಚ್ಚು ಗಮನ ಕೊಟ್ಟರು. ಅವರು ತಾವು ನಡೆಸಿದ ಅಧ್ಯಯನದಲ್ಲಿ ಕಂಡುಬಂದ ಅಂಶಗಳ ಅರ್ಥವಿವರಣೆಗಿಂತ, ಸಂಶೋಧನೆಯ ತಾಂತ್ರಿಕ ಅಂಶಗಳಿಗೆ ಹೆಚ್ಚು ಗಮನ ಕೊಟ್ಟರು. ವಾಸ್ತವಿಕ ಹಾಗೂ ಭೌತ ವಿಜ್ಞಾನಗಳಲ್ಲಿ, ಭಾರತ ಅಧ್ಯಯನಕ್ಕೆ ಅರ್ಹವಾದಂತಹ ಯಾವ ಕೊಡುಗೆಯನ್ನೂ ನೀಡಿಲ್ಲವೆಂದೇ ಪಾಶ್ಚಾತ್ಯ ವಿದ್ವಾಂಸರುಗಳು ಭಾವಿಸಿದ್ದರು. ರಾಜಕೀಯ ದೃಷ್ಟಿಯಿಂದ ಹಿಂದೂಗಳ ಸಮುದಾಯ ಅಷ್ಟೊಂದು ಪ್ರಬಲವಾಗಿರಲಿಲ್ಲ. ಅನೇಕ ಶತಮಾನಗಳವರೆಗೆ ಈ ದೌರ್ಬಲ್ಯ ಮುಂದುವರಿಯಿತು.

ರಾಜಕೀಯ ಕ್ಷೇತ್ರದಲ್ಲಿ ತೀವ್ರ ಪರಿಶೀಲನೆಗೆ ಅರ್ಹವಾದ ಯಾವ ಕೊಡುಗೆಯನ್ನೂ ಭಾರತ ನೀಡಿಲ್ಲವೆಂಬ ಪಾಶ್ಚಾತ್ಯ ಚಿಂತನಕಾರರ ಅಭಿಪ್ರಾಯಕ್ಕೆ ಇದು ಮತ್ತಷ್ಟು ಪುಷ್ಟಿ ನೀಡಿತು. ಕೌಟಿಲ್ಯನ ಅರ್ಥಶಾಸ್ತ್ರದ ಶೋಧ, ತಮಗಿದ್ದ ಅಲ್ಪಜ್ಞಾನದಲ್ಲೇ ಸಂತೃಪ್ತರಾಗಿದ್ದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ವಿದ್ವಾಂಸರಿಗೆ ಆಘಾತವನ್ನು ಉಂಟುಮಾಡಿತು. ಆಗ ಈ ವಿದ್ವಾಂಸರು ಅರ್ಥಶಾಸ್ತ್ರವನ್ನು ನಿಜವಾಗಿ ಯಾರು ಬರೆದರು? ಅದನ್ನು ಬರೆದ ಕಾಲ ಯಾವುದಿರಬಹುದು? ಅದನ್ನು ಬರೆದವನು ಕೌಟಿಲ್ಯನೇ ಅಥವಾ ಅವನ ಶಿಷ್ಯರಲ್ಲೊಬ್ಬನೇ ಎಂಬ ಈ ವಿಷಯಗಳ ಅಧ್ಯಯನವನ್ನು ವಿದ್ವಾಂಸರು ಆರಂಭಿಸಿದರು. ಈ ವಿಷಯಗಳ ಕುರಿತಂತೆ ಹಲವಾರು ಗ್ರಂಥಗಳಿದ್ದರೂ, ಕೌಟಿಲ್ಯನ ಈ ಗ್ರಂಥದ ಹಿರಿಮೆ ಮತ್ತು ಮಹತ್ವವನ್ನು ಮರೆಮಾಚಲು ಅವರಿಗೆ ಸಾಧ್ಯವಾಗಲಿಲ್ಲ. ಗ್ರಂಥಗಳನ್ನು ಬರೆದವರು ಯಾರೇ ಆಗಿರಲಿ, ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಈ ವಿಜ್ಞಾನ, ಭಾರತದಲ್ಲಿ ತೀವ್ರ ಪರಿಶೀಲನೆ ಹಾಗೂ ಅಧ್ಯಯನಕ್ಕೆ ಒಳಪಟ್ಟಿತ್ತೆಂಬುದರಲ್ಲಿ ಸಂದೇಹವಿಲ್ಲ. ಒಂದು ರಾಜ್ಯದ ಪರಮಾಧಿಕಾರದ ಲಕ್ಷಣಗಳು, ರಾಜ್ಯ ನಿರ್ವಹಿಸಬೇಕಾದ ಕೆಲಸಕಾರ್ಯಗಳು, ವ್ಯಕ್ತಿಗಳೊಂದಿಗೆ ರಾಜ್ಯದ ಸಂಬಂಧ ಮತ್ತು ಸಾಮಾಜಿಕ ವ್ಯವಸ್ಥೆಯ ಇತರ ಸಮಸ್ಯೆಗಳು– ಇವುಗಳ ವಿವರಣೆ ನೀಡುವ ಕಾರ್ಯದಲ್ಲಿ ಅಂದಿನ ಚಿಂತನಕಾರರು ತೊಡಗಿದ್ದರು. ವಿಭಿನ್ನ ವಿಚಾರಗಳನ್ನು ಹೊಂದಿದ್ದ, ಕಡೇ ಪಕ್ಷ ಎಂಟು ಪಂಥಗಳ ಬೋಧಕರನ್ನು ಉಲ್ಲೇಖಿಸಿ, ಕೌಟಿಲ್ಯನೇ ಸ್ವತಃ ಅವರನ್ನು ಟೀಕಿಸಿದ್ದಾನೆ.

ಕೌಟಿಲ್ಯನು ಅರ್ಥಶಾಸ್ತ್ರವನ್ನು ಬರೆಯುವುದಕ್ಕೆ ಬಹಳ ಹಿಂದೆಯೇ, ರಾಜಕಾರಣಕ್ಕೆ ಸಮಬಂದಪಟ್ಟ ವಿಜ್ಞಾನವನ್ನು ಒಂದು ಗಹನ ವಿಷಯವನ್ನಾಗಿ ಪರಿಗಣಿಸಿ, ಸೂಕ್ತ ಮನ್ನಣೆ ನೀಡಲಾಗಿತ್ತು. ಈ ವಿಷಯದ ಮೇಲೆ ಅನೇಕ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಆಧಾರಬದ್ಧವಾದ, ಉದ್ಗ್ರಂಥಗಳನ್ನು ರಚಿಸಿದ್ದರು. ಕೌಟಿಲ್ಯನು ಉಲ್ಲೇಖಿಸಿರುವ ಗ್ರಂಥಗಳನ್ನು ಬರೆದವರ ಹೆಸರುಗಳು ಬೆಳಕಿಗೆ ಬರಲಿಲ್ಲ. ಆದರೂ ಅನಂತರದ ವರ್ಷಗಳಲ್ಲಿ ಅವರುಗಳು ಬರೆದಿದ್ದ ಗ್ರಂಥಗಳ ಸಾರಾಂಶರೂಪ ಲಭ್ಯವಾಗಿದೆ. ಕೌಟಿಲ್ಯನಿಂದ ಉಲ್ಲೇಖಿತವಾಗಿರುವ ಪ್ರಕಾರ, ಇವು "ಶುಕ್ರನೀತಿಸಾರ" ಮತ್ತು "ಕಾಮಂದಕ"ದಂತಹ ವಿಚಾರಪಂಥಗಳಿಗೆ ಸೇರಿದ ಗ್ರಂಥಗಳಾಗಿರಬಹುದು. ಕೌಟಿಲ್ಯ, ಯಾವುದೇ ರೀತಿಯಲ್ಲೂ ಈ ಹೊಸ ವಿಜ್ಞಾನದ ಆದ್ಯ ಪ್ರವರ್ತಕನಲ್ಲವೆಂಬುದು ಸುಸ್ಪಷ್ಟವಾಗುತ್ತದೆ. ರಾಜಕೀಯ ಶಾಸ್ತ್ರದ ಬಗ್ಗೆ ಅನೇಕ ವೈಜ್ಞಾನಿಕ ಗ್ರಂಥಗಳಿವೆ. ಈ ಗ್ರಂಥಗಳ ದೃಷ್ಟಿಯಿಂದ ಪರಿಶೀಲಿಸಿದಾಗ, ಮಹಾಭಾರತದ 'ಶಾಂತಿಪರ್ವ' ಒಳಗೊಂಡಿರುವ 'ರಾಜಧರ್ಮ' ಅಧ್ಯಾಯಗಳು, ರಾಜರಿಗೆ ನೀಡುವ ಬುದ್ಧಿಮಾತುಗಳಿಗಿಂತಲೂ ಹೆಚ್ಚಿನ ತಾತ್ಪರ್ಯವನ್ನು ಹೊಂದಿವೆ. ಮಹಾಭಾರತದಲ್ಲಿರುವ ಈ ಅಧ್ಯಾಯಗಳು ಜ್ಞಾನಕೋಶದ ಪ್ರತೀಕವಾಗಿದೆಯೆಂದರೂ ಅತಿಶಯವಾಗಲಾರದು. ವಿವಿಧ ಪಂಥಗಳ ಅಭಿಪ್ರಾಯಗಳನ್ನು, ವೈಚಾರಿಕ ದೃಷ್ಟಿಯಿಂದ ವಿಶ್ಲೇಷಿಸಲಾಗಿದೆ. ಹಕ್ಕುಗಳ ಮತ್ತು ಕರ್ತವ್ಯಗಳ ಸುಸಂಗತ ವಿವರಣೆಯಿದೆ.

ಕಳೆದ ಅರ್ಧ ಶತಮಾನದಲ್ಲಿ ರಾಜಕೀಯ ಸಿದ್ಧಾಂತಗಳಿಗೆ ಮತ್ತು ಹಿಂದೂ ಸರ್ಕಾರಿ ಸಂಸ್ಥೆಗಳಿಗೆ ಸಂಬಂಧಪಟ್ಟ ಅಧಿಕ ಸಂಖ್ಯೆಯ ಪುಸ್ತಕಗಳು ಬಂದಿವೆ. ಈ ವಿಚಾರಸರಣಿಯಲ್ಲಿ ದಿವಂಗತ ಕೆ.ಪಿ. ಜಯಸ್ವಾಲ್ ಮೊದಲಿಗರೆಂಬುದರಲ್ಲಿ ಸಂದೇಹವಿಲ್ಲ. ಅವರು ಹಿಂದೂ ರಾಜ್ಯಾಡಳಿತ ಪದ್ಧತಿ ಕುರಿತ ಒಂದು ಅದ್ಭುತ ಪುಸ್ತಕವನ್ನು ಬರೆದಿದ್ದಾರೆ. ಅವರು ಈ ಪುಸ್ತಕದಲ್ಲಿ ಹಿಂದೂಗಳು, ರಾಜಕೀಯ ವಿಷಯದಲ್ಲಿ, ಎಷ್ಟು ದೊಡ್ಡ ವಿಚಾರಸಂಪತ್ತು ಹೊಂದಿದ್ದರೆಂಬುದನ್ನು ವಿವರಿಸಿದ್ದಾರೆ. ಅಷ್ಟೇ ಅಲ್ಲದೆ, ಭಾರತದಲ್ಲಿ ದೇಶೀಯ ರಾಜಕೀಯ ಸಂಸ್ಥೆಗಳು ಹೇಗೆ

ವಿಕಾಸಗೊಂಡಿವೆ ಎಂಬುದನ್ನು ಸಹ ಅವರು ತಿಳಿಸಿದ್ದಾರೆ. ಹಿಂದೂ ರಾಜಕೀಯ ಚಿಂತನೆ ಕುರಿತು ಅಧ್ಯಯನ ನಡೆಸುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಜಯಸ್ವಾಲ್ ಅವರಿಗೆ ಋಣಿಯಾಗಿರಬೇಕು. ಅಸ್ಪಷ್ಟವಾಗಿರುವ ಅನೇಕ ಅಂಶಗಳಿಗೆ ಜಯಸ್ವಾಲ್ ಸೂಕ್ತ ವಿವರಣೆ ನೀಡಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳ ಮೇಲೆ ಅವರು ಬೆಳಕು ಚೆಲ್ಲಿದ್ದಾರೆ. ಹಳೆಯ ವಿಚಾರಗಳಿಗೆ, ಆಧುನಿಕ ರೂಪುಕೊಟ್ಟು, ಅರ್ಥವಿವರಣೆ ನೀಡಿದ್ದಾರೆ. ಹಳೆಯ ವಿಚಾರಗಳಿಗೆ ಅತ್ಯಾಧುನಿಕ ಮಾದರಿಯಲ್ಲಿ ಅರ್ಥ ವಿವರಣೆ ನೀಡಲು ಅವರು ಪ್ರಯತ್ನಿಸಿದರು. ಆ ಕಾಲದಲ್ಲಿ ಭಾರತದ ರಾಜಕೀಯ ಚಿಂತನೆ ಹಾಗೂ ವಿಚಾರಗಳು ತುಂಬ ಕ್ರಿಯಾತ್ಮಕವಾಗಿದ್ದವು. ಅವು ಬಹುದೀರ್ಘ ಕಾಲದವರೆಗೆ ಅನುಸರಿಸಿಕೊಂಡು ಹೋಗಬಹುದಾದಂತಹ ವ್ಯವಸ್ಥೆಗಳಾಗಿದ್ದವು ಎಂಬುದನ್ನು ಜಯಸ್ವಾಲ್ ತೋರಿಸಿಕೊಟ್ಟಿದ್ದಾರೆ. ಅವರಲ್ಲಿದ್ದಂತಹ ಈ ವಿಚಾರಗಳು ಭಾರತದ ಇತಿಹಾಸದಲ್ಲಿನ ಇಂದಿನ ಪರಿಸ್ಥಿತಿಗೂ ಅನ್ವಯವಾಗುವಂತಹದಾಗಿವೆ ಎಂದು ಜಯಸ್ವಾಲ್ ಹೆಮ್ಮೆಯಿಂದ ಹೇಳುತ್ತಾರೆ.

"ತಮ್ಮ ಪ್ರಯತ್ನಗಳ ಫಲಿತಾಂಶಗಳು ಹೆಚ್ಚು ಕಡಿಮೆ ಪ್ರತಿವರ್ಷ ಉಲ್ಲೇಖಗೊಳ್ಳುತ್ತಿರುವುದನ್ನು ಕಂಡು ತಮಗೆ ತುಂಬ ಸಂತೃಪ್ತಿಯುಂಟಾಗಿದೆ. ಈ ಅಂಶಗಳನ್ನು ಒಪ್ಪಿಗೆ ಪಡೆದೋ, ಪಡೆಯದೆಯೋ ಮತ್ತೆ ಮತ್ತೆ ದೃಢಪಡಿಸಲಾಗುತ್ತಿದೆ. ಈಗ ಇದೊಂದು ಜನಪ್ರಿಯ ವಿಷಯವಾಗಿದೆ. ಒಟ್ಟಿನಲ್ಲಿ ಸತ್ಯಕ್ಕೆ ಮನ್ನಣೆ ದೊರೆತಿದೆ. ಸತ್ಯವನ್ನು ಅಂಗೀಕರಿಸಲಾಗಿದೆ ಮತ್ತು ಸ್ವೀಕರಿಸಲಾಗಿದೆ. ಈಗ ಈ ವಿಚಾರ ತಮ್ಮದೆಂದು ಹೇಳಿಕೊಳ್ಳುವ ಹಂತ ಮುಗಿದಿದೆ."[೧]

ಪ್ರಾಚೀನ ಕಾಲದ ಹಿಂದೂ ಲೇಖಕರಲ್ಲಿ ಒಂದು ಪದ್ಧತಿಯಿತ್ತು. ಅವರು ಶುಕ್ರ ಮತ್ತು ಬೃಹಸ್ಪತಿಗೆ ಪ್ರಾರ್ಥನೆ ಮಾಡಿಕೊಂಡು, ಬರಹವನ್ನು ಆರಂಭಿಸುತ್ತಿದ್ದರು. ಶುಕ್ರ ಮತ್ತು ಬೃಹಸ್ಪತಿ – ಇಬ್ಬರೂ ತಮ್ಮ ಈ ವಿಜ್ಞಾನದ ಪರಂಪರಾಗತ ಗುರುಗಳೆಂದು ಅವರು ಪರಿಗಣಿಸಿದ್ದುದು. ಅದರಂತೆಯೇ, ರಾಜಕೀಯಶಾಸ್ತ್ರದ ಆಧುನಿಕ ವಿದ್ಯಾರ್ಥಿಗಳು ಸಹ ಶ್ಯಾಮಶಾಸ್ತ್ರಿ ಮತ್ತು ಜಯಸ್ವಾಲ್ ಅವರಿಗೆ ಪ್ರಾರ್ಥನೆ ಸಲ್ಲಿಸುವುದು ಅತ್ಯಂತ ಸಮಂಜಸವೆನಿಸುತ್ತದೆ. ಏಕೆಂದರೆ, ಶ್ಯಾಮಾಶಾಸ್ತ್ರಿ ಕೌಟಿಲ್ಯನ ಕೃತಿಗಳನ್ನು ಪತ್ತೆ ಹಚ್ಚಿ ಪ್ರಸ್ತುತಪಡಿಸಿದ ಮೊದಲಿಗರು. ಜಯಸ್ವಾಲ್ ಈ ವಿಜ್ಞಾನವನ್ನು ಪುನರ್‌ಶೋಧಿಸಿದ ಮಹಾವ್ಯಕ್ತಿ. ರಾಜಕೀಯ ವಿಷಯಕ್ಕೆ ಗಮನಾರ್ಹ ಕೊಡುಗೆ ಸಲ್ಲಿಸಿರುವ ಇನ್ನೂ ಕೆಲವು ಮಹಾಪುರುಷರಿದ್ದಾರೆ. ಅವರಲ್ಲಿ 'ದಿ ಸ್ಟೇಟ್ ಇನ್ ಇಂಡಿಯಾ' ಮತ್ತು 'ದಿ ಥಿಯರಿ ಆಫ್ ಗವರ್ನಮೆಂಟ್ ಇನ್ ಏನ್ಷಿಯೆಂಟ್ ಇಂಡಿಯಾ' ಎಂಬ ಕೃತಿಗಳನ್ನು ಬರೆದ ವೇಣಿಪ್ರಸಾದ್ ಮತ್ತು 'ಹಿಸ್ಟರಿ ಆಫ್ ಇಂಡಿಯನ್ ಪೊಲಿಟಿಕಲ್ ಐಡಿಯಾಲಜಿ' ಎಂಬ ಗ್ರಂಥ ಬರೆದ ಡಾ॥ ಉಪೇಂದ್ರನಾಥ್ ಘೋಷಾಲ್ ಸೇರಿದ್ದಾರೆ.

ಈಗಿನ ಉಪನ್ಯಾಸಗಳು, ವಿಷಯದ ಒಂದು ಭಾಗಕ್ಕೆ ಮಾತ್ರ ಸಂಬಂಧಿಸಿವೆ. ಭಾರತದ ರಾಜಕೀಯ ಸಿದ್ಧಾಂತದಲ್ಲಿ ಪರಮಾಧಿಕಾರ ಮತ್ತು ರಾಜ್ಯ– ಇವನ್ನು ಪರಿಶೀಲಿಸುವುದೇ ಲೇಖಕರ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ, ರಾಜಪಟ್ಟದ (Kingship) ಉಗಮ, ಹಿಂದೂಗಳು ಭಾವಿಸಿರುವಂತೆ ಪರಮಾಧಿಕಾರದ ಅಂಗೀಕೃತ ಸ್ವರೂಪ, ಅದರ ಸ್ವಭಾವ, ಪರಮಾಧಿಕಾರ ಹೊಂದಿದ್ದ ರಾಜರಿಗೆ ವಿಧಿಸಲಾಗಿದ್ದ ಕಟ್ಟಳೆಗಳು, ಪರಮಾಧಿಕಾರವಿದ್ದ ರಾಜ ಮತ್ತು ಆತನಿಂದ ಆಳಲ್ಪಡುತ್ತಿದ್ದ ಜನ್ಮದ ನಡುವಣ ಸಂಬಂಧಗಳು – ಇವೆಲ್ಲವುಗಳ ಅಧ್ಯಯನವೇ ಲೇಖಕನ ಉದ್ದೇಶವಾಗಿತ್ತು. ರಾಜಕೀಯ ವಿಷಯಗಳ ಕುರಿತ ಲೇಖಕರು, ರಾಜನನ್ನು ಸಂಪೂರ್ಣವಾಗಿ, ರಾಜ್ಯದ ಒಂದು ಭಾಗವನ್ನಾಗಿ ಗುರುತಿಸಿರಲಿಲ್ಲ. ರಾಜನನ್ನು ರಾಜ್ಯದ ಏಳು ಪ್ರತಿನಿಧಿಗಳಲ್ಲಿ ಒಬ್ಬನೆಂದು ಮಾತ್ರ ಗುರುತಿಸಲಾಗುತ್ತಿತ್ತು. ಇಡೀ ರಾಜ್ಯವನ್ನೇ ಒಂದು ಸಮಗ್ರ ವ್ಯವಸ್ಥೆಯನ್ನಾಗಿ ಪರಿಗಣಿಸಲಾಗಿತ್ತು. ಈ ಸಮಗ್ರ ವ್ಯವಸ್ಥೆ ಬರಿ ಭೂಪ್ರದೇಶವನ್ನಷ್ಟೇ ಅಲ್ಲದೆ, ಅಲ್ಲಿರುವ ಜನರು ಮತ್ತು ರಾಜನನ್ನು ಸಹ ಒಳಗೊಂಡಿರುತ್ತದೆ. ಅಷ್ಟೇ ಅಲ್ಲದೆ, ಅದು ಮಂತ್ರಿಮಂಡಳವನ್ನು ಹಾಗೂ ಇತರ ಸೇವಾವ್ಯವಸ್ಥೆಗಳನ್ನು ಸಹ ಒಳಗೊಂಡಿರುತ್ತದೆ ಎಂಬುದು ಈ ಲೇಖಕರುಗಳ ವಿಚಾರವಾಗಿತ್ತು.

ಯೂರೋಪ್‌ನಲ್ಲಿ, ಗ್ರೀಸ್ ಮುಂಚೆ ತನ್ನದೇ ಆದ ವಿಚಾರವನ್ನು ಹೊಂದಿತ್ತು. ಅದನ್ನು ಬಿಟ್ಟರೆ, ಮಧ್ಯಯುಗದಲ್ಲಿ ರಾಜ್ಯ ಮತ್ತು ರಾಜನ ನಡುವೆ ಯಾವ ಸ್ಪಷ್ಟ ವ್ಯತ್ಯಾಸವೂ ಇರಲಿಲ್ಲ. ಪ್ರೊಫೆಸರ್ ಪಾಸ್‌ಕ್ವೇಲ್ ವಿಲ್ಲರಿ, ತಮ್ಮ *'ಲೈಫ್ ಅಂಡ್ ಟೈಮ್ ಆಫ್ ಮೆಕಿಯವೆಲ್ಲಿ'* ಎಂಬ ಪುಸ್ತಕದಲ್ಲಿ ಹೀಗೆ ತಿಳಿಸಿದ್ದಾರೆ:[೨] "ಮಧ್ಯಯುಗದಲ್ಲಿದ್ದ ಜನರಿಗೆ, ನಾವು ರಾಜ್ಯವೆಂದು ಕರೆಯುವಂತಹ ಒಂದು ರಾಜಕೀಯ ವ್ಯವಸ್ಥೆಯಿದೆ ಎಂಬ ಅರಿವೇ ಇರಲಿಲ್ಲ. ಇಂತಹ ಒಂದು ರಾಜ್ಯವು ಸಾಮಾಜಿಕ ಶಕ್ತಿಗಳನ್ನು ಒಗ್ಗೂಡಿಸಿ, ಅವುಗಳ ನಡುವೆ ಸಮನ್ವಯತೆಯನ್ನು ತರುತ್ತದೆ ಎಂಬುದೇ ಆ ಜನರಿಗೆ ಗೊತ್ತಿರಲಿಲ್ಲ. ಇಂತಹ ರಾಜ್ಯಕ್ಕೆ ಬದಲಾಗಿ, ಸಮಾಜವನ್ನು ಜಹಗೀರುಗಳಾಗಿ ಮತ್ತು ದೊಡ್ಡ ಮತ್ತು ಸಣ್ಣ ಪರಗಣಗಳಾಗಿ (Communes) ವಿಭಜಿಸಲಾಗುತ್ತಿತ್ತು. ಪರಗಣವು, ಸಣ್ಣ ಸಣ್ಣ ಸಂಸ್ಥೆಗಳನ್ನು ಒಳಗೊಂಡ ಒಂದು ಘಟಕವಾಗಿರುತ್ತಿತ್ತು. ಅದು ವ್ಯವಸ್ಥಿತವಾಗಿರದ ಒಂದು ವಲಯವಾಗಿರುತ್ತಿತ್ತು."

ಭಾರತದಲ್ಲಾದರೋ ರಾಜ್ಯವು ಸುವ್ಯವಸ್ಥಿತವಾದ ಜಾತ್ಯತೀತ ಸಮುದಾಯವೊಂದರ ಎಲ್ಲ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿತ್ತು. ಒಂದು ರಾಜ್ಯ ನಿರ್ವಹಿಸಬೇಕಾದ ಕೆಲಸ ಕಾರ್ಯಗಳನ್ನು ಕೌಟಿಲ್ಯನ *ಅರ್ಥಶಾಸ್ತ್ರ*ದಲ್ಲಿ ಮಾತ್ರವಲ್ಲದೆ, *ಮಹಾಭಾರತ*ದಲ್ಲೂ ವಿವರಿಸಲಾಗಿರುವುದನ್ನು ನಾವು ಕಾಣಬಹುದು. ರಾಜ್ಯ ನಿರ್ವಹಿಸಬೇಕಾದ ಕೆಲಸ ಕಾರ್ಯಗಳು, ಎಲ್ಲ ಸಾಮಾಜಿಕ ಚಟುವಟಿಕೆ ಗಳಿಗಿಂತಲೂ

ಅತಿ ಜಟಿಲವಾದುದೆಂದು ಹಿಂದೂಗಳು ಭಾವಿಸಿದ್ದರೆಂಬುದು ಇದರಿಂದ ಸುಸ್ಪಷ್ಟವಾಗುತ್ತದೆ. ಲೇಖಕರೊಬ್ಬರು ಬರೆದಿರುವ ಪ್ರಕಾರ "ಶಾಂತಿಪರ್ವ ಸಿದ್ಧಾಂತವು, ಎಲ್ಲ ಕಾರ್ಯಕ್ಷೇತ್ರವನ್ನು ರಾಜ್ಯದ ವ್ಯಾಪ್ತಿಗೆ ಒಳಪಡಿಸುತ್ತದೆ. ರಾಜ್ಯವು, ಜನರಲ್ಲಿ ಪ್ರಾಮಾಣಿಕತೆಯನ್ನು ಬೆಳೆಸುವುದಲ್ಲದೇ, ಅವರಿಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತಿರಬೇಕು. ಜನರನ್ನು ನಿಯಂತ್ರಣದಲ್ಲಿಟ್ಟು, ಅವರು ನೀತಿವಂತರಾಗಿ ಬಾಳುವಂತೆ ನೋಡಿಕೊಳ್ಳಬೇಕು. ಜನರು ಸುಖ–ಸಂತೋಷಗಳಿಂದ ಬಾಳಲು ಈ ಜಗತ್ತು ಯೋಗ್ಯವಾಗಿರುವಂತೆ ಮಾಡಬೇಕು." ಈ ಲೇಖಕರು ತಮಗಿರುವ ಅನುಭವಗಳ ಆಧಾರದ ಮೇಲೆ ಇನ್ನೂ ಕೆಲವು ಸಲಹೆಗಳನ್ನು ನೀಡಿದ್ದಾರೆ:

"ಸರ್ಕಾರವು ಭೂಮಿಯನ್ನು ಸಾಗುವಳಿಯೋಗ್ಯಗೊಳಿಸಬೇಕೆಂದೂ, ಬೇಸಾಯಕ್ಕೆ ಮಳೆಯನ್ನೇ ಅವಲಂಬಿಸದಂತೆ ಮಾಡಲು ಕೆರೆ–ಕಟ್ಟೆಗಳನ್ನು ತೋಡಿಸಬೇಕೆಂದೂ ಅಗತ್ಯವಿದ್ದಾಗ ಬಿತ್ತನೆ ಬೀಜಗಳನ್ನು ಖರೀದಿಸಲು ರೈತರಿಗೆ ಸಾಲಗಳನ್ನೊದಗಿಸಬೇಕೆಂದೂ"[೩] ಅವರು ತಿಳಿಸಿದ್ದರು. ದಿವಂಗತ ಪ್ರೊಫೆಸರ್ ಕೆ.ವಿ. ರಂಗಸ್ವಾಮಿ ಐಯ್ಯಂಗಾರ್ "ಇಂಡಿಯನ್ ಕ್ಯಾಮರಲಿಸಮ್" ಎಂಬ ಭಾಷಣ ಮಾಲಿಕೆಯಲ್ಲಿ, ಸ್ವಾರಸ್ಯಕರವಾದ ಅನೇಕ ವಿಷಯಗಳನ್ನು ತಿಳಿಸಿದ್ದರು: ಭಾರತದಲ್ಲಿ ರಾಜ್ಯಸರ್ಕಾರದ ಕಾರ್ಯವ್ಯಾಪ್ತಿಯು, ಹದಿನೆಂಟನೇ ಶತಮಾನದಲ್ಲಿ ಜರ್ಮನ್ ರಾಜ್ಯಗಳು ಹೊಂದಿದ್ದ 'ಕ್ಯಾಮರಲಿಸ್ಟ್" ಕಾರ್ಯ ಕಲಾಪಗಳಿಗೆ ಸಮಾನವಾದುದಾಗಿತ್ತು. ಇದು ಭಾರತದ ರಾಜಕೀಯ ಚಿಂತನೆಯಲ್ಲಿ ಕಂಡುಬಂದ ಮೊಟ್ಟಮೊದಲ ದೊಡ್ಡ ಬದಲಾವಣೆಯಾಗಿತ್ತು. ಇದರಿಂದ ಹತ್ತೊಂಬತ್ತನೆಯ ಶತಮಾನದಲ್ಲಿ ರಾಜ್ಯವೇ ನೇರವಾಗಿ ಆಡಳಿತ ನಡೆಸುವುದಕ್ಕೆ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಸುಖಿರಾಜ್ಯ ಸ್ಥಾಪನೆಗೆ ಅವಕಾಶವಾಯಿತು.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಿಸಲಾಗಿರುವ ರಾಜ್ಯದ ಕಾರ್ಯವ್ಯಾಪ್ತಿಯು ಇದಕ್ಕಿಂತಲೂ ಹೆಚ್ಚು ವಿಸ್ತಾರವಾದುದಾಗಿದೆ. ರಾಷ್ಟ್ರದ ಕಾರ್ಯಕಲಾಪಗಳ ಪ್ರತಿಯೊಂದು ಅಂಶದ ಮೇಲೆ ಆಡಳಿತದ ನಿಯಂತ್ರಣವಿರಬೇಕೆಂದು ಅದರಲ್ಲಿ ಸೂಚಿಸಲಾಗಿತ್ತು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಸಾಮಾಜಿಕ ಜೀವನ, ವ್ಯಾಪಾರ, ಹಣಕಾಸು, ಪೌರಚಟುವಟಿಕೆಗಳು, ಸಾಗುವಳಿ ಹಾಗೂ ಮಾನವನ ವ್ಯವಸ್ಥಿತ ಜೀವನದ ಪ್ರತಿಯೊಂದು ಅಂಶವನ್ನೂ ಪರಿಗಣಿಸಿದ್ದಾನೆ. ಇವೆಲ್ಲವೂ ಆಡಳಿತದ ನ್ಯಾಯಬದ್ಧ ಕ್ಷೇತ್ರದ ವ್ಯಾಪ್ತಿಯೊಳಗೆ ಬರಬೇಕೆಂಬುದು, ಕೌಟಿಲ್ಯನ ಅಪೇಕ್ಷೆಯಾಗಿತ್ತು. ಇದು ಬರಿ ಸಿದ್ಧಾಂತವಷ್ಟೇ ಆಗಿರಲಿಲ್ಲ. ಇದರಲ್ಲಿ ಸರ್ಕಾರ ಹೊಂದಿರಬೇಕಾದ ಹಲವಾರು ಇಲಾಖೆಗಳು ಮತ್ತು ಅವು ನಿರ್ವಹಿಸಬೇಕಾದ ಕೆಲಸಕಾರ್ಯಗಳೆಲ್ಲವನ್ನು ಸಹ ಸೂಚಿಸಲಾಗಿದೆ. ಆಡಳಿತ ಪದ್ಧತಿಯನ್ನು ವಿಕಾಸಪಡಿಸಿಕೊಂಡು ಹೋಗುವುದು

ಭಾರತದಲ್ಲಿನ ರಾಜ್ಯವೊಂದರ ಗುಣವಿಶೇಷ. ಇಂತಹ ಒಂದು ಧೋರಣೆಯ ಪರಿಣಾಮವಾಗಿ, ಮಹಾರಾಜನನ್ನು ರಾಜ್ಯವ್ಯವಸ್ಥೆಯ ಒಂದು ಪ್ರಮುಖ ಅಂಗವಾಗಿ ಪರಿಗಣಿಸಲಾಯಿತು. ರಾಜನು ನಿಜವಾಗಿಯೂ, ರಾಜ್ಯ ವ್ಯವಸ್ಥೆಯ ಪ್ರಮುಖ ಭಾಗವಾಗಿದ್ದನೆಂಬುದರಲ್ಲಿ ಸಂದೇಹವಿರಲಿಲ್ಲ.

ರಾಜಪ್ರಭುತ್ವವನ್ನು ಸಾಮಾನ್ಯ ರಾಜಕೀಯ ವ್ಯವಸ್ಥೆಯೆಂದು ಪರಿಗಣಿಸಲಾಗಿತ್ತು. ಹಿಂದೂ ತತ್ವವಾದಿಗಳು, ಪ್ರಜಾಪ್ರಭುತ್ವವನ್ನೂ, ಕೆಲವೇ ಜನರ ಪ್ರಭುತ್ವವನ್ನೂ ಮತ್ತು ಬುಡಕಟ್ಟು ಸ್ವರೂಪದ ಸರ್ಕಾರವನ್ನೂ ಸೂಚಿಸಿದ್ದರು. ವ್ಯಾಪಕ ದೃಷ್ಟಿಯಿಂದ ಹೇಳಬಹುದಾದರೆ, ಒಂದು ರಾಜ್ಯವು ಈ ಎಲ್ಲ ಸ್ವರೂಪಗಳ ಸರ್ಕಾರವನ್ನು ಒಳಗೊಂಡಿರುತ್ತದೆ ಎಂಬುದು ಅವರ ಭಾವನೆಯಾಗಿತ್ತು. ಪ್ರಜಾಪ್ರಭುತ್ವ ಭಾರತದ ಇತಿಹಾಸದಲ್ಲಿ ಬಹುಕಾಲದಿಂದ ನಿರಂತರವಾಗಿ ಅನುಸರಿಸಿಕೊಂಡು ಬಂದಿರುವ ಒಂದು ಪದ್ಧತಿಯಾಗಿದೆ. ಎಷ್ಟೋ ಹಿಂದಿನ ಕಾಲದಿಂದ, ವೃಷ್ಣಿ–ಅಂಧಕ–ಭೋಜರು ಇಂತಹ ರಾಜ್ಯಸಂಸ್ಥೆಗಳ ಕೂಟಗಳು ಪ್ರಜಾಪ್ರಭುತ್ವದ ಸಂಕೇತಗಳಾಗಿದ್ದವು. ಇವಲ್ಲದೆ, ಲಿಚ್ಛವಿಗಳು ಮತ್ತು ಶಾಕ್ಯರಂತಹ ಪ್ರಭಾವಶಾಲಿ ರಾಜ್ಯಗಳಿದ್ದವು. ಅಲ್ಲಿಂದ ಗುಪ್ತಯುಗದ ಅಂತ್ಯದವರೆಗೆ, ಎಲ್ಲ ಕಾಲದಲ್ಲೂ ರಾಜಕೀಯ ಚಿಂತನೆ ಜೀವಂತವಾಗಿತ್ತು. ಪ್ರಜಾಪ್ರಭುತ್ವವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದ ಸಮುದಾಯಗಳಿದ್ದವು. ಆದ್ದರಿಂದ ಒಂದು ರಾಜ್ಯವನ್ನು ಸಂಪೂರ್ಣ ರಾಜ ಪ್ರಭುತ್ವದ ದೃಷ್ಟಿಯಿಂದಲೇ ನೋಡುವುದು ಅಸಹಜವೆನಿಸುತ್ತದೆ.

ಪರಮಾಧಿಕಾರ ಸಿದ್ಧಾಂತವನ್ನು ಪುನರುಲ್ಲೇಖಿಸುವ, ಅದರ ವಿಕಸನ ಹೇಗಾಯಿತು ಎಂಬುದನ್ನು ಗುರುತಿಸುವ ಮತ್ತು ಅದನ್ನು ಆಧುನಿಕ ದೃಷ್ಟಿಕೋನದಿಂದ ಪರೀಕ್ಷಿಸುವ ಯಾವುದೇ ಪ್ರಯತ್ನಕ್ಕಾಗಲಿ, ಶಿಲಾಶಾಸನಗಳು ಮತ್ತು ಇತರ ದಾಖಲೆಗಳನ್ನು ಅವಲಂಬಿಸುವುದಕ್ಕೆ ಬದಲಾಗಿ ಈ ವಿಷಯ ಕುರಿತ ಸಾಹಿತ್ಯ ಮತ್ತು ಗ್ರಂಥಗಳಿಗೆ ಹೆಚ್ಚು ಮಹತ್ವ ಕೊಡುವುದು ಅನಿವಾರ್ಯ. ರಾಜ್ಯ ಸಂಸ್ಥೆಗಳ ವಿಷಯವನ್ನು ಪರಿಶೀಲಿಸುವಾಗ ಶಿಲಾಶಾಸನಗಳನ್ನು ಮತ್ತು ನಿಜಪರಿಸ್ಥಿತಿಯನ್ನು ತೋರಿಸುವ ಸಾಕ್ಷ್ಯಾಧಾರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂದು ಪ್ರೊಫೆಸರ್ ವೇಣಿ ಪ್ರಸಾದ್ ಹೇಳಿರುವುದು ಸಮಂಜಸವಾಗಿ ಕಾಣುತ್ತದೆ. ಅಲ್ಲೊಂದು ಇಲ್ಲೊಂದರಂತೆ ಕಂಡುಬರುವ ಮೂಲಗ್ರಂಥಗಳಿಂದ ಬೇಕಾಗಿರುವ ಫಲಿತಾಂಶ ದೊರೆಯಲಾರದು. ರಾಜ್ಯಸಂಸ್ಥೆಗಳ ಅಧ್ಯಯನಕ್ಕೆ ಇದೊಂದು ಸೂಕ್ತ ವಿಧಾನವೆಂಬುದರಲ್ಲಿ ಸಂದೇಹವಿಲ್ಲ. ಆದರೆ ವಿಚಾರಗಳು ಮತ್ತು ಅವುಗಳ ಮೂಲ ಮತ್ತು ವಿಕಸನವನ್ನು ಪರಿಶೀಲಿಸುವಾಗ ಚಿಂತನಕಾರರಿಂದ ರಚಿತವಾಗಿರುವ ಗ್ರಂಥಗಳನ್ನು ಪರಿಶೀಲಿಸುವುದೇ ಹೆಚ್ಚು ಸಮಂಜಸವೆನಿಸುತ್ತದೆ. ಆದ್ದರಿಂದ ಅವುಗಳನ್ನು ಅವಲಂಬಿಸುವುದೇ ಸೂಕ್ತ. ಅನಂತರ, ಮುಂದಿನ ಹಂತದಲ್ಲಿ, ಗ್ರಂಥಗಳು

ಒಳಗೊಂಡಿರುವ ವಿಷಯಗಳನ್ನು ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡು, ಅವನ್ನು ಅನುಸರಿಸಲಾಗಿದೆ ಎಂಬುದನ್ನು ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಪರೀಕ್ಷಿಸಬಹುದು. ಇಲ್ಲಿ ವಿದ್ವಾಂಸರುಗಳಿಗೆ ಪುನಃ ಎರಡು ಅಪಾಯಗಳು ಎದುರಾಗುತ್ತವೆ. ಹಿಂದೂಗಳ ರಾಜಕೀಯ ವಿಷಯಗಳ ಕುರಿತ ಬರಹಗಳು ಅನೇಕ ಶತಮಾನಗಳಿಂದಲೂ ಇರುವಂತಹವಾಗಿವೆ. ಒಂದು ನಿರ್ದಿಷ್ಟ ವಿಚಾರ ಅಥವಾ ಅದರ ವಿಕಾಸ ಸತತವಾಗಿ ಮುಂದುವರಿದುಕೊಂಡು ಬಂದಿತ್ತು ಎಂಬುದನ್ನು ಕೌಟಿಲ್ಯನ *ಅರ್ಥಶಾಸ್ತ್ರ*ದಲ್ಲಿನ ಒಂದು ಹೇಳಿಕೆ ತೋರಿಸುತ್ತದೆ. ಈ ಹೇಳಿಕೆಯನ್ನು ಸಮರ್ಥಿಸಲು *ಶುಕ್ರನೀತಿಸಾರ*ದಲ್ಲಿರುವ ಪ್ರಮಾಣವನ್ನು ಉಪಯೋಗಿಸಿಕೊಳ್ಳಬಹುದು. ಕೆಲವು ವಿಚಾರಗಳಿಗೆ, ವಿವಿಧ ಕಾಲಗಳಲ್ಲಿ ವಿವಿಧ ಅರ್ಥಗಳು ಬರುತ್ತವೆ ಎಂಬುದನ್ನು ನಾವು ಮರೆಯಬಾರದು. ಕೆಲವು ಬಾರಿ ಅದೇ ಶಬ್ದಗಳನ್ನು ಬಳಸಲಾಗಿರುತ್ತದೆ. ಆದರೆ ಆ ಶಬ್ದಗಳ ಉದ್ದೇಶಿತ ಅರ್ಥ ಸಂಪೂರ್ಣ ಬೇರೆಯಾಗಿರಬಹುದು. ವಿದ್ವಾಂಸರಿಗೆ ಎದುರಾಗುವ ಮತ್ತೊಂದು ತೊಡಕು ಹೀಗಿರುತ್ತದೆ: ಹಳೆಯ ಸಿದ್ಧಾಂತಗಳಲ್ಲಿ ಆಧುನಿಕತೆಗೆ ಹೊಂದುವ ವಿಚಾರಗಳನ್ನು ಕಲ್ಪಿಸಿಕೊಳ್ಳಲು, ಅವರು ತಮಗರಿವಿಲ್ಲದೆಯೇ ಪ್ರಯತ್ನಿಸಬೇಕಾಗುತ್ತದೆ. ವಿಚಾರಗಳಾಗಲಿ ಅಥವಾ ಕಲ್ಪನೆಗಳಾಗಲಿ, ಯಾವಾಗಲೂ ಸಮುದಾಯದ ಜೀವನಕ್ಕೇ ಸಂಬಂಧಪಟ್ಟಿರುತ್ತವೆ. ಈ ವಿಚಾರಗಳನ್ನು ಸಾಮಾಜಿಕ ಅಂಶಗಳಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಯೂರೋಪ್‌ನಲ್ಲಿದ್ದ ಸ್ಥಿತಿಗತಿಗಳ ಪರಿಣಾಮವಾಗಿ, ಅನೇಕ ಹೊಸ ಹೊಸ ವಿಚಾರಗಳು, ಕಲ್ಪನೆಗಳು ಮೂಡಿಬಂದವು. ಈ ವಿಚಾರಗಳು ಸಾರ್ವತ್ರಿಕವಾದದಂತೆ ಕಂಡುಬಂದರೂ, ಅವು ಆಯಾ ಸ್ಥಳಕ್ಕೆ ಮಾತ್ರ ಅನ್ವಯವಾಗುವಂತಿದ್ದವು. ವಿಚಾರಗಳು ಅವುಗಳ ಅರ್ಥಕ್ಕಷ್ಟೇ ಸೀಮಿತವಾಗಿದ್ದವು. "ಒಂದು ಸ್ವತಂತ್ರ ರಾಜ್ಯದೊಳಗೆ ಒಂದು ಸ್ವತಂತ್ರ ಚರ್ಚ್", "ಮೂರು ರಾಜ್ಯಗಳು ಸೇರಿ ಒಂದು ಕ್ಷೇತ್ರ", "ದೇವರ ನಗರ ಮತ್ತು ಮಾನವ ನಗರ" ಎಂಬಂತಹ ಸಿದ್ಧಾಂತಗಳು ಈ ಶ್ರೇಣಿಯಲ್ಲಿ ಬರುತ್ತವೆ. ಈ ವಿಚಾರಗಳನ್ನು, ಪ್ರಾಚೀನ ಹಿಂದೂಗಳು ಹೊಂದಿರುವ ಭಾವನೆಗಳ ದೃಷ್ಟಿಯಲ್ಲಿ ನಿರೂಪಿಸ ಹೊರಟರೆ, ಭಾವನೆಗಳಲ್ಲಿ ಏಕರೂಪತೆ ಇದ್ದಾಗ, ಏಕರೂಪದ ಪರಿಣಾಮಗಳು ಉಂಟಾಗುತ್ತವೆ ಎಂಬುದು ನಮ್ಮ ಭ್ರಮೆಯಾಗಿರುತ್ತದೆ. ಈ ವಿಚಾರಗಳ ಅಧ್ಯಯನದಲ್ಲಿ ನಾವೂ ಇಂತಹುದೇ ಭ್ರಮೆಗೊಳಗಾಗಬಹುದು. ಈಗ ನಾವು ಅಂತಹ ಭ್ರಮೆಗಳ ಬಗ್ಗೆ ನಮ್ಮ ಗಮನಹರಿಸೋಣ. ಇಲ್ಲಿ ನಾವು ಅಂತಹ ಒಂದು ಪ್ರಕರಣದ ಬಗ್ಗೆ ಮಾತ್ರ ನಮ್ಮ ಗಮನ ಹರಿಸಿದರೆ ಸಾಕು. ಅದರಿಂದ ಎಂತಹ ಕಷ್ಟ ಉಂಟಾಗುತ್ತದೆ ಎಂಬುದನ್ನು ಅದು ತೋರಿಸಿಕೊಡುತ್ತದೆ.

ಪ್ರಾಚೀನ ಭಾರತದಲ್ಲಿ ಹೆಚ್ಚು ಕಡಿಮೆ ಪಶ್ಚಿಮ ಯೂರೋಪ್‌ನಲ್ಲಿ ಇದ್ದಂತಹುದೇ ಸಾಂವಿಧಾನಿಕ ರಾಜಪ್ರಭುತ್ವ ಇತ್ತೆಂಬುದು ಕೆಲವು ವಿದ್ವಾಂಸರ

ವಾದವಾಗಿದೆ. ಒಂದು ಒಪ್ಪಂದ, ಶಾಸನ ಅಥವಾ ಸಂಸ್ಥೆ ಮೂಲಕ ಒಬ್ಬ ರಾಜನ ಅಧಿಕಾರಗಳನ್ನು ನಿರ್ದಿಷ್ಟಪಡಿಸಿದ ಹೊರತು, ರಾಜನ ಅಧಿಕಾರಕ್ಕೆ ಅಂತೆಯೇ ಇರುವುದಿಲ್ಲ. ಹೀಗೆ, ರಾಜನ ಅಧಿಕಾರಗಳನ್ನು ನಿರ್ದಿಷ್ಟವಾಗಿ ವಿವರಿಸುವುದನ್ನೇ ಸಾಂವಿಧಾನಿಕ ರಾಜಪ್ರಭುತ್ವ ಸಿದ್ಧಾಂತ ಎನ್ನುತ್ತಾರೆ: ಅಪರಿಮಿತ ಅಧಿಕಾರವನ್ನು ಹೊಂದಿದ್ದ ರಾಜನ ನಿರಂಕುಶಾಧಿಕಾರವನ್ನು ಇಂಗ್ಲೆಂಡಿನಲ್ಲಿರುವಂತೆ ಒಪ್ಪಂದಗಳು ಮತ್ತು ಪದ್ಧತಿಯ ಪ್ರಕಾರ ಇಲ್ಲವೇ ಬೆಲ್ಜಿಯಂನಲ್ಲಿರುವಂತೆ ಲಿಖಿತ ಸಂವಿಧಾನದ ಮೂಲಕ ರಾಜನ ಅಧಿಕಾರಗಳನ್ನು ಸೀಮಿತಗೊಳಿಸುವುದೇ ಈ ಸಿದ್ಧಾಂತದ ಮೂಲೋದ್ದೇಶ.

ದೊರೆ ತನಗಿರುವ ಅಧಿಕಾರಗಳಿಗೆ ಮಿತಿಯೇ ಇಲ್ಲವೆಂದು ಭಾವಿಸಿದ್ದರೆ, ಆ ಅಧಿಕಾರವನ್ನು ಮೊಟಕುಗೊಳಿಸುವುದು ಇದರ ಉದ್ದೇಶ. ಭಾರತದಲ್ಲಾದರೋ ರಾಜಮಹಾರಾಜರಿಗೆ ಪರಮಾಧಿಕಾರ ಸಂಪೂರ್ಣವಾಗಿ ಇರಲಿಲ್ಲ. ಅದು ಸ್ವಾಭಾವಿಕವಾಗಿಯೇ ಧರ್ಮದ ಆಧಾರದ ಮೇಲೆ ಪರಿಮಿತಗೊಂಡಿತ್ತು. ದೈವೀಕವಾದುದೆಂದು ಪರಿಗಣಿಸಲಾಗುತ್ತಿದ್ದ ಸಾಮಾಜಿಕ ಸಂಸ್ಥೆಗಳು, ರಾಜನಿಗೆ ಶಾಸನ ರೂಪಿಸುವ ಅಧಿಕಾರವನ್ನು ಕೊಟ್ಟಿರಲಿಲ್ಲ. ಉದಾಹರಣೆಗೆ, ರಾಜನಿಗೆ, ಕಾನೂನುಪ್ರಕಾರ ವರ್ಣಾಶ್ರಮ ಧರ್ಮವನ್ನು ಪರಿಷ್ಕರಿಸುವ ಅಥವಾ ಪವಿತ್ರವಾದದೆಂದು ಪರಿಗಣಿಸಲ್ಪಟ್ಟ ಕಾನೂನುಗಳನ್ನು ಬದಲಾಯಿಸುವ ಅಧಿಕಾರವಿರಲಿಲ್ಲ. ಹಿಂದೂ ರಾಜರುಗಳ ವಿಷಯದಲ್ಲಿ, ಸಾಂವಿಧಾನಿಕವಾದ ಪ್ರಭುತ್ವವನ್ನು ತರಬೇಕೆಂದಾದರೆ, ಪ್ರಾಚೀನ ಕಾಲದಿಂದಲೂ ಇರುವ ಸಂಸ್ಥೆಗಳಿಗೆ, ಸಂಪೂರ್ಣವಾಗಿ ಪರಕೀಯವಾದಂತಹ ಒಂದು ವ್ಯವಸ್ಥೆಯನ್ನು ತಂದುಕೊಂಡಾಗುತ್ತದೆ. ನಾವು ವಿವಿಧ ವ್ಯವಸ್ಥೆಗಳನ್ನು ಹೋಲಿಸಿ ನೋಡಿ, ಅವುಗಳ ನಡುವೆ ಇರುವ ಸಮಾನ ಅಂಶಗಳನ್ನು ಗುರುತಿಸಬಹುದು. ಆದರೆ ಭಾರತೀಯ ರಾಜಕೀಯ ಸಿದ್ಧಾಂತಗಳನ್ನು ಪಾಶ್ಚಾತ್ಯ ದೇಶಗಳ ಚಿಂತನೆಯ ಮತ್ತು ಆ ಸಂಸ್ಥೆಗಳ ಹಿನ್ನೆಲೆಯಲ್ಲಿ ಅವಲೋಕಿಸುವುದು ಇತಿಹಾಸವಿರುದ್ಧವಾಗುತ್ತದೆ. ಹಾಗೆ ಮಾಡುವುದು ಸರಿಯಲ್ಲ.

ಈ ವಿಷಯವನ್ನು ರಾಜರು ಮತ್ತು ರಾಜ್ಯ ಇವಿಷ್ಟಕ್ಕೇ ಸೀಮಿತಗೊಳಿಸುವುದಕ್ಕೆ ಸಂಬಂಧಿಸಿದಂತೆ ಒಂದು ಮಾತು ಹೇಳಬಹುದು. ಇದು ಸಾಮಾನ್ಯ ರಾಜಕೀಯ ಸಿದ್ಧಾಂತಕ್ಕಿಂತ ಭಿನ್ನವಾದ ವಿಷಯವಾಗಿರುತ್ತದೆ. ರಾಜಕೀಯ ಶಾಸ್ತ್ರದಲ್ಲಿ ಬರುವ ಸಿದ್ಧಾಂತಗಳು ಇನ್ನೂ ಹೆಚ್ಚು ವ್ಯಾಪಕವಾದ ಆಧಾರ ಹೊಂದಿರುತ್ತವೆ. ಈ ಸಿದ್ಧಾಂತಗಳಲ್ಲಿ ಕೇವಲ ಪರಮಾಧಿಕಾರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಲಾಗುವುದಿಲ್ಲ. ಸಾಮಾಜಿಕ ಬೆಳವಣಿಗೆಗೆ ಪೂರಕವಾದಂತಹ ಅನೇಕ ಮುಖ್ಯ ವಿಷಯಗಳನ್ನು ಸಹ ಇದರಲ್ಲಿ ಪರಿಶೀಲಿಸಲಾಗುತ್ತದೆ. ನಿಜವಾಗಿ ಹೇಳುವುದಾದರೆ, ಸುಸಂಘಟಿತ ಸಮುದಾಯಗಳಲ್ಲಿ ಒಟ್ಟಾಗಿ ಜೀವಿಸುತ್ತಿರುವ

ಜನರ ನಡುವಣ ಸಂಬಂಧಗಳಿಗೆ ಧಕ್ಕೆಯುಂಟುಮಾಡುವಮತಹ ಅನೇಕ ಸಾಮಾಜಿಕ ವಿಷಯಗಳು, ರಾಜಕೀಯ ಶಾಸ್ತ್ರದ ವ್ಯಾಪ್ತಿಗೆ ಬರುತ್ತವೆ. ಅಂತಹ ವಿಷಯಗಳಲ್ಲಿ, ಪರಮಾಧಿಕಾರ, ಪರಿಶೀಲನೆಗೆ ಬರುವ ಕೇವಲ ಒಂದು ಅಂಶ ಮಾತ್ರವಾಗಿರುತ್ತದೆ. ರಾಜ್ಯ, ತನ್ನ ಈ ಮೂಲ ಸಿದ್ಧಾಂತದಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ನಮ್ಮ ಈ ವಿಷಯದ ಅಧ್ಯಯನಕ್ಕೆ ಸಾಮಗ್ರಿಗಳು ವಿಪುಲವಾಗಿವೆ. ಮಹಾಭಾರತದ ಶಾಂತಿಪರ್ವದಲ್ಲಿ ಬರುವ 'ರಾಜಧರ್ಮ' ಅಧ್ಯಾಯಗಳು ಶಾಸ್ತ್ರೀಯ ಗ್ರಂಥಗಳಲ್ಲಿ ಅತಿ ಮುಖ್ಯವಾದವೆಂದು ಹೇಳಬಹುದು. ಹಿಂದೂ ರಾಜಕೀಯ ಸಿದ್ಧಾಂತಗಳಲ್ಲಿ ಆಸಕ್ತಿಯುಳ್ಳ ಎಲ್ಲ ವಿದ್ಯಾರ್ಥಿಗಳು ಕೂಲಂಕಷವಾಗಿ ಇದರ ಅಧ್ಯಯನ ನಡೆಸುವುದು ಅತ್ಯವಶ್ಯಕ. ಮಹಾಭಾರತದಲ್ಲಿ ರಾಜಕೀಯ ಸಿದ್ಧಾಂತಗಳಿಗೆ ಸಂಬಂಧಪಟ್ಟ ಅನೇಕ ಅಧ್ಯಾಯಗಳಿವೆ. ಈ ಅಧ್ಯಾಯಗಳಲ್ಲಿ, ನೀತಿಶಾಸ್ತ್ರವನ್ನು ಬರೆದಿರುವ ಮುಂಚಿನ ಲೇಖಕರ ಮೂಲಪಾಠಗಳಿವೆ ಎಂದು ಡಾ॥ ಭಂಡಾರ್‌ಕರ್ ಸೂಚಿಸಿದ್ದಾರೆ. ಪುರಾಣದ ಪಾಠಗಳಲ್ಲಿ, ಅಲ್ಲಲ್ಲಿ ಸಂಭಾಷಣೆಗಳಿವೆ. ಈ ಸಂಭಾಷಣೆಗಳಲ್ಲಿ ಕಂಡುಬರುವ ಸಿದ್ಧಾಂತಗಳು ಬೇರೆ ಬೇರೆ ಪರಂಪರೆಗಳಿಗೆ ಸಂಬಂಧಪಟ್ಟಿರುತ್ತವೆ. ಮಹಾಭಾರತದಲ್ಲಿರುವ 'ರಾಜಧರ್ಮ' ಕುರಿತ ಅಧ್ಯಾಯಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಿದಾಗ, ಅದರಲ್ಲಿ ಏನೋ ನ್ಯೂನತೆಯಿದೆ ಎಂದೆನಿಸುತ್ತದೆ. ರಾಜಪ್ರಭುತ್ವ ಸಿದ್ಧಾಂತವನ್ನು ಮನು ತನ್ನ ಮಾನವಧರ್ಮ ಶಾಸ್ತ್ರದಲ್ಲೂ ಪ್ರಸ್ತಾಪಿಸಿದ್ದಾನೆ. ಯಾಜ್ಞವಲ್ಕ್ಯರು ಮತ್ತು ಇತರ ನ್ಯಾಯದಾತರು ಸಹ ಪ್ರಜಾಪ್ರಭುತ್ವದ ಲಕ್ಷಣಗಳನ್ನು ತಿಳಿಸಿದ್ದಾರೆ. ಕಾನೂನು ಮತ್ತು ಧರ್ಮವನ್ನು ಕಾಪಾಡುವುದು ರಾಜನ ಕಾರ್ಯವಾಗಿರುತ್ತದೆ. ಈ ದೃಷ್ಟಿಯಿಂದ ಇದೊಂದು ಮಹತ್ವದ ವಿಷಯವಾಗಿದ್ದು, ಅದನ್ನು ಪರಿಶೀಲಿಸುವುದು ಅತಿ ಮುಖ್ಯ. ಇವರ ನಂತರ ಬಂದ ಕಾನೂನುಪಾಲಕರು ಮತ್ತು ವಿಮರ್ಶನಕಾರರು ಹಾಗೂ ನಿಬಂಧಲೇಖಕರು, ಈ ವಿಷಯವನ್ನು ಜಾತ್ಯತೀತ ದೃಷ್ಟಿಯಿಂದ ಪರಿಶೀಲಿಸಿದ್ದಾರೆ.

ಎಲ್ಲ ಪುರಾಣಗಳಲ್ಲೂ ಈ ವಿಷಯ ಪ್ರಸ್ತಾಪಿತವಾಗಿದೆ. ಈ ಪುರಾಣಗಳಲ್ಲಿ ಇರುವುದು, ಅವುಗಳ ಕರ್ತರ ಮೂಲ ಅಭಿಪ್ರಾಯಗಳೇನಲ್ಲ. ಅವರು ಅರ್ಥಶಾಸ್ತ್ರದ ಆಚಾರ್ಯರುಗಳು ಹೇಳಿರುವ ಮಾತುಗಳನ್ನೇ ಅನುಸರಿಸಿದ್ದಾರೆ. ಅವರು ಅಷ್ಟರಲ್ಲೇ ಸಂತೃಪ್ತರಾಗಿದ್ದಾರೆ. 'ಮನು' ಹೇಳಿರುವುದನ್ನೇ ಅವರು ಸಂಕ್ಷಿಪ್ತ ರೂಪದಲ್ಲಿ ತಿಳಿಸಿದ್ದಾರೆ. ಅದರೂ ಮತ್ತೊಂದು ರೀತಿಯಲ್ಲಿ ಪುರಾಣಗಳ ಮಹತ್ವ ಉಳಿದು ಕೊಂಡಿದೆ. ಅವು ರಾಜರುಗಳ ಮತ್ತು ಅವರ ವಂಶಾವಳಿಯ ಬಗ್ಗೆ ತಿಳಿಸಿಕೊಡುತ್ತವೆ. ಇವುಗಳ ಅಧ್ಯಯನವನ್ನು ಜಾಗರೂಕತೆಯಿಂದ ಮಾಡಿದಲ್ಲಿ, ಸ್ವಾರಸ್ಯಪೂರ್ಣ ಫಲಿತಾಂಶಗಳು ಹೊರಮೂಡಬಹುದು. ಅದರಿಂದ ಈ ರಾಜಕೀಯ ಸಿದ್ಧಾಂತಗಳಿಗೆ ಎಷ್ಟರಮಟ್ಟಿನ ಆಧಾರವಿದೆ ಮತ್ತು ಅವು ಎಷ್ಟರಮಟ್ಟಿಗೆ ಆಚರಣೆಯಲ್ಲಿವೆ ಎಂಬುದನ್ನು

ನಾವು ತಿಳಿದುಕೊಳ್ಳಬಹುದು. ಇವಲ್ಲದೆ, ಕಾವ್ಯಗಳು, ನಾಟಕಗಳು ಮತ್ತು ಕಥೆಗಳಂತಹ ಸಾಹಿತ್ಯಕ ಮೂಲಗಳು ಸಹ ಇವೆ. ಇವು ಅತಿ ಹೆಚ್ಚಾಗಿ ರಾಜರು ಮತ್ತು ಅವರ ಆಸ್ಥಾನಗಳಿಗೆ ಸಂಬಂಧಪಟ್ಟ ವಿಷಯಗಳನ್ನೊಳಗೊಂಡಿವೆ. ಇವು, ಅನೇಕ ವಿಷಯಗಳ ಬಗ್ಗೆ ಈಗಾಗಲೇ ಪ್ರಚಲಿತವಿರುವ ಅಭಿಪ್ರಾಯಗಳನ್ನೇ ಸೂಚಿಸುತ್ತವೆ. ರಾಜಕೀಯ ಶಾಸ್ತ್ರ ಕುರಿತು ವೃತ್ತಿಪರ ಲೇಖಕರು ಮಾತ್ರ, ಈ ಎಲ್ಲ ಅಂಶಗಳನ್ನು ಚರ್ಚಿಸುತ್ತಾರೆ. ಕಾಳಿದಾಸನ ಬಹುತೇಕ ಕೃತಿಗಳಲ್ಲಿ ರಾಜ–ಮಹಾರಾಜರುಗಳ ಬಗ್ಗೆಯೇ ಹೆಚ್ಚಾಗಿ ಪ್ರಸ್ತಾಪಿಸಲಾಗಿದೆ. ರಾಜಕೀಯ ವಿಷಯಗಳ ಬಗ್ಗೆ ಆಗ ಹಿಂದೂಗಳು ಸಾಮಾನ್ಯವಾಗಿ ಹೊಂದಿದ್ದ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಅಮೂಲ್ಯ ಕೃತಿಗಳಾದ *ಶಾಕುಂತಲಮ್, ಮಾಲವಿಕಾಗ್ನಿಮಿತ್ರಮ್* ಮತ್ತು *ರಘುವಂಶಮ್* ಬಹು ಉಪಯುಕ್ತವಾಗುತ್ತವೆ. ರಘುವಂಶದಲ್ಲಿ ಅತ್ಯುತ್ತಮ ಮಾದರಿಯ ರಾಜಪ್ರಭುತ್ವ ಹೇಗಿರಬೇಕೆಂಬುದನ್ನು ತೋರಿಸಲಾಗಿದೆ. ರಾಜರುಗಳು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಮಹಾಕವಿಯು ಬಹಳ ಚೆನ್ನಾಗಿ ವರ್ಣಿಸಿದ್ದಾನೆ. ಕವಿಯು, ರಾಜನ ಕೀರ್ತಿಯನ್ನು ವರ್ಣಿಸಿರುವ ಬಗೆ ಹೀಗಿದೆ:

ಮನು ತೋರಿದನು ಅವನಿಗೆ ಹಾದಿಯನು
ಹಾಕಿದನು ಹೆಜ್ಜೆಯನವನು ಅದೇ ಹಾದಿಯಲಿ
ಅವನಿತ್ತ ಮಾದರಿಯಿಂದ ಇನಿತೂ ಸರಿಯಲಿಲ್ಲ ಜನ ಅತ್ತಿತ್ತ.
ಕಾಪಾಡಲು ರಾಜ್ಯವನು ಹಾಕಲಿಲ್ಲ ಕರ
ಸೂರ್ಯ ತಾ ಪಡೆದ ತೇವವನು ಧರೆಯಿಂದ
ಮರಳಿ ನೀಡುವನು ಮಳೆಯ ರೂಪದಲಿ
ರಕ್ಷಣೆಯ ಬಯಸುವರು ಜನರು ಅವನಲಿ
ಜನ್ಮದಾತರು ಕೊಟ್ಟರು ಜೀವವನು ಮಾತ್ರ
ನಿಗ್ರಹಿಸಿ ತಪ್ಪಿತಸ್ಥರನು ಅವನು
ಎತ್ತಿಹಿಡಿವನು ಜಗದಲಿ ಪ್ರಾಮಾಣಿಕತೆಯನು

ಉದಯನನ ಜೀವನದ ಮೇಲೆ ಆಧಾರಗೊಂಡ *ಮುದ್ರಾರಾಕ್ಷಸ, ಮೃಚ್ಛಕಟಿಕಾ* ಮುಂತಾದ ಅನೇಕ ನಾಟಕಗಳು ಮತ್ತು ಕಥೆಗಳು, ರಾಜಪ್ರಭುತ್ವವು ಜೀವಂತವಾಗಿ ಉಳಿದಿದ್ದ ಒಂದು ಜಗತ್ತಿನತ್ತ ನಮ್ಮನ್ನು ಕರೆದೊಯ್ಯುತ್ತವೆ. ಈ ಸಾಹಿತ್ಯಮೂಲದಲ್ಲಿರುವ ಪ್ರಾಮುಖ್ಯವನ್ನು ನಾವು ಅಲ್ಪವಾಗಿ ನೋಡಬಾರದು. ಮಹಾರಾಜರುಗಳು ಮತ್ತು ಅವರ ಆಸ್ಥಾನಗಳಲ್ಲಿ ವ್ಯವಹರಿಸುತ್ತಿದ್ದ ನಾಟಕಕಾರರು ಮತ್ತು ಕವಿಗಳು ತತ್ವವಿಚಾರಗಳಲ್ಲಿ ಪರಿಣತರಾಗಿರಲಿಲ್ಲ. ಅವರು ತಮ್ಮ ಮುಂದಿದ್ದ ಜೀವನದ ವಾಸ್ತವಿಕ ಚಿತ್ರಣವನ್ನು ನೀಡುತ್ತಿದ್ದರು. ಉದಾರಹಣೆಗೆ, *ಮೃಚ್ಛಕಟಿಕಾ*

ದಲ್ಲಿರುವ ವಿಚಾರಣಾ ದೃಶ್ಯ ಮತ್ತು ಶಕುಂತಲಂನಲ್ಲಿ ಮೀನುಗಾರರ ಮೇಲೆ ಕಾವಲು ದಳದವರು ಕೈಗೊಂಡ ಕ್ರಮ– ಇವು ಭಾರತದಲ್ಲಿ ನ್ಯಾಯಪಾಲನೆ ಎಷ್ಟು ಚೆನ್ನಾಗಿ ನಡೆಯುತ್ತಿತ್ತು ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಇವು ಮಹಾಭಾರತದಲ್ಲಿ ನಿರೂಪಿತವಾಗಿರುವ ಅನೇಕ ನೀತಿಸಂಬಂಧವಾದ ಹೇಳಿಕೆಗಳಿಗಿಂತಲೂ ಉತ್ತಮವಾಗಿವೆ. ವಿಶೇಷ ದೊರೆಗಳು ಮತ್ತು ಅವರ ರಾಜ್ಯಗಳಿಗೆ ಸಂಬಂಧಿಸಿದಂತೆ ಬರೆಯಲಾಗಿರುವ ಇನ್ನೂ ಅನೇಕ ಪುಸ್ತಕಗಳಿವೆ. ಇವುಗಳಲ್ಲಿ ಬಾಣನ *ಹರ್ಷಚರಿತ*, ಕಲ್ಹಣನ *ರಾಜತರಂಗಿಣಿ* ಮತ್ತು *ಮಂಜುಶ್ರೀಕಲ್ಪ*– ಇವು ಅತಿಮುಖ್ಯವಾದವು. ಬಾಣ, ಒಬ್ಬ ದೊಡ್ಡ ಪಂಡಿತನಷ್ಟೇ ಆಗಿರಲಿಲ್ಲ. ಅವನು ಒಬ್ಬ ಉತ್ತಮ ಗೆಳೆಯ, ಆಸ್ಥಾನಿಕ ಮತ್ತು ಆರ್ಯಾವರ್ತದ ಕಡೇ ಹಿಂದೂ ಚಕ್ರವರ್ತಿಯಾಗಿದ್ದ ಹರ್ಷನ ಜೀವನಚರಿತ್ರೆಯನ್ನು ಬರೆದ ಲೇಖಕನು ಆಗಿದ್ದನು. *ರಾಜತರಂಗಿಣಿ*ಯನ್ನು ಬರೆದ ಕಲ್ಹಣನು ಸ್ವತಃ ಆಡಳಿತವ್ಯವಸ್ಥೆಯೊಡನೆ ಸಂಬಂಧವನ್ನು ಇಟ್ಟುಕೊಂಡಿದ್ದನು. ಆದ್ದರಿಂದ ಆತನಿಗೆ ಪ್ರಾಚೀನ ರಾಜಕೀಯ ಸಿದ್ಧಾಂತದ ಬಗ್ಗೆ ಅಪಾರ ಜ್ಞಾನವಿತ್ತು. *ಮಂಜುಶ್ರೀಕಲ್ಪ* ಬೌದ್ಧಧರ್ಮೀಯರ ದೃಷ್ಟಿಕೋನದಿಂದ ಬರೆದ ಭಾರತದ ಒಂದು ಚರಿತ್ರೆ. ಇವೆಲ್ಲವೂ ವಿವಿಧ ದೃಷ್ಟಿಕೋನಗಳಿಂದ ಭಾರತದ ರಾಜಕಾರಣವನ್ನು ಅರಿತುಕೊಳ್ಳಲು ಅತಿ ಮುಖ್ಯ.

ರಾಜಕೀಯಶಾಸ್ತ್ರದ ಬಗ್ಗೆ ನೇರವಾಗಿ ಪ್ರಸ್ತಾಪಿಸುವ ಅನೇಕ ಪ್ರಾಚೀನ ಗ್ರಂಥಗಳಿವೆ. ಕೌಟಿಲ್ಯನ *ಅರ್ಥಶಾಸ್ತ್ರ*ದಲ್ಲಿ ಪಾಂಡಿತ್ಯಪೂರ್ಣವಾದ ಅನೇಕ ವ್ಯಾಖ್ಯಾನಗಳಿವೆ, ವಿಮರ್ಶೆಗಳಿವೆ. ನಾವು ಈಗಾಗಲೇ ಸೂಚಿಸಿದಂತೆ *ಶುಕ್ರ ನೀತಿಸಾರ* ಮಧ್ಯಯುಗದಲ್ಲಿ ಸಂಕ್ಷಿಪ್ತಗೊಳಿಸಿದ ಒಂದು ಗ್ರಂಥವಾಗಿದೆ. ಇದು ಈ ಗ್ರಂಥದ ಪೂರ್ಣಪಾಠದ ಸಂಕ್ಷೇಪರೂಪವಾಗಿದೆ. ಇದು *ಮಹಾಭಾರತ*ದಲ್ಲಿ ಪ್ರಸ್ತಾಪಿತವಾಗಿರುವ ಔಶನಸರ ಪರಂಪರೆಗೆ ಸೇರಿದುದಾಗಿದೆ. ಈ ಗ್ರಂಥಕ್ಕೆ ಇನ್ನೂ ಹೆಚ್ಚಿನ ಮಹತ್ವವಿದೆ. ವಿಶೇಷತೆಯಿದೆ. ಏಕೆಂದರೆ, ಇದಕ್ಕೆ ಮುಂಚಿನ ಲೇಖಕರು ಸಂಬಂಧಪಡೆದಿದ್ದ ನೈತಿಕ ಮತ್ತು ಧಾರ್ಮಿಕ ಸಂಸ್ಥೆಗಳಿಗಿಂತ, ವಿಭಿನ್ನ ವಿಚಾರವನ್ನು ಈ ಲೇಖಕನು ತೋರಿದ್ದಾನೆ. ಇದು ಖಂಡಿತವಾಗಿಯೂ ಆಮೂಲಾಗ್ರ ಬದಲಾವಣೆಯ ಪ್ರವೃತ್ತಿಯನ್ನು ತೋರಿಸುತ್ತದೆ. 'ಕಾಮಂದಕ ನೀತಿಸಾರ' ಮಧ್ಯಯುಗದಲ್ಲಿ ಬರೆಯಲಾದ ಒಂದು ಗ್ರಂಥ. ಇದನ್ನು ಅಧಿಕಾರಯುಕ್ತ ಗ್ರಂಥವೆಂದು ಎಲ್ಲೆಡೆ ಅಂಗೀಕರಿಸಲಾಗಿತ್ತು. ಭಾರತದ ಹೊರಗಿನ ಜಾವಾ ಮತ್ತು ಇತರ ಪ್ರದೇಶಗಳಲ್ಲಿ ಇದು ತುಂಬ ಜನಪ್ರಿಯತೆ ಗಳಿಸಿತ್ತು.

ಪ್ರಾಚೀನ ಹಿಂದೂ ಸಾಹಿತ್ಯದಲ್ಲಿ ರಾಜಕೀಯ ವಿಚಾರಗಳನ್ನೊಳಗೊಂಡ ಮೂರು ಮುಖ್ಯ ವಾಹಿನಿಗಳನ್ನು ನಾವು ಗುರುತಿಸಬಹುದು. ಮೊದಲನೆಯದು, ಅರ್ಥಶಾಸ್ತ್ರ ಮತ್ತು ನೀತಿಶಾಸ್ತ್ರಕ್ಕೆ ಸಂಬಂಧಿಸಿರುತ್ತದೆ. ಇವುಗಳಲ್ಲಿ ಸಂಪೂರ್ಣವಾಗಿ

ಜಾತ್ಯತೀತ ಸ್ವರೂಪವನ್ನು ಕಾಣಬಹುದು. ಹಣಕಾಸು (ಅರ್ಥ) ದೃಷ್ಟಿಯಿಂದಲೇ ಈ ವಿಷಯಗಳನ್ನು ಪರಿಶೀಲಿಸಲಾಗಿದೆ. ಎರಡನೆಯ ವಾಹಿನಿಯಲ್ಲಿ ಪುರುಷಾರ್ಥಗಳು ಅಥವಾ ಸಮಾಜವನ್ನೇ ಧ್ಯೇಯವಾಗಿರಿಸಿಕೊಂಡು, ಜೀವನದ ಧ್ಯೇಯಗಳನ್ನು ಪರಿಶೀಲಿಸಲಾಗಿದೆ. ಎರಡನೆಯದಾಗಿ, ಇದರಲ್ಲಿ ಶಾಸ್ತ್ರೋಕ್ತ ವಿಷಯಗಳು ಅಡಗಿವೆ. ಶಾಸ್ತ್ರವಿಧಿಗಳಿಗೆ ಸಂಬಂಧಿಸಿದ ಸಾಹಿತ್ಯ ಇದರಲ್ಲಿ ವಿಪುಲವಾಗಿದೆ ಮತ್ತು ನೀತಿಶಾಸ್ತ್ರಕ್ಕೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಇದಕ್ಕೊಂದು ಅತ್ಯುತ್ತಮ ಉದಾರಹಣೆಯೆಂದರೆ, *ಮಹಾಭಾರತ*ದಲ್ಲಿ ರಾಜಕೀಯ ಸಿದ್ಧಾಂತಗಳಿಗೆ ಸಂಬಂಧಿಸಿದ ವಿಭಾಗ. ಈ ವಿಚಾರಪರಂಪರೆಯಲ್ಲಿ ಪೌರಾಣಿಕ ಸಂಗತಿಗಳ ವ್ಯಾಖ್ಯಾನಗಳನ್ನು ಮುಂದುವರಿಸಿಕೊಂಡು ಬರಲಾಗಿದೆ. ಮೂರನೆಯ ವಾಹಿನಿಯೆಂದರೆ ಮನು, ಯಾಜ್ಞವಲ್ಕ್ಯ ಮತ್ತು ಇತರ ಅಂದಿನ ನ್ಯಾಯಪಾಲಕರು ನಿರೂಪಿಸಿದ ನ್ಯಾಯಶಾಸ್ತ್ರಪರಂಪರೆ. ಇವರಿಂದ ಆರಂಭವಾದ ವಿಚಾರ ಪರಂಪರೆಯನ್ನು ಮೇಧಾತಿಥಿ, ವಿಜ್ಞಾನೇಶ್ವರ, ಮುಂತಾದವರು ಮುಂದುವರಿಸಿಕೊಂಡುಹೋದರು. ಇದೇ ವಿಚಾರಧಾರೆಯನ್ನು ಉತ್ತರ ಭಾರತದಲ್ಲಿ, ಮುಸ್ಲಿಮರ ಅಧಿಕಾರಾವಧಿಯವರೆಗೆ ಮುಂದುವರಿಸಿಕೊಂಡು ಬರಲಾಯಿತು.

ಈ ವಿಷಯದ ಬಗ್ಗೆ, ಆಧುನಿಕ ಲೇಖಕರು ಸಹ ಗ್ರಂಥಗಳನ್ನು ಬರೆದಿದ್ದಾರೆ. ಈ ಆಧುನಿಕ ಲೇಖಕರ ಮೂರು ವರ್ಗಗಳಿವೆ. ಘೋಷಾಲ್, ಭಂಡಾರ್ಕರ್ ಮತ್ತು ರಂಗಸ್ವಾಮಿ ಐಯ್ಯಂಗಾರ್‌ರಂತಹ ಲೇಖಕರು ಮೊದಲ ವರ್ಗಕ್ಕೆ ಸೇರುತ್ತಾರೆ. ಇವರುಗಳು ಸಂಪೂರ್ಣವಾಗಿ ಸಿದ್ಧಾಂತಗಳ ನಿರೂಪಣೆಯಲ್ಲೇ ಹೆಚ್ಚಿನ ಆಸಕ್ತಿ ತೋರಿಸಿದರು. ಈ ಆಧುನಿಕ ಲೇಖಕರು, ರಾಜಕೀಯ ಶಾಸ್ತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಸಂಸ್ಕೃತ ಮತ್ತು ಪಾಳಿ ಭಾಷಾ ಕ್ಷೇತ್ರದಲ್ಲಿ ಹರಡಿ ಹಂಚಿಹೋಗಿದ್ದ ವಿಷಯಗಳನ್ನು ಕ್ರೋಡೀಕರಿಸಿ, ಅವನ್ನು ಹೋಲಿಸಿ ನೋಡುವ ಪ್ರಯತ್ನದಲ್ಲಿ ಇವರು ಯಶಸ್ವಿಯಾದರು. ಎರಡನೆಯ ವರ್ಗದಲ್ಲಿ ಜಯಸ್ವಾಲ್ ಮತ್ತು ವಿನಯ್‌ಕುಮಾರ್ ಸರ್ಕಾರ್ ಅವರಂತಹ ಬರಹಗಾರರಿದ್ದಾರೆ. ಅವರು ತಮ್ಮ ಪಾಂಡಿತ್ಯ ಮತ್ತು ಕಲ್ಪನಾ ಸಾಮರ್ಥ್ಯಗಳಿಂದ ಕಾರ್ಯನಿರ್ವಹಿಸಿದರು. ಅವರು ತಮ್ಮ ಪುಸ್ತಕಗಳಲ್ಲಿ ರಾಜಕೀಯ ಶಾಸ್ತ್ರದಲ್ಲಿನ ಸಮನ್ವಯತೆಗೆ ಮತ್ತು ಅರ್ಥವಿವರಣೆಗೆ ಹೆಚ್ಚು ಗಮನ ಹರಿಸಿದರು. ಮೂರನೆಯ ಗುಂಪಿಗೆ ಸೇರಿದ ಬರಹಗಾರರ ಕೃತಿಗಳ ಸಹ ತುಂಬ ಪ್ರಾಮುಖ್ಯತೆ ಪಡೆದಿವೆ. ಶಿಲಾಶಾಸನಗಳು ಮತ್ತು ಇತರ ದಾಖಲೆಗಳ ಆಧಾರದ ಮೇಲೆ ಅವರು ಸರ್ಕಾರದ ಹಾಗೂ ಆಡಳಿತಾತ್ಮಕ ಸಂಸ್ಥೆಗಳ ಕಾರ್ಯವೈಖರಿ ಕುರಿತು, ತಮ್ಮ ಕೃತಿಗಳಲ್ಲಿ ಪರಿಶೀಲಿಸಿದ್ದಾರೆ. ಪ್ರೊಫೆಸರ್ ಪಿ.ಎನ್. ಬ್ಯಾನರ್ಜಿ ಮತ್ತು ಡಾ. ಬೇನೀಪ್ರಸಾದ್ ಈ ವಿಚಾರ ಪರಂಪರೆಯ ಅತ್ಯಂತ ಉತ್ತಮ ಪ್ರತಿನಿಧಿಗಳಾಗಿದ್ದಾರೆ. ಪ್ರೊಫೆಸರ್ ಬ್ಯಾನರ್ಜಿಯವರ

Public Administration in Ancient India ಮತ್ತು ಡಾ. ಬೇನೀ ಪ್ರಸಾದ್ ಅವರ *The State in Ancient India* ಮತ್ತು ಅವರೇ ಬರೆದಿರುವ ಮತ್ತೊಂದು ಪುಸ್ತಕ *Theories of Government in Ancient India* ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿವೆ. ಈ ಪುಸ್ತಕಗಳನ್ನು ಐತಿಹಾಸಿಕ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಬರೆಯಲಾಗಿದೆಯೇ ವಿನಃ ಸಾಹಿತ್ಯ ಒಳಗೊಂಡಿರುವ ವಿಷಯಗಳ ಆಧಾರದ ಮೇಲಲ್ಲ.

ಈಗಿನ ಈ ಲೇಖಕರು ತಾವು ಯಾವುದೇ ಹೊಸ ಕ್ಷೇತ್ರವನ್ನಾಗಲಿ ಅಥವಾ ಯಾವುದೇ ಹೊಸ ವಿಷಯವನ್ನಾಗಲಿ ಕಂಡುಹಿಡಿದಿರುವುದಾಗಿ ಹೇಳಿಕೊಳ್ಳುವುದಿಲ್ಲ. ಈ ವಿಷಯ ಕುರಿತಂತೆ ಯಾವ ಮೂಲ ಸಂಶೋಧನೆಯಾಗಲಿ ತಮ್ಮಿಂದ ನಡೆದಿದೆಯೆಂದು ಸಹ ಅವರು ಹೇಳಿಕೊಳ್ಳುವುದಿಲ್ಲ. ಪರಮಾಧಿಕಾರ ಮತ್ತು ರಾಜ್ಯ ಇವುಗಳ ಬಗ್ಗೆ ಈಗಾಗಲೇ ನಮಗೆ ಗೊತ್ತಿರುವ ಸಿದ್ಧಾಂತಗಳನ್ನು ಆಧುನಿಕ ಚಿಂತನಾ ದೃಷ್ಟಿಯಿಂದ ಪರಿಶೀಲಿಸುವುದು ಮತ್ತು ಎಲ್ಲ ದೃಷ್ಟಿಯಿಂದಲೂ ಹಿಂದೂ ಸಿದ್ಧಾಂತ ವಿಶಿಷ್ಟವಾದುದು ಎಂಬುದನ್ನು ತೋರಿಸುವುದೇ ಲೇಖಕರ ಉದ್ದೇಶ. ಕೆಲವು ವಿಚಾರಧಾರೆಗಳ ಪ್ರಭಾವದಿಂದ ಹಿಂದೂಗಳ ಸಿದ್ಧಾಂತ ಪರಿಷ್ಕೃತಗೊಳ್ಳುತ್ತಾ ಹೋಗುತ್ತದೆ ಎಂಬುದನ್ನು ಸಹ ಅವರು ತೋರಿಸಿದ್ದಾರೆ. ರಾಜಕಾರಣ ಮತ್ತು ಸಾಮಾಜಿಕ ವಿಕಾಸದ ಬಗ್ಗೆ ಗ್ರೀಕ್ ಮತ್ತು ರೋಮನ್ ಇತಿಹಾಸಕಾರರಿಗಿದ್ದ ಕಲ್ಪನೆಗಿಂತಲೂ ವಿಭಿನ್ನವಾದ ವಿಚಾರಗಳು ಹಾಗೂ ಭಾವನೆಗಳನ್ನು ಹಿಂದೂ ಇತಿಹಾಸಕಾರರು (ಭಾಗಶಃ ಐತಿಹಾಸಿಕವೆನಿಸಿದ ವಿಷಯಗಳ ಲೇಖಕರು) ಮತ್ತು ಲೇಖಕರು ಹೊಂದಿದ್ದರು. ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತಗಳ ಬಗ್ಗೆ ಚರ್ಚೆ ನಡೆಸುವುದು, ಪುರಾಣ ಮತ್ತು ಇತಿಹಾಸಗಳಲ್ಲಿ ಆವಶ್ಯಕವಾಗಿ ನಡೆಯಬೇಕಾದ ಕಾರ್ಯವಾಗಿತ್ತು. ಈ ಭಾವನೆಗಳನ್ನು ಜನಪ್ರಿಯಗೊಳಿಸಲು ಅತಿ ಹೆಚ್ಚಿನ ಪ್ರಾಮುಖ್ಯ ಕೊಡಲಾಗಿತ್ತು. ಮಹಾರಾಜರುಗಳ ಕಾರ್ಯಕಲಾಪಗಳನ್ನಷ್ಟೇ ಕುರಿತು ಬರೆಯಲಾದ ರಾಜತರಂಗಿಣಿ, ಹರ್ಷಚರಿತ ಅಥವಾ ಮಂಜುಶ್ರೀ ಮೂಲಕಲ್ಪ– ಇವುಗಳನ್ನು ಕಾವ್ಯಗಳೆಂದು ಪರಿಗಣಿಸಲಾಗಿತ್ತು. ಇತಿಹಾಸ ನಿರ್ಲಕ್ಷ್ಯಕ್ಕೊಳಗಾಗಿದ್ದರೂ, ಐತಿಹಾಸಿಕ ಮತ್ತು ರಾಜಕೀಯ ಪರಂಪರೆಗೆ ಭಾರತೀಯ ಸಾಹಿತ್ಯದಲ್ಲಿ ಅತೀ ಪ್ರಮುಖ ಸ್ಥಾನವನ್ನು ಕೊಡಲಾಗಿತ್ತು.

* * * *

೨. ಪರಮಾಧಿಕಾರದ ಉಗಮ

ಹಿಂದೂ ಸಾಹಿತ್ಯದಲ್ಲಿ ರಾಜನ ಬಗ್ಗೆ ಮೊದಲ ಸೂಚನೆ ವೇದಗಳಲ್ಲಿ ಕಂಡುಬರುತ್ತದೆ. ವೇದಗಳ ಕಾಲದಲ್ಲಿ, ಸಾಮಾನ್ಯವಾಗಿ ರಾಜನನ್ನು ಜನರೇ ಆರಿಸುತ್ತಿದ್ದರು. ವಿದ್ವಾಂಸರುಗಳು ನಡೆಸಿರುವ ಸಂಶೋಧನೆಗಳಿಂದ ಈ ಅಂಶ ದೃಢಪಟ್ಟಿದೆ. ಆರ್ಯ ಸಮುದಾಯಗಳು ಸ್ಥಳೀಯರ ವಿರುದ್ಧ ಹೋರಾಟ ನಡೆಸುತ್ತಿದ್ದವು. ಈ ಹೋರಾಟಕ್ಕೆ ಒಬ್ಬ ನಾಯಕನಿರಬೇಕೆಂಬ ಉದ್ದೇಶದಿಂದ ಈ ಪದ್ಧತಿ ಜಾರಿಗೆ ಬಂದಿತು.

ಆರ್ಯರಿಗಿಂತಲೂ ಮುಂಚೆ, ಜನರು ರಾಜಪ್ರಭುತ್ವವನ್ನೇ ಹೊಂದಿದ್ದರೆಂದು ವೇದಗಳಿಂದ ನಮಗೆ ತಿಳಿದುಬರುತ್ತದೆ. ಆ ಕಾಲದಲ್ಲಿ ಅನೇಕ ರಾಜರುಗಳಿದ್ದರು. ಅವರು ಬಹಳ ಪ್ರಬಲರಾಗಿದ್ದರು. ಅವರಲ್ಲಿ ಕೆಲವು ರಾಜರುಗಳು ಒಂದು ಸಾವಿರ ಕೋಟೆಗಳ ಪ್ರಭುಗಳಾಗಿದ್ದರು. ಅವರು ಮುನ್ನುಗ್ಗಿ ಬರುತ್ತಿದ್ದ ಆರ್ಯರನ್ನು ಪ್ರತಿರೋಧಿಸುತ್ತಿದ್ದರು ಎಂದು ವೇದಗಳಲ್ಲಿ ಸೂಚಿಸಲಾಗಿದೆ. ಆರ್ಯನಲ್ಲದ ಭೇಡ (Bheda) ಎಂಬುವನು ಹತ್ತು ರಾಜರುಗಳು ನಡೆಸಿದ ದೊಡ್ಡ ಹೋರಾಟವೊಂದರಲ್ಲಿ ಭಾಗವಹಿಸಿದ್ದನು. ಅಲೆಮಾರಿಗಳಾಗಿದ್ದ ಬುಡಕಟ್ಟು ಜನರ ಗುಂಪುಗಳಾಗಿ ಆರ್ಯರು ಭಾರತವನ್ನು ಪ್ರವೇಶಿಸಿದರು. ಅವರು ಎಲ್ಲೆಲ್ಲೂ ಸ್ಥಿರವಾಗಿ ನೆಲೆಸಿದರು. ಇದರ ಪರಿಣಾಮವಾಗಿ ಆಯಾ ಪ್ರದೇಶದಲ್ಲಿ ಅವರ ಪ್ರಭುತ್ವ ಆರಂಭವಾಯಿತು. ಆರ್ಯರು ಅತಿಕ್ರಮಿಸಿದ ಕಾಲದಲ್ಲಿ, ಭಾರತದಲ್ಲಿ ಬೇಸಾಯಗಾರರ ಮತ್ತು ಪಟ್ಟಣವಾಸಿಗಳ ಸಮುದಾಯಗಳಿದ್ದವು. ಪ್ರಬಲರಾಗಿದ್ದ ರಾಜರುಗಳ ಅಧೀನದಲ್ಲಿ ಈ ಸಮುದಾಯಗಳು ಸಂಘಟಿತಗೊಂಡವು. ಅಶ್ವಗಳು ಮತ್ತು ಕಬ್ಬಿಣದ ಅಸ್ತ್ರಗಳನ್ನು ಬಳಸುವ ಮೂಲಕ ಆರ್ಯರು ಕ್ರಮೇಣ ಈ ಸಮುದಾಯಗಳ ಮೇಲೆ ಜಯಗಳಿಸಿದರು. ಆದರೆ ವೇದಗಳ ಕಾಲದಲ್ಲಿ ದಸ್ಯುಗಳು ತುಂಬ ಮಹತ್ವ ಪಡೆದರು. ಭಾರತದಲ್ಲಿನ ರಾಜಕೀಯ ಇತಿಹಾಸದಲ್ಲಿ ಉಶನಸ್ (ಶುಕ್ರ) ಪರಂಪರೆ ಮಧ್ಯಯುಗದಲ್ಲಿ ಬರುತ್ತದೆ. ಇವರು ಆರ್ಯರಿಗೆ ಮುಂಚೆ ಇದ್ದವರು. ಈ ಉಶನರು ಯಾವಾಗಲೂ ಆರ್ಯರಲ್ಲದ ರಾಜರುಗಳೊಡನೆ ಸಂಬಂಧವನ್ನು ಇಟ್ಟುಕೊಂಡಿದ್ದರು. ಇವರನ್ನು ದೈತ್ಯರ ರಾಜಗುರುಗಳೆಂದು ಪರಿಗಣಿಸಲಾಗಿತ್ತು.

*ಬ್ರಾಹ್ಮಣ*ಗಳ ಕಾಲದಲ್ಲೂ (ಸುಮಾರು ಕ್ರಿ.ಶ. ೮೦೦) ಆರ್ಯ ದೊರೆಗಳನ್ನೇ ಆರಿಸಲಾಗುತ್ತಿತ್ತು. ಇದು ಕೂಡಾ ಆಯ್ಕೆಯ ಮೂಲಕವೇ ನಡೆಯುತ್ತಿತ್ತು. ಅಸುರರಿಂದ ತಮಗೆ ಉಂಟಾದ ಸೋಲಿಗೆ ಕಾರಣಗಳೇನೆಂಬುದನ್ನು ದೇವತೆಗಳು ಪರಸ್ಪರ ಚರ್ಚಿಸಿದ ಬಗ್ಗೆ *ಐತರೇಯ ಬ್ರಾಹ್ಮಣ*ದಲ್ಲಿ ದಾಖಲೆಯಿದೆ. ಸರ್ವಸಮ್ಮತವಾದ ರಾಜನೊಬ್ಬನು ಇಲ್ಲದಿದ್ದುದೇ ಈ ಸೋಲಿಗೆ ಕಾರಣವಾಯಿತೆಂಬ ತೀರ್ಮಾನಕ್ಕೆ ಬರಲಾಯಿತು.

ಆದ್ದರಿಂದ ರಾಜನೊಬ್ಬನನ್ನು ಆಯ್ಕೆ ಮಾಡಲು ದೇವತೆಗಳು ತೀರ್ಮಾನಿಸಿದರು. ಅವರು ಪ್ರಜಾಪತಿಯ ನೇತೃತ್ವದಲ್ಲಿ ಒಬ್ಬರಿಗೊಬ್ಬರು ಮಾತನಾಡಿಕೊಂಡು, (ಇಂದ್ರನತ್ತ ಕೈತೋರಿಸುತ್ತಾ) ಹೀಗೆ ಹೇಳಿದರು: "ಈತ ದೇವತೆಗಳಲ್ಲಿ ಅತ್ಯಂತ ಶಕ್ತಿಶಾಲಿ. ಬಹುಪರಾಕ್ರಮಿ, ಪರಿಪೂರ್ಣತೆ ಪಡೆದವನು. ಅವನನ್ನೇ ನಮ್ಮ ರಾಜನನ್ನಾಗಿ ಮಾಡೋಣ!" ಆಗ ಆರ್ಯರ ಸಮುದಾಯ ಇನ್ನೂ ಸ್ಥಿರತೆ ಪಡೆದಿರಲಿಲ್ಲ. ಆದರೆ ರಾಜರುಗಳು ತಮ್ಮ ಪ್ರಭುತ್ವವನ್ನು ಭದ್ರಪಡಿಸಿ ಕೊಂಡಿದ್ದರು. ರಾಜರುಗಳು ತಾವು ಸಾಮ್ರಾಜ್ಯದ ಅಧಿಪತಿಗಳೆಂಬ ಘನತೆಗೆ ಪಾತ್ರರಾಗಿರುವುದಾಗಿ ಹೇಳಿಕೊಳ್ಳುತ್ತಿದ್ದರು ಎಂದು ವೇದಗಳಲ್ಲಿ ಉಲ್ಲೇಖಿತವಾಗಿದೆ. ವೇದಗಳಲ್ಲಿ ರಾಜ್ಯಗಳ ಅಥವಾ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಹೆಚ್ಚಿನ ಸಾಕ್ಷ್ಯಾಧಾರಗಳಿಲ್ಲ. ಆದ್ದರಿಂದ ಯಾವುದೇ ನಿರ್ದಿಷ್ಟ ತೀರ್ಮಾನಕ್ಕಾಗಲೀ ಬರಲು ಸಾಧ್ಯವಾಗುವುದಿಲ್ಲ.

ಬೌದ್ಧ ಸಾಹಿತ್ಯ ಬಹಳ ಕಾಲಾನಂತರ ಬಂದಿದ್ದರೂ ರಾಜಕೀಯ ವಿಷಯಗಳಲ್ಲಿ ಅದೇ ರೀತಿಯ ವಿಚಾರಧಾರೆಯನ್ನು ಅನುಸರಿಸಲಾಗಿದೆ. 'ಅಗಣ್ಣಸುತ್ತಾಂತ' ಎಂಬ ಬೌದ್ಧ ಸಾಹಿತ್ಯ ಗ್ರಂಥದಲ್ಲಿ ರಾಜಪ್ರಭುತ್ವದ ಉಗಮ ಹೇಗಾಯಿತು ಎಂಬುದನ್ನು ಸ್ವಲ್ಪಮಟ್ಟಿಗೆ ವಿವರಿಸಲಾಗಿದೆ: ಒಂದು ಸಮಾಜದಲ್ಲಿ ಯಾವುದಾದರೊಂದು ಅಧಿಕಾರ ವ್ಯವಸ್ಥೆ ಅಥವಾ ಪ್ರಾಧಿಕಾರ ಇಲ್ಲದಿದ್ದರೆ, ಎಂತಹ ಅರಾಜಕತೆ ಉಂಟಾಗುತ್ತದೆ ಎಂಬುದನ್ನು ಸುತ್ತಾಂತದಲ್ಲಿ ವರ್ಣಿಸಲಾಗಿದೆ. ಆದ್ದರಿಂದ ಆ ಸಮಾಜದಲ್ಲಿದ್ದ ಜನರೆಲ್ಲರೂ ಒಟ್ಟಿಗೆ ಸೇರಿ, ಪರಸ್ಪರ ಸಮಾಲೋಚನೆ ಮತ್ತು ಚರ್ಚೆಯ ಮೂಲಕ, ತಮ್ಮೊಳಗೆ ಅತ್ಯಂತ ಸ್ಫುರದ್ರೂಪಿಯಾದ ಮತ್ತು ಸಮರ್ಥಶಾಲಿಯಾದ ಒಬ್ಬ ವ್ಯಕ್ತಿಯನ್ನು ಆರಿಸುತ್ತಿದ್ದರು. ಅನಂತರ ಅವರು ಆ ವ್ಯಕ್ತಿಯನ್ನು ಉದ್ದೇಶಿಸಿ ಹೀಗೆ ಹೇಳುತ್ತಿದ್ದರು: "ಸತ್ಪುರುಷನಾದ ನೀನು ಈಗ ಬಾ. ಶಿಕ್ಷೆಗೆ ಅರ್ಹರಾದವರನ್ನು ದಂಡಿಸು. ಅವರನ್ನು ತೀವ್ರವಾಗಿ ನಿಂದಿಸು. ಅವರನ್ನು ಗಡೀಪಾರು ಮಾಡು. ಅದಕ್ಕೆ ಪ್ರತಿಯಾಗಿ ನಾವು ನಿನಗೆ ನಮ್ಮಲ್ಲಿರುವ ಅಕ್ಕಿಯಲ್ಲಿ ಸ್ವಲ್ಪ ಭಾಗವನ್ನು ಕೊಡುತ್ತೇವೆ." ಜನರಿಂದ ಆಯ್ಕೆಯಾದ ಆ ವ್ಯಕ್ತಿ ಆ ಸ್ಥಾನವನ್ನು ಒಪ್ಪಿಕೊಂಡು ಜನರು ತನಗೆ ಹೇಳಿದ್ದೆಲ್ಲವನ್ನೂ ಮಾಡಿದನು. ಜನರು ತಮ್ಮ

ಬಳಿಯಿದ್ದ ಅಕ್ಕಿಯಲ್ಲಿ ಸ್ವಲ್ಪಭಾಗವನ್ನು ಅವನಿಗೆ ನೀಡಿದರು. ಜನರೆಲ್ಲರೂ ಸೇರಿ, ಆ ವ್ಯಕ್ತಿಯನ್ನು ಆಯ್ಕೆ ಮಾಡಿದ್ದರಿಂದ ಆತನನ್ನು 'ಮಹಾಸಮ್ಮತ್ತ' ಎಂದು ಕರೆಯ ತೊಡಗಿದರು. ರಣರಂಗದಲ್ಲಿ ಅವನೇ ಸೇನಾಧಿಪತಿಯಾಗಿರುತ್ತಿದ್ದ. ಆದ್ದರಿಂದ ಅವನನ್ನು 'ಕ್ಷತ್ರಿಯ' ಎಂದು ಸಹ ಕರೆಯಲಾಗುತ್ತಿತ್ತು. ಕಾನೂನು ಮತ್ತು ವ್ಯವಸ್ಥೆಯನ್ನು ಕಾಪಾಡುತ್ತಿದ್ದುದರಿಂದ ಆತನು 'ರಾಜನ್' ಎಂದು ಸಹ ಕರೆಯಲ್ಪಡುತ್ತಿದ್ದನು. ಇದು ಆಯ್ಕೆ ಮತ್ತು ಪರಸ್ಪರ ಒಪ್ಪಂದದ ಮೂಲಕ ಸ್ಥಾಪಿತವಾದ ರಾಜಪ್ರಭುತ್ವವಾಗಿತ್ತು., ಮಹಾಭಾರತ ಕಾವ್ಯ ಬರುವ ಕಾಲಕ್ಕೆ ಈ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಯಿತು. ಆಗ ರಾಜಪ್ರಭುತ್ವ ಆನುವಂಶಿಕವಾಯಿತು. ವೇದಗಳ ಕಾಲದಲ್ಲಿ ಈ ನಾಯಕರುಗಳು ಘನತೆ ಹಾಗೂ ಗೌರವ ಪಡೆದುಕೊಂಡರು. ರಾಜರು ಹೊಂದಿರಬೇಕಾದ ಅಧಿಕಾರ ಮತ್ತು ರಾಜರಿಗೆ ಸಲ್ಲಬೇಕಾದ ನಿಷ್ಠೆ ಇವುಗಳ ಸಮರ್ಥನೆಗಾಗಿ ಬೇರಾವುದಾದರೂ ಸಿದ್ಧಾಂತವನ್ನು ರೂಪಿಸಬೇಕಾಗಿತ್ತು. ವೇದಗಳ ಮತ್ತು ಬ್ರಾಹ್ಮಣ – ಇವುಗಳ ಕಾಲದಲ್ಲಿ ರಾಜನನ್ನು ಆಯ್ಕೆ ಮಾಡುವ ಪದ್ಧತಿಯೇ ಸೂಕ್ತವೆನಿಸಿತ್ತು. ಆದರೆ ಪುರಾಣಗಳ ಕಾಲ ಇಂತಹ ಪದ್ಧತಿಗೆ ಸೂಕ್ತವೆನಿಸಲಿಲ್ಲ. ಪಾಂಡವ ರಾಜನಾದ ಯುಧಿಷ್ಠಿರ ಭೀಷ್ಮನಿಗೆ ಒಂದು ನಿರ್ದಿಷ್ಟ ಪ್ರಶ್ನೆ ಹಾಕುತ್ತಾನೆ. ಅನಂತರ ಅವರಿಬ್ಬರ ನಡುವೆ ಸಂವಾದ ನಡೆಯುತ್ತದೆ. ಪರಮಾಧಿಕಾರ ಹೇಗೆ ಹುಟ್ಟಿಕೊಂಡಿತು ಎಂಬ ಬಗ್ಗೆ ನಡೆದ ಈ ಸಂವಾದವು ಹಿಂದೂಗಳು ಹೊಂದಿದ್ದ ಭಾವನೆಯ ಸಂಕೇತವಾಯಿತೆಂದು ಹೇಳಬಹುದು.

"ದೊರೆ" (ರಾಜನ್) ಎಂಬ ಹೆಸರು ಹೇಗೆ ರೂಢಿಗೆ ಬಂದಿತು? ಜನರು ರಾಜನಷ್ಟೇ ಬುದ್ಧಿವಂತರಾಗಿರುತ್ತಾರೆ. ಪರಾಕ್ರಮಿಗಳಾಗಿರುತ್ತಾರೆ. ಅಷ್ಟೇ ದೈಹಿಕ ಅಂಗಗಳನ್ನು ಹೊಂದಿರುತ್ತಾರೆ. ಅವರ ಮನೋಬಲ ಸಹ ಅಷ್ಟೇ ದೃಢವಾಗಿರುತ್ತದೆ. ಎಲ್ಲರಂತೆ ರಾಜನಿಗೂ ಜನನ–ಮರಣಗಳಿರುತ್ತವೆ. ಎಲ್ಲ ದೃಷ್ಟಿಯಿಂದಲೂ ಆತನು ಜನರಿಗೆ ಸರಿಸಮನಾಗಿರುವಾಗ ಅವರ ಮೇಲೆ ಅವನ ಆಳ್ವಿಕೆ ಏಕೆ ನಡೆಯಬೇಕು ಎಂಬ ಪ್ರಶ್ನೆ ಉದ್ಭವಿಸಿತು. ಈ ಪ್ರಶ್ನೆಗೆ ಉತ್ತರ ನೀಡಲು ರಾಜಪ್ರಭುತ್ವದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಂಪೂರ್ಣ ವಿವರಗಳನ್ನು ರೂಪಿಸಬೇಕಾಗುತ್ತದೆ. ರಾಜನು ತನ್ನ ಪ್ರಜೆಗಳ ಮೇಲೆ ಆಳ್ವಿಕೆ ನಡೆಸಲು ಯಾವುದು ಆಧಾರವಾಗಿರಬೇಕು ಎಂಬ ವಿಷಯವನ್ನು ಪರಿಶೀಲಿಸಬೇಕಾಗುತ್ತದೆ. ಈಗ, ರಾಜನ ಆಳ್ವಿಕೆಯ ವಿಷಯಕ್ಕಷ್ಟೇ ನಾವು ಗಮನ ಹರಿಸಬೇಕಾಗುತ್ತದೆ. ಭೀಷ್ಮನು ಹೇಳುತ್ತಾನೆ "ಮೊದಲು, ಪರಮಾಧಿಕಾರವಾಗಲಿ ಅಥವಾ ಸಾರ್ವಭೌಮನಾಗಲಿ ಇರಲಿಲ್ಲ. ಶಿಕ್ಷೆಯೂ ಇರಲಿಲ್ಲ, ಶಿಕ್ಷೆ ಕೊಡುವವನೂ ಇರಲಿಲ್ಲ. ಆ ಕಾಲದಲ್ಲಿ ಜನರು ನ್ಯಾಯ ಮತ್ತು ಧರ್ಮದ ಮೂಲಕ ತಮ್ಮ ಆಡಳಿತವನ್ನು ತಾವೇ ನಡೆಸಿಕೊಳ್ಳುತ್ತಿದ್ದರು. ಕಾಲಾನಂತರದಲ್ಲಿ ಜನರು ಭ್ರಷ್ಟರಾಗತೊಡಗಿದರು. ಅವರಲ್ಲಿ ದುರಾಸೆ, ಕ್ರೋಧ ಮತ್ತು ಸ್ವಾರ್ಥತೆ

ಹೆಚ್ಚುತ್ತ ಹೋಯಿತು. ಇದರಿಂದ ಜಗತ್ತಿನ ನೆಮ್ಮದಿಗೆ ಭಂಗವುಂಟಾಯಿತು. ವೇದ, ಶಾಸ್ತ್ರ, ಮತ್ತು ನ್ಯಾಯ ಎಲ್ಲವೂ ನಾಶವಾದವು... ಇಂತಹ ಪರಿಸ್ಥಿತಿಯಿಂದ ದೇವತೆಗಳು ಭೀತಿಗೊಳಗಾದರು. ಅವರು ತಮ್ಮ ರಕ್ಷಣೆಗಾಗಿ, ಬ್ರಹ್ಮನಿಗೆ ಮೊರೆ ಹೋಗಬೇಕಾಯಿತು. ಆಗ ಸರ್ವೋತ್ತಮನೆನಿಸಿದ ದೇವರು ಸಾವಿರ ಅಧ್ಯಾಯ ಗಳನ್ನೊಳಗೊಂಡ ಒಂದು ಬೃಹತ್ ಗ್ರಂಥವನ್ನು ಸೃಷ್ಟಿಸಿದನು. ಇದರಲ್ಲಿ ಜೀವನದ ನಾಲ್ಕು ಪರಮ ಧ್ಯೇಯಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಪ್ರತಿಪಾದಿಸಲಾಗಿದೆ. ಇದನ್ನು ದಂಡನೀತಿ ಎಂದು ಕರೆಯಲಾಗುತ್ತಿತ್ತು. ಈ ದಂಡನೀತಿಯ ಮೂಲರೂಪದಿಂದ, ಅನಂತರ ಶಿವ ಮತ್ತು ಇಂದ್ರ ದೇವರುಗಳು ಹಾಗೂ ಮುನಿಗಳಾದ ಬೃಹಸ್ಪತಿ ಮತ್ತು ಶುಕ್ರ ಸಾರಾಂಶಗಳನ್ನು ಸಿದ್ಧಪಡಿಸಿದರು. ಅನಂತರ ದೇವತೆಗಳು ವಿಷ್ಣುವಿನ ಬಳಿ ಹೋದರು. ಅತ್ಯುನ್ನತ ಪದವಿಯನ್ನು ಅಲಂಕರಿಸಲು ಅರ್ಹನಾಗಿರುವಂತಹ ಒಬ್ಬ ವ್ಯಕ್ತಿಯನ್ನು ಆರಿಸಬೇಕೆಂದು ಅವರು ವಿಷ್ಣುವಿನಲ್ಲಿ ಮೊರೆಯಿಟ್ಟರು. ಅಂತಹ ವ್ಯಕ್ತಿಯನ್ನು ನಶ್ವರ ಮಾನವರಿಂದಲೇ ಆರಿಸಬೇಕೆಂದು ಅವರು ಕೇಳಿಕೊಂಡರು. ದೇವರು, ತನ್ನ ಕಾಂತಿಯನ್ನು ಬೀರಿ, ಒಬ್ಬ ಪುತ್ರನನ್ನು ಸೃಷ್ಟಿ ಮಾಡಿದನು. ಪುತ್ರರೂಪದಲ್ಲಿ ಬಂದ ಈ ವ್ಯಕ್ತಿ ಯಾವ ಪರಮಾಧಿಕಾರವನ್ನೂ ಬಯಸಲಿಲ್ಲ. ಅವನು ತನ್ನ ಈ ಅಧಿಕಾರವನ್ನು ಒಂದು ನ್ಯಾಸವನ್ನಾಗಿ ಪರಿಗಣಿಸಿದನು. ಅವನ ತರುವಾಯ, ಬಂದ, ಅವನ ನಾಲ್ಕನೆಯ ಉತ್ತರಾಧಿಕಾರಿ, ನೀತಿ ನಿರೂಪಣೆಯಲ್ಲಿ ಕುಶಲತೆ ಪಡೆದಿದ್ದನು. ಅವನು ಜನರನ್ನು ಸಂರಕ್ಷಣೆ ಮಾಡಿದನು. ಅವನ ನಂತರ ಬಂದ ವ್ಯಕ್ತಿ ಒಂದು ಸಾಮ್ರಾಜ್ಯವನ್ನೇ ಗಳಿಸಿದನು ಮತ್ತು ಸ್ವಾರ್ಥಪರನಾದನು.

ಅನಂತರ ವೇಣ ಎಂಬಾತನು ಆ ಸ್ಥಾನಕ್ಕೆ ಬಂದನು. ಅವನ ನಿರಂಕುಶಾಧಿಕಾರವನ್ನು ತಾಳಲಾಗದೆ, ತುಂಬ ಕೋಪೋದ್ರಿಕ್ತರಾದ ಮುನಿಗಳೇ ಅವನನ್ನು ಕೊಂದರು. ಈ ಮುನಿಗಳು ಅವನ ಬಲತೋಳನ್ನು ಛೇದಿಸಿದಾಗ, ಅದರಿಂದ ಪೃಥು ಹೊರಬಂದ. ಅವನು ಅತಿ ಸುಂದರನಾಗಿದ್ದ. ಸಂಪೂರ್ಣವಾಗಿ ಶಸ್ತ್ರಸಜ್ಜಿತನಾಗಿದ್ದ. ವೇದಗಳಲ್ಲಿ ಪರಿಣತನಾಗಿದ್ದ. ಧನುರ್ವಿದ್ಯೆಯಲ್ಲಿ ಅತಿ ಕುಶಲನಾಗಿದ್ದ. ಕಾನೂನು, ನಿಯಮ ಮತ್ತು ಧರ್ಮವನ್ನು ಯಾವ ಭಯವಾಗಲಿ ಅಥವಾ ಪಕ್ಷಪಾತವಿಲ್ಲದೆ ಆಚರಣೆಗೆ ತರಬೇಕೆಂದೂ, ಆಶೆ–ಆಮಿಷಗಳನ್ನು ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಂಡಿರಬೇಕೆಂದೂ, ದೇವತೆಗಳು ಮತ್ತು ಮಹಾಮುನಿಗಳು ಅವನಿಗೆ ಆದೇಶ ನೀಡಿದರು. ಅಷ್ಟೇ ಅಲ್ಲದೆ ಅವರು ಅವನಿಗೆ ಈ ರೀತಿ ಪ್ರತಿಜ್ಞೆ ಮಾಡುವಂತೆ ಸೂಚಿಸಿದರು. ಅವನು ಅದಕ್ಕೆ ಒಪ್ಪಿಕೊಂಡನು. "ನಾನು ಬ್ರಹ್ಮನಾಗಿದ್ದರೆ ಹೇಗಿರುತ್ತಿದ್ದೆನೋ ಅದೇ ರೀತಿ, ಕಾಯಾ, ವಾಚಾ, ಮನಸಾ ಈ ಭೂಮಿಯನ್ನು ರಕ್ಷಿಸುತ್ತೇನೆ. ದಂಡನೀತಿಯಲ್ಲಿರುವ ಪ್ರಕಾರ ಸ್ಥಾಪಿತ ಕಾನೂನು–ನಿಯಮಗಳನ್ನು

ಪಾಲಿಸುತ್ತೇನೆ ಮತ್ತು ಅವನ್ನು ಆಚರಣೆಗೆ ತರುತ್ತೇನೆ. ನಾನು ಮನಸ್ಸಿಗೆ ಬಂದಂತೆ ವರ್ತಿಸುವುದಿಲ್ಲ. ಎರಡಾವರ್ತಿ ಜನ್ಮತಳೆಯು ವರ್ಗಗಳನ್ನು (ದ್ವಿಜರನ್ನು) ನಾನೆಂದೂ ದಂಡಿಸುವುದಿಲ್ಲ. ವಿವಿಧ ವರ್ಗಗಳ ಸಮ್ಮಿಶ್ರಣದ ಅಪಾಯದಿಂದ ನಾನು ಈ ವಿಶ್ವವನ್ನು ಕಾಪಾಡುತ್ತೇನೆ. ಪೃಥುವನ್ನು ಬ್ರಾಹ್ಮಣರು ಮುನಿಗಳು ಮತ್ತು ವಿಷ್ಣುವನ್ನೊಳಗೊಂಡು ಎಲ್ಲ ದೇವತೆಗಳು ಪವಿತ್ರಗೊಳಿಸಿದರು. ಅವನು ರಾಜನಾಗಿದ್ದ. ಏಕೆಂದರೆ, ಎಲ್ಲ ಪ್ರಜೆಗಳನ್ನೂ ಅವನು ಸಂತೋಷದಿಂದ ಇಟ್ಟಿದ್ದನು. ಬ್ರಾಹ್ಮಣರಿಗಾದ ವೇದನೆಗಳನ್ನು ನಿವಾರಿಸುತ್ತಿದ್ದುದರಿಂದ ಅವನು ಕ್ಷತ್ರಿಯನೆಂಬ ಹೆಸರು ಪಡೆದನು. ಚಿರಂತನವಾಗಿರುವ ವಿಷ್ಣು ತನ್ನನ್ನು ಮೀರಿ ನಡೆಯುವವರಿಲ್ಲವೆಂದು ಸಾರಿ ಹೇಳಿ ತನ್ನ ಸ್ಥಾನವನ್ನು ಸ್ಥಿರಪಡಿಸಿದನು. ದೇವರಾದ ವಿಷ್ಣು ರಾಜನ ಒಳಹೊಕ್ಕನು. ಆದ್ದರಿಂದ ಇಡೀ ವಿಶ್ವದಲ್ಲಿ ರಾಜರುಗಳನ್ನು ದೇವರೆಂದೇ ಪರಿಗಣಿಸಿ, ಅವರನ್ನು ಪೂಜಿಸುತ್ತಾರೆ.

ಈ ಸಿದ್ಧಾಂತ ಬೇರೆ ಬೇರೆ ರೂಪದಲ್ಲಿದೆ. ರಾಜರುಗಳು ಕರ್ತವ್ಯಗಳೇನು ಎಂಬುದನ್ನು ತಿಳಿಸುವ ಎಲ್ಲ ಧಾರ್ಮಿಕ ಮತ್ತು ರಾಜಕೀಯ ಗ್ರಂಥಗಳಲ್ಲೂ ಇದೇ ಸಿದ್ಧಾಂತವನ್ನು ಬೇರೆ ಬೇರೆ ರೂಪಗಳಲ್ಲಿ ಪುನರಾವರ್ತಿಸಲಾಗಿದೆ. ರಾಜನನ್ನು ಆರಿಸುವುದಕ್ಕೆ ಮುಂಚೆ ರಾಜ್ಯದಲ್ಲಿದ್ದ ಪರಿಸ್ಥಿತಿಗೆ ಸಂಬಂಧಿಸಿದಂತೆ ಕೆಲವು ವ್ಯತ್ಯಾಸಗಳಿವೆ. ಆದರೆ ಮುಖ್ಯಾಂಶಗಳನ್ನು ಮಾತ್ರ ಸುಸ್ಪಷ್ಟವಾಗಿ ಸೂಚಿಸಲಾಗಿದೆ. ಮಾನವರಿಗೆ ರಾಜ್ಯದಿಂದ ಮಾತ್ರ ಸುರಕ್ಷತೆ ಮತ್ತು ಭದ್ರತೆಗಳು ದೊರೆಯಲು ಸಾಧ್ಯ. ಕಾನೂನು ಮತ್ತು ವ್ಯವಸ್ಥೆಯನ್ನು ಸ್ಥಾಪಿಸಿ, ಶಾಂತಿಯನ್ನು ಕಾಪಾಡಲು ಪರಮಾಧಿಕಾರವನ್ನು ಹೊಂದಿರುವ ಒಂದು ವ್ಯವಸ್ಥೆಯಿರಬೇಕು. ಇಲ್ಲದಿದ್ದರೆ ಮೀನಿನಂತೆ, ಬಲಶಾಲಿಗಳು ದುರ್ಬಲರನ್ನು ನುಂಗಿಹಾಕುತ್ತಾರೆ. ಜನರ ಸಂರಕ್ಷಣೆಗಾಗಿ ಪರಮಾಧಿಕಾರವುಳ್ಳ ಪ್ರಭುತ್ವ ಸ್ಥಾಪಿತವಾಗುತ್ತದೆ. ತಮಗೆ ದೊರೆತ ಸಂರಕ್ಷಣೆಗೆ ಪ್ರತಿಯಾಗಿ, ಪ್ರಭುತ್ವಕ್ಕೆ ವಿಧೇಯರಾಗಿರಲು ಮತ್ತು ಅವರಿಗೆ ತೆರಿಗೆ ಕೊಡಲು ಜನರು ಒಪ್ಪಿಕೊಳ್ಳುತ್ತಾರೆ. ಅವರಿಗೆ ತೆರಿಗೆ ಕೊಡಲು ಜನರು ಒಪ್ಪಿಕೊಳ್ಳುತ್ತಾರೆ. ದೊಡ್ಡ ಮೀನು, ಸಣ್ಣ ಮೀನನ್ನು ನುಂಗಿಹಾಕುವ ದೃಷ್ಟಾಂತವನ್ನು ಎಲ್ಲ ಬಗೆಯ ಹಿಂದೂ ರಾಜಕೀಯ ಸಿದ್ಧಾಂತಗಳಲ್ಲೂ ಕೊಡಲಾಗುತ್ತಿದೆ. ಇದೇ ದೃಷ್ಟಾಂತವನ್ನು ಎಲ್ಲ ಗ್ರಂಥಕರ್ತರು ಪದೇ ಪದೇ ಉಲ್ಲೇಖಿಸಿರುವುದನ್ನು ನಾವು ಕಾಣುತ್ತೇವೆ. ಒಂದು ರಾಜ್ಯ ಸ್ಥಾಪಿತವಾಗುವುದಕ್ಕೆ ಮುಂಚೆ ಅಲ್ಲಿ ಅರಾಜಕತೆ ಉಂಟಾಗಿರುತ್ತದೆ. ಆದ್ದರಿಂದ ಅರಾಜಕತೆಯಿಂದ ರಕ್ಷಣೆ ನೀಡಲು, ಯಾರೊಬ್ಬರಿಗಾದರೂ ಸಂಪೂರ್ಣ ಅಧಿಕಾರ ಕೊಡಲೇಬೇಕಾಗುತ್ತದೆ. ಇದೇ ಸಿದ್ಧಾಂತದ ಮೂಲ ಭಾವನೆ. ಅದನ್ನೇ ಈ ಮುಂದಿನಂತೆ ವ್ಯಕ್ತಪಡಿಸಲಾಗಿದೆ:

"ಶಾಂತಿ ಮತ್ತು ಅಭ್ಯುದಯವನ್ನು ಬಯಸಿದವರೆಲ್ಲರೂ, ಜನರ ಒಳಿತಿಗಾಗಿ, ರಾಜನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿದರು."

ಏವಂ ಯೇ ಭೂತಿಮುಚ್ಚೇಯುಃ ಪೃಥ್ವಿವ್ಯಾಂ ಮಾನವಾಃ ಕ್ವಚಿತ್
ಕುರ್ಯ್ಯುರ್ ರಾಜಜಾನಾಮೇವಾಗ್ರೇ ಪ್ರಜಾನುಗ್ರಹಕಾರಣಾತ್

ಅಂತಹ ಪರಿಸ್ಥಿತಿಯಲ್ಲಿ ಕೈಗಾರಿಕೋದ್ಯಮಕ್ಕೆ ಸ್ಥಾನವಿರುವುದಿಲ್ಲ. ಏಕೆಂದರೆ ಪರಿಣಾಮ ಅನಿಶ್ಚಿತವಾಗಿರುತ್ತದೆ; ಭೂಮಿಯ ಮೇಲೆ ಸಂಸ್ಕೃತಿ ಎನ್ನುವ ಹೆಸರೇ ಇರುವುದಿಲ್ಲ. ಸಮುದ್ರಮಾರ್ಗವಾಗಿ ಸಾಮಗ್ರಿಗಳನ್ನು ಆಮದು ಮಾಡಿಕೊಂಡು, ಅವನ್ನು ಉಪಯೋಗಿಸಲು ಅವಕಾಶವಿರುವುದಿಲ್ಲ. ಏಕೆಂದರೆ ನೌಕಾ ಸಂಚಾರವೇ ಇರುವುದಿಲ್ಲ. ವಿಶಾಲವಾದ ದೊಡ್ಡ ಕಟ್ಟಡವೇ ಇರುವುದಿಲ್ಲ. ಸ್ಥಳಾಂತರಿಸಲು ಮತ್ತು ಚಲಿಸಲು ಹೆಚ್ಚು ಶಕ್ತಿ ಅಗತ್ಯವಿರುವಂತಹ ಯಂತ್ರೋಪಕರಣಗಳಿರುವುದಿಲ್ಲ. ಭೂಸ್ವರೂಪದ ಬಗ್ಗೆ ಜ್ಞಾನವಿರುವುದಿಲ್ಲ. ಕಾಲದ ಗಣನೆ ಇರುವುದಿಲ್ಲ. ಕಲೆಗಳ ಕುರುಹೇ ಇರುವುದಿಲ್ಲ. ಕಾಗದಪತ್ರಗಳಿರುವುದಿಲ್ಲ. ಸಮಾಜ ಇರುವುದಿಲ್ಲ. ಎಲ್ಲಕ್ಕಿಂತ ಹೆಚ್ಚಿನ ದುಷ್ಪರಿಣಾಮವೆಂದರೆ, ಜನರು ಸದಾ ಭಯದ ವಾತಾವರಣದಲ್ಲೇ ಜೀವಿಸಬೇಕಾಗುತ್ತದೆ. ಹಿಂಸಾಚಾರದ ಮೂಲಕ ಸಾವಿನ ಅಪಾಯವಿರುತ್ತದೆ. ಮನುಷ್ಯನ ಜೀವನದಲ್ಲಿ ಒಂಟಿತನ ಆವರಿಸುತ್ತದೆ. ಬಡತನ ಅವನನ್ನು ಕಾಡುತ್ತದೆ. ಅವನ ಜೀವನ ಹೊಲಸಾಗುತ್ತದೆ. ಪಾಶವಿಕವಾಗುತ್ತದೆ. ಆಯುಷ್ಯ ಕಡಿಮೆಯಾಗುತ್ತದೆ."[೪]

ನಿಕೊಲೋ ಮೆಕಿಯವೆಲ್ಲಿ ಸಹ ಇದೇ ಅಭಿಪ್ರಾಯವನ್ನು ಹೊರಗೆಡಹಿದ್ದಾನೆ. "ಮೊದಲು ಜನರು ಪಶುಗಳಂತೆ ಜೀವಿಸುತ್ತಿದ್ದರು. ಅನಂತರ ಅವರು ಇನ್ನೂ ಉತ್ತಮ ರಕ್ಷಣೆಗಾಗಿ, ಒಬ್ಬ ಮುಖಂಡನನ್ನು ಆರಿಸಬೇಕೆಂದು ಬಯಸಿದರು. ಅವರು ತಮ್ಮಲ್ಲೇ ಅತ್ಯಂತ ಶಕ್ತಿಶಾಲಿಯಾದ ಒಬ್ಬ ವ್ಯಕ್ತಿಯನ್ನು ಆರಿಸಿದರು." ಇದೇ ಹೇಳಿಕೆಯನ್ನು *ಮಹಾಭಾರತ*ದಲ್ಲಿ ಭೀಷ್ಮ ಹೇಳಿರುವ ಮಾತುಗಳಿಗೆ ಹೋಲಿಸಿ ನೋಡಿ:

ಅರಾಜಕೇಷು ರಾಷ್ಟ್ರೇಷು ನ ಧರ್ಮೋ ವ್ಯವಸ್ಥಿತೇ
ಪರಸ್ಪರಂ ಚ ಖಾದಂತೇ ಸರ್ವದಾ ಧಿಗರಾಜಕಂ॥

ಹಾಬ್ಸ್ : ೪. *'ಲೆವಿಯಥನ್'*, ಪು. ೬೪–೬೫

"ಎಲ್ಲಿ ಅರಾಜಕತೆ ಇರುವುದೋ ಅಲ್ಲಿ ಧರ್ಮ ಇರುವುದಿಲ್ಲ. ಮನುಷ್ಯರಲ್ಲಿ ಒಬ್ಬರು ಇನ್ನೊಬ್ಬರನ್ನು ನಾಶಪಡಿಸುತ್ತಾರೆ; ಯಾವಾಗಲೂ ಅರಾಜಕತೆಯೇ ದುಃಖಕ್ಕೆ ಕಾರಣ."

ಅನಂತರ ಅವರು "ಧರ್ಮದ ವೈಫಲ್ಯವೆಂದರೆ ಅರ್ಥವೇನು ಎಂಬುದನ್ನು ತಿಳಿಸಲು, ಬೃಹಸ್ಪತಿಯ ಮಾತುಗಳನ್ನು ಉಲ್ಲೇಖಿಸುತ್ತಾರೆ. ಅರಾಜಕತೆ ಎಲ್ಲಿರುತ್ತದೋ ಅಲ್ಲಿ "ಶಕ್ತಿಶಾಲಿಗಳು ದುರ್ಬಲರ ಪತ್ನಿಯರನ್ನು ಅಪಹರಿಸಿಕೊಂಡು ಹೋಗುತ್ತಾರೆ." "ಇದು ಪರರದು ಇದು ನನ್ನದು" ಎಂಬ ಭಾವನೆಯೇ ಇರುವುದಿಲ್ಲ. ನೀತಿ–ನಿಯಮಗಳನ್ನು ಯಾರೂ ಅನುಸರಿಸುವುದಿಲ್ಲ. ದುಷ್ಟರು, ಇತರರ ಗಾಡಿ, ಬಟ್ಟೆಬರೆಗಳು, ಆಭರಣಗಳನ್ನು ಮತ್ತಿತರ ವಸ್ತುಗಳನ್ನು ದೋಚಿಕೊಂಡು ಹೋಗುತ್ತಾರೆ.

ಜನ ತಮ್ಮ ತಂದೆ–ತಾಯಿಗಳು, ವೃದ್ಧರು, ಅಧ್ಯಾಪಕರು, ಅತಿಥಿಗಳು ಮತ್ತು ಗುರುಗಳನ್ನು ಕೊಲ್ಲುತ್ತಾರೆ.

ಸತ್ಪುರುಷರನ್ನು ಪೀಡಿಸಲಾಗುತ್ತದೆ. ದುಷ್ಟರು ಪ್ರಬಲರಾಗುತ್ತಾರೆ.

ಶ್ರೀಮಂತರು ಜೀವಭಯದಲ್ಲಿ ಮತ್ತು ಸೆರೆವಾಸದ ಭಯದಲ್ಲಿ ಜೀವಿಸಬೇಕಾಗುತ್ತದೆ.

ಮಿತ್ರರನ್ನು ಯಾರೂ ಗುರುತಿಸುವುದಿಲ್ಲ.

ಉಳುಮೆ ಇರುವುದಿಲ್ಲ. ಬೇಸಾಯವಿರುವುದಿಲ್ಲ. ವ್ಯಾಪಾರೋದ್ಯಮ ಇರುವುದಿಲ್ಲ.

ಕೆಲವು ಪಾಶ್ಚಾತ್ಯ ಚಿಂತನಕಾರರು ಅದರಲ್ಲೂ ಮುಖ್ಯವಾಗಿ ರೂಸ್ಸೊ, ಮಾನವರು ಅನುಭವಿಸುವ ಸ್ವಾತಂತ್ರ್ಯದ ಬಗ್ಗೆ ಹೊಂದಿದ್ದ ಭಾವನೆಯನ್ನು ಹಿಂದೂ ತತ್ವವಾದಿಗಳು ನಿರಾಕರಿಸಿದ್ದಾರೆ. ಸ್ವಾತಂತ್ರ್ಯದ ಸಂರಕ್ಷಣೆಗಾಗಿ ಕೇಂದ್ರ ಪ್ರಾಧಿಕಾರವೊಂದು ಇಲ್ಲದಿದ್ದರೆ, ಅರಾಜಕತೆಗೆ ಎಡೆಯುಂಟಾಗುತ್ತದೆ. ಆಗ ದೊಡ್ಡ ಮೀನು ಸಣ್ಣಸಣ್ಣ ಮೀನುಗಳನ್ನು ನುಂಗುವಂತಹ ಪರಿಸ್ಥಿತಿ ತಲೆದೋರುತ್ತದೆ. ರಾಜ್ಯ ಇಲ್ಲದಿದ್ದಾಗ ಸ್ವಾಭಾವಿಕವಾಗಿ ಘರ್ಷಣೆ ಉಂಟಾಗುವಂತಹ ಸಿದ್ಧಾಂತವಿದೆ. ಪರಮಾಧಿಕಾರ ಹೊಂದಿರುವ ರಾಜನಿಗೆ ಸಂಪೂರ್ಣ ವಿಧೇಯತೆಯಿಂದಿರಬೇಕಾದರೂ, ಜನರು ಬಂಡಾಯವೇಳುವ ತಮ್ಮ ಹಕ್ಕನ್ನು ಮಾತ್ರ ಉಳಿಸಿಕೊಳ್ಳಬೇಕಾಗುತ್ತದೆ. ಈ ಸಂಬಂಧದಲ್ಲಿ ಶುಕ್ರಾಚಾರ್ಯ ಹೀಗೆ ಹೇಳಿದ್ದಾರೆ: "ರಾಜನು ಸದ್ಗುಣಗಳನ್ನು ಕಳೆದುಕೊಂಡು, ನೀತಿಭ್ರಷ್ಟನಾಗಿ ತನ್ನ ಶಕ್ತಿಯ ದುರುಪಯೋಗದಲ್ಲಿ ತೊಡಗಿದಾಗ, ಜನರು ಆ ರಾಜನನ್ನು ರಾಜ್ಯದ ವಿನಾಶಕನೆಂದು ಹೇಳಿ ಅವನನ್ನು ಪರಿತ್ಯಜಿಸಬೇಕು." ಅಂತಹ ಒಂದು ಬೋಧನೆಯನ್ನು ಮಹಾಭಾರತದಲ್ಲೇ ಕಾಣಬಹುದು. "ಒಬ್ಬ ರಾಜನು ತನ್ನ ಪ್ರಜೆಗಳ ಮೇಲೆ ತೆರಿಗೆಭಾರವನ್ನು ಹಾಕಿ, ಅವರನ್ನು ಸಂರಕ್ಷಿಸದೇ ಇದ್ದರೆ, ಜನರೆಲ್ಲರೂ ಒಟ್ಟಿಗೆ ಸೇರಿ, ಹುಚ್ಚುನಾಯಿಯಂತೆ ಮೇಲೆರಗಿ ಆ ರಾಜನನ್ನು ಕೊಲ್ಲಬೇಕು" ಎಂದು ಭೀಷ್ಮನು ದಾನ–ಧರ್ಮದ ಬಗ್ಗೆ ಹೇಳುತ್ತಾ, ಅನುಶಾಸನ ಪರ್ವದ ಅಧ್ಯಾಯವೊಂದರಲ್ಲಿ ತಿಳಿಸಿದ್ದಾನೆ.

ಪರಮಾಧಿಕಾರವನ್ನು ಹೊಂದಿದ ಪ್ರಾಧಿಕಾರವೊಂದು ಕರಾರು ಮಾಡಿಕೊಳ್ಳುವ ಮೂಲಕ ಆರಂಭವಾಯಿತೆಂಬುದು ಬಹಳ ಮುಂಚೆ ಇದ್ದ ಚಿಂತನಕಾರರ ಭಾವನೆಯಾಗಿತ್ತು. ಇದನ್ನು ಅಷ್ಟೊಂದು ಗಹನವಾಗಿ ಪರಿಗಣಿಸಬಾರದು. ಜನರು ತಮಗೆ ಮೇಲ್ಪಟ್ಟ ಅಧಿಕಾರ ವ್ಯವಸ್ಥೆಯೊಂದಕ್ಕೆ ಸ್ವಯಂಪ್ರೇರಿತರಾಗಿ ವಿಧೇಯತೆ ತೋರಿಸುವುದು ಸುಸ್ಪಷ್ಟವಾದ ವಿಷಯ. ಯೂರೋಪ್‌ನಲ್ಲಿ ಈ ವಿಚಾರ ಪ್ಲೇಟೋ ಕಾಲದಲ್ಲೇ ಇತ್ತು; ಅನಂತರ ಆಧುನಿಕ ಕಾಲದವರೆಗೆ ಪರಂಪರಾಗತವಾಗಿ ಬಂದ ಬಹುತೇಕ ಮಧ್ಯಯುಗದ ಚಿಂತಕರದೂ ಇದೇ ವಿಚಾರವಾಗಿತ್ತು. ಇದೇ ವಿಚಾರವು ಗ್ರೋಷಿಯಸ್, ಹಾಬ್ಸ್, ಲಾಕೆ ಮತ್ತು ರೂಸ್ಸೋ– ಇವರೆಲ್ಲರ ಚಿಂತನೆಗೆ ಒಂದು ಸಾಮಾನ್ಯ ಆಧಾರವಾಗಿತ್ತು. ಆದರೂ, ಇವರಲ್ಲಿ ಪ್ರತಿಯೊಬ್ಬರೂ ಈ ಆಧಾರವನ್ನು ಉಪಯೋಗಿಸಿಕೊಂಡು, ಬೇರೆ ಬೇರೆ ತೀರ್ಮಾನಗಳಿಗೆ ಬಂದರು. ದೇವರಿಂದಲೇ ನಿಯಾಮಕನಾದ ಒಬ್ಬ ವ್ಯಕ್ತಿ ರಾಜನಾಗುತ್ತಾನೆಂಬುದನ್ನು ಬಿಟ್ಟರೆ, ಬೇರಾವ ವಿವರಣೆಯೂ, ಪರಮಾಧಿಕಾರವುಳ್ಳ ಒಂದು ಪ್ರಾಧಿಕಾರ ಸಹಜವಾಗಿ ಅಸ್ತಿತ್ವಕ್ಕೆ ಬಂದಿತು ಎಂಬುದನ್ನು ಸಮರ್ಥಿಸಲು ಸಾಧ್ಯವಾಗದು. ಇಂತಹ ವ್ಯವಸ್ಥೆಯ ಸ್ಥಾಪನೆ ಅತ್ಯಂತ ಪ್ರಾಚೀನವಾದುದು. ಈ ವ್ಯವಸ್ಥೆಯಲ್ಲಿ ರಾಜನಿಂದ ಜನರಿಗೆ ರಕ್ಷಣೆ ಹಾಗೂ ಭದ್ರತೆ ದೊರೆಯುತ್ತದೆ. ಅದಕ್ಕೆ ಪ್ರತಿಯಾಗಿ ಜನರು ರಾಜನಿಗೆ ವಿಧೇಯರಾಗಿರುತ್ತಾರೆ.

ರಾಜಪ್ರಭುತ್ವ ಹೇಗೆ ಆರಂಭವಾಯಿತೆಂಬ ವಿಷಯದಲ್ಲಿ ಅನೇಕ ವಿಚಾರಗಳಿವೆ. ಅವುಗಳಲ್ಲಿ ಸಾದೃಶ್ಯವಿದ್ದರೆ, ಅದಕ್ಕೆ ಅತಿಯಾದ ಮಹತ್ವ ಕೊಡಬಾರದು. ಸೋಷಿಯಲ್ ಕಾಂಟ್ರ್ಯಾಕ್ಟ್ ಥಿಯರಿ ಅಂದರೆ, ಸಾಮಾಜಿಕ ಕರಾರು ಸಿದ್ಧಾಂತ, ಐತಿಹಾಸಿಕವಾಗಿ ಅತಿ ಮುಖ್ಯವಾದ ಸಿದ್ಧಾಂತವಾಯಿತು. ರೂಸ್ಸೋ ಈ ಸಿದ್ಧಾಂತದಿಂದ ಮತ್ತೊಂದು ಹೊಸ ಅಂಶವನ್ನು ಹೊರತಂದನು. ಅಥೇನೆಂದರೆ ರಾಜನನ್ನು ಸಾರ್ವತ್ರಿಕ ಇಚ್ಛೆಯ ಪ್ರಕಾರ ಆರಿಸಲಾಗುತ್ತದೆ. ಆದ್ದರಿಂದ ಸಾರ್ವತ್ರಿಕರದೇ ಪರಮಾಧಿಕಾರ ಎಂದು ಹೇಳಿ, ಅಸ್ಪಷ್ಟತೆಗಳಿಂದ ಕೂಡಿದ್ದ ವಿಚಾರಗಳಿಗೆ ಕ್ರಾಂತಿಕಾರಕ ಸ್ವರೂಪವನ್ನು ನೀಡಿದರು. ಒಪ್ಪಂದದ ಮುಖಾಂತರ ರಾಜನ ಆಯ್ಕೆಯಾಗುತ್ತಿತ್ತೆಂಬುದು ಹಿಂದೂ ಚಿಂತನಕಾರರ ಅಭಿಪ್ರಾಯವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಆದರೆ, ಆಧುನಿಕ ಪ್ರಜಾಸತ್ತಾತ್ಮಕ ಸ್ವರೂಪದ ರಾಜ್ಯವೊಂದರ ಸಂವೈಧಾನಿಕ ಸಿದ್ಧಾಂತವನ್ನು ನೋಡಿದಾಗ ಹೊಸ ದಿಶೆಯಲ್ಲಿ ಒಂದು ಹೊಸ ಹೆಜ್ಜೆಯನ್ನು ಇಟ್ಟಂತಾಗುತ್ತದೆ.

ಜನರೆಲ್ಲರೂ ಒಟ್ಟಾಗಿ ಆರಿಸಿದ ರಾಜನಿಗೆ ಸಹಜವಾಗಿಯೇ ಎಲ್ಲ ಅಧಿಕಾರಗಳಿರುತ್ತವೆ. ರಾಜ್ಯದ ರಕ್ಷಣೆಗೆ ಮತ್ತು ಜನರ ಕ್ಷೇಮಾಭಿವೃದ್ಧಿಗೆ ಬೇಕಾದ ಎಲ್ಲಾ ಅಧಿಕಾರಗಳು ರಾಜನಿಗಿರುತ್ತವೆ. ಮನು ಹೇಳಿದ ಮಾತುಗಳು ಹಿಗಿವೆ: “ಇಂದ್ರನ (ಜಗತ್ತಿನ ರಕ್ಷಕ) ಅನಂತ ಕಿರಣಗಳಿಂದ, ವಾಯು (ಗಾಳಿ), ಯಮ (ಮೃತ್ಯು ಮತ್ತು ದಂಡನೆಯ ದೇವತೆ), ಸೂರ್ಯ, ಅಗ್ನಿ, ವರುಣ (ಜಲಗಳ ದೇವತೆ), ಚಂದ್ರ ಮತ್ತು ಕುಬೇರ (ಸಂಪತ್ತಿಗೆ ಒಡೆಯ)– ಇವೆಲ್ಲವನ್ನೂ ಸೇರಿಸಿ, ದೇವರು, ರಾಜನನ್ನು ಸೃಷ್ಟಿ ಮಾಡಿದನು.

ರಾಜರುಗಳನ್ನು ದೇವರೇ ಸೃಷ್ಟಿಸುತ್ತಾನೆಂಬುದು ಹಿಂದೂಗಳ ನಂಬಿಕೆಯಾಗಿತ್ತು ಎಂದು ಕೆಲವು ವಿದ್ವಾಂಸರುಗಳು ಹೇಳಿದ್ದಾರೆ. ಆದರೆ ಮನು ಸ್ವತಃ ತನ್ನ ಅರ್ಥವನ್ನು ಹೀಗೆ ವಿವರಿಸಿದ್ದಾನೆ: ‘ಉದ್ದೇಶ, ಅಧಿಕಾರ, ಸ್ಥಳ, ಸಮಯ– ಇವುಗಳನ್ನು ಅತಿ ಜಾಗರೂಕತೆಯಿಂದ ಪರಿಶೀಲಿಸಿದ ನಂತರ ದೊರೆಯು (ರಾಜನು) ಒಂದಾದ ಬಳಿಕ ಒಂದರಂತೆ ಅನೇಕ ರೂಪಗಳನ್ನು ಧರಿಸುತ್ತಾನೆ.’ ಇದೇ ಭಾವನೆಯನ್ನೊಳಗೊಂಡಂತೆ ಪುರಾಣಗ್ರಂಥಗಳಲ್ಲಿರುವ ವಿಷಯಗಳನ್ನು ಕೆಳಗೆ ಕೊಡಲಾಗಿದೆ:

ಅಗ್ನಿ ಪುರಾಣ ಹೀಗೆ ಹೇಳುತ್ತದೆ:

“ರಾಜನು ತನ್ನ ಕಾಂತಿಯಿಂದ ಸೂರ್ಯನಂತಿದ್ದಾನೆ.
ಅವನು ತನ್ನ ಕರುಣೆಯಿಂದ ಚಂದ್ರನಂತಿದ್ದಾನೆ
ಗಾಳಿಯಂತೆ, ಅವನು ತನ್ನ ಪ್ರತಿನಿಧಿಗಳ ಮೂಲಕ ಎಲ್ಲೆಲ್ಲೂ ಇದ್ದಾನೆ.
ಅವನು ಯಮನಂತಿದ್ದು, ತಪ್ಪಿತಸ್ಥರನ್ನು ಶಿಕ್ಷಿಸುತ್ತಾನೆ.
ಕಾನೂನುಬಾಹಿರತೆಯನ್ನು ಹೋಗಲಾಡಿಸುತ್ತಾನೆ.
ಅವನು ತನ್ನ ಅಗ್ನಿಗುಣದಿಂದ ಕೆಡುಕರನ್ನು ಮತ್ತು ದುಷ್ಟರನ್ನು ನಾಶಪಡಿಸುತ್ತಾನೆ.
ಅವನು ಕುಬೇರನಂತಿದ್ದು, ಕೊಡುಗೆಗಳನ್ನು ನೀಡುತ್ತಾನೆ (ಸಂಪತ್ತಿನ ಒಡೆಯ ಕುಬೇರ).

ರಾಜನನ್ನು ದೇವರೇ ಸೃಷ್ಟಿಸಿದಾನೆಂದ ಮೇಲೆ, ಅವನು ತನ್ನ ಸ್ಥಾನಕ್ಕೆ ತಕ್ಕಂತಹ ಕಾರ್ಯಗಳನ್ನೇ ನಿರ್ವಹಿಸಬೇಕು. ದೇವರಿಗಿರುವಂತಹ ಉದಾತ್ತ ಗುಣಗಳನ್ನೇ ಅವನು ಹೊಂದಿರಬೇಕಾಗುತ್ತದೆ. ಶುಕ್ರ ಇನ್ನೂ ಸ್ಪಷ್ಟವಾದ ಮಾತುಗಳಲ್ಲಿ ಹೀಗೆ ಹೇಳುತ್ತಾನೆ. ‘ರಾಜನು’ ಇಂದ್ರ, ವಾಯು, ಯಮ, ಸೂರ್ಯ, ಅಗ್ನಿ ಚಂದ್ರ ಮತ್ತು ಕುಬೇರ– ಈ ದೈವಾಂಶಗಳನ್ನು ಹೊಂದಿರುತ್ತಾನೆ. ಸ್ಥಿರ ಮತ್ತು ಚರ ವಸ್ತುಗಳಿಗೆಲ್ಲಾ ಅವನೇ ಒಡೆಯನಾಗಿರುತ್ತಾನೆ.

ಇಂದ್ರನಂತೆ (ದೇವತೆಗಳ ದೇವ), ರಾಜನು ಸಂಪತ್ತು ಮತ್ತು ಇತರ ಎಲ್ಲ ಸ್ವತ್ತುಗಳನ್ನು ಸಂರಕ್ಷಿಸಬಲ್ಲನು.

ವಾಯುವಾಗಿ (ಗಾಳಿ) ರಾಜನು, ಸತ್ಕರ್ಮ ಮತ್ತು ದುಷ್ಕರ್ಮಗಳೆರಡನ್ನೂ ಉಂಟುಮಾಡಬಲ್ಲನು. ಏಕೆಂದರೆ ಗಾಳಿ ಸುವಾಸನೆ ಮತ್ತು ದುರ್ವಾಸನೆ – ಎರಡನ್ನೂ ಪಸರಿಸಬಲ್ಲದು.

ಸೂರ್ಯನು ಅಂಧಕಾರವನ್ನು ತೊಲಗಿಸುವವನಾದುದರಿಂದ (ಬೆಳಕು ಕೊಡುವವನು) ರಾಜನು ಧರ್ಮವನ್ನು ಬೆಂಬಲಿಸುತ್ತಾನೆ. ಅಧರ್ಮವನ್ನು ತೊಡೆದು ಹಾಕುತ್ತಾನೆ.

ಯಮನು ತಪ್ಪು ಮಾಡುವವರನ್ನು (ಮಾನವರನ್ನು ಮರಣಾನಂತರ) ದಂಡಿಸುತ್ತಾನೆ. ಅದೇ ರೀತಿ ರಾಜನು ಜಗತ್ತಿನಲ್ಲಿ ಅಪರಾಧಗಳನ್ನು ಎಸಗುವವರಿಗೆ ಶಿಕ್ಷೆ ಕೊಡುತ್ತಾನೆ.

ಅಗ್ನಿಯಂತೆ ರಾಜನು ಮಾನವನ ಮನಸ್ಸನ್ನು ಪರಿಶುದ್ಧಗೊಳಿಸುತ್ತಾನೆ ಮತ್ತು ತನಗೆ ದೊರೆಯುವ ಎಲ್ಲ ಕೊಡುಗೆಗಳನ್ನು ಪೂರ್ಣವಾಗಿ ಆನಂದಿಸುತ್ತಾನೆ.

ವರುಣ, ಜಲದೇವತೆ. ಅವನು ತನ್ನ ಜಲಧಾರೆಯಿಂದ ಭೂಮಿಯ ಮೇಲೆ ಎಲ್ಲವನ್ನೂ ಸಂರಕ್ಷಿಸುತ್ತಾನೆ. ಅದೇ ರೀತಿ, ರಾಜನು ತನ್ನ ಔದಾರ್ಯದಿಂದ ಎಲ್ಲರನ್ನೂ ಸಲಹುತ್ತಾನೆ.

ಚಂದ್ರ ತನ್ನ ಸುಕೋಮಲ ಕಿರಣಗಳಿಂದ ಮಾನವರಿಗೆ ಆನಂದವನ್ನು ಕೊಡುತ್ತಾನೆ. ಅದೇರೀತಿ ರಾಜನು ತನ್ನ ಸದ್ಗುಣಗಳು ಮತ್ತು ಸತ್ಕಾರ್ಯಗಳಿಮದ ಪ್ರಜೆಗಳನ್ನು ಸಂತೃಪ್ತಿಪಡಿಸುತ್ತಾನೆ.

ಐಶ್ವರ್ಯದೇವತೆ ಈ ಜಗತ್ತಿನಲ್ಲಿರುವ ಎಲ್ಲ ಅಮೂಲ್ಯ ಆಭರಣಗಳನ್ನು ಸಂರಕ್ಷಿಸುವಂತೆ, ರಾಜನು ಸಹ ರಾಜ್ಯದ ಸಂಪತ್ತನ್ನು ಮತ್ತು ಸ್ವತ್ತುಗಳನ್ನು ಸಂರಕ್ಷಿಸುತ್ತಾನೆ.

ಶಾಂತಿ ಪರ್ವದಲ್ಲಿ (೬೮ನೇ ಅಧ್ಯಾಯ) ಇದೇ ವಿಚಾರವನ್ನು ಪರಿಷ್ಕೃತ ರೂಪದಲ್ಲಿ ವ್ಯಕ್ತಪಡಿಸಲಾಗಿದೆ. "ಭಯವನ್ನು ಯಾರು ಹೋಗಲಾಡಿಸುವನೋ ಅವನು ಪ್ರಶಸ್ತವಾದ ಸ್ಥಾನಕ್ಕೆ ಅರ್ಹನಾಗುತ್ತಾನೆ. ಜೀವನ ಬಹಳ ಪ್ರಶಸ್ತವಾದುದು. ಅದಕ್ಕಿಂತ ಉತ್ತಮವಾದುದು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಸಂರಕ್ಷಣೆ ಮೂಲಕ ಅಂತಹ ಜೀವನವನ್ನು ನೀಡುವ ರಾಜನೆಂದರೆ ಇಂದ್ರ. ಸಾವಿನ ಅಧಿಪತಿಯಾದ ರಾಜ ಯಮ. ಅದೇ ರೀತಿ ಧರ್ಮವು ಸಹ, ರಾಜ. ರಾಜನು ಇಂತಹ ನಾನಾ ರೂಪಗಳನ್ನು ಪಡೆಯುತ್ತಾನೆ. ರಾಜನು ಸಕಲ ಸಮಸ್ತಕ್ಕೂ ಬೆಂಬಲ ನೀಡಿ, ಅದನ್ನು ರಕ್ಷಿಸುತ್ತಾನೆ.

ಇಲ್ಲಿಯೂ ಬೇರೆ ಯಾವ ವಿಚಾರವೂ ಇಲ್ಲ. ಆದರೆ ರಾಜರುಗಳ ಸರ್ವೋಚ್ಚ ಕರ್ತವ್ಯಗಳೇನೆಂಬುದನ್ನು ನಿರ್ದಿಷ್ಟವಾಗಿ ವಿವರಿಸಲಾಗಿದೆ. ದಿಕ್ಪಾಲರ ಕಣಗಳಿಂದ ರಾಜರುಗಳನ್ನು ಸೃಷ್ಟಿಸಲಾಯಿತೆಂಬ ಹೇಳಿಕೆಯಲ್ಲಿ ಹೆಚ್ಚಿನ ಮಹತ್ವವೇನೂ ಇಲ್ಲ. ಅದರಲ್ಲಿ ರಾಜನು ನಿರ್ವಹಿಸಬೇಕಾದ ಕೆಲಸಕಾರ್ಯಗಳನ್ನು ಸೂಚಿಸಿರುವುದನ್ನು ಬಿಟ್ಟರೆ, ಬೇರಾವ ಹೆಚ್ಚುಗಾರಿಕೆಯಿಲ್ಲ. ಅಗ್ನಿ, ವಾಯು, ಕುಬೇರ – ಇವು ನೈಸರ್ಗಿಕ ಶಕ್ತಿಗಳು. ಈ ಶಕ್ತಿಗಳ ಕಣಗಳಿಂದ ರಾಜರುಗಳನ್ನು ಸೃಷ್ಟಿಸಲಾಯಿತೆಂಬುದು

ಕಾವ್ಯಮಯ ಹೇಳಿಕೆಗೆ ಸರಿಹೋಗಬಹುದು. ಆದರೆ ಈ ಹೇಳಿಕೆಯ ಅಕ್ಷರಶಃ ಅರ್ಥವನ್ನು ಪರಿಗಣನೆಗೆ ತೆಗೆದುಕೊಳ್ಳುವುದು ತಾರ್ಕಿಕ ನಿಯಮಗಳಿಗೆ ಮತ್ತು ಅರ್ಥವಿವರಣೆಗೆ ವಿರುದ್ಧವಾಗುತ್ತದೆ. ರಾಜನೊಬ್ಬನು ಈ ಮೂರು ಗುಣಗಳನ್ನು ಹೊಂದಿರಬೇಕು. ಈ ಜಡಪದಾರ್ಥಗಳಲ್ಲಿ ಮನುಷ್ಯೋಚಿತ ಗುಣಗಳನ್ನು ಆರೋಪಿಸಲಾಗಿದೆ, ಅಷ್ಟೇ. ಕೌಟಿಲ್ಯನು ಕೊಟ್ಟಿರುವ ಅರ್ಥವಿವರಣೆಯು, ಇಲ್ಲಿ ಯಾವ ಯಾವ ಅಂಶಗಳನ್ನು ಒತ್ತಿ ಹೇಳಲಾಗಿದೆಯೋ ಸಂಪೂರ್ಣವಾಗಿ ಅದೇ ಅರ್ಥವನ್ನು ಒಳಗೊಂಡಿರುತ್ತದೆ. ಕೌಟಿಲ್ಯನು *ಅರ್ಥಶಾಸ್ತ್ರ*ದ ೧೩ನೇ ಅಧ್ಯಾಯದಲ್ಲಿ ಕೆಳಕಂಡಂತೆ ತಿಳಿಸಿದ್ದಾನೆ:

"ದೊಡ್ಡ ಮೀನು ಸಣ್ಣ ಮೀನುಗಳನ್ನು ನುಂಗಿಹಾಕುವಂತೆ, ಅರಾಜಕ ಪರಿಸ್ಥಿತಿಯಲ್ಲಿ ಜನರು ತುಂಬ ತೊಂದರೆಗಳನ್ನು ಅನುಭವಿಸುತ್ತಿದ್ದಾಗ, ಅವರು ವೈವಸ್ವತ ಮನುವನ್ನು ರಾಜನನ್ನಾಗಿ ಆರಿಸಿದರು. ಅವರು ವೈವಸ್ವತ ಮನುವಿಗೆ ತಮ್ಮಲ್ಲಿರುವ ಧಾನ್ಯದಲ್ಲಿ ಆರನೆಯ ಒಂದು ಭಾಗದಷ್ಟು ಮತ್ತು ತಮ್ಮ ವ್ಯಾಪಾರದ ಸರಕುಗಳಲ್ಲಿ ಹತ್ತನೆಯ ಒಂದು ಭಾಗದಷ್ಟನ್ನು ಕೊಡಲು ಒಪ್ಪಿಕೊಂಡರು. ಈ ರೀತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಮನು ಪ್ರಜಾಸಮುದಾಯವನ್ನು ಚೆನ್ನಾಗಿ ನೋಡಿಕೊಳ್ಳುವ ಸಾಮರ್ಥ್ಯ ಪಡೆದನು. ರಾಜನಿಗೆ ದೊರೆಯಬೇಕಾದುದನ್ನು ಸಂದಾಯಮಾಡದ ತಪ್ಪಿತಸ್ಥರನ್ನು ಅವನು ಶಿಕ್ಷಿಸುತ್ತಿದ್ದನು. ಜನರ ಭದ್ರತೆಗೆ ವಿರುದ್ಧವಾಗಿ ಕೆಲಸ ಮಾಡಿದವರು ಸಹ ಶಿಕ್ಷೆಗೊಳಗಾಗುತ್ತಿದ್ದರು.

ಅರಣ್ಯವಾಸಿಗಳು ಸಹ ರಾಜನಿಗೆ ಸಂದಾಯವಾಗಬೇಕಾದುದನ್ನು ತಪ್ಪದೇ ಸಲ್ಲಿಸುತ್ತಿದ್ದರು. "ನಮ್ಮನ್ನು ಸಂರಕ್ಷಿಸುವವನಿಗೆ ಸಂದಾಯವಾಗಬೇಕಾದ ಪಾಲನ್ನು ನಾವು ಸಲ್ಲಿಸಲೇಬೇಕು. ರಾಜನು ಇಂದ್ರನ ಸ್ಥಾನದಲ್ಲಿದ್ದು ನಮ್ಮನ್ನು ಸಂರಕ್ಷಿಸುತ್ತಾನೆ. ಯಮನ ಸ್ಥಾನದಲ್ಲಿದ್ದು, ತಪ್ಪಿತಸ್ಥರನ್ನು ಶಿಕ್ಷಿಸುತ್ತಾನೆ. ರಾಜನಿಗೆ ವಿರುದ್ಧವಾಗಿ ನಡೆದುಕೊಳ್ಳುವವರನ್ನು ದೇವರು ಸಹ ಕ್ಷಮಿಸಲಾರ. ಅವನು ಅಂತಹವರನ್ನು ಪರಿತ್ಯಜಿಸುತ್ತಾನೆ" ಎಂದು ಅರಣ್ಯವಾಸಿಗಳು ಹೇಳುತ್ತಿದ್ದರು.

ಕೌಟಿಲ್ಯನು, ಬೇಹುಗಾರನೊಬ್ಬನ ಬಾಯಿಂದ ರಾಜನಿಗೆ ವಿಧೇಯರಾಗಿರಬೇಕಾದುದು ಏಕೆ ಅತಿ ಮುಖ್ಯ ಎಂಬುದನ್ನು ವಿವರಿಸಲೆತ್ನಿಸಿದ್ದಾನೆಯೇ ಹೊರತು, ರಾಜಪ್ರಭುತ್ವದ ಆರಂಭ ಹೇಗಾಯಿತು ಎಂಬುದನ್ನಲ್ಲ. ಜನರನ್ನು ಅರಾಜಕತೆಯಿಂದ ಸಂರಕ್ಷಿಸಿ, ಅವರ ಕ್ಷೇಮವನ್ನು ನೋಡಿಕೊಳ್ಳುವುದಕ್ಕಾಗಿ ರಾಜನ ಸೃಷ್ಟಿಯಾಗಿದೆ. ರಾಜನಲ್ಲಿ ದೈವತ್ವವಿದೆಯೆಂದು ಭಾವಿಸಿ, ಆ ಕಾರಣದಿಂದ ಪ್ರಜೆಗಳು ಅವನಿಗೆ ವಿಧೇಯರಾಗಿರಬೇಕಾಗಿಲ್ಲ. ಜನರನ್ನು ರಕ್ಷಿಸಿ, ತಪ್ಪಿತಸ್ಥರನು ಶಿಕ್ಷಿಸುವ ರಾಜನಿಗೆ ಅವಿಧೇಯತೆ ತೋರಿಸುವುದು ಸರಿಯಲ್ಲ. ಹಾಗೆ ಮಾಡಿದರೆ ಅದು ತುಂಬ ತಪ್ಪಾಗುತ್ತದೆ. ರಾಜನಿಗೆ ಅವಿಧೇಯರಾದರೆ ಸಮಾಜದಲ್ಲಿ ಅಸ್ಥಿರತೆ ಹಾಗೂ

ಅರಾಜಕತೆ ತಲೆದೋರುತ್ತದೆ. ದೇವತೆಗಳ ಅಂಶಗಳು ಕೂಡಿ, ರಾಜನ ಸೃಷ್ಟಿಯಾಯಿತೆಂಬ ಅಭಿಪ್ರಾಯವು ತಪ್ಪು ತಿಳಿವಳಿಕೆಯ ಮೇಲೆ ಆಧಾರಗೊಂಡಿದೆ ಎಂದು ಡಾ॥ ಭಂಡಾರ್‌ಕರ್ ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ರಾಜನಿಗೆ ಅತಿಮಾನುಷ ಸ್ಥಾನವನ್ನು ಕೊಟ್ಟಂತಾಗುತ್ತದೆ. ದೇವತಾಂಶಗಳಿಂದ ರಾಜನು ಸೃಷ್ಟಿಸಲ್ಪಟ್ಟನೆಂದು ಹೇಳುವುದು ಸಂಪೂರ್ಣವಾಗಿ ಅರ್ಥಹೀನವಾಗುತ್ತದೆ. ವೇದಗಳಲ್ಲಿರುವ ಒಂದು ಪ್ರಸಿದ್ಧ ಸ್ತೋತ್ರದಲ್ಲಿ, ಶೂದ್ರರು ಸಹ ದೇವರ ಪಾದದಿಂದ ಹುಟ್ಟಿದರೆಂದು ಹೇಳಲಾಗಿದೆ. ಆದ್ದರಿಂದ ಅವರನ್ನು ಪಾದಜರು ಎಂದು ಕರೆಯಲಾಗುತ್ತದೆ. ವಿವಿಧ ದೇವತೆಗಳ ಅಂಶಗಳಿಂದ ರಾಜನ ಸೃಷ್ಟಿಯಾಯಿತೆಂಬ ವಾದವನ್ನು ಒಪ್ಪಿಕೊಂಡಲ್ಲಿ, ದೇವದ ಅಂದರೆ ಪುರುಷನ ಪಾದಗಳಿಂದಲೇ ಹೊರಬಂದ ಶೂದ್ರರನ್ನು ಸಹ ದೈವಾಂಶಸಂಭೂತರೆಂದೇ ಪರಿಗಣಿಸಬೇಕಾಗುತ್ತದೆ.

ರಾಜನಲ್ಲಿ ದೈವಾಂಶ ಪ್ರತಿಬಿಂಬಿತವಾಗಿದೆ ಎಂದು ಹೇಳುವುದು ಸಹ ಹಿಂದೂಗಳ ವಿಚಾರಕ್ಕೆ ವಿರುದ್ಧವಾಗುತ್ತದೆ. ರಾಜನು ಪ್ರಜೆಗಳ ಸೇವಕ. ತನ್ನ ಸೇವೆಗೆ ಪ್ರತಿಫಲವಾಗಿ, ಅವನು ತೆರಿಗೆಗಳ ರೂಪದಲ್ಲಿ ವೇತನ ಪಡೆಯುತ್ತಾನೆ ಎಂಬುದನ್ನು ಮುಂಚಿನ ಎಲ್ಲ ಬರಹಗಾರರು ಒಮ್ಮತದಿಮದ ಒಪ್ಪಿಕೊಂಡಿದ್ದಾರೆ. ರಾಜನು, ಪ್ರಜೆಗಳಿಗೆ ತಾನು ಒದಗಿಸುವ ಸಂರಕ್ಷಣೆಗಾಗಿ, ಅವರಿಂದಲೇ ತೆರಿಗೆ ರೂಪದಲ್ಲಿ ಹಣ ಪಡೆಯುತ್ತಾನೆ. ವಾಸ್ತವವಾಗಿ ರಾಜನು ಸಂಬಳ ಪಡೆಯುವ ಒಬ್ಬ ಉದ್ಯೋಗಿಯೆಂದೇ ಹೇಳಬಹುದು ಎಂಬುದು ಮೇಧಾತಿಥಿಯಂತಹ ನ್ಯಾಯಶಾಸ್ತ್ರ ಪಾರಂಗತರ ವಾದ. ಈ ಸಂದರ್ಭದಲ್ಲಿ ಡಾ॥ ಭಂಡಾರ್‌ಕರ್ ಬೌದ್ಧ ಸನ್ಯಾಸಿ ಆರ್ಯದೇವನ ಮಾತುಗಳನ್ನು ಉಲ್ಲೇಖಿಸಿದ್ದಾರೆ. ಕ್ರಿ.ಶ. ಮೂರನೆಯ ಶತಮಾನದಲ್ಲಿ ಈ ಬೌದ್ಧ ಸನ್ಯಾಸಿ, ರಾಜನನ್ನು ಧಿಕ್ಕರಿಸಿ ನಡೆದುಕೊಂಡನು. "ರಾಜ, ಕೇವಲ ಪ್ರಜೆಗಳ ಒಬ್ಬ ಸೇವಕ. ಜನರು ಉತ್ಪಾದಿಸುವ ಪದಾರ್ಥಗಳ ಆರನೇ ಒಂದು ಭಾಗದಷ್ಟನ್ನು ವೇತನವಾಗಿ ಪಡೆಯುವ ರಾಜನಲ್ಲಿ ಯಾವ ಹೆಚ್ಚುಗಾರಿಕೆಯಿದೆ? ಅವನಲ್ಲಿ ಹೆಮ್ಮೆಪಡುವಂತಹ ಗುಣವೇನಿದೆ?" ಎಂದು ಆರ್ಯದೇವ ಕೇಳಿದನು.

ಹಿಂದೂಗಳು ರಾಜರುಗಳನ್ನು ದೇವರೆಂದೇ ಪರಿಗಣಿಸುತ್ತಾರೆ. ಆದ್ದರಿಂದ ಸಂಸ್ಕೃತ ಗ್ರಂಥಗಳಲ್ಲಿ ಸಾಮಾನ್ಯವಾಗಿ ರಾಜನಿಗೆ, ನರದೇವ ಅಂದರೆ ಮಾನವ ದೇವ ಎಂಬ ಶಬ್ದವನ್ನು ಬಳಸಲಾಗಿದೆ. ನರದೇವ ಎಂಬ ಶಬ್ದ ಇನ್ನು ಮುಂದೆ ರಾಜನಿಗಿರುವ ದೈವಾಂಶವನ್ನು ಸೂಚಿಸುವುದಿಲ್ಲ. ಭೂದೇವ ಅಂದರೆ ಭೂಮಿಯ ಮೇಲಿನ ದೇವರು, ಬ್ರಾಹ್ಮಣನ ದೈವೀಕತೆಯನ್ನು ಸೂಚಿಸುವ ಶಬ್ದ. ರಾಜರಿಗೆ ದೈವೀಕವಾಗಿ ಬಂದ ಹಕ್ಕು ಇದೆಯೆಂಬ ಸಿದ್ಧಾಂತವನ್ನು ಹಿಂದೂ ತತ್ವವಾದಿಗಳು

ಒಪ್ಪುವುದಿಲ್ಲ. ಸ್ವತಃ ರಾಜನಿಗಾಗಲಿ ಅಥವಾ ಅವನು ನಿರ್ವಹಿಸುವ ಪವಿತ್ರ ಕರ್ತವ್ಯದ ದೃಷ್ಟಿಯಿಂದಾಗಲಿ, ಅವನಿಗೆ ದೈವೀಕವಾದ ಹಕ್ಕು ಇಲ್ಲವೆಂದು ಅವರು ಹೇಳುತ್ತಾರೆ.

ರಾಜನು ಎಲ್ಲ ಪವಿತ್ರ ಕಾನೂನುಗಳಿಗೆ ವಿಧೇಯನಾಗಿರಬೇಕು. ಬ್ರಾಹ್ಮಣರಿಗೆ ಗೌರವ ತೋರಿಸಬೇಕು, ಪವಿತ್ರ ಗ್ರಂಥಗಳು ಒಳಗೊಂಡಿಲ್ಲದ ಕೆಲಸಗಳನ್ನು ತಾನು ನಿರ್ವಹಿಸಬಾರದು– ಎಂಬೀ ಅಂಶಗಳನ್ನು ಎಲ್ಲ ಗ್ರಂಥಗಳಲ್ಲೂ ಒಪ್ಪಿಕೊಳ್ಳಲಾಗಿದೆ. ಪೃಥು, ಕಿರೀಟಧರಣ ಮಹೋತ್ಸವದಲ್ಲಿ ತೆಗೆದುಕೊಂಡ ಪ್ರತಿಜ್ಞಾ ವಚನವನ್ನು ಕೆಳಗೆ ಕೊಡಲಾಗಿದೆ. ಇದು ರಾಜನ ಪರಾವಲಂಬನೆಯನ್ನು ಮತ್ತು ಪವಿತ್ರ ಕಾನೂನಿನ ಸರ್ವೋಚ್ಚತೆಯನ್ನು ತೋರಿಸುತ್ತದೆ:

"ವಿವೇಚನೆ ಮತ್ತು ಧೋರಣೆಗೆ ಅನುಗುಣವಾಗಿ ನೀವು ನೀಡುವ ಯಾವ ಸಲಹೆ ಅಥವಾ ಕ್ರಮವನ್ನಾಗಲಿ ನಾನು ತಪ್ಪದೆ ಅನುಸರಿಸುತ್ತೇನೆ.

ಯನ್ಮಾಮ್ ಭವಂತೋ ವಕ್ಷಯಂತಿ ಕಾರ್ಯಮರ್ಥಸಮನ್ವಿತಮ್
ತದಹಂ ವಃ ಕರಿಷ್ಯಾಮಿ ನಾತ್ರ ಕಾರ್ಯಾವಿಚಾರಣಾ (‘ಶಾಂತಿಪರ್ವ’)

ರಾಜನಿಗೆ ಸಂಬಂಧಿಸಿದಂತೆ ಮತ್ತೊಂದು ವಿಚಾರಪರಂಪರೆಯಿದೆ. ಒಬ್ಬ ಮಾಂತ್ರಿಕನು, ಕ್ರಮಕ್ರಮೇಣ ಪೂರ್ಣ ಅಧಿಕಾರ ಹೊಂದಿದ ವ್ಯಕ್ತಿಯಾಗಿ ಮಾರ್ಪಟ್ಟ ಪ್ರಕರಣಗಳನ್ನು ಈ ಪರಂಪರೆ ಕಂಡುಕೊಂಡಿದೆ. ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಮಂತ್ರವಿದ್ಯೆ ಕಲಿತ ವ್ಯಕ್ತಿ ಮತ್ತು ಧಾರ್ಮಿಕ ವ್ಯಕ್ತಿ ಕ್ರಮೇಣ ತನ್ನ ಸಮುದಾಯದ ರಕ್ಷಣೆಗಾಗಿ ತಾತ್ಕಾಲಿಕ ಅಧಿಕಾರ ಪಡೆದು, ಕಡೆಗೆ ಅವನೇ ರಾಜನಾಗಿ ಪರಿವರ್ತನೆ ಹೊಂದಿದ್ದು, ನಿಜವಿರಬಹುದು. ಇದನ್ನು ರುಜುವಾತುಪಡಿಸಲು, ಸರ್ ಜೇಮ್ಸ್ ಫ್ರೇಜರ್ ಸಾಕಷ್ಟು ಮಾಹಿತಿಯನ್ನು ಅನೇಕ ಹಳೇಕಾಲದ ಬುಡಕಟ್ಟು ಸಮುದಾಯಗಳಿಂದ ಸಂಗ್ರಹಿಸಿದ್ದಾರೆ. ರಾಜನಿಗೆ ಸಂಬಂಧಿಸಿದ ಹಿಂದೂಗಳ ಸಿದ್ಧಾಂತದಲ್ಲಿ, ಮಾಂತ್ರಿಕನು ರಾಜನಾಗುವ ವಿಷಯವಿಲ್ಲ. ಮಾಂತ್ರಿಕತೆಯನ್ನು ಪ್ರದರ್ಶಿಸುವುದು ಮತ್ತು ಅದಕ್ಕೆ ಅಗತ್ಯವಿರುವ ಧಾರ್ಮಿಕ ಶಕ್ತಿಯನ್ನು ಪಡೆಯುವುದು– ಇವು ಸಂಪೂರ್ಣವಾಗಿ ಬ್ರಾಹ್ಮಣರ ಪ್ರಭುತ್ವದಲ್ಲಿತ್ತು. ಅವರು ಯಾವುದೇ ತಾತ್ಕಾಲಿಕ ಅಧಿಕಾರವನ್ನೂ ಬಯಸುತ್ತಿರಲಿಲ್ಲ.

ಬ್ರಾಹ್ಮಣರು ರಾಜನ ಅಧಿಕಾರವನ್ನು ವಹಿಸಿಕೊಳ್ಳುತ್ತಿರಲಿಲ್ಲ. ಅದರಿಂದ ಅವರ ಸ್ಥಾನಕ್ಕೆ ಕಳಂಕ ಬರುವುದೆಂದು ಅವರು ಭಾವಿಸಿದ್ದರು. ಒಬ್ಬ ಬ್ರಾಹ್ಮಣ ಸಿಂಹಾಸನವೇರಿ ಒಂದು ಮನೆತನವನ್ನು ಸ್ಥಾಪಿಸಿಕೊಂಡಾಗ, ಅದಕ್ಕೆ ಕ್ಷತ್ರಿಯ ಸ್ಥಾನಮಾನ ಬರುತ್ತಿತ್ತು. ಸರ್ ಜೇಮ್ಸ್ ಫ್ರೇಜರ್ ಸಿದ್ಧಾಂತದ ಪ್ರಕಾರ, ರಾಜನು ತನ್ನ ಪೂಜಾಕೈಂಕರ್ಯಗಳಿಂದ ಒಂದು ಬಗೆಯ ಮಾಂತ್ರಿಕಶಕ್ತಿಯನ್ನು ಪಡೆಯುತ್ತಿದ್ದನು.

ಇದರಿಂದಾಗಿ ರಾಜನು ತನ್ನ ಸ್ಪರ್ಶದಿಂದ ಪ್ರಜೆಗಳನ್ನು ರೋಗಗಳು ಇತ್ಯಾದಿಗಳಿಂದ ಮುಕ್ತಗೊಳಿಸುತ್ತಿದ್ದನು. ಇತರ ಕೆಲವು ಸಮುದಾಯಗಳಲ್ಲೂ ಇಂತಹುದೇ ಪ್ರವೃತ್ತಿ ಇದ್ದುದು ನಿಜವಿರಬಹುದು. ಭಾರತದಲ್ಲಿದ್ದ ರಾಜರುಗಳು ಅಂತಹ ಶಕ್ತಿ ತಮಗಿದೆಯೆಂದು ಹೇಳಿಕೊಳ್ಳುತ್ತಿರಲಿಲ್ಲ. ರಾಜ್ಯದ ಹಿತಕ್ಕಾಗಿ ಯಾವುದಾದರೂ ಅಲೌಕಿಕ ಶಕ್ತಿಯ ಬಳಕೆಯಾಗಬೇಕೆಂದು ರಾಜನು ಬಯಸಿದಾಗ, ಉದಾರಹಣೆಗೆ ಮಳೆ ತರಿಸುವುದು ಮತ್ತು ಸಾಂಕ್ರಾಮಿಕ ರೋಗಗಳನ್ನು ನಿರ್ಮೂಲಗೊಳಿಸುವುದು ಆ ಕಾರ್ಯವನ್ನು ರಾಜನು ಬ್ರಾಹ್ಮಣರ ಮೂಲಕ ಮಾಡಿಸುತ್ತಿದ್ದನೇ ಹೊರತು, ತಾನು ಮಾಡುತ್ತಿರಲಿಲ್ಲ. ಬ್ರಾಹ್ಮಣರು ಯಾಗ–ಯಜ್ಞಗಳು ಮತ್ತು ಆಹುತಿ ಮೂಲಕ ರಾಜನ ಉದ್ದೇಶವನ್ನು ಈಡೇರಿಸುತ್ತಿದ್ದರು. ಧಾರ್ಮಿಕ ಕಾರ್ಯಗಳು ಜಾತ್ಯತೀತ ಸರ್ಕಾರದಿಂದ ಪ್ರತ್ಯೇಕವಾಗಿ ನಡೆಯುತ್ತಿದ್ದವು. ಇವೆಲ್ಲವೂ ಜಾತಿಪದ್ಧತಿಯಲ್ಲೇ ನಡೆಯುತ್ತಿದ್ದವು. ಬ್ರಾಹ್ಮಣರು ತಮಗೆ ಮಾಂತ್ರಿಕ ಶಕ್ತಿ ಇದೆಯೆಂದು ಹೇಳಿಕೊಳ್ಳುತ್ತಿದ್ದರು. ಅದನ್ನು ಅವರು ಮಾಡಿ ತೋರಿಸುತ್ತಿದ್ದರು. ರಾಜಪ್ರಭುತ್ವಕ್ಕೆ ಸಂಬಂಧಿಸಿದಂತೆ ಫ್ರೇಜರ್ ಹೊಂದಿದ್ದ ದೃಷ್ಟಿಕೋನ ಭಾರತಕ್ಕೆ ಸ್ವಲ್ಪವೂ ಅನ್ವಯವಾಗುವಂತಿರಲಿಲ್ಲವೆಂದೇ ಹೇಳಬೇಕಾಗುತ್ತದೆ.

ರಾಜನು, ಜನರನ್ನು ಅರಾಜಕತೆಯಿಂದ ರಕ್ಷಿಸುವವನಾದುದರಿಮದ, ಐರೋಪ್ಯರ ದೃಷ್ಟಿಕೋನಕ್ಕೆ ಯಾವುದೇ ಆಧಾರವಿಲ್ಲವೆಂದು ಹಿಂದೂ ತತ್ವಜ್ಞರು ವಾದಿಸಿದರು. ಪ್ರಜೆಗಳನ್ನು ಸಂರಕ್ಷಿಸಲು ಸಾಧ್ಯವಾಗದ ರಾಜನು, ಸಾಮಾಜಿಕ ಕರಾರನ್ನು ಮುರಿದಂತಾಗುತ್ತದೆ. ಆಗ, ಪರೋಕ್ಷವಾಗಿ ಆಳ್ವಿಕೆ ನಡೆಸುವವರಿಗೆ ಜನರು ವಿಧೇಯರಾಗಿರಬೇಕಾಗುತ್ತದೆ. ಅಂತಹ ನಿಷ್ಠೆಯನ್ನು ಬಯಸುವುದು ಸಹ ಈ ಆಡಳಿತಗಾರರ ಹಕ್ಕಾಗಿರುತ್ತದೆ. ಇದನ್ನು ಮಾನ್ಯ ಮಾಡಲಾಗುತ್ತದೆ. “ರಾಜನಿಂದ ಅಧಿಕಾರವನ್ನು ಕಸಿದುಕೊಂಡು ಆಳ್ವಿಕೆ ನಡೆಸುವ ವ್ಯಕ್ತಿ ಕಾನೂನು, ಶಿಸ್ತು ಮತ್ತು ಶಾಂತಿಯನ್ನು ಪುನರ್ ಸ್ಥಾಪಿಸಿದರೆ, ಅವನೇ ನಿಜವಾದ ರಕ್ಷಕನಾಗುತ್ತಾನೆ. ಅವನನ್ನು ಪ್ರಜೆಗಳು ರಾಜನೆಂದು ಒಪ್ಪಿಕೊಳ್ಳಬೇಕು. ಆಗ ಅವರು ಇಂದ್ರನನ್ನೇ ಪೂಜಿಸಿದಂತಾಗುತ್ತದೆ” ಎಂದು ಮಹಾಭಾರತದಲ್ಲಿ ಭೀಷ್ಮ ಹೇಳುತ್ತಾನೆ. ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದು ಮೊದಲ ಅವಶ್ಯಕತೆಯಾಗಿರುತ್ತದೆ. ಸಮಾಜದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವ ಸ್ಥಿತಿಯಲ್ಲಿರತಕ್ಕ ವ್ಯಕ್ತಿಗೆ ಪ್ರಜೆಗಳಿಂದ ಸಂಪೂರ್ಣ ನಿಷ್ಠೆಯನ್ನು ಬಯಸುವ ಹಕ್ಕು ಇರುತ್ತದೆ.

ಆದ್ದರಿಮದ ರಾಜನಿಗಿರುವ ಘನತೆ–ಗಾಂಭೀರ್ಯ ಅವನ ಸ್ಥಾನಕ್ಕೆ ಮಾತ್ರ ಅನ್ವಯಿಸುತ್ತದೆ. ನಿಜವಾದ ದೃಷ್ಟಿಯಲ್ಲಿ ಹೇಳುವುದಾದರೆ, ರಾಜನ ಕಿರೀಟ ಧಾರಣೋತ್ಸವವಾದಾಗ ಮಾತ್ರ ಅದಕ್ಕೆ ಹೆಚ್ಚಿನ ಗಾಂಭೀರ್ಯ, ಘನತೆ ಬರುತ್ತದೆ. ಆದ್ದರಿಂದ ಕಿರೀಟಧಾರಣ ಮಹೋತ್ಸವಕ್ಕೆ ತುಂಬ ಹೆಚ್ಚಿನ ಪ್ರಾಮುಖ್ಯತೆ

ನೀಡಲಾಗುತ್ತಿತ್ತು. ಇದು ಪ್ರಜೆಗಳ ಸಂರಕ್ಷಣೆಗಾಗಿ, ರಾಜನು ತನ್ನ ಸೇವೆಯನ್ನು ಸಮರ್ಪಿಸುವ ಒಂದು ಸಂದರ್ಭವಾಗಿರುತ್ತಿತ್ತು. ಇದು ಜನರು ಮತ್ತು ರಾಜನ ನಡುವಣ ಒಂದು ಒಪ್ಪಂದದ ಸಂಕೇತವೂ ಆಗಿರುತ್ತಿತ್ತು. ಈ ಒಪ್ಪಂದವು ಪ್ರಜಾಸೇವೆಗಾಗಿ, ರಾಜನ ತೀರ್ಮಾನದ ದೃಢೀಕರಣವಾಗಿರುತ್ತಿತ್ತು. ಅಷ್ಟೇ ಅಲ್ಲದೆ, ನಾಡು ಮತ್ತು ಅದರ ಒಡೆಯನನ್ನು ಒಂದುಗೂಡಿಸುವುದರ ಸಂಕೇತವಾಗಿತ್ತು. ಪುರಾಣದ ಇತಿಹಾಸಕಾರರು ಯಾವಾಗಲೂ, ವಿದೇಶೀ ರಾಜರುಗಳು, ಸೂಕ್ತವಾಗಿ ಅಭಿಷಿಕ್ತರಾಗಿಲ್ಲವೆಂಬ ಮತ್ತು ಕಿರೀಟ ಧರಿಸಿ ರಾಜ್ಯಾಧಿಕಾರ ಸ್ವೀಕರಿಸಿಲ್ಲವೆಂಬ ಕಾರಣದ ಮೇಲೆ ಅವರನ್ನು ತ್ಯಜಿಸುತ್ತಿದ್ದರು.

ಕಿರೀಟಧಾರಣ ಉತ್ಸವವು, ಮೂರು ಬೇರೆಬೇರೆ ಗುಂಪುಗಳಲ್ಲಿ ನಡೆಯುತ್ತಿತ್ತು. ಒಂದು ಗುಂಪಿನಲ್ಲಿ ರಾಜನು ತಾನು ಆಳ್ವಿಕೆ ನಡೆಸಬೇಕಾಗಿರುವ ನಾಡು ಅಥವಾ ಪ್ರದೇಶದ ವ್ಯಾಪ್ತಿಯನ್ನು ಸಮೀಕರಿಸಲಾಗುತ್ತಿತ್ತು. ಮತ್ತೊಂದರಲ್ಲಿ ರಾಜನ ಮತ್ತು ಅವನ ಪ್ರಜೆಗಳ ನಡುವಣ ಅನನ್ಯತೆಯನ್ನು ಸ್ಥಿರಪಡಿಸಲಾಗುತ್ತಿತ್ತು. ಮೂರನೇ ಗುಂಪಿನಲ್ಲಿ ದೇವರನ್ನು ಪ್ರಾರ್ಥಿಸಿ, ರಾಜನನ್ನು ಪ್ರಜೆಗಳ ಸೇವೆಗಾಗಿ ಸಮರ್ಪಿಸಲಾಗುತ್ತಿತ್ತು. ಕಿರೀಟ ಧರಿಸಬೇಕಾಗಿರುವ ರಾಜನ ದೇಹಕ್ಕೆ ಮೊದಲು ಮಣ್ಣು ಲೇಪಿಸಬೇಕೆಂದು ಅಗ್ನಿಪುರಾಣದಲ್ಲಿ (ಅಧ್ಯಾಯ ೨೧೯) ಹೇಳಲಾಗಿದೆ. ಪರ್ವತದ ಮೇಲಿನಿಂದ ತಂದ ಮಣ್ಣನ್ನು ರಾಜನ ತಲೆಗೆ ಸವರಬೇಕು. ವಿಷ್ಣು ದೇವಾಲಯದಿಂದ ತಂದ ಮಣ್ಣನ್ನು ಮುಖಕ್ಕೆ ಸವರಬೇಕು. ಉಳುಮೆಯಾಗಿರುವ ಜಮೀನಿನಿಂದ ತಂದ ಮಣ್ಣನ್ನು ಕೈಮೇಲೆ ಮತ್ತು ಕುದುರೆ ಲಾಯಗಳಿಂದ ತಂದಿದ್ದನ್ನು ಪಾದಗಳಿಗೆ ಹಾಗೂ ಇತರ ಭಾಗಗಳಿಗೆ ಸವರಬೇಕೆಂದು ಅದರಲ್ಲಿ ತಿಳಿಸಲಾಗಿದೆ. ಇಂತಹ ಲೇಪನದ ಮೂಲಕ, ರಾಜ ಮತ್ತು ಅವನು ಆಳುವ ಭೂಮಿಯ ನಡುವಣ ಸಂಬಂಧವನ್ನು ಒಗ್ಗೂಡಿಸಲಾಗುತ್ತಿತ್ತು. ರಾಜನು ಸಿಂಹಾಸನದಲ್ಲಿ ಕುಳಿತ ಬಳಿಕ, ನಾಲ್ಕು ದಿಕ್ಕುಗಳಿಂದ ವಿವಿಧ ದ್ರವಗಳನ್ನು ಅಭಿಷೇಕಿಸಲಾಗುತ್ತಿತ್ತು. ಮೊದಲು ಪೂರ್ವ ದಿಕ್ಕಿನಿಂದ ಬ್ರಾಹ್ಮಣನು ತುಪ್ಪದಿಂದ, ದಕ್ಷಿಣದಿಂದ ಕ್ಷತ್ರಿಯನು ಹಾಲಿನಿಂದ, ಪಶ್ಚಿಮದಿಂದ ವೈಶ್ಯನು ಮೊಸರಿನಿಂದ ಮತ್ತು ಶೂದ್ರನು ಉತ್ತರದಿಂದ ನೀರಿನಿಂದ ರಾಜನ ಮೇಲೆ ಅಭಿಷೇಕ ಮಾಡುತ್ತಿದ್ದರು. ಈ ಸಮಾರಂಭವು ರಾಜ ಮತ್ತು ಅವನ ಪ್ರಜೆಗಳ ವಿವಿಧ ವರ್ಗಗಳ ನಡುವಣ ಅಭೇದ್ಯ ಸಂಬಂಧಗಳ ಪ್ರತೀಕವಾಗಿತ್ತು. ಈ ಧಾರ್ಮಿಕ ಸಮಾರಂಭದಲ್ಲಿ, ದೇವರ ದಯೆ, ರಾಜನ ಮೇಲೆ ಸದಾ ಇರಲೆಂದು ಪ್ರಾರ್ಥಿಸಲಾಗುತ್ತದೆ. ದೇವರು ಸದಾ ತನಗೆ ಮಾರ್ಗದರ್ಶನ ಮಾಡಿ, ತನ್ನನ್ನು ಮತ್ತು ಪ್ರಜೆಗಳನ್ನು ಸಂರಕ್ಷಿಸುತ್ತಿರಲೆಂದು ರಾಜನು ಪ್ರಾರ್ಥಿಸಿಕೊಳ್ಳುತ್ತಾನೆ.

ಇತರ ಪುರಾಣಗಳಲ್ಲಿ ಇನ್ನೂ ವಿವರವಾದ ಮತ್ತು ವ್ಯಾಪಕವಾದ ವಿಧಿ ವಿಧಾನಗಳನ್ನು ಸೂಚಿಸಲಾಗಿದೆ. ಆದರೆ ಈ ಎಲ್ಲ ವಿಧಿಗಳ ಹಿಂದೆ ಒಂದೇ

ಉದ್ದೇಶ ಮತ್ತು ಭಾವನೆಯಿದೆ. ಸಯಾಮ್ ದೇಶದ ದೊರೆಗಳ ಆಸ್ಥಾನದಲ್ಲಿ ನಡೆಯುತ್ತಿದ್ದ ಧಾರ್ಮಿಕ ವಿಧಿಗಳ ಬಗ್ಗೆ ಡಾ. ಕ್ವಾಯಿರ್ಚ್ ವೇಲ್ಸ್ ಒಂದು ಅದ್ಭುತವಾದ ಗ್ರಂಥವನ್ನು ಬರೆದಿದ್ದಾರೆ. ಸಯಾಮ್ ದೇಶದಲ್ಲಿ ಈಗಲೂ ವೇದಗಳಲ್ಲಿ ಸೂಚಿಸಿರುವಂತಹ ಕಿರೀಟಧಾರಣ ಪದ್ಧತಿಯನ್ನೇ ಅನುಸರಿಸಲಾಗುತ್ತಿದೆ ಎಂಬುದನ್ನು ಅದರಲ್ಲಿ ಬಹಳ ಚೆನ್ನಾಗಿ ವಿವರಿಸಿದ್ದಾರೆ.

ಕಡೇ ಪಕ್ಷ *ತೈತ್ತರೀಯ ಬ್ರಾಹ್ಮಣ*ದ ಕಾಲದಿಂದ ಹಿಡಿದು ಕ್ರಿ.ಪೂ. ಸುಮಾರು ೧೦೦೦ (೨.೭–೧೫–೧೭) ಈಗಿನ ಕಾಲದವರೆಗೆ, ಹಿಂದೂ ಪದ್ಧತಿಯಲ್ಲಿ ನಡೆಯುವ ಕಿರೀಟಧಾರಣ ಧಾರ್ಮಿಕ ವಿಧಿಗಳಲ್ಲಿ ಅಂತಹ ಹೆಚ್ಚಿನ ಬದಲಾವಣೆಯೇನೂ ಆಗಿಲ್ಲ. ಅದರ ಸಾಂಕೇತಿಕ ರೂಪಗಳು ಸಹ ಬದಲಾಗಿಲ್ಲ. ಸಯಾಮ್ ದೇಶದಲ್ಲಿ ರಾಜನನ್ನು ಪರಿಶುದ್ಧಗೊಳಿಸುವುದಕ್ಕಾಗಿ ಒಂದು ವಿಧಿವತ್ತಾದ ಸಮಾರಂಭ ನಡೆಯುತ್ತದೆ. ಭಾರತದಲ್ಲಿ ಮಹಾಭಾರತ ಕಾಲದಲ್ಲಿ ಆಚರಿಸಲಾಗುತ್ತಿದ್ದ ಪದ್ಧತಿಯನ್ನೇ ಇದರಲ್ಲಿ ಈಗಲೂ ಅನುಸರಿಸಲಾಗುತ್ತದೆ. ಈ ಧಾರ್ಮಿಕ ವಿಧಿಗಳನ್ನು ಮೊದಲು ಬ್ರಾಹ್ಮಣರು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಎಂಟು ಮಂದಿ ದಿಕ್ಪಾಲಕರನ್ನು ಸ್ತುತಿಸುವ ಮಂತ್ರಗಳನ್ನು ಪಠಿಸಲಾಗುತ್ತದೆ. ರಾಜನು ತನ್ನ ಮಹೋನ್ನತ ಸ್ಥಾನವನ್ನು ವಹಿಸಿಕೊಳ್ಳುವುದಕ್ಕೆ ಮೊದಲು, ಅವನು ಅದಕ್ಕೆ ಯೋಗ್ಯನಾಗುವಂತೆ ಮಾಡುವುದೇ ಈ ವಿಧಿಬದ್ಧ ಸಮಾರಂಭದ ಉದ್ದೇಶ. ರಾಜನನ್ನು ಪರಿಶುದ್ಧಗೊಳಿಸಿದ ಬಳಿಕ, ಏಳು ಪವಿತ್ರ ನದಿಗಳ ನೀರಿನಿಂದ ಅಂದರೆ ಸಪ್ತ ಸಿಂಧುವಿನಿಂದ ಅಭಿಷೇಕ ಮಾಡಲಾಗುತ್ತದೆ. ೧೯೪೭ರಲ್ಲಿ ಭಾರತದ ಸ್ವಾತಂತ್ರ್ಯದವರೆಗೆ ಸಯಾಮ್ ದೇಶದಲ್ಲಿ, ಇತರ ಧಾರ್ಮಿಕ ವಿಧಿಗಳನ್ನು ನೇಪಾಳದಲ್ಲಿ ಮತ್ತು ಇತರ ಹಿಂದೂ ರಾಜ್ಯಗಳಲ್ಲಿ ಆಚರಿಸುತ್ತಿದ್ದ ರೀತಿಯಲ್ಲೇ ನೆರವೇರಿಸಲಾಗುತ್ತಿತ್ತು.

ಕಿರೀಟಧಾರಣ ಮಹೋತ್ಸವದಲ್ಲಿ ರಾಜನು ಪ್ರತಿಜ್ಞಾ ವಚನ ಸ್ವೀಕರಿಸುತ್ತಾನೆ. ಈ ವಚನದಲ್ಲಿ ರಾಜನು ತನ್ನ ಪ್ರಜೆಗಳಿಗೆ ಈಡೇರಿಸಬೇಕಾದ ಕರ್ತವ್ಯಗಳನ್ನು ಸುಸ್ಪಷ್ಟಪಡಿಸಲಾಗುತ್ತದೆ. ರಾಜ್ಯದ ಸೇವೆಗಾಗಿ ರಾಜನು ತನ್ನ ಜೀವನವನ್ನು ಸಮರ್ಪಿಸುವನೆಂಬ ಮಾತನ್ನು ಈ ಪ್ರತಿಜ್ಞಾ ವಚನದಲ್ಲಿ ಒತ್ತಿ ಹೇಳಲಾಗುತ್ತದೆ.

ಐತರೇಯ ಬ್ರಾಹ್ಮಣ ವಿಧಿ ಸಂಸ್ಕಾರಗಳಲ್ಲಿ ರಾಜನು ಹೀಗೆ ತಿಳಿಸುತ್ತಾನೆ: "ಕಿರೀಟಧಾರಣ ಸಮಾರಂಭದಲ್ಲಿ ನಾನು ಸ್ವೀಕರಿಸಿದ ಪ್ರತಿಜ್ಞಾವಚನವನ್ನು ಪಾಲಿಸದೇ ಇದ್ದರೆ, ಧಾರ್ಮಿಕ ವಿಧಿಗಳ ಆಚರಣೆಯಿಂದ ನಾನು ಪಡೆದ ಎಲ್ಲ ಸತ್ಫಲಗಳನ್ನೂ ಕಳೆದುಕೊಳ್ಳುವೆನು. ನಾನು ಮಾಡಿದ ಸತ್ಕಾರ್ಯಗಳ ಫಲಗಳು, ನನ್ನ ಸ್ಥಾನ, ನನ್ನ ಜೀವನ ಅಷ್ಟೇ ಅಲ್ಲದೆ, ನನ್ನ ಸಂತತಿಯನ್ನು ಕೂಡಾ ಕಳೆದುಕೊಳ್ಳುತ್ತೇನೆ."

ಶಾಂತಿಪರ್ವದಲ್ಲೂ ಕಿರೀಟಧಾರಣ ವಿಧಿಯಲ್ಲಿ ಸ್ವೀಕರಿಸುವ ಪ್ರಮಾಣವಚನಕ್ಕೆ ಅತಿ ಹೆಚ್ಚಿನ ಮಹತ್ವ ಕೊಡಲಾಗಿದೆ. ಪ್ರತಿಜ್ಞಾವಚನ ಏಕೆ ಅಷ್ಟು ಮಹತ್ವಪೂರ್ಣ

ವಾದುದೆಂದರೆ, ಅದರಲ್ಲಿ ರಾಜನಿಗಿರುವ ಪರಿಮಿತಿಗಳನ್ನು ಸೂಚಿಸಲಾಗಿದೆ. ಆದ್ದರಿಂದ ಅದಕ್ಕೆ ಅಷ್ಟು ಪ್ರಾಮುಖ್ಯತೆ ಬಂದಿದೆಯೆಂಬುದು ಸಂಪ್ರದಾಯಸ್ಥ ಹಿಂದೂಗಳ ಅಭಿಪ್ರಾಯವಾಗಿದೆ. ಪ್ರತಿಜ್ಞಾವಚನ ಹೀಗಿದೆ:

"ದೇಶವು ನನಗೆ ದೇವರ ಸಮಾನ. ಆದ್ದರಿಂದ ಸದಾ ಕಾಲ, ದೇಶದ ಸಂರಕ್ಷಣೆ ಮಾಡುತ್ತೇನೆ. ಯಾವುದೇ ಕಾನೂನು ಇರಲಿ ಮತ್ತು ಯಾವುದೇ ನೀತಿ ನಿರ್ದೇಶನವಾಗಿರಲಿ, ನ್ಯಾಯ–ನೀತಿಗಳ ಸಿದ್ಧಾಂತಕ್ಕೆ ವಿರುದ್ಧವಾದ ಯಾವ ಕಾರ್ಯವನ್ನು ನಾನು ಮಾಡುವುದಿಲ್ಲ. ನನ್ನ ಸುಖ–ಸಂತೋಷಕ್ಕಾಗಿಯೇ ಮತ್ತು ನನ್ನ ಹಿತಕ್ಕಾಗಿಯೇ ನಾನು ಯಾವ ಕೆಲಸವನ್ನೂ ಮಾಡುವುದಿಲ್ಲ."

ಪ್ರತಿಜ್ಞಾಂಚಾಭಿರೋಹಸ್ವ
ಮನಸಾ ಕರ್ಮಣಾ ಗಿರಾ
ಪಾಲಯಿಷ್ಯಾಮ್ಯಹಂ ಭೌಮನ್
ಬ್ರಹ್ಮ ಇತ್ಯೇವಮಾಸಕೃತ್
ಯಶ್ಚಾತ್ರ ಧರ್ಮ ನೀತ್ಯುಕ್ತೋ
ದಂಡನೀತಿ ವ್ಯಾಪಶ್ರಯಃ
ತಮಸಮಬಃ ಕರಿಷ್ಯಾಮಿ
ಸ್ವವಸೋ ನ ಕದಾಚನ

ಎಲ್ಲೆಲ್ಲೂ ಕಿರೀಟಧಾರಣ ವಿಧಿ ಒಂದು ದೀಕ್ಷೆಯಾಗಿತ್ತು. ಸಮರ್ಪಣಾ ಭಾವದ ಸಂಕೇತವಾಗಿತ್ತು. ಕಿರೀಟ ಧರಿಸಿದ ಮತ್ತು ಅನುಲೇಪಿತ ರಾಜನ ಜೀವನವು ಒಂದು ವ್ರತವಾಗುತ್ತದೆ. ಈ ಅಂಶಕ್ಕೆ ಮನು ತುಂಬ ಮಹತ್ವ ಕೊಟ್ಟಿದ್ದಾನೆ. ಜೀವನವನ್ನೇ ವ್ರತಸಮಾನವಾಗಿ ಪರಿಗಣಿಸಿರುವವರೆಂದರೆ ಬ್ರಾಹ್ಮಣ ಮತ್ತು ರಾಜ – ಎಂದು ಹೇಳಿರುವ ಮನು, ಈ ಅಂಶವನ್ನು ಒತ್ತಿ ಹೇಳಿದ್ದಾನೆ. ರಾಜನು ತನ್ನ ಇಡೀ ಜೀವನ ಕರ್ತವ್ಯಬದ್ಧನಾಗಿರಬೇಕಾಗುತ್ತದೆ. ಹಗಲಿರುಳು ಅವನು ತನ್ನ ಕರ್ತವ್ಯಗಳ ಬಗ್ಗೆ ಚಿಂತಿಸುತ್ತಾ ಇರಬೇಕಾಗುತ್ತದೆ. ರಾಜನು ಎಚ್ಚರವಾಗಿದ್ದ ಸಮಯದಲ್ಲಾಗಲಿ ಅಥವಾ ನಿದ್ರಿಸುವ ವೇಳೆಯಲ್ಲಾಗಲೀ ಜನರತ್ತ ತಾನು ಹೊಂದಿರುವ ಕರ್ತವ್ಯಗಳನ್ನು ಮರೆತನಾದರೆ, ದೇವರು ಅವನ ಮೇಲೆ ಆಕ್ರೋಶಗೊಳ್ಳಬಹುದು.

ಕಿರೀಟ ಧರಿಸಿದ ರಾಜನ ಕಣ್ಣುಗಳಲ್ಲಿ ಅವನ ಪ್ರಜೆಗಳು, ಹೊಳಪು ಕಾಣುತ್ತಾರೆ. ಇದರಿಂದ ರಾಜನು ಹೊಸ ತೇಜಸ್ಸು ಪಡೆಯುತ್ತಾನೆ. ರಾಜನು ಜನರ ನಿಷ್ಠೆ ಹಾಗೂ ವಿಧೇಯತೆಯನ್ನು ಪಡೆಯಲು, ಕಿರೀಟಧಾರಣ ಸಮಾರಂಭ ಅಷ್ಟೇನೂ ಅವಶ್ಯಕವಲ್ಲ. ರಾಜನಿಂದ ಅಧಿಕಾರವನ್ನು ವಶಪಡಿಸಿಕೊಂಡ ಒಬ್ಬ ವ್ಯಕ್ತಿ

ಎಲ್ಲಿಯವರೆಗೆ ಜನರಿಗೆ ಸಂರಕ್ಷಣೆಯನ್ನು ಒದಗಿಸಲು ಸಮರ್ಥನಾಗಿರುತ್ತಾನೆಯೋ ಅಲ್ಲಿಯವರೆಗೆ ಜನರು ಅವನಿಗೆ ವಿಧೇಯರಾಗಿರಬೇಕಾಗುತ್ತದೆ. ಇದರಿಂದ ಜನರು ತಮ್ಮ ನಿಷ್ಠೆ ಹಾಗೂ ವಿಧೇಯತೆಯನ್ನು ಇಂದ್ರನಿಗೆ ತೋರಿಸಿದಂತಾಗುತ್ತದೆ ಎಂದು ಶಾಂತಿಪರ್ವದಲ್ಲಿ ತಿಳಿಸಲಾಗಿದೆ. ರಾಜನು ಅಭಿಷೇಕ ಮಾಡಿಸಿ ಕೊಂಡವನಾಗಿರಲಿ ಅಥವಾ ಕಿರೀಟ ಧರಿಸಿದವನಾಗಿರಲಿ ಅದು ಮುಖ್ಯವಲ್ಲ. ಆ ರಾಜ ಎಲ್ಲಿಯವರೆಗೆ ನೀತಿಯನ್ನು ಅನುಸರಿಸಿ, ನ್ಯಾಯಸಮ್ಮತವಾಗಿ ರಾಜ್ಯಭಾರ ಮಾಡುತ್ತಾನೆಯೋ ಅಲ್ಲಿಯವರೆಗೆ ಪ್ರಜೆಗಳು ರಾಜನಿಗೆ ನಿಷ್ಠೆ ಹಾಗೂ ವಿಧೇಯತೆ ತೋರಿಸಲೇಬೇಕು.

ಆರಂಭದಲ್ಲಿ, ವೇದಗಳ ಯುಗದ ರಾಜರು ಜನರಿಂದಲೇ ಆಯ್ಕೆ ಯಾಗುತ್ತಿದ್ದರು. ಪುರಾಣಗಳ ಕಾಲದಲ್ಲಿ ರಾಜಪಟ್ಟವು ವಂಶಪಾರಂಪರ್ಯವಾಯಿತು. ಭಾರತದಲ್ಲಿ ಆರ್ಯರಲ್ಲದ ಜನಸಮೂಹದಲ್ಲೂ ಇದು ವಂಶಾನುಗತವಾಗಿ ಬಂದಿತ್ತೆಂಬುದರಲ್ಲಿ ಸಂದೇಹವಿಲ್ಲ. ರಾಜಪ್ರಭುತ್ವ ವಂಶಪಾರಂಪರ್ಯವಾಗಿ ಬಂದಲ್ಲಿ ಅದರ ಸಮರ್ಥನೆಗೆ ಒಂದು ಸಿದ್ಧಾಂತ ಬೇಕಿತ್ತು. ಪ್ರಾಚೀನ ಕಾಲದಲ್ಲಿ ಏರ್ಪಟ್ಟ ಸಾಮಾಜಿಕ ಒಪ್ಪಂದದಿಂದ ಪರಮಾಧಿಕಾರ ಮತ್ತು ರಾಜಪ್ರಭುತ್ವ ಆರಂಭವಾಯಿತು ಎಂಬುದನ್ನು ಹಿಂದೂ ರಾಜಕೀಯ ತತ್ವಜ್ಞಾನಿಗಳು ಕಂಡುಕೊಂಡರು. ರಾಜಪ್ರಭುತ್ವ ಆನುವಂಶಿಕವಾದಾಗ, ರಾಜನ ಅಧಿಕಾರ ಹೆಚ್ಚತೊಡಗಿತು.

ಪ್ರಜಾರಕ್ಷಣೆಯೇ ಸಾಮಾಜಿಕ ಒಪ್ಪಂದದ ಉದ್ದೇಶವಾಗಿತ್ತು. ಆದ್ದರಿಂದ ರಾಜನಿಗೆ ಎಲ್ಲ ಅಧಿಕಾರಗಳನ್ನು ಒದಗಿಸುವುದು ಅಗತ್ಯವಾಯಿತು. ರಾಜನಿಗೆ ಸಂಬಂಧಿಸಿದಂತೆ ಕೆಲವು ಶಿಷ್ಟಾಚಾರಗಳನ್ನು ರೂಪಿಸಲಾಯಿತು. ಇದರಿಂದ ಜನರ ದೃಷ್ಟಿಯಲ್ಲಿ ರಾಜನ ಘನತೆ ಮತ್ತಷ್ಟು ಹೆಚ್ಚಿತು. ರಾಜನು ನಿರ್ವಹಿಸಬೇಕಾದ ಪವಿತ್ರ ಕರ್ತವ್ಯಗಳನ್ನು ಸಹ ಮಾನವರಿಗೆ ಮಾಡಿಕೊಡಲಾಯಿತು.

ಬ್ರಾಹ್ಮಣ ತತ್ವವಾದಿಗಳು, ಅನೇಕ ನಿಯಮಗಳ ಮೂಲಕ, ರಾಜನು ನಿರ್ವಹಿಸಬೇಕಾದ ಸಂರಕ್ಷಣಾ ಕರ್ತವ್ಯಗಳನ್ನು ಒತ್ತಿ ಹೇಳಿದರು. ಕ್ಷತ್ರಿಯನೊಬ್ಬ ಅಥವಾ ಯೋಧರ ಸಮುದಾಯಕ್ಕೆ ಸೇರಿದವನೊಬ್ಬನು ಮಾತ್ರ, ರಾಜನಾಗ ಬಹುದಾಗಿತ್ತು. ಹೆಂಗಸರನ್ನು ಉತ್ತರಾಧಿಕಾರದಿಂದ ಹೊರತುಪಡಿಸಲಾಗುತ್ತಿತ್ತು. ಅಂಧರು, ಕಿವುಡರು, ಮೂಕರು ಅಥವಾ ಗುಣವಾಗದಂತಹ ರೋಗಗಳಿಂದ ನರಳುತ್ತಿರುವವರು ಉತ್ತರಾಧಿಕಾರಿಯಾಗಿ, ಸಿಂಹಾಸನವನ್ನೇರಲು ಅವಕಾಶವಿರಲಿಲ್ಲ. ಅಂತಹವರು ರಾಜಪ್ರಭುತ್ವ ವಹಿಸಿಕೊಳ್ಳಲು ಅನರ್ಹರೆಂದು ಘೋಷಿಸಲಾಗಿತ್ತು. ಆದರೆ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿತ್ತೇ ಎಂಬುದು ಸ್ಪಷ್ಟವಾಗಿಲ್ಲ. ರಾಜನು ಕ್ಷತ್ರಿಯ ಮತ್ತು ರಾಜನ್ಯವಾಗಿರಬೇಕೆಂದು ಪವಿತ್ರ ಗ್ರಂಥಗಳಲ್ಲಿ ಮತ್ತು ನೀತಿಶಾಸ್ತ್ರದಲ್ಲಿ ತಿಳಿಸಲಾಗಿದೆ. ಕ್ಷತ್ರಿಯರಲ್ಲದವರು ರಾಜರುಗಳಾದರೂ

ಬಾಧಕವಿಲ್ಲವೆಂದು ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ನ್ಯಾಯಶಾಸ್ತ್ರ ಪಾರಂಗತರು ಮತ್ತು ವ್ಯಾಖ್ಯಾನಕಾರರು ಅಭಿಪ್ರಾಯಪಟ್ಟಿದ್ದಾರೆ. ಕ್ಷತ್ರಿಯೇತರ ರಾಜರುಗಳನ್ನು ಅವರು ಅಷ್ಟೇ ಸಂಪ್ರದಾಯಬದ್ಧರೆಂದು ಪರಿಗಣಿಸಿ ಅವರನ್ನು ಅಂಗೀಕರಿಸಿದ್ದಾರೆ. ಈ ರಾಜರುಗಳು ಕ್ಷತ್ರಿಯ ವಂಶದ ರಾಜರುಗಳಷ್ಟೇ ಗೌರವಕ್ಕೆ ಅರ್ಹರೆಂದು ಅವರು ತಿಳಿಸಿದ್ದಾರೆ. ನಾಲ್ಕುವರ್ಣಗಳ ಸಿದ್ಧಾಂತ, ಕೇವಲ ಕಲ್ಪನಾತ್ಮಕವಾದುದೆಂಬುದನ್ನು ಮರೆಯಬಾರದು. ಯಾವುದೇ ಜಾತಿಗೆ ಸೇರಿದವನಾಗಿರಲಿ, ಪ್ರತಿಯೊಬ್ಬ ರಾಜನು ಕ್ಷತ್ರಿಯನೇ ಆಗಿದ್ದಾನೆ. ಧರ್ಮದ ಮಟ್ಟಿಗೆ ಹೇಳುವುದಾದರೆ ಆ ರಾಜನನ್ನು ಕ್ಷತ್ರಿಯನೆಂದೇ ಪರಿಗಣಿಸಲಾಗುತ್ತದೆ. ಪುರಾಣಗಳಲ್ಲಿ, ಕ್ಷತ್ರಿಯ ಜಾತಿಗೆ ಸೇರಿರದ ರಾಜರುಗಳಲ್ಲಿ ಅನೇಕ ಉದಾಹರಣೆಗಳನ್ನು ಕೊಡಲಾಗಿದೆ. ನಂದರು ನಿಮ್ನ ಜಾತಿಗೆ ಸೇರಿದವರಾಗಿದ್ದರು. ಮೌರ್ಯರ ಜಾತಿ ಕಳಂಕವನ್ನು ನಿವಾರಿಸುವ ಪ್ರಯತ್ನ ನಡೆದಿದ್ದರೂ, ಪುರಾಣಗಳಲ್ಲಿ ಅವರನ್ನು ಶೂದ್ರರೆಂದೇ ಪರಿಗಣಿಸಲಾಘಿದೆ. ಮಂಜುಶ್ರೀ ಮೂಲಕಲ್ಪವು ಬುದ್ಧನಿಂದ ಹಿಡಿದು ಶ್ರೀಹರ್ಷನವರೆಗೆ, ಅನೇಕ ಭಾರತೀಯ ಸಾಮ್ರಾಜ್ಯಗಳ ಇತಿಹಾಸವನ್ನೊಳಗೊಂಡಿದೆ. ಹರ್ಷವರ್ಧನ ಜನಿಸಿದ ಧನೇಶ್ವರನ ವಂಶದವರು ವೈಶ್ಯ ಜಾತಿಯವರಾಗಿದ್ದರು. "ಆದಿತ್ಯನಾಮ ವೈಶ್ಯಸ್ತು ಸ್ಥಾನೇಶ್ವರ ನಿವಾಸಿನಃ" ಆದಿತ್ಯ ಎಂಬ ಹೆಸರಿನ ವೈಶ್ಯನು ಸ್ಥನೇಶ್ವರ ನಿವಾಸಿ ಯಾಗಿದ್ದನು. ಅವನೇ ಈ ವಂಶದ ಸಂಸ್ಥಾಪಕ ಎಂದು ಗ್ರಂಥದಲ್ಲಿ ತಿಳಿಸಲಾಗಿದೆ. ವಾಕಾಟಕರು ಮತ್ತೊಂದು ರಾಜಮನೆತನಕ್ಕೆ ಸೇರಿದವರು. ಅವರು ಬಹಳ ಕೀರ್ತಿವಂತರಾಗಿದ್ದರೆಂದು ಪುರಾಣಗಳು ತಿಳಿಸುತ್ತವೆ. ಅವರು ಮೊದಲು ಬ್ರಾಹ್ಮಣರಾಗಿದ್ದರು. ಅನಂತರ, ಅವರು ಕ್ಷತ್ರಿಯರ ಸ್ಥಾನ ಪಡೆದುಕೊಂಡಂತೆ ಕಾಣುತ್ತದೆ.

ಬಂಗಾಳದ ಪಾಲರು ಸಹ ಶೂದ್ರರಾಗಿದ್ದರೆಂದು ತಿಳಿದುಬರುತ್ತದೆ. ನಿಜವಾಗಿ ಹೇಳುವುದಾದರೆ, ಕ್ರಿ.ಪೂ. ೪ನೆಯ ಶತಮಾನ ಆರಂಭವಾದ ನಂತರ ಭಾರತದಲ್ಲಿದ್ದ ಬಹುತೇಕ ರಾಜಮನೆತನಗಳವರು ಕ್ಷತ್ರಿಯರಾಗಿರಲಿಲ್ಲ. ಬ್ರಾಹ್ಮಣ, ವೈಶ್ಯ ಮತ್ತು ಶೂದ್ರ ಜಾತಿಗಳಿಗೆ ಸೇರಿದ ರಾಜರುಗಳು ತುಂಬ ಸಂಪ್ರದಾಯಸ್ಥರೆಂದೇ ಪರಿಗಣಿಸಲಾಗಿತ್ತು. ಅವರನ್ನು ಧರ್ಮಸಂರಕ್ಷಕರೆಂದು ಅಂಗೀಕರಿಸಲಾಗಿತ್ತು. ಭರಶಿವರು ಮತ್ತು ವಾಕಾಟಕರ ನೇತೃತ್ವದಲ್ಲಿ ಹಿಂದೂಧರ್ಮ ಆರಂಭವಾಯಿತು. ಹೂಣರನ್ನು ಹೊರಹಾಕಿದ ಗುಪ್ತರು, ಉತ್ತರ ಭಾರತದಲ್ಲಿ ಕಡೇ ಹಿಂದೂ ಚಕ್ರವರ್ತಿಯಾಗಿದ್ದ ಹರ್ಷವರ್ಧನ– ಇವರೆಲ್ಲರೂ ಕ್ಷತ್ರಿಯರಾಗಿರಲಿಲ್ಲ. ಅವರ ಧರ್ಮದ ಆಧಾರದ ಮೇಲೆ ಸಮಾಜವು ಅವರನ್ನು ಕ್ಷತ್ರಿಯರೆಂದು ಅಂಗೀಕರಿಸಿತು. ಹಿಂದೂ ರಾಜರುಗಳ ಆಳ್ವಿಕೆಯ ಕೊನೆಯವರೆಗೆ, ಇದೇ ಪ್ರಕ್ರಿಯೆ ಮುಂದುವರಿದು ಕೊಂಡುಬಂದಿತು. ಹಿಂದೂ ಜಾತಿ ಪದ್ಧತಿ ಅತಿ ಕಟ್ಟುನಿಟ್ಟಾಗಿದ್ದರೂ ೧೯ ಮತ್ತು

೨೦ನೇ ಶತಮಾನದವರೆಗೆ, ಗುಡ್ಡಗಾಡು ಪ್ರದೇಶಗಳ ಬುಡಕಟ್ಟು ಜನಾಂಗದ ಮತ್ತು ಆರ್ಯರಲ್ಲದ ಸ್ಥಳೀಯ ಸಮುದಾಯದ ರಾಜರುಗಳನ್ನು, ರಜಪೂತರು ಮತ್ತು ಕ್ಷತ್ರಿಯರೆಂದು ಅಂಗೀಕರಿಸಲಾಗಿತ್ತು. ಶಕರು, ಹೂಣರು ಮತ್ತು ಇತರ ಭಾರತೀಯೇತರ ಗುಂಪುಗಳ ಜನರಿಗೆ ಕ್ಷತ್ರಿಯ ಸ್ಥಾನಮಾನವನ್ನು ಕೊಡಲಾಗಿತ್ತೆಂದು ಶಿಲಾಶಾಸನಗಳ ಆಧಾರದ ಮೇಲೆ ಸ್ಥಿರಪಡಿಸಲಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಪ್ರಾಮುಖ್ಯ ಪಡೆದಾಗ ಅಥವಾ ಅಧಿಕಾರ ಪಡೆದ ಬಳಿಕ, ಮೂಲ ಬುಡಕಟ್ಟು ಜನಾಂಗದವರಿಗೂ, ರಾಜಪೂತರ ಮತ್ತು ಕ್ಷತ್ರಿಯರ ಸ್ಥಾನಮಾನ ನೀಡಲಾಗಿದೆ. ಮುಂಚಿನ ಕಾಲದಲ್ಲೂ ಲಿಚ್ಛವಿಗಳು, ಶಾಕ್ಯರು ಮತ್ತು ಇತರ ಆರ್ಯರಲ್ಲದ ಗುಂಪುಗಳ ಜನರು, ರಾಜಕೀಯ ಅಧಿಕಾರವನ್ನು ಹೊಂದಿದ್ದರು. ಅವರನ್ನು ಪರಿವರ್ತಿತ ಕ್ಷತ್ರಿಯರೆಂದು ಕರೆಯಲಾಗುತ್ತಿತ್ತು. ಆದ್ದರಿಂದ ರಾಜಪೂತ ಮತ್ತು ಕ್ಷತ್ರಿಯ ಸ್ಥಾನಮಾನ ನೀಡುವುದು ಅಸಾಮಾನ್ಯವಾದ ವಿಷಯವೇನಾಗಿರಲಿಲ್ಲ. ಹಿಂದೂಗಳು ತಮ್ಮ ಕಟ್ಟುನಿಟ್ಟಾದ ಸಿದ್ಧಾಂತದಿಂದ ಬೇರೆಯಾಗಿದ್ದು, ಇದೊಂದು ವಿಷಯದಲ್ಲಿ ಮಾತ್ರವಲ್ಲ. ಉತ್ತರಾಧಿಕಾರಿಗಳಾಗಿ ರಾಜಸಿಂಹಾಸನವನ್ನೇರಲು ಮಹಿಳೆಯರಿಗಿದ್ದ ಹಕ್ಕನ್ನು ಸ್ಮೃತಿಗಳಲ್ಲಾಗಲಿ ಅಥವಾ ನೀತಿಶಾಸ್ತ್ರಗಳಲ್ಲಾಗಲಿ ಮಾನ್ಯ ಮಾಡಿಲ್ಲ. ಆದರೆ ಅನೇಕ ಮಹಿಳೆಯರು ರಾಣಿಯರಾಗುವ ತಮ್ಮ ಹಕ್ಕನ್ನು ಉಪಯೋಗಿಸಿಕೊಂಡು ರಾಜ್ಯವನ್ನಾಳಿದ ಅನೇಕ ಉದಾಹರಣೆಗಳಿವೆ. ಒರಿಸ್ಸಾದಲ್ಲಿ ಉತ್ಕಲವನ್ನಾಳಿದ ಇಬ್ಬರು ರಾಣಿಯರ ಬಗ್ಗೆ, ಅಲ್ಲಿನ ಶಿಲಾಶಾಸನಗಳಲ್ಲಿ ಉಲ್ಲೇಖವಿದೆ. ಕರ್ನಾಟಕ ಪ್ರದೇಶದಲ್ಲಿ ರಾಣಿಯೊಬ್ಬಳು ಆಳುತ್ತಿದ್ದಳೆಂದು ಕಲ್ಹಣ, ರಾಜತರಂಗಿಣಿಯಲ್ಲಿ ತಿಳಿಸಿದ್ದಾನೆ. ನಾಲ್ಕನೆಯ ತರಂಗದ ೧೫೧ನೇ ಶ್ಲೋಕದಲ್ಲಿ ಈ ರೀತಿ ಹೇಳಲಾಗಿದೆ: "ಈ ಯುಗಾರಂಭದಲ್ಲಿ ಅತ್ಯಂತ ಮೋಹಕವಾದ ಕಣ್ಣುಗಳನ್ನು ಹೊಂದಿದ್ದ ಮಹಿಳೆಯೊಬ್ಬಳು ದಕ್ಷಿಣದ ಪ್ರದೇಶವನ್ನಾಳಿ ಜನರಿಗೆ ಅತ್ಯುತ್ತಮ ರಕ್ಷಣೆಯನ್ನು ಒದಗಿಸಿದಳು. ಅವಳ ಕೀರ್ತಿ ಎಲ್ಲೆಡೆ ಹಬ್ಬಿತು. ರಾಣಿ ಸುಗಂಧ ತನ್ನ ಪ್ರಜೆಗಳ ಕೋರಿಕೆಯ ಮೇಲೆ ತಾನೇ ರಾಜ್ಯಭಾರವನ್ನು ವಹಿಸಿಕೊಂಡಳೆಂದು ಐದನೆಯ ತರಂಗದಲ್ಲಿನ ೨೪೧ನೇ ಶ್ಲೋಕದಲ್ಲಿ ಪುನಃ ತಿಳಿಸಲಾಗಿದೆ. ಅನಂತರ ರಾಣಿ ಸುಗಂಧಳನ್ನು ಪದಚ್ಯುತಗೊಳಿಸಲಾಯಿತು. ಅವಳು ಕಣ್ಣೀರಿನ ಮಾಲೆಯಲ್ಲಿ ಅರಮನೆಯನ್ನು ಬಿಟ್ಟು, ಹೊರಟುಹೋದಳು. ಆದರೂ ಈ ರಾಣಿ ಅಷ್ಟಕ್ಕೇ ಬಿಡಲಿಲ್ಲ. ಸೈನಿಕರ ಬಂಡಾಯವೊಂದರ ನೇತೃತ್ವ ವಹಿಸಿ, ಮತ್ತೆ ರಾಜ್ಯಭಾರ ವಹಿಸಿಕೊಳ್ಳುವ ಪ್ರಯತ್ನ ಮಾಡಿದಳು. ಹೆಂಗಸರು ತಮ್ಮ ಹಕ್ಕು ಪ್ರತಿಪಾದಿಸಿಕೊಂಡು, ರಾಜ್ಯಭಾರ ನಡೆಸಿದ ಅನೇಕ ಉದಾರಹಣೆಗಳಿವೆ. ಕಾಕತೀಯರ ರುದ್ರಾಂಬೆ ಎಂಬಾಕೆ, ಉತ್ಕೃಷ್ಟ ಮಟ್ಟದ ಆಳ್ವಿಕೆ ನಡೆಸಿದಳು. ಇದಕ್ಕೆ ಮಾರ್ಕೊಪೋಲೋ ಸಾಕ್ಷ್ಯಾಧಾರವನ್ನೊದಗಿಸಿದ್ದಾನೆ.

ಕ್ಷತ್ರಿಯರಲ್ಲದ ಬಹುತೇಕ ಮನೆತನದವರು ಭಾರತದಲ್ಲಿ ರಾಜ್ಯವಾಳಿದ್ದಾರೆ. ರಾಜರಾಗುವುದಕ್ಕೆ ಸ್ಮೃತಿಗಳಲ್ಲಿ ಹಲವಾರು ನಿಷೇಧಗಳನ್ನು ವಿಧಿಸಲಾಗಿತ್ತು. ಆದರೆ ಅವುಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿರಲಿಲ್ಲ. ಇದು ಕೆಲವು ಮುಖ್ಯ ಪರಿಣಾಮಗಳಿಗೆ ಎಡೆಮಾಡಿಕೊಟ್ಟಿತು. ಜಾತಿ ವರ್ಗೀಕರಣಗಳನ್ನು ಮತ್ತು ಕೆಲವೊಂದು ಪದ್ಧತಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬರುವುದು ಕಷ್ಟವಾಯಿತು. ಕೆಲವು ಸಂದರ್ಭಗಳಲ್ಲಿ ಅದು ಸಾಧ್ಯವಾಗಲೇ ಇಲ್ಲ. ಕ್ಷತ್ರಿಯರಲ್ಲದವರು ರಾಜರುಗಳಾದರು. ಉಪಜಾತಿಗಳಿಗೆ ಸೇರಿದವರು ಸಹ ರಾಜಮನೆತನದೊಂದಿಗೆ ಸಂಪರ್ಕವಿರಿಸಿಕೊಂಡು, ಉನ್ನತ ಸಾಮಾಜಿಕ ಸ್ಥಾನಕ್ಕೆ ಬಂದರು. ನಾಲ್ಕು ವರ್ಣಗಳ ಸ್ಥಾನಮಾನ ತಮಗೂ ದೊರೆಯಬೇಕೆಂದು ಅವರು ಕೇಳಿದರು. ಬೇರೆ ಬೇರೆ ಜಾತಿಗಳ ನಡುವೆ ವೈವಾಹಿಕ ಸಂಬಂಧಗಳಿಗಿದ್ದ ಕಾನೂನು–ನಿಯಮಗಳನ್ನು ಸಡಿಲಗೊಳಿಸಲಾಯಿತು. ಉದಾಹರಣೆಗೆ ಗುಪ್ತರ ವಂಶದ ಎರಡನೆಯ ಚಂದ್ರಗುಪ್ತ, ತನ್ನ ಅಣ್ಣನ ವಿಧವಾ ಪತ್ನಿ ಧ್ರುವಸ್ವಾಮಿನಿಯನ್ನು ಮದುವೆಯಾದನು. ಆಕೆ ಒಂದನೇ ಕುಮಾರಗುಪ್ತನ ತಾಯಿಯಾದಳು. ಕಾಶ್ಮೀರದಲ್ಲಿ ದೊರೆಗಳು ಡೊಂಬರ ಮಹಿಳೆಯರನ್ನು ವಿವಾಹವಾದ ಅನೇಕ ಪ್ರಕರಣಗಳಿವೆ. ಹೀಗೆ ವಿವಾಹವಾದ ಆ ಮಹಿಳೆಯರು ರಾಣಿಯರ ಸ್ಥಾನಕ್ಕೇರುತ್ತಿದ್ದರು. ಚಂದ್ರಗುಪ್ತ ಮೌರ್ಯನು ಸೆಲ್ಯುಕಸ್ ನಿಕೇಟರ್ ಗ್ರೀಕರ ರಾಜಕುಮಾರಿಯನ್ನು ತನ್ನ ಪತ್ನಿಯಾಗಿ ಸ್ವೀಕರಿಸಿದನು. ಹಿಂದೂಗಳ ಅರಮನೆಯಲ್ಲಿ ಗ್ರೀಕ್ ಮಹಿಳೆಯರು ಅಡ್ಡಾಡುತ್ತಿದ್ದುದು ಅತಿ ಸಾಮಾನ್ಯ ದೃಶ್ಯವಾಗಿತ್ತು. ಸಂಸ್ಕೃತ ನಾಟಕಗಳಲ್ಲಿ ರಾಜನ ಬಳಿ ಇರುತ್ತಿದ್ದ ಪರಿಚಾರಿಕೆಯರೆಲ್ಲರೂ ಯವನಿಯರು ಅಥವಾ ಗ್ರೀಕ್ ಮಹಿಳೆಯರಾಗಿರುತ್ತಿದ್ದರು.

ಹೀಗೆ ಸ್ಥಾಪಿತವಾದ ರಾಜಪ್ರಭುತ್ವ ಜಾತ್ಯತೀತ ಸ್ವರೂಪವನ್ನು ಹೊಂದಿರುತ್ತಿತ್ತು. ಜನರ ಸಂರಕ್ಷಣೆಯೇ ರಾಜನ ಉದ್ದೇಶವಾಗಿತ್ತು. ಜನರು ಸಹ ರಾಜನ ಪರಮಾಧಿಕಾರವನ್ನು ಒಪ್ಪಿಕೊಂಡಿದ್ದರು. ಆದರೂ ರಾಜನು ತನ್ನ ಮನಸ್ಸಿಗೆ ಬಂದಂತೆ ಅಧಿಕಾರವನ್ನು ಚಲಾಯಿಸುವಂತಹ ಸಂಪೂರ್ಣ ಅಧಿಕಾರ ಪಡೆದಿರಲಿಲ್ಲ. ಅವನು ಕೆಲವು ಪರಿಶುದ್ಧ ಕಾನೂನು ನಿಯಮಗಳಿಗೆ ಬದ್ಧನಾಗಿರಬೇಕಾಗುತ್ತಿತ್ತು. ಸಾಮಾಜಿಕ ವ್ಯವಸ್ಥೆಯನ್ನು ಎತ್ತಿಹಿಡಿಯಬೇಕಾಗುತ್ತಿತ್ತು. ರಾಜನು ನ್ಯಾಯ, ಧರ್ಮವನ್ನು ಪಾಲಿಸಬೇಕಾಗುತ್ತಿತ್ತು. ಇದಕ್ಕೆ ಪ್ರತಿಯಾಗಿ ಜನರು ರಾಜನಿಗೆ ನಿಷ್ಠರಾಗಿರುತ್ತಿದ್ದರು. ಜನರು ತಮ್ಮ ಉತ್ಪನ್ನಗಳ ಸ್ವಲ್ಪ ಭಾಗವನ್ನು ರಾಜನಿಗೆ ಸಲ್ಲಿಸುತ್ತಿದ್ದರು. ರಾಜನು ದೈವಪುರುಷನಾಗಿರಲಿಲ್ಲ. ಬ್ರಾಹ್ಮಣರಿಗೆ ಮತ್ತು ಪ್ರತಿಯೊಂದು ಪಂಥದ ಯತಿಗಳಿಗೆ ಗೌರವ ತೋರಿಸುವುದು ಅವನ ಕರ್ತವ್ಯವಾಗಿತ್ತು.

ರಾಜ ಹೇಗೆ ಹುಟ್ಟಿಕೊಂಡ ಎಂಬುದಕ್ಕೆ ಸಂಬಂಧಿಸಿದಂತೆ ಹಲವಾರು ಸಿದ್ಧಾಂತಗಳಿವೆ. ಇವೆಲ್ಲವೂ ಊಹಾಪೋಹಗಳ ಆಧಾರದ ಮೇಲೆ ನಿಂತಿವೆ.

ಪಾಂಡಿತ್ಯ ಮತ್ತು ಶೈಕ್ಷಣಿಕ ದೃಷ್ಟಿಯಿಂದ, ಈ ವಿಷಯದಲ್ಲಿ ವಿವರವಾದ ಚರ್ಚೆ ಮುಖ್ಯವೆನಿಸಬಹುದು. ರಾಜಪ್ರಭುತ್ವ ಒಂದು ಸಂಸ್ಥೆಯಾಗಿ ಬೆಳೆದಿದೆ. ಆದ್ದರಿಂದ ಅದರ ಅಧ್ಯಯನಕ್ಕೆ ಅದು ಹೇಗೆ ಆರಂಭವಾಯಿತು ಎಂಬುದನ್ನು ಸೂಚಿಸುವ ಸಿದ್ಧಾಂತಗಳು ಮುಖ್ಯವಲ್ಲ. ರಾಜನಿಗಿರಬೇಕಾದ ಅಧಿಕಾರಗಳು, ಗುಣವಿಶೇಷಗಳು ಮತ್ತು ಕೆಲಸಕಾರ್ಯಗಳ ಬಗ್ಗೆ ಸಮರ್ಥನೆ ಅಥವಾ ಟೀಕೆಗೊಳಗಾಗಿರುವ ಅಂಶಗಳಿವೆ. ಇಂತಹ ಅಂಶಗಳ ಪರಿಶೀಲನೆ ಮುಖ್ಯವಾಗಿರುತ್ತದೆ. ರಾಜನ ಪ್ರಭುತ್ವ ಆರಂಭವಾಗುವುದಕ್ಕೆ ಮುಂಚೆ ಅರಾಜಕತೆ ಮತ್ತು ಕಾನೂನುಬಾಹಿರ ಪರಿಸ್ಥಿತಿ ಇತ್ತೇ ಎಂಬುದನ್ನು ತಿಳಿಯುವುದು ಮುಖ್ಯವಲ್ಲ. ಈ ಸಂದರ್ಭದಲ್ಲಿ ಮತ್ಸ್ಯನ್ಯಾಯದ ಉದಾಹರಣೆಯನ್ನು ಪರಿಶೀಲಿಸುವುದು ಸೂಕ್ತ. ಜನರಿಗೆ ಸಂಪೂರ್ಣ ರಕ್ಷಣೆ ಯನ್ನೊದಗಿಸುವುದು ರಾಜನ ಪ್ರಥಮ ಕರ್ತವ್ಯ. ಯಾವುದೇ ವಿಚಾರಪಂಥಕ್ಕೆ ಸೇರಿದವರಾಗಿರಲಿ, ಎಲ್ಲ ಹಿಂದೂ ಚಿಂತನಕಾರರ ಅಭಿಪ್ರಾಯ ಇದೇ ಆಗಿದೆ. ಇದರಿಂದ ಜನರು ಸುಸ್ಥಿರವಾದ ಒಂದು ಸಮಾಜದಲ್ಲಿ ಜೀವಿಸಲು ಸಾಧ್ಯವಾಗುತ್ತದೆ. ನಮ್ಮ ದೃಷ್ಟಿಯಲ್ಲಿ ರಾಜನು ದೈವಾಂಶಸಂಭೂತ. ಆದ್ದರಿಂದ, ಅವನಲ್ಲಿ ಎಲ್ಲ ದೈವೀಕಗುಣಗಳು ತುಂಬಿವೆಯೇ ಎಂಬುದನ್ನು ತಿಳಿಯಬೇಕೆಂಬುದು ಸಹ ಮುಖ್ಯವಲ್ಲ. ರಾಜನು ಹೊಂದಿರಬೇಕಾದ ಗುಣಗಳನ್ನು ಸೂಚಿಸುವ ಸಿದ್ಧಾಂತ ನಮಗೆ ಮುಖ್ಯ. ರಾಜಪ್ರಭುತ್ವದ ಆರಂಭಕ್ಕೆ ಸಂಬಂಧಿಸಿದ ವಾದ–ವಿವಾದಗಳು, ಸಮಾಜದಲ್ಲಿ ಜನರು ಪ್ರಭುತ್ವಕ್ಕೆ ವಿಧೇಯರಾಗಿ ನಡೆದುಕೊಳ್ಳುವುದಕ್ಕೆ ಸಂಬಂಧಿಸಿದ ಸಿದ್ಧಾಂತವನ್ನು ವಿವರಿಸುವಲ್ಲಿ ಮಾತ್ರ ಮಹತ್ವ ಪಡೆದಿವೆ. ಆದ್ದರಿಂದ, ಈ ದೃಷ್ಟಿಯಿಂದ ಈ ಇಡೀ ವಿಷಯವನ್ನು ಪರಿಶೀಲಿಸಬೇಕು.

* * * *

೩. ರಾಜರ ಸ್ವಭಾವ ಮತ್ತು ಕರ್ತವ್ಯಗಳು

ಪರಮಾಧಿಕಾರದ ಲಕ್ಷಣಗಳೇನೆಂದು ಹಿಂದೂ ಸಿದ್ಧಾಂತಕಾರರು ಹೇಳುತ್ತಾರೆ? ಅದು ಮುಖ್ಯವಾಗಿ ಜಾತ್ಯತೀತ ಸ್ವಭಾವದಿಂದ ಕೂಡಿರಬೇಕು ಮತ್ತು ಯಾವುದೇ ಧಾರ್ಮಿಕ ಭಾವನೆಗಳಿಂದ ದೂರವಾಗಿರಬೇಕೆಂದು ನಾವು ಸೂಚಿಸಿದ್ದೇವೆ. ರಾಜರು ದೈವಾಂಶಗಳನ್ನು ಪಡೆದು, ಹುಟ್ಟಿಕೊಂಡವರೆಂದು ಹೇಳಲಾಗುವ ಬಗ್ಗೆ ನಾವು ಈಗಾಗಲೇ ಚರ್ಚಿಸಿದ್ದೇವೆ. ಹಿಂದೂ ಸಿದ್ಧಾಂತದಲ್ಲಿ ಇದಕ್ಕೆ ಯಾವುದೇ ಸಮರ್ಥನೆಯೂ ಇಲ್ಲ. ಕೆಲವು ಬರಹಗಾರರು, ಹಿಂದೂ ರಾಜರುಗಳನ್ನು ದೈವಾಂಶ ಸ್ವರೂಪವುಳ್ಳವರೆಂದು ಕರೆದಿದ್ದಾರೆ. ಈಗ ನಾವು ಆ ವಿಷಯವನ್ನು ಕುರಿತು ಪರಿಶೀಲಿಸಬಹುದು.

ರಾಜರುಗಳು ದೈವ ಸಮಾನರೆಂದು ಈಜಿಪ್ಟ್‌ನ ಜನರು ನಂಬಿದ್ದರು. ಈ ನಂಬಿಕೆಯನ್ನು ರೋಮನ್ ಚಕ್ರವರ್ತಿಗಳು ಸಹ ಒಪ್ಪಿಕೊಂಡಿದ್ದರು. ಈ ಚಕ್ರವರ್ತಿಗಳು ತಮಗಾಗಿಯೇ ದೇವಾಲಯಗಳನ್ನು ಸಹ ಕಟ್ಟಿಕೊಂಡಿದ್ದರು. ರಾಜರುಗಳು ಸತ್ತನಂತರ, ಅವರು ದೈವಾಂಶ ಪಡೆಯುತ್ತಾರೆಂಬ ಒಂದು ನಂಬಿಕೆ ಭಾರತದಲ್ಲಿದ್ದಂತೆ ಕಾಣುತ್ತದೆ. ಆದರೆ ಯಾವುದೇ ಕಾಲದಲ್ಲಾಗಲಿ ಹಿಂದೂ ರಾಜರುಗಳಿಗೆ ದೇವರ ಸ್ಥಾನಮಾನವಿರಲಿಲ್ಲ. ಪುರಾಣೇತಿಹಾಸಗಳಲ್ಲಿ ರಾಜನೊಬ್ಬನು ತಾನೇ ದೇವರೆಂದು ಹೇಳಿಕೊಂಡಿದ್ದ ಒಂದೇ ಒಂದು ಉದಾಹರಣೆಯಿದೆ. ಹಿರಣ್ಯಕಶಿಪು ಮಾತ್ರ, ದೇವರೆಂಬುವನೇ ಇಲ್ಲ, ಆ ದೇವರು ತಾನೊಬ್ಬನೇ ಎಂದು ಹಿರಣ್ಯಕಶಿಪು ಗರ್ವದಿಂದ ಸಾರಿಕೊಂಡಿದ್ದನು. ಅಪ್ಪನ ಈ ವಾದವನ್ನು ಅವನ ಮಗನೇ ತಿರಸ್ಕರಿಸಿದ್ದನು. ಅಪ್ಪ ದೇವರೆಂಬುದನ್ನು ಅವನು ಒಪ್ಪಿಕೊಳ್ಳಲಿಲ್ಲ. ಇಂತಹ ತಪ್ಪನ್ನು ಎಸಗಿದ ಹಿರಣ್ಯಕಶಿಪು ದೇವರ ಆಕ್ರೋಶಕ್ಕೆ ಗುರಿಯಾದನು. ಪುರಾಣಗಳಲ್ಲಿ ನೀತಿಬೋಧನೆಗೆ ಅತಿ ಹೆಚ್ಚು ಮಹತ್ವ ಕೊಡಲಾಗಿದೆ. ಪ್ರಜೆಗಳಿಂದ ಆರನೇ ಒಂದು ಭಾಗದಷ್ಟು ಉತ್ಪನ್ನಗಳನ್ನು ಸಂಬಳವಾಗಿ ಪಡೆಯುವ ರಾಜನು ನಿಜವಾಗಿಯೂ ಪ್ರಜಾಸೇವಕ.

ರಾಜನು ಸಮಾಜಕ್ಕೆ ಉಪಯುಕ್ತನಾಗಿರುತ್ತಾನೆ. ಅವನು ಸಮಾಜವನ್ನು ಅರಾಜಕತೆಯಿಂದ ಪಾರುಮಾಡುತ್ತಾನೆ, ಅದನ್ನು ಸಂರಕ್ಷಿಸುತ್ತಾನೆ ಎಂದು ಭೀಷ್ಮ ಮಹಾಭಾರತದಲ್ಲಿ ತಿಳಿಸಿರುವುದನ್ನು ನಾವು ಗಮನಿಸಿದ್ದೇವೆ. ಅರಾಜಕತೆ ತುಂಬಿತುಳುಕುತ್ತಿರುವ ಒಂದು ರಾಜ್ಯದಲ್ಲಿ, ಒಬ್ಬ ವ್ಯಕ್ತಿಯು ಅಧಿಕಾರವನ್ನು ರಾಜನಿಂದ

ವಶಪಡಿಸಿಕೊಂಡು, ಆಡಳಿತವನ್ನು ವಹಿಸಿಕೊಂಡರೂ ಅವನನ್ನು ರಾಜನೆಂದು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಸಹ *ಮಹಾಭಾರತ*ದಲ್ಲಿ ತಿಳಿಸಲಾಗಿದೆ. "ಇಂದ್ರಾಯ ಸ ಪ್ರಣಮತೇ ನಮತೇ ಯೋ ಬಲಿಯಸೇ." ಜಾತ್ಯತೀತವಾದಿಯಾಗಿದ್ದ ಶುಕ್ರನು ಇದೇ ಅಭಿಪ್ರಾಯವನ್ನು ಮತ್ತಷ್ಟು ಉತ್ತಮಪಡಿಸಿದನು. ಒಬ್ಬ ವ್ಯಕ್ತಿಯು, ತನ್ನ ಕುಶಲತೆ, ಬುದ್ಧಿವಂತಿಕೆ, ಶಕ್ತಿ ಅಥವಾ ಶೌರ್ಯದ ಮೂಲಕ ರಾಜನ ಸ್ಥಾನಕ್ಕೆ ಬರುತ್ತಾನೆ. ಅವನನ್ನು ವಿಧಿಬದ್ಧವಾಗಿ ರಾಜನನ್ನಾಗಿ ಪ್ರತಿಷ್ಠಾಪಿಸಿರಲಿ ಅಥವಾ ಇಲ್ಲದಿರಲಿ, ಚಿಂತೆಯಿಲ್ಲ, ಆ ವ್ಯಕ್ತಿ ನೀತಿಗನುಗುಣವಾಗಿ ಆಳ್ವಿಕೆ ನಡೆಸುತ್ತಾನೆ. ಪ್ರಜೆಗಳ ಸಂರಕ್ಷಣಾ ಕಾರ್ಯವನ್ನು ನಿರ್ವಹಿಸುತ್ತಾನೆ ಎಂದು ಶುಕ್ರ ತಿಳಿಸಿದ್ದಾನೆ. ಒಬ್ಬ ರಾಜನನ್ನು ಅವನು ಹೊಂದಿರುವ ಅಧಿಕಾರ, ಶಕ್ತಿ ಸಾಮರ್ಥ್ಯ ಹಾಗೂ ಶೌರ್ಯಕ್ಕಾಗಿ ನಾವು ಗೌರವಿಸುತ್ತೇವೆ ಎಂದು ಹೇಳಲು ಶುಕ್ರ ಹಿಂಜರಿಯಲಿಲ್ಲ.

ಒಬ್ಬ ರಾಜನು ಅಭಿಷಿಕ್ತನಾದನಂತರವೇ ಅವನು ಪಾವಿತ್ರ್ಯ ಪಡೆಯುತ್ತಾನೆ ಎಂಬುದು ಐರೋಪ್ಯ ಹಾಗೂ ಕ್ರಿಶ್ಚಿಯನ್ನರ ಸಿದ್ಧಾಂತ. ಇದು ಭಾರತೀಯರ ಕಲ್ಪನೆಯಲ್ಲ. ಪುರೋಹಿತವರ್ಗಕ್ಕೆ ಸೇರಿದ ಪ್ರಾಚೀನ ಕಾಲದ ರಾಜಗಳಲ್ಲಿ ಅಂತಹ ಭಾವನೆ ಬೇರೂರಿತ್ತು. ಪ್ರಾಚೀನ ಕಾಲದಲ್ಲಿದ್ದ ಅಂತಹ ಪದ್ಧತಿಗಳ ಬಗ್ಗೆ ಸರ್. ಜೇಮ್ಸ್ ಫ್ರೇಜರ್ ವಿವರಗಳನ್ನು ನೀಡಿದ್ದಾರೆ. ಚಕ್ರವರ್ತಿಯನ್ನು ದೈವೀಕರಿಸುವ ಪದ್ಧತಿ ಕ್ರಿಶ್ಚಿಯನ್ನರ ಕಾಲಕ್ಕೆ ಮುಂಚಿನ ರೋಮ್‌ನಲ್ಲಿತ್ತು. ಆದರೆ ಇದೇ ರೀತಿಯ ಪದ್ಧತಿ ಭಾರತದಲ್ಲಿರಲಿಲ್ಲ. ಈಜಿಪ್ತ್‌ನಲ್ಲಿದ್ದ ಪದ್ಧತಿಗೆ ಹೋಲುವಂತಹ ಯಾವ ಪದ್ಧತಿಯಾಗಲಿ ಭಾರತದಲ್ಲಿದ್ದ ನಿದರ್ಶನಗಳಿಲ್ಲ, ಭಾರತದಲ್ಲಿ ರಾಜನು ತನಗೆ ಪಡೆಯುತ್ತಿದ್ದ ಕಿರೀಟಧಾರಣ ಮಹೋತ್ಸವದಲ್ಲಿ ಪ್ರಜಾಸೇವೆಗಾಗಿ ತನ್ನನ್ನು ಸಮರ್ಪಿಸಿಕೊಳ್ಳುತ್ತಿದ್ದನು. ಇದು ರಾಜನನ್ನು ವ್ರತಿಯಾಗುವಂತೆ ಮಾಡುತ್ತಿತ್ತು.

ರಾಜರು ರಾಜರ್ಷಿಗಳಾಗಬಹುದೆಂಬುದರಲ್ಲಿ ಸಂದೇಹವಿಲ್ಲ. ಇದರಿಂದ ಅವರಿಗೆ ಯಾವ ಪವಿತ್ರಸ್ಥಾನವೂ ಬರುತ್ತಿರಲಿಲ್ಲ. ಕ್ರಿಶ್ಚಿಯನರ ಪದ್ಧತಿಯಲ್ಲಿ ರಾಜನು ದೇವರಾಗಲು ಸಾಧ್ಯವಿರಲಿಲ್ಲ. ಆದರೆ ರಾಜನು ಚರ್ಚ್‌ನಲ್ಲಿ ಸೂಕ್ತ ಧಾರ್ಮಿಕ ವಿಧಿಗಳಿಗೊಳಗಾದ ಬಳಿಕ ಅವನಿಗೊಂದು ಪಾವಿತ್ರ್ಯ ಬರುತ್ತಿತ್ತು. ಈ ವಿಧಿಯ ನಂತರ ರಾಜನ ಮೇಲೆ ದೈವಾನುಗ್ರಹ ಪೂರ್ಣವಾಗಿ ಆಗಿದೆಯೆಂಬ ಭಾವನೆಯಿತ್ತು. ಪೋಪರಿಗೆ ಮತ್ತು ಸಾಮ್ರಾಜ್ಯಕ್ಕೆ ಅತ್ಯಧಿಕ ಅಧಿಕಾರವಿರಬೇಕೆಂಬ ಬೇಡಿಕೆಯಿತ್ತು. ಆಗ ಚಕ್ರವರ್ತಿಯೇ ಇಡೀ ವಿಶ್ವವನ್ನಾಳುವಂತಹ ದೇವರ ಪ್ರತಿನಿಧಿ ಎಂದು ಬಣ್ಣಿಸಲು ಫ್ರೆಡರಿಕ್ ಹೋಹೆನ್ ಸ್ಟ್ಯಾಫನ್ ಎಂಬಾತ ಹಿಂಜರಿಯಲಿಲ್ಲ.

ಹಿಂದೂಗಳಿಗೆ ಭಾವನೆಯಲ್ಲಿ, ರಾಜನು ಧರ್ಮಸಂರಕ್ಷಣೆಯ ಒಂದು ಬಾಹು. ಬದಲಾಗದ ಕಾನೂನುಗಳ ಸಂಕೇತ. ಸಾಮಾಜಿಕ ಸುವ್ಯವಸ್ಥೆಯನ್ನು ಎತ್ತಿಹಿಡಿಯುವ ರಾಜನು ಸಮಾಜದ ಒಂದು ಪ್ರಮುಖ ಅಂಗ. ಕಾನೂನುಗಳನ್ನು

ಬದಲಾಯಿಸುವ ಹಕ್ಕು ರಾಜನಿಗಿರಲಿಲ್ಲ. ಆದರೆ ಅವನೊಬ್ಬ 'ಯುಗ ಪ್ರವರ್ತಕ'ನೆಂದು ಸಾರಲಾಗಿತ್ತು. 'ಕಾಲಸ್ಯ ಕಾರಣಮ್'. ರಾಜನು ಒಂದು ಯುಗವನ್ನೇ ಸೃಷ್ಟಿಸುತ್ತಾನೆಂಬ ಭಾವನೆ ಹಿಂದೂ ರಾಜಕೀಯ ಚಿಂತನೆಯಲ್ಲಿ ಅಡಗಿರುವ ಒಂದು ಮುಖ್ಯ ಅಂಶ. ಆದ್ದರಿಂದ ಈ ಅಂಶವನ್ನು ಕೂಲಂಕಷವಾಗಿ ಪರಿಶೀಲಿಸುವ ಅಗತ್ಯವಿದೆ.

"ರಾಜನು ಯಾವ ಯಾವ ವಿಧದಲ್ಲಿ ವರ್ತಿಸುತ್ತಾನೆಯೋ ಅಥವಾ ಯವ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾನೆಯೋ ಅದಕ್ಕೆ ಅನುಗುಣವಾಗಿ ಜಗತ್ತಿನಲ್ಲಿ ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗಗಳಾಗುತ್ತವೆ" ಎಂದಿದ್ದಾನೆ ಮನು. ಇತರ ಸ್ಮೃತಿ ಬರಹಗಾರರು ಸಹ, ಇಂತಹುದೇ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಈ ಭಾವನೆಯನ್ನು ನಾರದ ೧೮, ೨೬–೨೩ ಪು. ೨೧೭–೮, *ಗೌತಮ* ೮, ೧–೧೧ ಪು. ೨೧೪–೪ – ಇವರ ಮುಂತಾದವರ ಕೃತಿಗಳಲ್ಲಿ ಅಭಿವ್ಯಕ್ತಪಡಿಸಲಾಗಿದೆ. ರಾಜ ಯುಗವನ್ನು ಸೃಷ್ಟಿಸುತ್ತಾನೋ ಅಥವಾ ಯುಗವೇ ರಾಜನನ್ನು ಸೃಷ್ಟಿಸುತ್ತದೆಯೋ ಎಂಬುದು ಪ್ರಶ್ನೆ. ಆದರೆ, ಇದರಲ್ಲಿ ಸಂದೇಹಕ್ಕೆ ಎಡೆಯೇ ಇಲ್ಲ. ರಾಜನೇ ಯುಗವನ್ನು ಸೃಷ್ಟಿಸುತ್ತಾನೆ ಎಂಬುದು ಸತ್ಯ. "ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾ ಕಾರಣಂ ಇತಿ ತೇ ಸಂಶಯಂ ಮಾ ಭೂತ್ ರಾಜಾ ಕಾಲಸ್ಯ ಕಾರಣಂ" ಎಂದು *ಮಹಾಭಾರತ*ದಲ್ಲಿ ತಿಳಿಸಲಾಗಿದೆ.

ಈ ಭಾವನೆಗೆ ಶುಕ್ರನು ಸರಿಯಾದ ಅರ್ಥವಿವರಣೆ ನೀಡಿದನು. ಪದ್ಧತಿಗಳನ್ನು ಅಥವಾ ಸಂಪ್ರದಾಯಗಳನ್ನು ರಾಜನೇ ಪ್ರಚುರಪಡಿಸುತ್ತಾನೆ. ಆದ್ದರಿಂದ ಅವನೇ ಯುಗದ ಸೃಷ್ಟಿಕರ್ತ ಎಂದು ಶುಕ್ರ ತಿಳಿಸುತ್ತಾನೆ. ಒಂದು ಯುಗದಲ್ಲಾಗುವ ತಪ್ಪುಗಳಿಗೆ ರಾಜ್ಯವಾಗಲಿ ಅಥವಾ ಪ್ರಜೆಗಳಾಗಲಿ ಕಾರಣವಾಗುವುದಿಲ್ಲ. ಆ ತಪ್ಪುಗಳಿಗೆ ರಾಜನೇ ಹೊಣೆಯಾಗಬೇಕು. ಯಾವುದೇ ಒಂದು ಪದ್ಧತಿಗಾಗಲಿ, ವಾಡಿಕೆಗಾಗಲಿ ಮತ್ತು ಆಂದೋಲನಕ್ಕಾಗಲಿ ಚಾಲನೆ ಕೊಡುವವನು ರಾಜನೇ ಆದುದರಿಂದ, ಅವನೇ ಒಂದು ಯುಗದ ಅಥವಾ ಕಾಲದ ಕಾರಣಕರ್ತ ಮತ್ತು ಸೃಷ್ಟಿಕರ್ತ ಎನ್ನುತ್ತಾನೆ ಶುಕ್ರ.

ಹಿಂದೂ ಸಿದ್ಧಾಂತದ ಪ್ರಕಾರ ಸಮಾಜವನ್ನು ರೂಪಿಸುವ ಹೊಣೆಗಾರಿಕೆ ರಾಜನ ಮೇಲಿರುತ್ತದೆ. ಪದ್ಧತಿಗಳನ್ನು ಸರಿಪಡಿಸುವುದು, ಸಂಪ್ರದಾಯಗಳಿಗೆ ಸೂಕ್ತ ಅರ್ಥ ವಿವರಣೆ ನೀಡುವುದು ಮತ್ತು ಸಾಮಾಜಿಕ ಜೀವನದಲ್ಲಿ ಉಂಟಾಗುವ ಭ್ರಷ್ಟತೆಯನ್ನು ಹೋಗಲಾಡಿಸುವುದು – ಇವೆಲ್ಲವೂ ರಾಜನ ಜವಾಬ್ದಾರಿ. ಇವೆಲ್ಲವೂ ಪವಿತ್ರ ಕಾನೂನಿನ ಚೌಕಟ್ಟಿನೊಳಗಿರುವಂತೆ ಸಹ ರಾಜನು ನೋಡಿಕೊಳ್ಳಬೇಕಾಗುತ್ತದೆ. ಅವನು ಕಾನೂನನ್ನೇ ಬದಲಾಯಿಸುವಂತಿಲ್ಲ. ನಮ್ಮ ಅರ್ಥದಲ್ಲಿ ಅವನು ಯಾವ ಶಾಸನವನ್ನೂ ರೂಪಿಸುವ ಹಾಗಿಲ್ಲ. ಆದರೆ ಹಿಂದೂಗಳ ಜಾತ್ಯತೀತ ಕಾನೂನುಗಳ ಕೇವಲ ಸ್ಮೃತಿಗಳ ಮೇಲೆ ಆಧಾರಗೊಂಡಿರಲಿಲ್ಲ. ಅದು ಆಚಾರಗಳು ಮತ್ತು

ಅನುಸರಣೆಗಳ ಮೇಲೂ ಆಧಾರಿತವಾಗಿದ್ದವು. ಈ ಪದ್ಧತಿಗಳು ಮತ್ತು ಸಂಪ್ರದಾಯಗಳನ್ನು ಪರಿಷ್ಕರಿಸುವ, ತಿದ್ದುಪಡಿ ಮಾಡುವ ಅಥವಾ ಕೊನೆಗೊಳಿಸುವ ಹಕ್ಕು ರಾಜನಿಗಿದೆ. ಈ ಪದ್ಧತಿಗಳು ಕಾಲದ ಪರಿಸ್ಥಿತಿಗೆ ಅನುಗುಣವಾಗಿಲ್ಲ ಅಥವಾ ಅದಕ್ಕೆ ವಿರುದ್ಧವಾಗಿದೆಯೆಂದು ಕಂಡುಬಂದರೆ, ರಾಜನು ಆ ಹಕ್ಕನ್ನು ಚಲಾಯಿಸ ಬಹುದು. ಈ ರೂಢಿಗಳು ಮತ್ತು ಪದ್ಧತಿಗಳು ಕಾಲಸ್ಥಿತಿಗೆ ಅನುಗುಣವಾಗಿಲ್ಲವೆಂದು ಪ್ರಬುದ್ಧತೆ ಪಡೆದ ಕೆಲವು ವ್ಯಕ್ತಿಗಳು ಅಭಿಪ್ರಾಯಪಟ್ಟಲ್ಲಿ, ರಾಜನು ತನಗಿರುವ ನೇರ ಅಧಿಕಾರದಿಂದ ಅವನ್ನು ರದ್ದುಪಡಿಸಬಹುದು.

ಅವಶ್ಯವೆನಿಸಿದಾಗಲೆಲ್ಲಾ ಸಾಮಾಜಿಕ ಪದ್ಧತಿಗಳು ಮತ್ತು ಸಂಪ್ರದಾಯಗಳನ್ನು ನಿರಂತರವಾಗಿ ಪರಿಷ್ಕರಿಸುತ್ತಾ ಹೋಗುವ ಮೂಲಕ ರಾಜನು ಹೊಸ ಯುಗವನ್ನು ಆರಂಭಿಸುವ ಪ್ರಯತ್ನ ನಡೆಸುತ್ತಿದ್ದನೆಂದು ಹೇಳಬಹುದು. ರಾಜನು ಹೇಗೆ ವರ್ತಿಸುತ್ತಾನೆಯೋ ಅದರ ಪರಿಣಾಮ ಸ್ವರೂಪವೇ 'ಯುಗಗಳು' ಎಂಬ ಅರ್ಥವನ್ನು ಮನು ನೀಡಿದ್ದಾನೆ. ಹಿಂದೂಗಳ ಭಾವನೆಯಲ್ಲಿ ಯುಗಗಳೆಂದರೆ ಕಾಲಾನುಕ್ರಮದ ವಿಭಜನೆ ಎಂಬ ಅರ್ಥವಿದೆ. ಆದರೂ ಕಾಲದಲ್ಲಿ ಯಾವ ಪ್ರವೃತ್ತಿ ಪ್ರಬಲವಾಗಿರುತ್ತದೆಯೋ ಅದರ ಆಧಾರದ ಮೇಲೆ ಯುಗಗಳ ವಿಭಜನೆಯಾಗುತ್ತದೆ. ಇತಿಹಾಸವನ್ನು ಹೇಗೆ ಕತ್ತಲ ಯುಗ, ಜ್ಞಾನಯುಗ, ಉದಾರವಾದದ ಯುಗ, ವಿವೇಚನಾ ಯುಗ ಇತ್ಯಾದಿ ವಿಭಜಿಸಲಾಗುವುದೋ ಅದೇ ರೀತಿ ಇದರ ವಿಭಜನೆಯಾಗುತ್ತದೆ ಎನ್ನಬಹುದು. ಮಹಾಭಾರತದಲ್ಲಿ ಇದರ ಮಹತ್ವವನ್ನು ಅತ್ಯಂತ ಸರಿಯಾದ ರೀತಿಯಲ್ಲಿ ತಿಳಿಸಲಾಗಿದೆ. ಒಬ್ಬ ರಾಜನು ಕಲಿಯುಗದವನು ಎಂದಾಗ, ಅವನು ಅನ್ಯಾಯದ ಮತ್ತು ಅಧರ್ಮದ ಯುಗಕ್ಕೆ ಸೇರಿದವನೆಂದು ಪರಿಗಣಿಸಬೇಕಾಗುತ್ತದೆ. ಈ ಯುಗದ ಪ್ರಭಾವ ರಾಜನ ಆದರ್ಶಗಳು ಮತ್ತು ಧೋರಣೆಗಳ ಮೇಲೆ ಅವಲಂಬಿವಾಗಿರುತ್ತದೆ. ಈ ಸಂಬಂಧದಲ್ಲಿ ಭೀಷ್ಮನು ಸ್ವಲ್ಪವೂ ಸಂದೇಹಕ್ಕೆ ಎಡೆ ಇಲ್ಲದಂತೆ ಅರ್ಥವಿವರಣೆ ನೀಡಿದ್ದಾನೆ. ಅವನು ಸ್ಪಷ್ಟವಾಗಿ ಹೀಗೆ ತಿಳಿಸಿದ್ದಾನೆ. "ಓಹ್ ನಾಯಕನೇ, ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗಗಳೆಲ್ಲವೂ ರಾಜನಿಗೆ ಸಂಬಂಧಪಟ್ಟ ವಿಷಯಗಳು. ನಿಜವಾಗಿ ಹೇಳುವುದಾದರೆ, ರಾಜನೇ ಯುಗದ ಸಂಕೇತ."

ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚ ಭರತರ್ಷಭ
ರಾಜವೃತ್ತಾನಿ ಸರ್ವಾಣಿ ರಾಜಾ ಕಾಲಸ್ಯ ಕಾರಣಂ

ರಾಜರುಗಳು ಯುಗದ ಸೃಷ್ಟಿಕರ್ತರೆಂಬ ಈ ಸಿದ್ಧಾಂತ, ಹಿಂದೂ ರಾಜರುಗಳಿಗೆ ಒಂದು ಕ್ರಿಯಾತ್ಮಕ ಶಕ್ತಿಯನ್ನು ನೀಡಿತು. ಇಂತಹ ಸಾಮರ್ಥ್ಯ ಅವರಿಗೆ ಬಂದಿದ್ದರಿಂದಲೇ ಭಾರಶಿವರು, ವಾಕಾಟಕರು ಮತ್ತು ಗುಪ್ತರಂತಹ

ಐತಿಹಾಸಿಕ ರಾಜವಂಶಗಳಿಗೆ, ಕುಶಾನರ ಮತ್ತು ಶಕರ ಅತಿಕ್ರಮಣದ ನಂತರ, ಹಿಂದೂಧರ್ಮದ ಪುನರುತ್ಥಾನ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಯಿತು. ಇದು ದಖ್ಖಣದಲ್ಲಿ ರಾಷ್ಟ್ರಜೀವನವನ್ನು ಪುನರ್ವ್ಯವಸ್ಥೆಗೊಳಿಸಲು, ವಿಜಯನಗರದ ರಾಜವಂಶಗಳಿಗೆ ಮತ್ತು ಹಿಂದೂಧರ್ಮದ ಪುನರುತ್ಥಾನಕ್ಕಾಗಿ ಮರಾಠರಿಗೆ ಪ್ರೇರಣೆ ನೀಡಿತು. ವಿಜಯನಗರದ ರಾಜವಂಶ ಮತ್ತು ಮರಾಠ ರಾಜ್ಯ ಈ ಕಾರ್ಯಗಳಲ್ಲಿ ಕೈಹಾಕಿದಾಗ ಐತಿಹಾಸಿಕ ಸ್ಥಿತಿಗತಿಗಳು ಅಷ್ಟೊಂದು ಅನುಕೂಲಕರವಾಗಿರಲಿಲ್ಲ. ಹಿಂದೂ ಸಮಾಜದ ಪುನರುದ್ಧಾರಕ್ಕಾಗಿ ವ್ಯಾಪಕವಾದ ಕ್ರಮಗಳನ್ನು ಕೈಗೊಳ್ಳಲು ಅವಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ತಮ್ಮ ಮೂಲಕ್ಕೆ ಕಾರಣವಾದ ಪರಿಸ್ಥಿತಿಗಳನ್ನು ಮರೆಯಲು ಅವಕ್ಕೆ ಯಾವಾಗಲೂ ಸಾಧ್ಯವಾಗಲಿಲ್ಲ.

ರಾಜರು ಯುಗದ ಸೃಷ್ಟಿಕರ್ತರೆಂಬ ವಿಚಾರ ಬರಿ ಒಂದು ಸಿದ್ಧಾಂತ ವಾಗಿರಲಿಲ್ಲ. ಹಿಂದೂ ರಾಜರು ಅದನ್ನು ಒಂದು ತತ್ತ್ವವನ್ನಾಗಿ ಇಟ್ಟುಕೊಂಡು, ಆ ಗುರಿಯನ್ನು ಅನುಸರಿಸುತ್ತಿದ್ದರು. ಇದು, ರಾಜನ ಕರ್ತವ್ಯಗಳಲ್ಲೊಂದೆಂದು ಸಹ ಅವರು ಪರಿಗಣಿಸಿದ್ದರು. ಪ್ರಖ್ಯಾತ ರಾಜರುಗಳ ಇತಿಹಾಸವನ್ನು ಗಮನಿಸಿದಾಗ ಯುಗದ ನಿರ್ಮಾಣ ಅವರ ಧ್ಯೇಯಗಳಲ್ಲಿ ಒಂದಾಗಿರುತ್ತಿತ್ತು. ರಾಜತರಂಗಿಣಿಯ ಆರನೆಯ ತರಂಗದಲ್ಲಿ ಹೀಗೆ ತಿಳಿಸಲಾಗಿದೆ: "ಇದು ಮತ್ತಿರರ ಎಲ್ಲ ಸಂಗತಿಗಳನ್ನು ವಿವರವಾಗಿ ಪರಿಶೀಲಿಸಿ, ನ್ಯಾಯ ಮತ್ತು ಅನ್ಯಾಯಗಳ ನಡುವಣ ವ್ಯತ್ಯಾಸವನ್ನು ಯಾರು ಚೆನ್ನಾಗಿ ಅರಿಯಬಲ್ಲರೋ ಅವರು ಕೃತಯುಗಕ್ಕೆ ಒಯ್ಯಬಲ್ಲರು."

ಇಂಡೋ–ಚೀನಾದ ಶಿಲಾಶಾಸನಗಳಲ್ಲಿ ಕೂಡ ರಾಜರುಗಳು ಒಂದು ಬೇರೆ ಯುಗವನ್ನೇ ಆರಂಭಿಸಿದ ವಿಷಯಗಳ ಪ್ರಸ್ತಾಪವಿದೆ. ಆದ್ದರಿಂದ ರಾಜರಿಂದ ಹೊಸ ಯುಗಗಳು ನಿರ್ಮಾಣವಾಗುವುದು ಒಂದು ಸರ್ವಸಾಮಾನ್ಯವಾದ ವಿಷಯವೆಂಬುದನ್ನು ನಾವು ಅರಿಯಬಹುದು. ವಿಜಯನಗರ ಚಕ್ರವರ್ತಿಗಳ ಕಾಲದಲ್ಲಿ ಹೀಗೆ ಘೋಷಿಸಲಾಯಿತು: "ವರ್ಣಾಶ್ರಮವನ್ನು ಕಾಪಾಡಿ ಅದರ ನಾಲ್ಕು ಪಾದಗಳ (ನಾಲ್ಕು ಜಾತಿಗಳು) ಆಧಾರದ ಮೇಲೆ ಧರ್ಮವನ್ನು ಸ್ಥಾಪಿಸುವರೋ ಅವರು, ಯುಗವನ್ನು ಕಲಿಯುಗದಿಂದ ಕೃತಯುಗಕ್ಕೆ ಬದಲಾಯಿಸಿದಂತಾಗುತ್ತದೆ. ಅವರೇ ಹೊಸಯುಗದ ನಿರ್ಮಾಪಕರು ಎನಿಸಿಕೊಳ್ಳುತ್ತಾರೆ."

ವರ್ಣಾಶ್ರಮಾಣಾಂ ಅವನಕ್ರಮೇಣ
ಧರ್ಮಂ ಸ್ಥಿರೀಕೃತ್ಯ ಪದೈಶ್ಚತುರ್ಭಿಃ
ಕಲಿಂ ಪುನರ್ಯೈಃ ಕೃತವದ್ಭಿಃ ಉರ್ವ್ಯಾಂ
ಕಾಲಸ್ಯ ಕರ್ತಾ ನೃಪ ಇತ್ಯದರ್ಶಿ॥

ಶುಕ್ರ ಇದೇ ಭಾವನೆಯ ಅರ್ಥವನ್ನು ಹೀಗೆ ವಿವರಿಸಿದ್ದಾನೆ: "ಕಾಲವನ್ನು ಅನೇಕ ಅವಧಿಗಳನ್ನಾಗಿ ವಿಭಜಿಸಲಾಗಿದೆ. ಈ ವಿಭಜನೆ ಮೊದಲನೆಯದಾಗಿ, ಗ್ರಹಗಳ ಚಲನವಲನಗಳು, ಅವುಗಳ ಆಕಾರ ಮತ್ತು ಸ್ವಭಾವಕ್ಕೆ ಅನುಗುಣವಾಗಿರುತ್ತದೆ. ಎರಡನೆಯದಾಗಿ, ಜನರು ಸತ್ಕಾರ್ಯಗಳನ್ನು ಮಾಡುವರೋ ಅಥವಾ ಘಾತವನ್ನುಂಟುಮಾಡುವ ದುಷ್ಕಾರ್ಯಗಳನ್ನು ಮಾಡುವರೋ ಇಲ್ಲವೇ ದೊಡ್ಡ ಕೆಲಸಗಳನ್ನು ಮಾಡುವರೋ ಅಥವಾ ಸಣ್ಣ ಕೆಲಸಗಳನ್ನು ಮಾಡುವರೋ ಎಂಬುದರ ಮೇಲೆ ವಿಭಜನೆ ಆಧಾರಿತವಾಗಿರುತ್ತದೆ. ರಾಜ್ಯದಲ್ಲಿ ಅನುಸರಿಸಲಾಗುತ್ತಿರುವ ಪದ್ಧತಿಗಳು, ರೂಢಿಗಳು ಮತ್ತು ಆಂದೋಲನ ಇವುಗಳ ದೃಷ್ಟಿಯಿಂದ ನೋಡಿದಾಗ ರಾಜನೇ ಇಂತಹ ಪರಿಸ್ಥಿತಿಯೊಂದರ ನಿರ್ಮಾಣಕ್ಕೆ ಕಾರಣಕರ್ತನಾಗುತ್ತಾನೆ. ರಾಜನ ಗುಣಹೀನತೆ ಮತ್ತು ಭ್ರಷ್ಟತೆಯೇ ಇದಕ್ಕೆ ಕಾರಣವಾಗಿರುತ್ತದೆ."

ಭಾರತೀಯ ಚಿಂತನೆಯಲ್ಲಿ ರಾಜನಿಗೆ ದ್ವಿಮುಖ ಸಾಮರ್ಥ್ಯವಿರುತ್ತದೆ. ಅವನು ಧರ್ಮಸಂರಕ್ಷಕ ಮತ್ತು ಧರ್ಮವನ್ನು ಎತ್ತಿಹಿಡಿಯುವವನು. ರಾಜನು ಸಾಮಾಜಿಕ ಪರಂಪರೆಯನ್ನು ಕಾಪಾಡುತ್ತಾನೆ. ಅವನು ಸಂಪ್ರದಾಯಗಳ ಪರಿವರ್ತಕನೂ ಹೌದು. ಸಂಪ್ರದಾಯಗಳ ದುರುಪಯೋಗವನ್ನು ತಡೆಯುವ ಕಾರ್ಯವನ್ನು ರಾಜನಿಗೆ ವಹಿಸಲಾಗಿರುತ್ತದೆ. ಸಮಾಜದಲ್ಲಿ ತಲೆದೋರುವ ಅಹಿತಕರ ಪ್ರವೃತ್ತಿಯನ್ನು ತಡೆಯುವುದು ಮತ್ತು ಅದನ್ನು ಸರಿಪಡಿಸುವುದು ರಾಜನ ಕರ್ತವ್ಯವಾಗಿರುತ್ತದೆ. ಅವನು ಕಾಲಕ್ಕೆ ತಕ್ಕಂತೆ ಸಮಾಜವನ್ನು ರೂಪಿಸುತ್ತಾನೆ. ಹಿಂದೂ ಪುನರುತ್ಥಾನದ ಪ್ರತಿ ಯುಗದಲ್ಲೂ ಸಮಾಜದಲ್ಲಿರುವ ಉತ್ತಮ ಅಂಶಗಳ ಸಂರಕ್ಷಣೆಗೆ ಮತ್ತು ನೂತನ ಸ್ವರೂಪದ ಪದ್ಧತಿಗಳನ್ನು ರೂಢಿಗೆ ತರುವುದಕ್ಕೆ ಮಹತ್ವ ಕೊಡಲಾಗಿದೆ.

ಹೊಸ ಪದ್ಧತಿಗಳನ್ನು ರೂಢಿಗೆ ತರುವುದು ನಿಜಕ್ಕೂ ತುಂಬ ಮಹತ್ವ ಪಡೆದಿರುವ ಅಂಶವಾಗಿದೆ. ಯುಗದಲ್ಲಿ ಕಂಡುಬರುವ ದುಷ್ಕೃತ್ಯಗಳಿಗೆ, ಕೆಟ್ಟ ಮತ್ತು ಸಮಾಜವಿರೋಧಿ ಪದ್ಧತಿಗಳಿಗೆ ಮತ್ತು ರಾಷ್ಟ್ರದ ಅವನತಿ ಮತ್ತು ಶಿಥಿಲತೆಗೆ ರಾಜನನ್ನೇ ಹೊಣೆಗಾರನನ್ನಾಗಿ ಮಾಡಲಾಗುವುದು. ಜನರನ್ನು ಸಂರಕ್ಷಿಸುವುದಷ್ಟೇ ಅಲ್ಲದೆ, ಅವರಿಗೆ ನ್ಯಾಯ ದೊರಕಿಸಿ, ಅವರಿಗೆ ಆರ್ಥಿಕ ಏಳಿಗೆ ಉಂಟಾಗುವಂತೆ ಮಾಡುವುದೇ ರಾಜನ ಪ್ರಪ್ರಥಮ ಕರ್ತವ್ಯವಾಗಿರುತ್ತದೆ. ಸಾಮಾಜಿಕ ಅಭಿವೃದ್ಧಿಯಲ್ಲಿ ಕಂಡುಬರುವ ದುಷ್ಪ್ರವೃತ್ತಿಗಳನ್ನು ತಡೆಗಟ್ಟಿ ಮತ್ತು ಅವನ್ನು ಸರಿಪಡಿಸುವುದು ರಾಜನ ಜವಾಬ್ದಾರಿ. ಜನರು ನೀತಿವಂತರಾಗಿ ಬಾಳುವಂತೆ ನೋಡಿಕೊಳ್ಳುವುದು ಸಹ ರಾಜನ ಕರ್ತವ್ಯ. ರಾಜನು ಯುಗದ ನಿರ್ಮಾತೃವಷ್ಟೇ ಅಲ್ಲ, ಅವನು ಧರ್ಮಸಂರಕ್ಷಕನಾಗಿಯೂ ಅಷ್ಟೇ ಮಹತ್ವದ ಪಾತ್ರ ಹೊಂದಿರುತ್ತಾನೆ.

* * * *

ಅನುಬಂಧ

ಹಿಂದೂ ರಾಜಕೀಯ ಸಿದ್ಧಾಂತಗಳ ಇತಿಹಾಸದ ಬಗ್ಗೆ ಶ್ರೀ ಉಪೇಂದ್ರ ಘೋಷಲ್ ಬರೆದಿರುವ ಒಂದು ಅತ್ಯುತ್ತಮ ಪುಸ್ತಕದಲ್ಲಿ ಹಿಂದೂಗಳು ರಾಜನನ್ನು ದೈವಸ್ವರೂಪವೆಂದು ಪರಿಗಣಿಸುತ್ತಿದ್ದುದನ್ನು ಪ್ರಸ್ತಾಪಿಸಿದ್ದಾರೆ. ಯಜ್ಞದಲ್ಲಿ ದೇವರಿಗೆ ಆಹುತಿಯನ್ನು ಅರ್ಪಿಸುತ್ತಿದ್ದ ಸಮಯದಲ್ಲಿ ರಾಜನನ್ನೇ ದೇವರ ಸಮಾನವೆಂದು ಜನ ಭಾವಿಸುತ್ತಿದ್ದರು. ಇದಕ್ಕೆ ಸಂಬಂಧಿಸಿದಂತೆ ಅವರು ಋಗ್ವೇದದ ಕೆಲವು ಶ್ಲೋಕಗಳನ್ನು ಪತ್ತೆ ಹಚ್ಚಿದ್ದಾರೆ. (ಪು. ೨೭, ೨೮, ೨೯) ಶತಪಥ ಬ್ರಾಹ್ಮಣದಲ್ಲಿ ವಾಜಪೇಯ ಮತ್ತು ರಾಜಸೂಯದ ಬಗ್ಗೆ ಹಲವಾರು ಸಂಗತಿಗಳನ್ನು ಹೊರಗೆಡಹಲಾಗಿದೆಯೆಂದು ಅವರು ತಿಳಿಸಿದ್ದಾರೆ. ಯಾಗ–ಯಜ್ಞಗಳಲ್ಲಿ ಆಹುತಿಯನ್ನರ್ಪಿಸುವ ರಾಜನನ್ನು ಇಂದ್ರನಿಗೆ ಸಮಾನವಾಗಿ ಕಾಣಲಾಗುತ್ತಿತ್ತೆಂದು ಅದರಲ್ಲಿ ತಿಳಿಸಲಾಗಿದೆ. ಈ ಯಜ್ಞ–ಯಾಗಗಳು ಒಳಗೊಂಡಿರುವ ಎರಡು ಧಾರ್ಮಿಕ ವಿಧಿಗಳನ್ನು ಆಹುತಿ ಅರ್ಪಿಸುವಾತನನ್ನು ಪ್ರಜಾಪತಿಯೆಂದು ಪರಿಗಣಿಸಲಾಗುತ್ತದೆ. ಹಿಂದೂಗಳ ಎಲ್ಲ ಪೂಜಾವಿಧಿಗಳು ತಾದಾತ್ಮ್ಯ ಭಾವನೆಯ ಮೇಲೆ ಆಧಾರಿತವಾಗಿವೆ. ಮಾನಸಿಕವಾಗಿ, ಆರಾಧಕನನ್ನು ಆರಾಧಿಸಲ್ಪಡುವ ದೇವರೊಳಗೆ ವಿಲೀನಗೊಳಿಸುವುದನ್ನು ತಾದಾತ್ಮ್ಯ ಭಾವ ಎನ್ನಲಾಗುತ್ತದೆ. ಹಿಂದೂ ಧರ್ಮದಲ್ಲಿ ಒಬ್ಬರು, ದೇವರೊಳಗೆ ಐಕ್ಯ ಹೊಂದುವಂತಹ ಕಲ್ಪನೆಯನ್ನು ಭಾವೈಕ್ಯ ಎಂದು ಕರೆಯಲಾಗುತ್ತದೆ. ಇದು ಹಿಂದೂಗಳ ಪೂಜಾಪದ್ಧತಿಯಲ್ಲಿ ಅಡಗಿರುವ ಒಂದು ವಿಶಾಲ ತತ್ತ್ವ. ಈ ತತ್ತ್ವವು ತತ್ತ್ವಮಸಿಯ ಮಹಾವಾಕ್ಯದಲ್ಲಿ ಒಳಗೊಂಡಿದೆ. ಆರಾಧಕರು ಪ್ರತಿದಿನ ವಿವಿಧ ಮಂತ್ರಗಳ ಮೂಲಕ ಈ ಭಾವನೆಯನ್ನು ಆಚರಣೆಗೆ ತಂದುಕೊಳ್ಳುತ್ತಾರೆ. ಈ ಆಚರಣೆಯ ಮೂಲಕ ಪ್ರತಿಯೊಬ್ಬರು ದೈವತ್ವ ಹೊಂದುತ್ತಾರೆಂದು ಹೇಳುವುದು ತರ್ಕಬದ್ಧವಲ್ಲ. ರಾಜನೊಬ್ಬನು ರಾಜಸೂಯದ ಮೂಲಕ ಇಂದ್ರನ ಶಕ್ತಿ ಮತ್ತು ಅವನ ಗುಣಧರ್ಮವನ್ನು ಪಡೆಯಬಯಸುತ್ತಾನೆ. ಇಂದ್ರನು ಸಂರಕ್ಷಣಾಕಾರ್ಯ ಮಾಡುವುದರಿಂದ, ತಾನೂ ಅವನಂತೆಯೇ ಆಗಬೇಕೆಂಬುದು ರಾಜನ ಇಚ್ಛೆ. ಆದ್ದರಿಂದ ರಾಜನು ತಾದಾತ್ಮ್ಯ ಭಾವವನ್ನು ಹೊಂದಿ, ತಾನೇ ಇಂದ್ರನೆಂದು ಹೇಳಿಕೊಳ್ಳುತ್ತಾನೆ. ಶ್ರೀ ಘೋಷಲ್ ಈ ವಾದವನ್ನು ಒಪ್ಪುವುದಿಲ್ಲ. ಈ ವಾದ ಸರಿಯಲ್ಲವೆಂಬುದನ್ನು ರುಜುವಾತುಪಡಿಸಲು ಅವರು

ತಮ್ಮದೇ ಆದ ವಾದಸರಣಿಯನ್ನು ಮುಂದಿಟ್ಟಿದ್ದಾರೆ. 'ಶತಪಥ ಬ್ರಾಹ್ಮಣ'ದಲ್ಲಿ ಬ್ರಾಹ್ಮಣ ಮತ್ತು ರಾಜನ್ಯ(ಕ್ಷತ್ರಿಯ)ವನ್ನು ಬೃಹಸ್ಪತಿ ಮತ್ತು ಇಂದ್ರನಿಗೆ ಸಮೀಕರಿಸಲಾಗಿದೆ. ಆದ್ದರಿಂದ ಅವರಿಬ್ಬರಲ್ಲೂ ಬ್ರಹ್ಮ ಮತ್ತು ಕ್ಷಾತ್ರ ತೇಜಸ್ಸುಗಳಿರುತ್ತವೆ ಎಂದು ತಿಳಿಸಲಾಗಿದೆ. ರಾಜನು ಪ್ರಜೆಗಳ ಮೇಲೆ ಆಳ್ವಿಕೆ ನಡೆಸುವ ವರ್ಗಕ್ಕೆ ಸೇರಿದ್ದಾನೆ. ಆದ್ದರಿಂದ ಅವನು ಆಳ್ವಿಕೆಯನ್ನೂ ನಡೆಸುತ್ತಾನೆ, ಯಜ್ಞಯಾಗಾದಿಗಳಲ್ಲೂ ಭಾಗವಹಿಸುತ್ತಾನೆ. ಆದ್ದರಿಂದ ಅವರಿಗೆ ಎರಡು ಬಗೆಯ ಸಾಮರ್ಥ್ಯವಿದೆ ಎನ್ನುವಂತೆ ಕಾಣುತ್ತದೆ.[೫] ಈ ವಾದದಲ್ಲಿ ಹುರುಳಿಲ್ಲ. ರಾಜನಲ್ಲಿ ದೈವತ್ವ ಇರುವುದು, ಅವನು ರಾಜನಾಗಿರುವುದರಿಂದಲ್ಲ. ಅವನು ಕ್ಷತ್ರಿಯನಾಗಿರುವುದರಿಂದ. ಆದ್ದರಿಂದ ಅವನಲ್ಲಿ ದೈವತ್ವವಿದೆಯೆಂದು ಹೇಳುವುದಕ್ಕೂ ಅವನು ರಾಜನಾಗಿರುವುದಕ್ಕೂ ಸಂಬಂಧವಿಲ್ಲ. ಘೋಷಲ್ ಅವರ ಪ್ರಕಾರ, ದೈವತ್ವವಿರುವುದು ಕ್ಷತ್ರಿಯ ಜಾತಿಗೆ ಹೊರತು ರಾಜನಿಗಲ್ಲ.

ಅದೇ *ಶತಪಥಬ್ರಾಹ್ಮಣ*ದಲ್ಲಿ, ಯಜ್ಞಯಾಗಾದಿಗಳಲ್ಲಿ, ಯಾರಿಗಾಗಿ ಆಹುತಿಯನ್ನು ಅರ್ಪಿಸಲಾಗುವುದೋ ಅವನೇ ದೇವರು ಎಂಬುದನ್ನು ಒತ್ತಿ ಹೇಳಲಾಗಿದೆ. ಅದರಲ್ಲಿ ಈ ಅಂಶಗಳನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

"ರಾಜನು, ನಿಜವಾಗಿ ಪವಿತ್ರ ಕಾನೂನುಗಳನ್ನು ಎತ್ತಿ ಹಿಡಿಯುತ್ತಾನೆ. ಕಾನೂನುಗಳನ್ನು ಪಾಲಿಸುತ್ತಾನೆ. ಮಾತು ಮತ್ತು ಕೃತಿ ಎಲ್ಲವನ್ನೂ– ಸಕಲ ಸರ್ವಸ್ವವನ್ನು ಅರಿಯುವ ಸಾಮರ್ಥ್ಯ ಅವನಿಗಿಲ್ಲ. ರಾಜನು ನಿಜವಾಗಿಯೂ ದೇವರಲ್ಲ. ಅವನು ಖಂಡಿತ ಧರ್ಮದ ಕಟ್ಟುಪಾಡಿಗೊಳಪಟ್ಟಿರುತ್ತಾನೆ. ಪವಿತ್ರ ಕಾನೂನುಗಳು ಅವನ ಅಧಿಕಾರವನ್ನು ಪರಿಮಿತಗೊಳಿಸಿವೆ.

ಗುಪ್ತವಂಶದ ಚಕ್ರವರ್ತಿಗಳು ತಮ್ಮಲ್ಲಿ ದೈವಿಕ ಗುಣಗಳಿವೆಯೆಂದು ಹೇಳಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ತಾವೇ ಸರ್ವೋಚ್ಚ ಸ್ಥಾನದಲ್ಲಿರುವ ದೇವರು ಎಂದು ಕೂಡ ಅಂದುಕೊಳ್ಳುತ್ತಿದ್ದರು ಎಂದು ಡಾ. ಭಂಡಾರ್‌ಕರ್ ತಿಳಿಸಿದ್ದಾರೆ. ಹೆಸರಾಂತ ವಿದ್ವಾಂಸರೊಬ್ಬರಿಂದ ಬಂದಿರುವ ಈ ಅಭಿಪ್ರಾಯ ಪರಿಶೀಲನಾ ಯೋಗ್ಯವಾಗಿರುತ್ತದೆ. ಈ ಪ್ರೊಫೆಸರ್ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ನೀಡಿದ ಮನೀಂದ್ರ ಚಂದ್ರನಂದಿ ಉಪನ್ಯಾಸಗಳಲ್ಲಿ ಹೀಗೆ ತಿಳಿಸಿದ್ದಾರೆ: "ಗುಪ್ತವಂಶದ ರಾಜರುಗಳನ್ನು ದೇವರೆಂಬ ಸರ್ವೋಚ್ಚ ಸ್ಥಾನಕ್ಕೆ ಏರಿಸಿ, ಅವರಿಗೆ ಎಲ್ಲ ಗೌರವ– ಘನತೆಗಳನ್ನು ತೋರಿಸಲಾಗುತ್ತಿತ್ತು. ದಾಮೋದರಪುರದಲ್ಲಿರುವ ತಾಮ್ರಫಲಕಗಳಲ್ಲಿ ಕುಮಾರ ಗುಪ್ತ ಮತ್ತು ಬುಧ ಗುಪ್ತ ಪರಮದೈವತ ಎಂಬ ಬಿರುದು ಪಡೆದಿದ್ದರು. ಪರಮದೈವತ ಎನ್ನುವುದು ಸರ್ವೋನ್ನತ ದೇವರನ್ನು ಮಾತ್ರ ಸೂಚಿಸುತ್ತದೆ. ಅವರಿಬ್ಬರೂ ತಮ್ಮನ್ನು ಸರ್ವೋನ್ನತ ದೇವರಿಗೆ ಹೋಲಿಸಿಕೊಂಡು, ತಾವೇ ಆ ಸರ್ವೋಚ್ಚ ದೇವರೆಂದು ಕರೆದುಕೊಳ್ಳುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಪ್ರೊಫೆಸರ್

ಭಂಡಾರ್‌ಕರ್ ಒಂದು ಟಿಪ್ಪಣಿಯಲ್ಲಿ ಹೀಗೆ ತಿಳಿಸಿದಾರೆ.[೬] ದಾಮೋದರ್‌ಪುರ್ ಫಲಕಗಳಲ್ಲಿ ಪರಮದೈವತ ಎಂದಿದ್ದರೆ, ಅನಂತರದ ಫಲಕಗಳಲ್ಲಿ ಪರಮೇಶ್ವರ ಎಂಬ ಶಬ್ದವಿದೆ. ಪರಮೇಶ್ವರ ಎಂಬ ಶಬ್ದ ಸಹ ಸರ್ವೋನ್ನತವಾದ ಪರಮ ದೈವತ ಎಂಬ ಅರ್ಥವನ್ನೇ ಸೂಚಿಸುತ್ತದೆ.

ಯಾವುದೇ ರೀತಿಯಲ್ಲಾಗಲಿ ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಪರಮೇಶ್ವರ ಮತ್ತು ಪರಮದೈವತ ಎಂಬ ಹೆಸರುಗಳನ್ನು ಸೇರಿಸಿಕೊಂಡ ಮಾತ್ರಕ್ಕೆ, ರಾಜರು ದೇವರಾಗಿಬಿಡುವುದಿಲ್ಲ. ಯಾವ ದೃಷ್ಟಿಯಲ್ಲೂ, ಈ ಬಿರುದುಗಳಿಂದ ಅವರಿಗೆ ದೈವತ್ವ ಬರುವುದಿಲ್ಲ. ಈಶ್ವರ ಎಂಬ ಹೆಸರಿನ ಮಟ್ಟಿಗೆ ಹೇಳುವುದಾದರೆ, ಸಾಮಾನ್ಯವಾಗಿ ಅದು ದೇವರನ್ನು ಸೂಚಿಸುತ್ತದೆ. ಈಶ್ವರನೆಂಬ ಹೆಸರು ಬಹುತೇಕ ಹೆಸರುಗಳ ಜೊತೆಗೆ ಸೇರಿಕೊಂಡಿರುವುದನ್ನು ನಾವು ಗಮನಿಸಬಹುದು. ನಿಷಾದೇಶ್ವರ, ಕೋಸಲೇಶ್ವರ ಮುಂತಾದ ಹೆಸರುಗಳ ಕೊನೆಗೆ ಈಶ್ವರ ಎಂಬ ಶಬ್ದ ಸಾಮಾನ್ಯವಾಗಿ ಸೇರಿಕೊಂಡಿರುತ್ತದೆ. ಕೋಸಲೇಶ್ವರ ಎಂದರೆ ಕೋಸಲ ನಾಡಿನ ದೇವರು ಎಂದು ಅರ್ಥೈಸುವುದು ಸರಿಯಲ್ಲ. ಅದು ಆ ರಾಜ್ಯದ, ರಾಜನ ಹೆಸರೆಂದಷ್ಟೇ ತಿಳಿಯಬೇಕು. ಅನಂತರ ಸಣ್ಣ ಮತ್ತು ದೊಡ್ಡ ರಾಜರುಗಳು ಪರಮೇಶ್ವರ ಎಂಬ ಹೆಸರಿಟ್ಟುಕೊಳ್ಳುತ್ತಿದ್ದರು. ಆದರೆ ತಾವೇ ದೇವರು ಎಂಬ ಭಾವನೆಯಿಂದ ಆ ಹೆಸರನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಗುಪ್ತವಂಶದ ಚಕ್ರವರ್ತಿಗಳ ಮಟ್ಟಿಗೆ ಹೇಳುವುದಾದರೆ, ಅವರು ವಿಷ್ಣುವಿನ ಪರಮ ಭಕ್ತರಾಗಿ, ಅವನನ್ನು ಪೂಜಿಸುತ್ತಿದ್ದರು. ಆರಾಧಿಸುತ್ತಿದ್ದರು. ಗುಪ್ತ ಸಾಮ್ರಾಜ್ಯದ ಚಕ್ರವರ್ತಿಗಳು ತಾವೇ ದೇವರೆಂದು ಹೇಳಿಕೊಳ್ಳುತ್ತಿದ್ದುದಕ್ಕೆ ಇತಿಹಾಸದಕಾಲದ ಸಾಹಿತ್ಯಗಳಲ್ಲಾಗಲಿ ಅಥವಾ ಪುರಾಣಗಳಲ್ಲಾಗಲಿ ಯಾವ ಸಾಕ್ಷ್ಯಾಧಾರವೂ ಇಲ್ಲ. ಕಾಳಿದಾಸನು ಗುಪ್ತರ ಯುಗದಲ್ಲಿದ್ದವನೆಂದು ಅನೇಕ ಜನರು ಹೇಳುತ್ತಾರೆ. ಕಾಳಿದಾಸನು, ರಾಜರುಗಳನ್ನು ದೇವರೆಂಬ ಭಾವನೆಯಿಂದ ಗೌರವಿಸಿದವನಲ್ಲ. ಅವನು ಇಕ್ಷ್ವಾಕು ವಂಶದ ರಾಜನ ಗುಣಾತಿಶಯಗಳನ್ನು ವರ್ಣಿಸಿರುವ ರೀತಿ ತುಂಬ ಪ್ರಸಿದ್ಧವಾಗಿದೆ. ಇದು ಗುಪ್ತಯುಗದವರಿಗೆ ಸಂದ ಗೌರವ ಹಾಗೂ ಶ್ಲಾಘನೆಯಾಗಿರಬಹುದು. ಆದರೆ, ಕಾಳಿದಾಸ, ಎಲ್ಲೂ ಗುಪ್ತ ಸಾಮ್ರಾಜ್ಯದ ರಾಜನನ್ನು ದೇವರೆಂದು ಬಗೆದಿರಲಿಲ್ಲ. ಅವರು ಕರ್ತವ್ಯಗಳನ್ನು ಅತ್ಯಂತ ಪವಿತ್ರ ಭಾವನೆಯಿಂದ ಮತ್ತು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರೆಂದಷ್ಟೇ ಅವನು ತಿಳಿಸಿದ್ದಾನೆ. ಗುಪ್ತರ ಕಾಲದಲ್ಲಿನ ಆಸ್ಥಾನ ಕುರಿತ ನಾಟಕಗಳಲ್ಲಿ ಕೂಡ, ದೊರೆಯ ಹೊಗಳುಭಟ್ಟರು ರಾಜನನ್ನು ದೇವರಿಗೆ ಸಮಾನನೆಂದು ಹೇಳಿ, ಅವನಿಗೆ ದೇವರ ಗುಣಾತಿಶಯಗಳನ್ನು ತರುವ ಸಾಹಸ ಮಾಡುತ್ತಿರಲಿಲ್ಲ.

ಗುಪ್ತರ ಕಾಲದ ಎಲ್ಲ ಬಗೆಯ ಸಾಹಿತ್ಯಗಳನ್ನು ನಾವು ಕಾಣಬಹುದು. ಇವುಗಳಲ್ಲಿ ಯಾವುದೇ ಒಂದು ಸಾಹಿತ್ಯದಲ್ಲಾಗಲಿ, ರಾಜನು ದೇವರೇ ಆಗಿದ್ದಾನೆಂಬ ಅರ್ಥ ಬರುವಂತಹ ಒಂದೇ ಒಂದು ಭಾಗವನ್ನಾಗಲಿ ನಾವು ಕಾಣುತ್ತೇವೆಯೆ? ಪರಮದೈವ ಎಂಬ ಬಿರುದನ್ನು ಬಳಸಿದ ಮಾತ್ರಕ್ಕೆ ರಾಜನು 'ದೇವರು' ಎಂಬ ಅರ್ಥ ಕಲ್ಪಿಸಿಕೊಳ್ಳಬಾರದು. ಇದು ಪರಮಭಾಗವತ ಎಂಬ ಶಬ್ದದ ಅರ್ಥಕ್ಕೆ ಸಮಾನವಾದುದು. ಇದು ಇಂಗ್ಲಿಷ್ ಭಾಷೆಯ ಪ್ಯಾರಮೌಂಟ್ ಲಾರ್ಡ್ ಎಂಬ ಪದಕ್ಕೆ ಸಮಾನವಾದುದು. ಒಬ್ಬ ರಾಜನಿಗೆ ಸರ್ವೋನ್ನತ ಪ್ರಭು ಎಂಬ ಅರ್ಥದಲ್ಲಿ ಇಂಗ್ಲಿಷ್‌ನ ಪ್ಯಾರಮೌಂಟ್ ಲಾರ್ಡ್ ಶಬ್ದವನ್ನು ಪ್ರಯೋಗಿಸಬಹುದು.

ರಾಜರುಗಳಲ್ಲಿ ದೇವರಲ್ಲಿರುವಂತಹ ಗುಣಗಳಿವೆಯೆಂದು ದೃಢವಾಗಿ ಭಾವಿಸಿರುವ ಒಂದು ಪಂಥವಿದೆ. ದೇವತೆಗಳಲ್ಲಿರುವ ಅನೇಕ ಅಂಶಗಳಿಂದ ರಾಜನನ್ನು ಸೃಷ್ಟಿಸಲಾಗಿದೆಯೆಂದು ಹೇಳಲಾಗುತ್ತದೆ. ಆದ್ದರಿಂದ ದೇವತಾಂಶಗಳನ್ನು ಹೊಂದಿರುವ ರಾಜನೇ ನಿಜವಾದ ದೇವರು ಎಂಬುದು ಈ ಪಂಥದವರ ವಾದ. ಇದು ಈ ಗ್ರಂಥಗಳಿಗೆ ವ್ಯಾಖ್ಯಾನಕಾರರು ವ್ಯಕ್ತಪಡಿಸಿರುವ ಅಭಿಪ್ರಾಯವಲ್ಲ. ದೇವತೆಗಳ ಅಂಶಗಳ ಬಗ್ಗೆ ಮನು ಮತ್ತು ಇತರ ಲೇಖಕರುಗಳು ಸಹ ತಮ್ಮ ಅಭಿಪ್ರಾಯ ತಿಳಿಸಿ, ಈ ಅಂಶಗಳು ರಾಜನು ನಿರ್ವಹಿಸಬೇಕಾದ ಕೆಲಸಕಾರ್ಯಗಳು ಮತ್ತು ಅವನಲ್ಲಿರಬೇಕಾದ ಗುಣವಿಶೇಷಗಳನ್ನು ಮಾತ್ರ ಸೂಚಿಸುತ್ತವೆ ಎಂದು ಹೇಳಿದ್ದಾರೆ.

ದೇವರು ಮತ್ತು ರಾಜ ಒಂದೇ ರೀತಿಯ ಕಾರ್ಯಗಳನ್ನು ನಿರ್ವಹಿಸುವುದರಿಂದ ರಾಜನು ಸಹ ದೇವರೇ ಆಗುತ್ತಾನೆಂಬುದು ಮತ್ತೊಂದು ವಾದ. ಪ್ರಜೆಗಳ ಸಂರಕ್ಷಣೆ, ಪವಿತ್ರ ಕಾನೂನುಗಳನ್ನು ಜಾರಿಗೊಳಿಸುವುದು, ಪಾಪ ಕಾರ್ಯಗಳ ನಿರ್ಮೂಲನೆ– ಇವು ರಾಜ ಮತ್ತು ದೇವರು– ಇಬ್ಬರೂ ನಿರ್ವಹಿಸುವ ಕಾರ್ಯಗಳು. ಕಾರ್ಯಗಳಲ್ಲಿ ಸಮಾನತೆ ಇರುವುದರಿಂದ ರಾಜರುಗಳಲ್ಲಿ ದೈವತ್ವ ಹೇಗೆ ಇರುತ್ತದೆ ಎಂಬುದಕ್ಕೆ ಸ್ಪಷ್ಟ ಉತ್ತರವಿಲ್ಲ. ನಿಜವಾಗಿ, ಇದು ಸಂಪೂರ್ಣ ವಿರುದ್ಧವಾದ ವಾದವಾಗಿರುತ್ತದೆ. ಇದು ಈ ಜಗತ್ತನ್ನು ಆಳುತ್ತಿರುವವನೇ ದೇವರು. ದೇವರೇ ರಾಜನ ಪಾತ್ರವನ್ನು ನಿರ್ವಹಿಸುತ್ತಿದ್ದಾನೆ. ಇದು, ಯಾರಿಗೂ ಗೋಚರಿಸದ ಒಬ್ಬ ರಾಜ ಜಗವನ್ನಾಳುತ್ತಾನೆಂಬ ಕ್ರಿಶ್ಚಿಯನರ ಭಾವನೆಗೆ ಅನುಗುಣವಾಗಿದೆ.

ಮೂರನೆಯ ವಾದವೊಂದರ ಪ್ರಕಾರ, ರಾಜನಿಗೆ ನರದೇವ ಎಂಬ ಹೆಸರನ್ನು ಉಪಯೋಗಿಸಲಾಗಿದೆ. ಈ ವಾದ ಈ ಹೆಸರಿನ ಬಳಕೆಯ ಮೇಲೆ ಆಧಾರಗೊಂಡಿದೆ. ಸಂಸ್ಕೃತದಲ್ಲಿ ಬ್ರಾಹ್ಮಣರಿಗೆ ಭೂದೇವರು, ಭೂಸುರರು ಮತ್ತು ಇತರ ಶಬ್ದಗಳನ್ನು ಉಪಯೋಗಿಸಲಾಗುತ್ತದೆ. ಇವು ಅವರಿಗೆ ಸಲ್ಲಬೇಕಾದ ಗೌರವವನ್ನು ಸೂಚಿಸುತ್ತವೆ. ಈ ಪದಗಳ ಅರ್ಥವನ್ನು ಅಕ್ಷರಶಃ ತೆಗೆದುಕೊಂಡಲ್ಲಿ, ಅವರನ್ನು ದೇವರುಗಳೆಂದೇ

ಪರಿಗಣಿಸಬೇಕಾಗುತ್ತದೆ. ಅದೇ ರೀತಿ ಒಳ್ಳೆಯ ಮಹಿಳೆಯರನ್ನು ಪತಿದೇವತೆ ಎಂಬ ಸಾಮಾನ್ಯ ಶಬ್ದದಿಂದ ಕರೆಯಲಾಗುತ್ತದೆ. ಏಕೆಂದರೆ ಆ ಹೆಂಗಸಿಗೆ ಅವಳ ಪತಿಯೇ ದೇವರಾಗಿರುತ್ತಾನೆ: ಕರ್ತವ್ಯಪರಾಯಣೆಯಾದ ಒಬ್ಬಳು ಪತ್ನಿಗೆ, ಪತಿಯೇ ಏಕೈಕದೈವ ಎಂಬ ಒಂದು ಗಾದೆಯ ಮಾತಿದೆ. ಇದು ಪತ್ನಿ ತನ್ನ ಪತಿಗೆ ತೋರಿಸುವ ಗೌರವ ಮತ್ತು ನಿಷ್ಠೆಯ ಸಂಕೇತ. ಯಾವುದೇ ದೃಷ್ಟಿಯಿಂದಲೂ ಗಂಡನೇ ನಿಜವಾದ ದೇವರಾಗುವುದಿಲ್ಲ. ಇವೆಲ್ಲವೂ ವಿಷಯವನ್ನು ತಿಳಿದು ಕೊಳ್ಳುವುದಕ್ಕಾಗಿ ನಡೆಯುವ ವಿಚಾರಮಂಥನವಾಗಿರುತ್ತದೆಯೇ ವಿನಃ, ಅದರಿಂದ ಗಂಭೀರ ಪರಿಣಾಮವೇನೂ ಉಂಟಾಗುವುದಿಲ್ಲ. ರಾಜರುಗಳು ತಾವೇ ದೇವರೆಂದು ಯಾವಾಗಲಾದರೂ ಹೇಳಿಕೊಂಡಿದ್ದರೇ? ದೇವರನ್ನು ಭಕ್ತಿ–ಗೌರವಗಳಿಂದ ಪೂಜಿಸುವಂತೆ, ಪ್ರಜೆಗಳು ಎಂದಾದರೂ ಅವರನ್ನು ಆರಾಧಿಸಿ, ಪೂಜಿಸುತ್ತಿದ್ದರೇ? ರಾಜರು ತಪ್ಪನ್ನೇ ಮಾಡದ ಅಸ್ಖಲಿತ ಮನಸ್ಸಿನವರಾಗಿದ್ದರೇ ಅಥವಾ ಅವರು ಅತಿಮಾನುಷ ಶಕ್ತಿಯನ್ನೇನಾದರೂ ಪಡೆದಿದ್ದರೇ? ಎಂಬ ಈ ವಿಷಯಗಳನ್ನು ಪರಿಶೀಲಿಸಬೇಕಾಗಿದೆ. ದೇವರು ಮಾಡುವ ಮತ್ತು ರಾಜನು ಮಾಡುವ ಕೆಲಸಗಳು ಒಂದೇ ತೆರನಾಗಿದ್ದುದಾದರೆ, ದೇವ ಅಥವಾ ಪ್ರಭು ಮುಂತಾದ ಹೆಸರುಗಳನ್ನು ಬಳಸುವ ಬಗ್ಗೆ ಮತ್ತಷ್ಟು ಚರ್ಚೆ ನಡೆಸುವ ಅಗತ್ಯವೇ ಇಲ್ಲ. ಭಾರತದಲ್ಲಿ ರಾಜರನ್ನು ದೇವರೆಂದೇ ಪರಿಗಣಿಸಿ ಅವರಿಗೆ ದೇವರ ಪಟ್ಟ ಕೊಟ್ಟಿರುವ ಯಾವುದೇ ಪ್ರಕರಣವಾಗಲಿ, ಇಡೀ ಸಾಹಿತ್ಯದಲ್ಲಿ ಅಥವಾ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಇದಕ್ಕೆ ಹೊರತಾದ ಒಂದೇ ಒಂದು ಪ್ರಕರಣವೆಂದರೆ ಹಿರಣ್ಯಕಶಿಪುವಿನದು. ಅವನ ವಿಷಯವನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಏಕೆಂದರೆ, ತಾನೇ ದೇವರು ಮತ್ತು ಬ್ರಾಹ್ಮಣರಿಗಿಂತಲೂ ತಾನು ಉತ್ಕೃಷ್ಟನಾದವನೆಂದು ಹಿರಣ್ಯಕಶಿಪು ಹೇಳಿಕೊಳ್ಳುತ್ತಿದ್ದನು.

ಭಾರತದಲ್ಲಿ ರಾಜರಿಗೆ ದೈವೀಕವಾಗಿ ಬಂದ ಹಕ್ಕುಗಳಿವೆಯೆಂದು ಯಾವ ಸಿದ್ಧಾಂತದಲ್ಲೂ ಹೇಳಿಲ್ಲ. ಯೂರೋಪ್‌ನಲ್ಲಿ ದೈವೀಕ ಹಕ್ಕನ್ನು ಬೇರೆ ಬೇರೆ ವಿಧಗಳಲ್ಲಿ ವಿವರಿಸಲಾಗಿದೆ. ಮೊದಲನೆಯದಾಗಿ, ರಾಜನು ಎಲ್ಲ ಹಕ್ಕುಗಳು ಮತ್ತು ಕಾನೂನುಗಳ ಮೂಲ. ಅವನು ದೇವರಿಂದಲೇ ನೇರವಾಗಿ ರಾಜಪದವಿಯನ್ನು ಪಡೆದಿದ್ದಾನೆ. ಈ ಪಾವಿತ್ರ್ಯ ಅವನಲ್ಲಿರುವುದರಿಂದ ಅವನು ಜನರ ತೀರ್ಮಾನಕ್ಕೆ ಅಥವಾ ತೀರ್ಪಿಗೆ ಒಳಪಡಬೇಕಾಗಿಲ್ಲ. ಅವನು ಇವೆಲ್ಲವನ್ನೂ ಮೀರಿದ ಒಂದು ಉಚ್ಚ ಸ್ಥಾನದಲ್ಲಿದ್ದಾನೆ. ಈ ದೈವೀಕ ಹಕ್ಕು ತಪ್ಪು ಸ್ಥಾನದಲ್ಲಿದೆಯೆಂಬುದು ಮಿ. ಚೆಸ್ಟರ್‌ಟನ್ ಅವರ ಅಭಿಪ್ರಾಯವಾಗಿದೆ. ಐರೋಪ್ಯರು ಸಹ ಇದೇ ಭಾವನೆಯನ್ನು ಹೊಂದಿದ್ದಾರೆ. ಈ ತೆರನಾದ ಸಿದ್ಧಾಂತ ರಾಜರ ವಿಷಯದಲ್ಲಿ ಮಾಯವಾಗಿದೆ. ಆದರೆ ಈ ಸಿದ್ಧಾಂತ ರಾಜ್ಯದ ವಿಷಯದಲ್ಲಿ ಇನ್ನೂ ಪ್ರಬಲವಾಗಿ ಮುಂದುವರಿಯುತ್ತಿದೆ. ದೈವೀಕ ಹಕ್ಕಿಗೆ ಸಂಬಂಧಿಸಿದ

ಎರಡನೆಯ ಅಂಶ ಹೀಗಿದೆ: ದೈವೀಕ ಹಕ್ಕು, ನ್ಯಾಯಬದ್ಧತೆಗೆ ಸಂಬಂದಪಟ್ಟ ಒಂದು ಸಿದ್ಧಾಂತ. ದೇವರು ಕೊಟ್ಟ ಹಕ್ಕಿನಿಂದಾಗಿ ಅವನು ರಾಜನಾಗಿದ್ದಾನೆ. ಆದ್ದರಿಂದ ನ್ಯಾಯಸಮ್ಮತವಾದ ಸಂತತಿಗೆ ಸೇರಿದನೊಬ್ಬನು ಮಾತ್ರ ರಾಜನ ಉತ್ತರಾಧಿಕಾರಿಯಾಗಲು ಸಾಧ್ಯ. ಪುರಾಣಗಳ ಕಾಲದಲ್ಲಾಗಲೀ ಅಥವಾ ಇತಿಹಾಸ ಕಾಲದಲ್ಲಾಗಲಿ ನ್ಯಾಯಸಮ್ಮತವಾಗಿರುವ ವ್ಯಕ್ತಿಯೊಬ್ಬನು ಮಾತ್ರ ರಾಜನ ಉತ್ತರಾಧಿಕಾರಿಯಾಗಬೇಕೆಂಬುದಕ್ಕೆ ಮಹತ್ವ ಕೊಟ್ಟಿರಲಿಲ್ಲ. ಮಹಾಭಾರತದ ಪ್ರಕಾರ, ವಾಸ್ತವವಾಗಿ ಪರಮಾಧಿಕಾರ ಹೊಂದಿ, ಆಳ್ವಿಕೆ ನಡೆಸುತ್ತಿರುವ ಯಾವ ವ್ಯಕ್ತಿಯಾಗಲಿ ರಾಜನಾಗಲು ಅವಕಾಶವಿತ್ತು. ಇದಕ್ಕೆ ರಾಜವಂಶದಿಂದ ಬಂದವನೇ ಆಗಿರಬೇಕೆಂಬ ನಿಯಮವಿರಲಿಲ್ಲ. ಹೀಗೆ ರಾಜಪದವಿಗೆ ಬಂದ ಯಾರಿಗಾಗಲಿ, ಜನರು ವಿಧೇಯತೆ ಮತ್ತು ನಿಷ್ಠೆ ತೋರಿಸುವುದು ಬಹಳ ಅಗತ್ಯವಾಗಿತ್ತು. ಹೀಗೆ ರಾಜನಿಗೆ ದೈವತ್ವ ಕೊಡುವ ವಿಷಯದಲ್ಲಿ ವ್ಯಾವಹಾರಿಕ ಜಾಣತನ ಹಾಗೂ ಅರಿವು ಅಡ್ಡ ಬಂದಿತ್ತು.

ಆಧುನಿಕ ಯುಗದಲ್ಲಿ ಇಂಗ್ಲಿಷ್‌ನಲ್ಲಿ ಶಿಕ್ಷಣ ಪಡೆದ ಹಿಂದೂಗಳೇ ರಾಜನಲ್ಲಿ ದೈವಾಂಶಗಳನ್ನು ಕಾಣುತ್ತಿದ್ದಾರೆಯೇ ಹೊರತು, ಹಳೇ ಕಾಲದ ರಾಜಕೀಯ ಬರಹಗಾರರಲ್ಲವೆಂಬುದು ಬಹು ಕುತೂಹಲಕಾರಿಯಾದ ಸಂಗತಿ. ಜಾತ್ಯತೀತ ಭಾವನೆ ಹೊಂದಿದ್ದ ಹಿಂದಿನ ಕಾಲದ ಬರಹಗಾರರು, ರಾಜನಿಗೆ ಯಾವುದೇ ಅಸಾಧಾರಣ ಸ್ಥಾನವನ್ನಾಗಲಿ ನೀಡಲು ನಿರಾಕರಿಸಿದ್ದರು. ರಾಜನು ಕೇವಲ ಷಡ್ಭಾಗ ಭಿತಕ ಎಂದಷ್ಟೇ ಅವರು ಹೇಳುತ್ತಿದ್ದರು. ತೆರಿಗೆಯ ರೂಪದಲ್ಲಿ ತಾನು ಪಡೆದ ಹಣಕ್ಕೆ ಪ್ರತಿಯಾಗಿ ಸೇವೆ ಸಲ್ಲಿಸುವವನು ಎಂದಷ್ಟೇ ಇದರ ಅರ್ಥವಾಗಿತ್ತು. ಭೀಷ್ಮನು ರಾಜನಿಗೆ, ಮಾನವನಿಗಿರುವುದಕ್ಕಿಂತ ಹೆಚ್ಚಿನ ಗುಣವಿಶೇಷಗಳನ್ನು ನೀಡಿರಲಿಲ್ಲ. ಜೀವನವನ್ನು ದೀಕ್ಷಾಬದ್ಧವಾಗಿ ನಡೆಸಿಕೊಂಡು ಹೋಗಬೇಕಾದ ಎರಡು ಪಂಗಡದವರೆಂದರೆ ರಾಜರು ಮತ್ತು ಬ್ರಾಹ್ಮಣರು ಎಂದು ಮನು ಕೂಡ ಒತ್ತಿ ಹೇಳಿದ್ದಾನೆ. ಹಿಂದೂಗಳ ಸಾಹಿತ್ಯದಲ್ಲೂ, ರಾಜರುಗಳಿಗೆ ಯಾವುದೇ ದೈವತ್ವ ನೀಡಿದ್ದಕ್ಕೆ ಸಾಕ್ಷ್ಯಾಧಾರಗಳಿಲ್ಲ. ಕಾಳಿದಾಸ ಮತ್ತು ಭವಭೂತಿಯಂತಹ ಆಸ್ಥಾನ ಕವಿಗಳು ಸಹ, ರಾಜನು ದೇವರು ಎಂದು ತಮಾಷೆಗಾಗಿಯೂ ಹೇಳುವುದಿಲ್ಲ. ನಮ್ಮ ಆಧುನಿಕ ಬರಹಗಾರರು, ರಾಜರ ದೈವಿಕ ಹಕ್ಕುಗಳ ಕುರಿತಂತೆ, ನಮ್ಮ ಯಾವ ಹಿಂದೂ ವ್ಯಾಖ್ಯಾನಕಾರರಾಗಲಿ ಬರೆದಿಲ್ಲದಂತಹ ವಿಷಯಗಳನ್ನು ಎಲ್ಲೆಲ್ಲಿಂದಲೋ ಓದತೊಡಗಿದರು. ರಾಜರುಗಳ ದೈವಿಕ ಹಕ್ಕು ಎಂಬುದು ಹಿಂದೂ ತತ್ವಜ್ಞಾನಿಗಳಿಗೆ ತಿಳಿದೇ ಇರಲಿಲ್ಲ. ಆಧುನಿಕ ಬರಹಗಾರರು ಐರೋಪ್ಯ ಸಿದ್ಧಾಂತಗಳ ಪ್ರತಿರೂಪವನ್ನು ಹಿಂದೂ ಗ್ರಂಥಗಳಲ್ಲಿ ಸೇರಿಸುವ ಪ್ರಯತ್ನ ಮಾಡಿದರು. ಎಲ್ಲ ಪ್ರಜಾಸತ್ತಾತ್ಮಕ ಹಾಗೂ ಆಧುನಿಕ ಭಾವನೆಗಳನ್ನು ಪ್ರಾಚಿನ ಸಂಸ್ಥೆಗಳಲ್ಲಿ ಕಾಣಹೊರಟಿದ್ದು, ಕೆಲವು ವಿದ್ವಾಂಸರಲ್ಲಿದ್ದ ಇತಿಹಾಸ ವಿರುದ್ಧದ ಪ್ರವೃತ್ತಿಯಾಗಿತ್ತು.

ಹಿಂದೂ ಧರ್ಮದಲ್ಲಿ, ನ್ಯಾಯಕ್ಕೆ ಧರ್ಮ, ಸಂಪತ್ತಿಗೆ ಕುಬೇರ– ಹೀಗೆ ಒಂದೊಂದಕ್ಕೂ ಒಬ್ಬರು ಅಧಿದೇವತೆಗಳು ಇದ್ದರು. ಆದ್ದರಿಂದ ಒಬ್ಬ ರಾಜನು ಇಂದ್ರ, ಕುಬೇರ, ಧರ್ಮ ಮುಂತಾದವರ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು ಎಂಬ ಭಾವನೆ ಊರ್ಜಿತವಾಗಿತ್ತು. ರಾಜನು ದೈವಾಂಶಸಂಭೂತನೆಂದು ಹೇಳುವುದು ಅಥವಾ ಪ್ರತಿಯೊಂದು ಧಾರ್ಮಿಕ ಸಮಾರಂಭದಲ್ಲಿ ಪೂಜೆ ಮಾಡುವವನನ್ನೇ ದೇವರೆಂದು ಪರಿಗಣಿಸುವುದು ಮತ್ತು ರಾಜಸೂಯಾಗ ಮಾಡುವವನನ್ನೇ ಇಂದ್ರನೆಂದು ಹೇಳುವುದು ತುಂಬ ಹಾಸ್ಯಾಸ್ಪದ.

ರಾಜರುಗಳಲ್ಲಿ ವಿಶೇಷ ಅಥವಾ ಅತಿಮಾನುಷ ಶಕ್ತಿ ಇದೆಯೆಂಬ ಭಾವನೆ ಭಾರತೀಯರದಲ್ಲ. ಇದೊಂದು ಯೂರೋಪಿಯನ್ನರ ಭಾವನೆ. ರೋಮನ್ ಚಕ್ರವರ್ತಿಗಳು ಪುರೋಹಿತ ವರ್ಗದ ಐಹಿಕ ಧೋರಣೆಯನ್ನು ಪರಂಪರಾಗತವಾಗಿ ಪಡೆದುಕೊಂಡು ಬಂದರು. ಅತಿ ಹೆಚ್ಚಾಗಿ ರೋಮನರ ಪರಂಪರೆಯ ಆಧಾರಗೊಂಡಿದ್ದ ಮೇಲೆ ಕ್ರೈಸ್ತರ ಚರ್ಚ್‌ಗೆ ಕೂಡ ಈ ಭಾವನೆಯಿಂದ ಹೊರಬರಲು ಸಾಧ್ಯವಾಗಿಲ್ಲ. ಕಾನ್‌ಸ್ಟೆಂಟೈನ್, ಅರೆ ಕ್ರೈಸ್ತನಾಗಿದ್ದಲೇ ಕೌನ್ಸಿಲ್ ಆಫ್ ನೈಸಿಯಾದಲ್ಲಿ, ಅವನನ್ನು ಬಿಷಪ್‌ಗಳ ಬಿಷಪ್ ಎಂದು ಘೋಷಿಸಲಾಯಿತು. ತನ್ನ ಅನುಯಾಯಿಗಳಿಂದಲೇ ಮಹಾನ್ ಎಂದು ಕರೆಸಿಕೊಂಡಿದ್ದ ಎಸುಬಿಯಸ್, ಚಕ್ರವರ್ತಿಯನ್ನು ಕುರಿತು ಹೀಗೆ ಉದ್ಗರಿಸಿದನು: “ನಿಮಗೆ ನಾವು ತಿಳಿವಳಿಕೆ ಕೊಡಬೇಕಾದುದೇನಿಲ್ಲ. ಅತ್ಯಂತ ಪವಿತ್ರವಾದ ಧಾರ್ಮಿಕ ಸತ್ಯಗಳನ್ನು ಬಹಿರಂಗ ಪಡಿಸಬೇಕಾದ ಅಗತ್ಯವೂ ಇಲ್ಲ. ಇವು ಜನರ ಚಿಂತನೆಗೆ ಬರುವುದಕ್ಕೂ ಬಹು ಮುಂಚೆಯೇ ದೇವರೇ ಸ್ವತಃ ನಿಮಗೆ ಅವುಗಳ ದಿವ್ಯದರ್ಶನ ಮಾಡಿಸಿದ್ದಾನೆ. ಒಬ್ಬ ಸಾಮಾನ್ಯ ಮಾನವನ ಮುಖಾಂತರವಲ್ಲದೆ, ಸರ್ವ ಸಂರಕ್ಷಕನ ಮೂಲಕ ಅದನ್ನು ತಿಳಿಸಿದ್ದಾನೆ. ಅಂದಮೇಲೆ ದೇವರೇ ತನ್ನ ದಿವ್ಯ ದೃಷ್ಟಿಯನ್ನು ನಿಮ್ಮತ್ತ ಹರಿಸಿದ್ದಾನೆ. ಈಗಾಗಲೇ ಹಲವಾರು ಬಾರಿ ನಿಮಗೆ ಅವನ ದಿವ್ಯ ದರ್ಶನವಾಗಿದೆ.” ಇದು ಕಾನ್‌ಸ್ಟೆಂಟೈನ್‌ಗೆ ವ್ಯಕ್ತಿಗತವಾಗಿ ಸಂದಿದ್ದ ಗೌರವವಾಗಿರದೆ, ಎಲ್ಲ ಜನರೂ ಅದರಲ್ಲಿ ಭಾಗಿಗಳಾಗಿದ್ದರು. ಮಧ್ಯಯುಗದಲ್ಲಿ, ವಿಕಾರ್ ಆಫ್ ಗಾಡ್, ಸೆಕೆಂಡ್ ಡೇವಿಡ್, ಹೋಲಿ, ಅನಾಯಿಂಟೆಡ್ ಇತ್ಯಾದಿ ಬಿರುದುಗಳು ಅತಿ ಸಾಮಾನ್ಯವಾಗಿದ್ದವು. ದೇವರಿಂದ ನೇರ ಪ್ರೇರಣೆ ಪಡೆದಿದ್ದ ಎರಡನೇ ಫ್ರೆಡರಿಕ್ ತನ್ನ ಅನುಯಾಯಿಗಳನ್ನು “ನಿಷ್ಠಾವಂತ ಕ್ರೈಸ್ತರು” ಎಂದು ಕರೆಯುತ್ತಿದ್ದನು. ಒಂಬತ್ತನೆಯ ಪೋಪ್ ಗ್ರಿಗರಿಯವರ ಅನುಯಾಯಿಗಳನು ಸಂಪ್ರದಾಯಭ್ರಷ್ಟರೆಂಬ ಕಾರಣದ ಮೇಲೆ ಕಳಂಕಿತರನ್ನಾಗಿ ಮಾಡಿದ್ದನು. ರಾಜರಲ್ಲಿ ಭಾಗಶಃ ದೈತ್ವವಿದೆಯೆಂಬ ವಾದವನ್ನು ಮಧ್ಯಯುಗದ ತತ್ತ್ವವಾದಿಗಳು ಬಹುದೂರದವರೆಗೆ ಒಯ್ದರು. ಚಕ್ರವರ್ತಿ ಹೋಹೆನ್‌ಸ್ಟಾಫೆನ್ ಬಳಿ ಇದ್ದ ನ್ಯಾಯಶಾಸ್ತ್ರಪಾರಂಗತ, ಬೆನಿವೆಂಟೊದ ರಾಫೆರ್‌ಡು ಎಂಬಾತನು

ಹೀಗೆ ಸಾರಿದ್ದನು. "ಚಕ್ರವರ್ತಿಗೆ ಅವನ ಎಲ್ಲ ಹಕ್ಕುಗಳೂ ದೈವದತ್ತವಾದವು. ಇದು ದೇವರು ಚಕ್ರವರ್ತಿಗೆ ಅನುಗ್ರಹಪೂರ್ವಕವಾಗಿ ನೀಡಿರುವ ಕೊಡುಗೆ." ಚಕ್ರವರ್ತಿಯು, ಭೂಮಿಯ ಮೇಲೆ ಅವತರಿಸಿರುವ ನ್ಯಾಯಧರ್ಮಗಳ ಸಾಕಾರ ಮೂರ್ತಿ ಎಂದು ಮಧ್ಯಯುಗದ ಕಾನೂನುಶಾಸ್ತ್ರದಲ್ಲಿ ಹೇಳಲಾಗಿತ್ತು. ರಾಜರುಗಳಿಗೆ ನೀಡಲಾಗಿದ್ದ ಪವಿತ್ರ ಸ್ಥಾನ ಮತ್ತು ಅವರ ಪೌರೋಹಿತ್ಯ ಪರಂಪರೆ, ಐರೋಪ್ಯರ ಕಾಲದಲ್ಲೂ ಮುಂದುವರಿಯಿತು. ಐರೋಪ್ಯ ಚಿಂತನಕಾರರು ಸಹ ರಾಜ ಮಹಾರಾಜರ ಬಗ್ಗೆ ತುಂಬ ಪವಿತ್ರ ಭಾವನೆಯನ್ನು ಹೊಂದಿದ್ದರು. ಈ ಭಾವನೆಯೇ ಅತಿ ವಿಚಿತ್ರವಾದ ಇರಾಸ್ಟಿಯಾನಿಸಮ್‌ಗೆ (Erastianism) ಆಧಾರವಾಗಿತ್ತು. ಈ ಇರಾಸ್ಟಿಯಾನಿಸಮ್ ಪ್ರಕಾರ ಬ್ರಿಟಿಷ್ ಪಾರ್ಲಿಮೆಂಟ್ ರಾಜನ ಅಧಿಕಾರಗಳನ್ನು ಪ್ರಾತಿನಿಧಿಕವಾಗಿ ಹೊಂದಿತ್ತು. ಇದರಿಂದ ತತ್ತ್ವ ಮತ್ತು ಸಿದ್ಧಾಂತಗಳನ್ನು ಬ್ರಿಟಿಷ್ ಪಾರ್ಲಿಮೆಂಟ್ ನಿರ್ಧರಿಸುತ್ತಿತ್ತು. ಈ ಉದ್ದೇಶಕ್ಕಾಗಿ ಒಂದು ಸಭೆಯಿತ್ತು. ಪ್ರಾರ್ಥನಾ ಪುಸ್ತಕ ಹೇಗಿರಬೇಕೆಂಬುದನ್ನು ಈ ಸಭೆಯೇ ನಿರ್ಧರಿಸುತ್ತಿತ್ತು. ಸಮಾಜದ ಪೌರೋಹಿತ್ಯವನ್ನು ರಾಜ್ಯವೇ ನಿರ್ವಹಿಸುತ್ತಿತ್ತು. ಇವೆಲ್ಲವನ್ನೂ ತೀರ್ಮಾನಿಸುತ್ತಿದ್ದ ಸಭೆಯಲ್ಲಿ ಆ್ಯಂಗ್ಲಿಕನರು, ಕ್ಯಾಥೊಲಿಕರು, ಧರ್ಮದಲ್ಲಿ ನಂಬಿಕೆ ಇಲ್ಲದಿದ್ದವರು ಹಾಗೂ ಒಬ್ಬರು ಪಾರ್ಸಿ ಇರುತ್ತಿದ್ದರು. ಈ ಧಾರ್ಮಿಕವಾಗಿದ್ದ ಪುರೋಹಿತ ಸಂಸ್ಕೃತಿ ಐರೋಪ್ಯರ ಚಿಂತನೆಯಲ್ಲಿ ಆಳವಾಗಿ ಬೇರೂರಿತ್ತು. ಆದರೆ ಭಾರತಕ್ಕೆ ಮಾತ್ರ ಬ್ರಿಟನ್ನಿನ ಇಂತಹ ಚಿಂತನಾ ಕ್ರಮ ಸಂಪೂರ್ಣ ಪರಕೀಯವಾದುದಾಗಿತ್ತು. ಆರ್ಕಿಬಿಷಪ್ ಅಲೆಕ್ಸಿನ್–ಡಿಮೆಂಜೀಸ್, ಕೊಚಿನ್‌ನ ಮಹಾರಾಜರಿಗೆ ಮಾಡಿಕೊಂಡ ಒಂದು ಕೋರಿಕೆಯಿಂದ ಇದನ್ನು ತಿಳಿಯಬಹುದು. ಕೊಚಿನ್‌ನ ಮಹಾರಾಜರು ಕ್ರಿಶ್ಚಿಯನರಾಗಿರಲಿಲ್ಲ. ಅವರು ಜಾತ್ಯತೀತವಾದಿಯಾಗಿದ್ದರು. ಆದರೂ ಡೈಯಾಂಪರ್‌ನ ಧರ್ಮಾಧಿಕಾರಿಗಳ ಸಭೆಯಲ್ಲಿ ಅವರ ಮಧ್ಯಸ್ಥಿಕೆಯನ್ನು ಆರ್ಕಿಬಿಷಪ್ ಕೋರಿದ್ದರು. ಆ ಸಮಯದಲ್ಲಿ ಸ್ಥಳೀಯ ಕ್ರೈಸ್ತಪಾದ್ರಿಗಳು ಮತ್ತು ಜನಸಾಮಾನ್ಯರು ರೋಮ್ ಅನ್ನು ವಿರೋಧಿಸುತ್ತಿದ್ದರು. ಇದು ಡಿಮೆಂಜೀಸ್ ಅವರ ಗಮನಕ್ಕೆ ಬಂದಿತ್ತು. ಆದ್ದರಿಂದ ತಾವು ಕರೆಯಲು ನಿರ್ಧರಿಸಿದ್ದ ಧರ್ಮಾಧಿಕಾರದ ಸಭೆ ಯಶಸ್ವಿಯಾಗುವ ಬಗ್ಗೆ ಅವರಿಗೆ ಸಂದೇಹವುಂಟಾಗಿತ್ತು. ಆದ್ದರಿಂದ ಸ್ಥಳೀಯ ಕ್ರಿಶ್ಚಿಯನ್ನರು, ಈ ಸಭೆಯ ವ್ಯಾಪ್ತಿಗೊಳಪಡುವಂತೆ ಮಾಡಲು, ತಮ್ಮ ಅಧಿಕಾರವನ್ನು ಪ್ರಯೋಗಿಸಬೇಕೆಂದು ಮೆಂಜೀಸ್, ಕೊಚಿನ್‌ನ ಮಹಾರಾಜರನ್ನು ಕೇಳಿಕೊಂಡಿದ್ದರು. ಕೊಚಿನ್‌ನ ಮಹಾರಾಜರಿಗೆ ಇಂತಹ ವಿಷಯಗಳಲ್ಲಿ ನಂಬಿಕೆಯಿರಲಿಲ್ಲವೆಂಬುದು ಡಿಮೆಂಜೀಸ್‌ಗೆ ತಿಳಿದಿತ್ತು. ಆದರೂ ಅವರ ಮಧ್ಯಸ್ಥಿಕೆ ಸಮರ್ಥನೀಯವೆಂದು ಭಾವಿಸಿ, ಅವರಿಗೆ ಈ ಕೋರಿಕೆ ಮಾಡಿಕೊಂಡಿದ್ದರು. ನೈಸಿಯಾದಲ್ಲಿ ನಡೆದ ಧರ್ಮಾಧಿಕಾರ ಸಭೆಯ ಅಧ್ಯಕ್ಷತೆಯನ್ನು ಒಬ್ಬರು ಚಕ್ರವರ್ತಿ ನಡೆಸಿದರು. ಅವರು

ಸಹ ಬ್ಯಾಪ್ಟೈಸ್ ಆಗಿರಲಿಲ್ಲ. ರಾಜನಾದ ಮೇಲೆ, ಅವನೇ ಧರ್ಮಾಧಿಕಾರ ಹೊಂದಿರುತ್ತಾನೆಂಬುದು ಸ್ವಯಂ ವೇದ್ಯ ಎಂದು ಡಿಮೆಂಜೀಸ್ ಭಾವಿಸಿದ್ದರು.

ರಾಜನೊಬ್ಬನಿಗೆ, ರಾಜ್ಯವನ್ನಾಳುವುದು, ದೇವರಿಂದಲೇ ಬಂದ ಅಧಿಕಾರ. ಆದ್ದರಿಂದ ಅವನು ದೇವರಿಗೆ ಮಾತ್ರ ಹೊಣೆಗಾರನಾಗಿರುತ್ತಾನೆ. ಈ ಭಾವನೆ ಕ್ರಿಶ್ಚಿಯನ್ ಧರ್ಮದಲ್ಲಿ ಸೇರಿಸಿಕೊಳ್ಳುವುದಕ್ಕೂ ಮೊದಲು, ಇದೇ ಭಾವನೆಯನ್ನು ಹೀಬ್ರ್ಯೂಗಳು ಹೊಂದಿದ್ದರು. ಡೇನಿಯಲ್ ಎಂಬಾತ ನೆಬುಚಾಡ್‌ನೆಜ್ಜರ್‌ಗೆ ಹೀಗೆ ಹೇಳುತ್ತಾನೆ: "ನೀನು ಬರಿ ರಾಜನಲ್ಲ. ರಾಜರುಗಳ ರಾಜ. ರಾಜ್ಯವನ್ನಾಳಲು, ದೇವರೇ ನಿನಗೆ ರಾಜ್ಯವನ್ನು ಕೊಟ್ಟಿದ್ದಾನೆ. ಅಷ್ಟೇ ಅಲ್ಲ, ಅದಕ್ಕೆ ತಕ್ಕ ಅಧಿಕಾರ ಕೊಟ್ಟಿದ್ದಾನೆ. ಕೀರ್ತಿ ಕೊಟ್ಟಿದ್ದಾನೆ. ಶಕ್ತಿಯನ್ನು ಸಹ ಕೊಟ್ಟಿದ್ದಾನೆ." ಇದೇ ಭಾವನೆಯ ಬಗ್ಗೆ ಸಾಲೋಮನ್‌ನ ವ್ಯಾಖ್ಯಾನ ಹೀಗಿದೆ: "ರಾಜರುಗಳೇ ಕೇಳಿ! ನಿಮಗೆ ಅಧಿಕಾರ ಕೊಟ್ಟಿರುವವನೇ ದೇವರು, ರಾಜ್ಯವನ್ನಾಳುವ ಪರಮಾಧಿಕಾರವನ್ನು ನಿಮಗೆ ಕೊಟ್ಟಿರುವವನೂ ಅದೇ ಸರ್ವಶ್ರೇಷ್ಠನಾದವನು." (ವಿಸ್‌ಡಮ್ ಆಫ್ ಸಾಲೋಮನ್). ಈ ಎಲ್ಲ ಐಹಿಕ ಶಕ್ತಿಯನ್ನು ಕೊಟ್ಟಿರುವವನೇ ಆ ಸರ್ವಶಕ್ತ. ಇದು ಅವನಿಂದಲೇ ಹೊರಮೂಡಿರುವ ಶಕ್ತಿ. ಇದು ಹಿಂದೂಗಳ ಸಿದ್ಧಾಂತವೂ ಹೌದು. ಇದು ಒಬ್ಬ ರಾಜನಿಗೆ ದೈವಿಕವಾಗಿ ಬಂದಿರುವ ಶಕ್ತಿ. ಆ ಸರ್ವಶಕ್ತನ ಪ್ರೇರಣೆಯಿಂದಲೇ ಹೊರಮೂಡಿರುವಂತಹ ಶಕ್ತಿ ಇದಾಗಿದೆ. ಸೇಂಟ್‌ಜಾನ್‌ನಲ್ಲಿ ಬರುವ ಒಂದು ಬೋಧನೆಯಲ್ಲಿ ಏಸುಕ್ರಿಸ್ತನು ಒಂದು ಸಭೆಯಲ್ಲಿ ಮಾತನಾಡುತ್ತಾ ಹೀಗೆ ಹೇಳಿದ್ದಾನೆ: "ದೇವರಿಂದಲೇ ನಿನಗೆ ಬಂದ ಅಧಿಕಾರದ ಹೊರತಾಗಿ, ನನ್ನ ವಿರುದ್ಧ ಯಾವ ಅಧಿಕಾರ ಅಥವಾ ಬಲವನ್ನಾಗಲಿ ಪ್ರಯೋಗಿಸಲು ಸಾಧ್ಯವಿಲ್ಲ." ಈ ಪ್ರಪಂಚವೇ ಶಕ್ತಿಯ ಬೃಹದ್‌ರೂಪವಾಗಿ ಹೊರಹೊಮ್ಮಿದೆ ಎಂಬುದು ಹಿಂದೂ ಸಿದ್ಧಾಂತ. "ರಾಜನಿಗೆ ಅಧಿಕಾರ ದೈವಿಕವಾಗಿ ಬರುತ್ತದೆ. ಇದು ಸಹಜ" ಎಂಬ ಸಿದ್ಧಾಂತಕ್ಕೆ ಚರ್ಚ್‌ನ ವಿರೋಧವಿತ್ತು. ನಿಜವಾಗಿ, ದೈವಸಂಕಲ್ಪ ಮತ್ತು ದೈವೇಚ್ಛೆಯನ್ನು ಚರ್ಚ್ ಪ್ರತಿಬಿಂಬಿಸುತ್ತದೆ ಎಂಬುದು ಅದರ ವಾದವಾಗಿತ್ತು. ಆದರೆ ಹಿಂದೂಗಳ ಭಾವನೆಯೇ ಬೇರೆಯಾಗಿತ್ತು. ಏಕೆಂದರೆ, ಅವರಲ್ಲಿ ವ್ಯವಸ್ಥಿತವಾದ ಚರ್ಚ್ ಇರಲಿಲ್ಲ. ಆದ್ದರಿಂದ ನಾಗರಿಕ ಸರ್ಕಾರದಿಂದ ಧಾರ್ಮಿಕ ಜೀವನವನ್ನು ಬೇರ್ಪಡಿಸುವುದು ಸುಲಭವಾಗಿತ್ತು. ಅದು ಬಹಳ ಸ್ವಾಭಾವಿಕವಾಗಿತ್ತು. ಧರ್ಮಕ್ಕೆ ಉನ್ನತ ಸ್ಥಾನವಿತ್ತು. ಅದು ಸರ್ಕಾರದ ವ್ಯಾಪ್ತಿಗೆ ಮಿಗಿಲಾದುದಾಗಿತ್ತು. ರಾಜನು ಕೇವಲ ಧರ್ಮಸಂರಕ್ಷಕನಾಗಿದ್ದನು. ರಾಜನು ತನ್ನ ಸಂಸ್ಥೆಗಳ ಮೂಲಕ ಧರ್ಮವನ್ನು ಎತ್ತಿ ಹಿಡಿಯುತ್ತಿದ್ದನು. ಧರ್ಮವನ್ನು ಸೃಷ್ಟಿಸುವುದಾಗಲಿ ಅಥವಾ ಅದನ್ನು ಬದಲಾಯಿಸುವುದಾಗಲಿ ಅವನಿಗೆ ಸಾಧ್ಯವಿರಲಿಲ್ಲ. ಅರ್ಥ ಅಥವಾ ಪ್ರಾಪಂಚಿಕ ವ್ಯವಹಾರಗಳಲ್ಲಿ ಮಾತ್ರ ಸರ್ಕಾರಕ್ಕೆ ಸರ್ವೋನ್ನತ ಅಧಿಕಾರವಿತ್ತು.

'ರಾಜರ್ಷಿ'ಎಂಬ ಬಿರುದಿನ ಬಗ್ಗೆಯೂ ಸರಿಯಾದ ತಿಳುವಳಿಕೆಯಿರಲಿಲ್ಲ. ಸಾಮಾನ್ಯವಾಗಿ ಭಾರತೀಯ ತಿಳಿವಳಿಕೆಯಿರಲಿಲ್ಲ. ಸಾಮಾನ್ಯವಾಗಿ ಭಾರತೀಯ ರಾಜರುಗಳನ್ನು 'ರಾಜರ್ಷಿ' ಎಂದು ಕರೆದು, ಅವರನ್ನು ಸನ್ಮಾನಿಸಲಾಗುತ್ತಿತ್ತು. ಇದು ರಾಜರಲ್ಲಿ ಋಷಿ ಎಂಬ ಅರ್ಥವನ್ನು ನೀಡುವುದಾದರೂ, ರಾಜನನ್ನು ಋಷಿಯನ್ನಾಗಿ ಮಾಡಲು ಅಗತ್ಯವಾದ ಯಾವ ಶಾಸ್ತ್ರ ವಿಧಿಗಳೂ ನಡೆಯುತ್ತಿರಲಿಲ್ಲ. ಭಾರತದಲ್ಲಿ ಈ ಶಬ್ದವನ್ನು ಎರಡು ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸ ಲಾಗುತ್ತಿತ್ತು. ಮಿಥಿಲೆಯ ಜನಕ ಮಹಾರಾಜನನ್ನು 'ರಾಜರ್ಷಿ' ಎಂದು ಕರೆಯಲಾಗುತ್ತಿತ್ತು. ಈ ನಿಟ್ಟಿನಲ್ಲಿ ಅವನೊಬ್ಬ ಅಸದೃಶ ವ್ಯಕ್ತಿಯಾಗಿದ್ದನು. ಜನಕ ರಾಜನು ತನ್ನ ಜೀವನದಲ್ಲಿ ಒಬ್ಬ ಋಷಿಯಂತೆಯೇ ಇದ್ದನು. ತತ್ವಜ್ಞಾನಿಯಾಗಿದ್ದನು. ಅವನು ನಿಜವಾದ ಋಷಿಯಾಗಿದ್ದನು. ರಾಜನಿಗಿಂತಲೂ ಹೆಚ್ಚಾಗಿ ಋಷಿಜೀವನ ನಡೆಸುತ್ತಿದ್ದನು. ಕೆಲವು ಸಂದರ್ಭಗಳಲ್ಲಿ ಯಾಗ–ಯಜ್ಞಾದಿಗಳನ್ನು ನಡೆಸಲು ರಾಜರಿಗೆ ಅವಕಾಶವಿತ್ತು. ರಾಜಸೂಯ ಯಾಗ ಮತ್ತು ಅಶ್ವಮೇಧಯಾಗ ಮುಂತಾದ ಯಾಗಗಳನ್ನು ಮಾಡುತ್ತಿದ್ದ ರಾಜರುಗಳಿಗೆ ಇಂತಹ ಬಿರುದು ಸಲ್ಲುತ್ತಿತ್ತು. ಆದರೆ ಈ ಸಂದರ್ಭದಲ್ಲಿ ಕಾಳಿದಾಸ ಒಂದು ಮಾತು ಹೇಳಿದ್ದಾನೆ. ಧರ್ಮಶೀಲ ದೊರೆಗಳು ಋಷಿಗಳನ್ನು ಸಂರಕ್ಷಿಸುತ್ತಿದ್ದರು. ಅದಕ್ಕೆ ಪ್ರತಿಯಾಗಿ ಈ ಋಷಿಗಳು ಆಧ್ಯಾತ್ಮಿಕ ಸಂಪತ್ತಿನ ಆರನೆಯ ಒಂದು ಭಾಗವನ್ನು ಈ ರಾಜರುಗಳಿಗೆ ವರ್ಗಾಯಿಸುತ್ತಿದ್ದರು. ಆದ್ದರಿಂದ ಅಂತಹ ರಾಜರುಗಳು ರಾಜರ್ಷಿಗಳಾಗುತ್ತಿದ್ದರು ಎಂದು ಕಾಳಿದಾಸ ತಿಳಿಸಿದ್ದಾನೆ. ಹಿಂದೂಗಳ ಚಿಂತನೆಯ ಪ್ರಕಾರ, ಜನರು ಮಾಡುವ ಸತ್ಕಾರ್ಯಗಳು ಮತ್ತು ದುಷ್ಕಾರ್ಯಗಳ ಸ್ವಲ್ಪಭಾಗ ರಾಜನಿಗೆ ಹೋಗುತ್ತದೆ. ಒಂದು ಕೆಟ್ಟ ಕೆಲಸ ಮಾಡಿದವರನ್ನು ಶಿಕ್ಷಿಸದೇ ಹೋದರೆ ಆ ಪಾಪವು ರಾಜನನ್ನೇ ಬಾಧಿಸುತ್ತದೆ ಎಂದು ಮನು ಹೇಳುತ್ತಾನೆ. ರಾಜನ ಅರಿವಿಗೆ ಬಾರದಂತೆಯೇ ಇಂತಹ ಪಾಪ, ಅವನನ್ನಾವರಿಸುತ್ತದೆ ಎಂದು ಮನು ಹೇಳುತ್ತಾನೆ. "ಒಬ್ಬ ರಾಜನು ತನ್ನ ಪ್ರಜೆಗಳನ್ನು ಚೆನ್ನಾಗಿ ನೋಡಿಕೊಂಡು ಅವರ ಸಂರಕ್ಷಣೆ ಮಾಡಿದಾಗ, ತನ್ನಲ್ಲಿರುವ ಆಧ್ಯಾತ್ಮಿಕ ಮೌಲ್ಯಗಳ ಎಲ್ಲ ಆರನೇ ಒಂದು ಭಾಗವನ್ನು ಮರಳಿ ಪಡೆಯುತ್ತಾನೆ. ರಾಜ, ಪ್ರಜೆಗಳ ಸಂರಕ್ಷಣೆಯನ್ನು ಸರಿಯಾಗಿ ಮಾಡದೇ ಇದ್ದರೆ, ಅವರಲ್ಲಿರುವ ಅವಗುಣಗಳ ಆರನೇ ಒಂದು ಭಾಗದಷ್ಟು ಸಹ ಅವನಲ್ಲಿ ಸೇರಿಕೊಳ್ಳುತ್ತದೆ. ರಾಜನು, ಜನರ ಒಳ್ಳೆಯತನದ ಆರನೇ ಒಂದು ಭಾಗದಷ್ಟು ಅಂಶವನ್ನು ಸಹ ಪಡೆದುಕೊಳ್ಳುವನೆಂದು ಹೇಳುವ ಬಗ್ಗೆ, ನ್ಯಾಯಶಾಸ್ತ್ರ ಪಾರಂಗತರು ತಮ್ಮದೇ ಆದ ವಾದವನ್ನು ಮಂಡಿಸಿದ್ದರು. ಜನರ ಸಂರಕ್ಷಣೆಗಾಗಿ ರಾಜನು ತೆರಿಗೆಗಳ ರೂಪದಲ್ಲಿ ಪೂರ್ಣವಾಗಿ ಸಂಭಾವನೆ ಪಡೆಯುತ್ತಿರುವಾಗ, ಆಧ್ಯಾತ್ಮಿಕ ರೂಪದಲ್ಲಿ ಅವನು ಸಂಭಾವನೆ ಪಡೆಯುವುದು ಹೇಗೆ ಸಾಧ್ಯ ಎಂದು ಅವರು ಧೈರ್ಯವಾಗಿ ಕೇಳಿದರು. ಸನ್ಯಾಸಿಗಳು, ಭಿಕ್ಷುಕರು

ಮತ್ತು ಧಾರ್ಮಿಕ ವ್ಯಕ್ತಿಗಳು ಯಾವುದೇ ಪ್ರಾಪಂಚಿಕ ಸ್ವತ್ತುಗಳನ್ನು ಹೊಂದಿರುವುದಿಲ್ಲ. ಆದ್ದರಿಂದ ಅವರಲ್ಲಿರುವ ಆಧ್ಯಾತ್ಮಿಕ ಸ್ವರೂಪದ ಒಳ್ಳೆಯತನದಲ್ಲಿ, ರಾಜನು ತನಗೆ ಸಲ್ಲಬೇಕಾಗಿರುವ ಆರನೇ ಒಂದು ಭಾಗದಷ್ಟನ್ನು ಪಡೆದುಕೊಳ್ಳುತ್ತಾನೆ ಎಂಬ ಉತ್ತರ ಅವರಿಗೆ ದೊರೆಯಿತು.

ಆದುದರಿಂದ ರಾಜರ್ಷಿ ಎಂಬ ಶಬ್ದಕ್ಕೆ ಯಾವುದೇ ಧಾರ್ಮಿಕ ಅರ್ಥವಾಗಲೀ ಇಲ್ಲ. ಕೌಟಿಲ್ಯನು "ರಾಜರ್ಷಿ ರಿತ್ತ" ಎಂಬ ಗ್ರಂಥದಲ್ಲಿ ಈ ಘನತೆಯನ್ನು ಪಡೆದುಕೊಳ್ಳಬೇಕಾದರೆ, ರಾಜನು ಹೇಗಿರಬೇಕು ಎಂಬುದನ್ನು ಮತ್ತು ಅವನು ಅನುಸರಿಸಬೇಕಾದ ವಿಧಾನವನ್ನು ಸೂಚಿಸಿರುವುದು ತುಂಬ ಗಮನಾರ್ಹ. "ರಾಜನು ತನ್ನ ಮನೋವಿಕಾರಗಳನ್ನು ಹತೋಟಿಯಲ್ಲಿ ಇಟ್ಟುಕೊಂಡಿರಬೇಕು. ಸೂಕ್ತ ಸಲಹೆ ಪಡೆದು, ತನ್ನ ಜ್ಞಾನ ಮತ್ತು ವಿವೇಕವನ್ನು ಉಳಿಸಿಕೊಳ್ಳಬೇಕು. ರಹಸ್ಯವಾಗಿ ಸಮಾಚಾರ ಪಡೆಯುತ್ತಿರುವ ಮೂಲಕ ನೆಟ್ಟ ದೃಷ್ಟಿಯನ್ನು ಇಟ್ಟುಕೊಂಡಿರಬೇಕು. ಯಾವುದಾದರೂ ಚಟುವಟಿಕೆಯ ಮೂಲಕ, ಜನ–ಸಾಮಾನ್ಯರ ಯೋಗಕ್ಷೇಮವನ್ನು ಸತತ ಗಮನಿಸುತ್ತಿರಬೇಕು. ಎಲ್ಲ ವ್ಯವಹಾರಗಳನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸುವ ಮೂಲಕ ಸಮಾಜದ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರಬೇಕು. ಜನರ ಪ್ರೀತಿಯನ್ನು ಸಂಪಾದಿಸಬೇಕು– ಇವೆಲ್ಲ ಅಂಶಗಳು ಒಬ್ಬ ರಾಜನಲ್ಲಿದ್ದರೆ, ಆಗ ಅವನು 'ರಾಜರ್ಷಿ'ಯಾಗುತ್ತಾನೆ."

* * * *

೪. ರಾಜರುಗಳ ಸ್ವಭಾವ ಮತ್ತು ಕರ್ತವ್ಯಗಳು
(ಮುಂದುವರಿದ ಭಾಗ)

ಹಿಂದೂ ಸಿದ್ಧಾಂತಗಳ ಪ್ರಕಾರ, ಜನರ ಸಂರಕ್ಷಣೆ ಅವರಿಗೆ ಜೀವನದ ಭದ್ರತೆಯನ್ನು ಒದಗಿಸುವುದು, ಅವರ ಆಸ್ತಿಪಾಸ್ತಿಗಳನ್ನು ಕಾಪಾಡುವುದು, ಜನರು ಸದ್ಗುಣಿಗಳಾಗಿರುವಂತೆ ಮಾಡಿ, ಸಾಮಾಜಿಕ ಸ್ಥಿರತೆಯನ್ನು ಕಾಪಾಡಿಕೊಂಡು ಬರುವುದು – ಇವು ರಾಜರುಗಳ ಮೂಲಭೂತ ಕರ್ತವ್ಯಗಳಾಗಿದ್ದವು.

"ಜನರ ಸುಖ–ಸಂತೋಷಗಳು, ಸತ್ಯವನ್ನು ಎತ್ತಿ ಹಿಡಿಯುವುದು ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದು – ಇವು ಎಂದೆಂದಿಗೂ ಬದಲಾಗದಂತಹ ರಾಜಧರ್ಮದ ಮುಖ್ಯ ಕಾರ್ಯಗಳು" ಎಂದು ಮಹಾಭಾರತದಲ್ಲಿ ಘೋಷಿಸಲಾಗಿದೆ.

"ಲೋಕರಂಜನಮೇವಾತ್ರ ರಾಜ್ಞೋ ಧರ್ಮಃ ಸನಾತನಃ
ಸತ್ಯಸ್ಯ ರಕ್ಷಣಂ ಚೈವ ವ್ಯವಹಾರಸ್ಯ ಚಾರ್ಜವಂ" **(ಮಹಾಭಾರತ)**

ವ್ಯಾಪಕ ದೃಷ್ಟಿಯಿಂದ ಹೇಳುವುದಾದರೆ "ರಕ್ಷಣೆ" ರಾಜನ ಮುಂದಿರುವ ಮುಖ್ಯ ಉದ್ದೇಶ. ಉಳಿದ ಎಲ್ಲ ಕಾರ್ಯಗಳು ಇದಕ್ಕೆ ಅಧೀನವಾಗಿರುತ್ತವೆ. ಪ್ರಜೆಗಳಿಗೆ ರಕ್ಷಣೆ ನೀಡುವಂತಹ ರಾಜನಿಗೆ ಒಂದು ಸಾವಿರ ಅಶ್ವಮೇಧಗಳನ್ನು ಮಾಡಿದಷ್ಟು ಪುಣ್ಯ ಬರುವುದೆಂದು ಮಹಾಭಾರತದಲ್ಲಿ ಒಂದೆಡೆ ಹೇಳಲಾಗಿದೆ. ಈಗಾಗಲೇ ಉಲ್ಲೇಖಿತವಾಗಿರುವ ರಾಜರ್ಷಿವ್ರಿತ್ತದಲ್ಲಿ, ಕೌಟಿಲ್ಯನು, ಒಬ್ಬ ರಾಜನು ರಾಜರ್ಷಿ ಎನಿಸಿಕೊಳ್ಳಲು ಇರಬೇಕಾದಂತಹ ಎಲ್ಲ ಗುಣಗಳನ್ನು ವರ್ಣಿಸಿದ್ದಾನೆ. ಅದರಲ್ಲಿ ರಕ್ಷಣೆಯ ಎಲ್ಲ ಅಂಶಗಳನ್ನು ಅವನು ನಮೂದಿಸಿದ್ದಾನೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, ರಾಜ್ಯದ ಭದ್ರತೆ ಮತ್ತು ಜನರ ಸಂರಕ್ಷಣೆಗೆ ಸಂಬಂಧಿಸಿದಂತೆ, ರಾಜನ ಕರ್ತವ್ಯಗಳನ್ನು ಬಹಳ ಚೆನ್ನಾಗಿ ವಿವರಿಸಲಾಗಿದೆ. ಆದ್ದರಿಂದ ಅದು ತುಂಬ ಪ್ರಾಮುಖ್ಯತೆ ಗಳಿಸಿದೆ. ರಾಜನೀತಿ ಕುರಿತು, ಗ್ರಂಥಗಳನ್ನು ಬರೆದಿರುವ ಕೌಟಿಲ್ಯನಾಗಲಿ, ಶುಕ್ರನಾಗಲಿ ಅಥವಾ ಬೇರಾವ ಬರಹಗಾರರಾಗಲಿ, ರಾಜನಿಗೆ ಇರಬೇಕಾದ ನೈತಿಕಾಂಶಗಳ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಂತೆ ಕಾಣುವುದಿಲ್ಲ. ಭೌತಿಕ ದೃಷ್ಟಿಯಿಂದ, ರಾಜ್ಯದ ಒಳಿತಿಗೆ ಇರುವ ಸಮಸ್ಯೆಯನ್ನು ಸರ್ಕಾರ ಹೇಗೆ

ಪರಿಶೀಲಿಸಬೇಕೆಂಬುದನ್ನು ಅದರಲ್ಲಿ ಸೂಚಿಸಿಲ್ಲ. ರಕ್ಷಣೆಯ ಏಕೈಕ ಉದ್ದೇಶಕ್ಕಾಗಿ ಮಾತ್ರ ರಾಜನಿಗೆ ಸಂಪೂರ್ಣ ಅಧಿಕಾರವನ್ನು ಕೊಡಲಾಗಿತ್ತು. ತೀವ್ರ ಬಿಕ್ಕಟ್ಟಿನ ಸಮಯದಲ್ಲಿ, ಅಗತ್ಯವಿರುವಷ್ಟು ಹಣವನ್ನು ಸಂಗ್ರಹಿಸಲು ರಾಜನಿಗೆ ಅವಕಾಶವಿತ್ತು. ಬಿಕ್ಕಟ್ಟಿನ ಸಮಯದಲ್ಲಿ ತನ್ನ ಕುಟುಂಬವನ್ನು ಸಹ ತ್ಯಾಗ ಮಾಡಲು ರಾಜನು ಸಿದ್ಧನಾಗಿರಬೇಕಾಗುತ್ತಿತ್ತು. ಪ್ರಜಾಪ್ರತಿಪಾಲನೆ ಅಂದರೆ ಪ್ರಜೆಗಳ ಸಂರಕ್ಷಣೆ ರಾಜನ ಪರಮಶ್ರೇಷ್ಠ ಕರ್ತವ್ಯವಾಗಿರುತ್ತಿತ್ತು. ಜನರಲ್ಲಿ ಅಸಂತೃಪ್ತಿಯುಂಟಾಗಿ, ಅರಾಜಕತೆ ತಲೆದೋರಬಾರದೆಂಬುದೇ ಸಂರಕ್ಷಣೆಯ ಮುಖ್ಯ ಉದ್ದೇಶವಾಗಿತ್ತು. ಇದನ್ನು ಮಹಾಭಾರತದಲ್ಲಿ ತಿಳಿಸಲಾಗಿದೆ.

"ರಾಜನು ಪ್ರಜೆಗಳನ್ನು ಸಂರಕ್ಷಿಸದೇ ಹೋದಲ್ಲಿ ದುಷ್ಟರು ಇತರರ ಸ್ವತ್ತುಗಳನ್ನು ಕಿತ್ತುಕೊಂಡು ಸ್ವಂತ ಉದ್ದೇಶಗಳಿಗೆ ಬಳಸಿಕೊಳ್ಳುತ್ತಾರೆ... ರಾಜನು ಪ್ರಜೆಗಳನ್ನು ಸಂರಕ್ಷಿಸದೇ ಇದ್ದಲ್ಲಿ, ಅಪರಿಶುದ್ಧ ರೀತಿಯಲ್ಲಿ ಮಕ್ಕಳು ಹುಟ್ಟುತ್ತವೆ. ಅವು ಸಮಾಜದಲ್ಲಿ ಅಂಗೀಕೃತವಾಗುವುದಿಲ್ಲ. ಬೇಸಾಯದ ಹೆಸರೇ ಇರುವುದಿಲ್ಲ. ಅನ್ಯಾಯವೇ ಮೇಲುಗೈ ಪಡೆಯುತ್ತದೆ. ವರ್ಣಸಂಕರವಾಗುತ್ತದೆ. ದೇಶದಲ್ಲಿ ಕ್ಷಾಮ ತಲೆದೋರುತ್ತದೆ. ಅದರ ಹಾವಳಿಯಿಂದ ಜನರು ತಲ್ಲಣಿಸುತ್ತಾರೆ. ರಾಜನು ಯಾವ ಕ್ರಮವನ್ನೂ ಕೈಗೊಳ್ಳದೇ ಇದ್ದರೆ ಮತ್ತು ಯಾರಿಗೂ ದಂಡನೆ ವಿಧಿಸದಿದ್ದರೆ, ಬಲವುಳ್ಳವರು ದುರ್ಬಲರನ್ನು ತಿಂದುಹಾಕುತ್ತಾರೆ. ಇದನ್ನೇ 'ಮತ್ಸ್ಯನ್ಯಾಯ'– ಜಲೇ ಮತ್ಸ್ಯಾನಿವಾಭಕ್ಷ್ಯಂ ದುರ್ಬಲಮ್ ಬಲವತ್ತರಃ– ಎಂದು ಕರೆಯುತ್ತಾರೆ. ನೀರಿನಲ್ಲಿರುವ ದೊಡ್ಡ ಮೀನು ಸಣ್ಣ ಮೀನನ್ನು ನುಂಗುವ ಹಾಗೆ, ಬಲಾಢ್ಯರು ಬಲವಿಲ್ಲದವರನ್ನು ಕಾಡುತ್ತಾರೆ. ರಾಜನಿಂದ ರಕ್ಷಣೆ ದೊರೆತರೆ, ಜನರು ನಿರ್ಭೀತಿಯಿಂದಿರುತ್ತಾರೆ. ಮನೆಯ ಬಾಗಿಲು ತೆರೆದು ನಿದ್ರಿಸಿದರೂ ಯಾವ ಭಯವೂ ಇರುವುದಿಲ್ಲ.

ಈ ಭಾಗವು ರಾಜನು ತನ್ನ ಪ್ರಜೆಗಳಿಗೆ ಎಂತಹ ರಕ್ಷಣೆಯನ್ನೊದಗಿಸ ಬೇಕೆಂಬುದನ್ನು ಸೂಚಿಸುತ್ತದೆ. ಹೊರದೇಶದಿಂದ ನಡೆಯುವ ಅತಿಕ್ರಮಣದಿಂದ ಜನರನ್ನು ರಕ್ಷಿಸುವುದು ಮಾತ್ರವಲ್ಲದೆ, ಸಮಾಜದಲ್ಲಿ ಅರಾಜಕತೆ ಉಂಟಾದಾಗ ಜನರಿಗೆ ಯಾವ ಅನ್ಯಾಯ ಆಗದಂತೆ ನೋಡಿಕೊಳ್ಳುವುದು ಸಹ ಮುಖ್ಯ. ಸಾಮಾಜಿಕ ಸುವ್ಯವಸ್ಥೆಯನ್ನು ಮತ್ತು ಧರ್ಮವನ್ನು ಕಾಪಾಡಿಕೊಂಡು ಬರಬೇಕಾಗುತ್ತದೆ. ದೇಶದ ಹೊರಗೆ ಮತ್ತು ಒಳಗೆ ಆಂತರಿಕ ಶಾಂತಿಯನ್ನು ಕಾಪಾಡಿಕೊಂಡು ಬರುವುದು, ಸಾಮಾಜಿಕ ವ್ಯವಸ್ಥೆಯನ್ನು ಎತ್ತಿಹಿಡಿಯುವುದು, ಜನರು ಯಾವ ಭಯವೂ ಇಲ್ಲದೆ, ಸ್ವತಂತ್ರ ಜೀವನ ನಡೆಸುವಂತೆ ನೋಡಿಕೊಳ್ಳುವುದು – ಇವೆಲ್ಲಾ ರಕ್ಷಣೆ ಎಂಬುದಕ್ಕೆ ಇರುವ ವ್ಯಾಪಕ ಅರ್ಥ. ರಾಜಕೀಯಶಾಸ್ತ್ರದ ಬಗ್ಗೆ ಗ್ರಂಥಗಳನ್ನು ಬರೆದಿರುವ ಎಲ್ಲ ಬರಹಗಾರರು 'ರಕ್ಷಣೆ' ಎಂಬುದಕ್ಕೆ ಇದೇ ಅರ್ಥವನ್ನು ಕೊಟ್ಟಿದ್ದಾರೆ.

ನ್ಯಾಯ ನಿರ್ವಹಣೆ, ನ್ಯಾಯವನ್ನು ಕಾಪಾಡುವುದು, ತಪ್ಪಿತಸ್ಥರಿಗೆ ದಂಡನೆ ನೀಡುವುದು – ಇವು ರಕ್ಷಣಾ ಸಮಸ್ಯೆಯ ಇತರ ಅಂಶಗಳಾಗಿವೆ. ಸಮಾಜದ ಬಗಗೆ ಹಿಂದೂಗಳು ತಳೆದಿದ್ದ ದೃಷ್ಟಿಕೋನ ಹೀಗಿತ್ತು: "ಒಂದು ಸಹಜ ಸ್ಥಿತಿಯಲ್ಲಿ ಜನರು ಒಬ್ಬರ ವಿರುದ್ಧ ಮತ್ತೊಬ್ಬರು ಕಚ್ಚಾಡುತ್ತಲೇ ಇರುತ್ತಾರೆ. ಆಗ ದೊಡ್ಡ ಮೀನು ಸಣ್ಣಮೀನುಗಳನ್ನು ನುಂಗಿಹಾಕುವಂತಹ ಪರಿಸ್ಥಿತಿಯಿರುತ್ತದೆ. ರಕ್ಷಣೆ ಇಲ್ಲದಿದ್ದಾಗ ಜೀವನ ಎಷ್ಟು ಭೀಕರವಾಗಿರುತ್ತದೆ ಎಂಬುದರ ಚಿತ್ರಣವನ್ನು ಮಹಾಭಾರತ ನೀಡಿದೆ. ನಾಗರಿಕ ಜೀವನ ನಿರಾತಂಕವಾಗಿ ಸಾಗಬೇಕಾದರೆ ದಂಡನೆ ನೀಡುವುದು ಮತ್ತು ತಪ್ಪಿತಸ್ಥರ ವಿರುದ್ಧ ಬಲಾತ್ಕಾರದಿಂದ ಕ್ರಮ ಕೈಗೊಳ್ಳುವುದು ಅಗತ್ಯ." ಇದನ್ನು ಸೇಂಟ್ ಅಗಸ್ಟೀನ್ ನೀಡಿರುವ ಒಂದು ಹೇಳಿಕೆಗೆ ಹೋಲಿಸಬಹುದು. ಅದು ಹೀಗಿದೆ: "ನ್ಯಾಯವನ್ನು ಒತ್ತಟ್ಟಿಗಿರಿಸಿದರೆ, ರಾಜ್ಯವು ಕಳ್ಳತನ–ದರೋಡೆಗಳಿಂದ ತುಂಬಿಹೋಗುತ್ತದೆ." 'ಹಕ್ಕು' ಎಂಬುದು ಎಷ್ಟು ಮುಖ್ಯ ಎನ್ನುವುದನ್ನು ಸಿಸಿರೊ ಒತ್ತಿ ಹೇಳಿದ್ದಾನೆ. ಅವನ ಹೇಳಿಕೆಗೆ ಅಗಸ್ಟೀನ್ ಹೀಗೆ ಅರ್ಥವಿವರಣೆ ನೀಡಿದ್ದಾನೆ. "ಹಕ್ಕು ಎಂಬುದು ಪ್ರಜಾಸಮುದಾಯದ ಆಧಾರ ಎಂಬುದೇ ಸಿಸಿರೊ ಅವರ ಅರ್ಥ; ಎಲ್ಲಿ ಹಕ್ಕು ಇಲ್ಲವೋ ಅಲ್ಲಿ ನ್ಯಾಯ ನೆಲೆಸಿರಲು ಸಾಧ್ಯವಿಲ್ಲ" ಎಂದು ಅಗಸ್ಟೀನ್ ಹೇಳಿದ್ದಾರೆ.

ನ್ಯಾಯವನ್ನು ಎತ್ತಿ ಹಿಡಿಯುವುದು ರಾಜರ ಶ್ರೇಷ್ಠ ಕರ್ತವ್ಯವೆಂದು ಪರಿಗಣಿಸಲಾಗಿದೆ. ಮನು ಸಹಜವಾಗಿಯೇ ನ್ಯಾಯ ಸಂರಕ್ಷಣೆಗೆ ಹೆಚ್ಚು ಒತ್ತು ಕೊಟ್ಟಿದ್ದಾನೆ. ರಾಜನಿಗೆ ದೈವದತ್ತವಾಗಿ ಬಂದಿರುವ ಅಧಿಕಾರವು ಹಲವಾರು ಅಂಶಗಳಿಗೆ ಸಂಬಂಧಿಸಿದ್ದು. ಅದರಲ್ಲಿ ನ್ಯಾಯಪಾಲನೆ ಸೇರಿದೆ. "ಉದ್ದೇಶ, ಅಧಿಕಾರ, ಸ್ಥಳ ಮತ್ತು ಸಮಯ" ಇವುಗಳನ್ನು ಅತಿ ಜಾಗರೂಕತೆಯಿಂದ ಪರಿಶೀಲಿಸಿದನಂತರ ಮನು ಹೀಗೆ ಹೇಳುತ್ತಾನೆ. "ನ್ಯಾಯವನ್ನು ಸಂಪೂರ್ಣವಾಗಿ ಸಾಧಿಸಲು, ರಾಜನು, ನಾನಾ ರೂಪಗಳನ್ನು (ಇಂದ್ರ, ಅಗ್ನಿ, ಯಮ ಮುಂತಾದವು) ತಳೆಯುತ್ತಾನೆ. ಪಾಂಡಿತ್ಯ ಉಳ್ಳವರು ಮತ್ತು ಮೇಧಾವಿಗಳ ಸಹಾಯ ಪಡೆದು, ನ್ಯಾಯ ಪಾಲನೆಗೆ ಅತಿ ಹೆಚ್ಚಿನ ಗಮನ ಕೊಡಬೇಕೆಂದು ರಾಜನನ್ನು ಕೇಳಿಕೊಳ್ಳಲಾಗಿದೆ. ನ್ಯಾಯ ನಿರ್ವಹಣೆಗಾಗಿ ನಿಯಮಗಳನ್ನು ರೂಪಿಸಲಾಗುತ್ತದೆ. ನ್ಯಾಯಾಡಳಿತಕ್ಕಾಗಿ ರಾಜನಿಗೆ ಕಾನೂನುಬದ್ಧವಾದ ಎಲ್ಲ ಅಧಿಕಾರಗಳನ್ನು ಕೊಡಲಾಗುತ್ತದೆ. ಅಂತಿಮ ಹಂತದಲ್ಲಿ, ರಾಜರುಗಳೇ ನ್ಯಾಯ ನಿರ್ಧಾರವನ್ನು ಸ್ವತಃ ಕೈಗೊಳ್ಳುತ್ತಿದ್ದರು. ಇದಕ್ಕೆ ಸಂಬಂಧಿಸಿದ ಉಲ್ಲೇಖಗಳನ್ನು ಸಾಹಿತ್ಯದಲ್ಲೂ ಕಾಣಬಹುದು. ಉದಾಹರಣೆಗೆ, ಅಭಿಜ್ಞಾನ ಶಾಕುಂತಲಮ್ ನಾಟಕದಲ್ಲಿ ವ್ಯಾಪಾರಿಯೊಬ್ಬನ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಶ್ನೆ ಬಂದಾಗ, ಆ ವಿಷಯವನ್ನು ರಾಜನ ಸ್ವಂತ ನಿರ್ಧಾರಕ್ಕೆ ಬಿಡಲಾಗುತ್ತದೆ. ಮನು ಹೀಗೆ ಹೇಳುತ್ತಾನೆ: "ನ್ಯಾಯದ ಉಲ್ಲಂಘನೆ ವಿನಾಶದ

ಸಂಕೇತ. ನ್ಯಾಯವನ್ನು ಪಾಲಿಸುವುದು ಸಂರಕ್ಷಣೆಯ ಸಂಕೇತ." "ನ್ಯಾಯವನ್ನು ಯಾವಾಗಲೂ ಉಲ್ಲಂಘಿಸಬಾರದು. ಅದನ್ನು ಉಲ್ಲಂಘಿಸಿದರೆ ಅದೇ ನಮ್ಮನ್ನು ನಾಶಗೊಳಿಸುತ್ತದೆ." ಜನರ ಕರ್ಮದಲ್ಲಿ ರಾಜನಿಗೂ ಪಾಲು ಇರುತ್ತದೆ ಎಂಬ ಒಂದು ಮೂಲಭೂತ ನಂಬಿಕೆಯಿದೆ.

ರಾಜ್ಯದಲ್ಲಿನಡೆಯುವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳು ರಾಜನ ಆಧ್ಯಾತ್ಮಿಕ ಜೀವನದ ಭವಿಷ್ಯದ ಮೇಲೆ ಪರಿಣಾಮವುಂಟುಮಾಡುತ್ತದೆ ಎಂಬ ನಂಬಿಕೆಯಿತ್ತು. ಆದ್ದರಿಂದ ರಾಜ್ಯದಲ್ಲಿ ಇದು ನ್ಯಾಯವ್ಯವಸ್ಥೆಯನ್ನು ಕಾಪಾಡಿಕೊಂಡುಬರಲು ಒಂದು ಪ್ರಭಾವಶಾಲಿ ಸಾಧನವಾಗಿತ್ತು. ಋಷಿಗಳು ಒಳ್ಳೆಯದನ್ನೇ ಮಾಡಿದರೆ, ರಾಜನು ರಾಜರ್ಷಿಯಾಗುತ್ತಾನೆ. ರಾಜನು ನ್ಯಾಯವನ್ನು ಕಾಪಾಡದೆ, ಅಪರಾಧಗಳನ್ನು ಅಡಗಿಸದೇ ಇದ್ದರೆ ರಾಜನು ಸಹ ಒಬ್ಬ ಪಾತಕಿಯಾಗುತ್ತಾನೆ ಎಂಬುದು ಪ್ರಬಲ ನಂಬಿಕೆಯಾಗಿತ್ತು. ಮನು ಹೀಗೆ ಹೇಳುತ್ತಾನೆ: "ಎಲ್ಲೆಡೆ ನ್ಯಾಯಮಾರ್ಗವನ್ನು ಪ್ರೋತ್ಸಾಹಿಸುವಲ್ಲಿ ರಾಜನು ಒಂದು ಸಾಧನವಾಗುತ್ತಾನೆ. ಪ್ರಜೆಗಳನ್ನು ಅತ್ಯುತ್ತಮವಾಗಿ ಸಂರಕ್ಷಿಸುವ ಒಬ್ಬ ರಾಜನಿಗೆ, ಪ್ರತಿಯೊಬ್ಬ ವ್ಯಕ್ತಿಯು ಮಾಡುವ ಒಳ್ಳೆಯ ಕೆಲಸದ ಆರನೆಯ ಒಂದು ಭಾಗದಷ್ಟು ಪುಣ್ಯ ಲಭಿಸುತ್ತದೆ. ರಾಜನು ಪ್ರಜೆಗಳ ಸಂರಕ್ಷಣೆಯನ್ನು ಸರಿಯಾಗಿ ಮಾಡದೇ ಇದ್ದರೆ, ಪ್ರಜೆಗಳಿಂದಾಗುವ ತಪ್ಪುಗಳ ಆರನೇ ಒಂದು ಭಾಗದಷ್ಟು ಪಾಪವೂ ರಾಜನಿಗೆ ತಟ್ಟುತ್ತದೆ." ಇದೇ ಸಿದ್ಧಾಂತವು, ಎಲ್ಲ ಗ್ರಂಥಗಳಲ್ಲೂ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಇದು ನಿಜವಾಗಿಯೂ ಹಿಂದೂ ರಾಜಕೀಯ ಚಿಂತನೆಯ ಒಂದು ಮೂಲಭಾವನೆ.

ರಾಜಧರ್ಮದಲ್ಲಿರುವ ಸಿದ್ಧಾಂತಗಳ ಪ್ರಕಾರ, ರಾಜನು ನ್ಯಾಯಾಂಗದ ಚಿಲುಮೆಯಲ್ಲ. ಅವನು ನ್ಯಾಯಾಡಳಿತವನ್ನು ಮಾತ್ರ ನಿರ್ವಹಿಸುತ್ತಾನೆ. ನ್ಯಾಯವೇ ದೇವರು, ನ್ಯಾಯದ ಸಾಮಾಜಿಕ ರೂಪಗಳನ್ನು ಸ್ಮೃತಿಗಳಲ್ಲಿ ನಮೂದಿಸಲಾಗಿದೆ. ಸ್ಮೃತಿಗಳ ಸೃಷ್ಟಿಕರ್ತರು ರಾಜರಾಗಿರಲಿಲ್ಲ. ಅವರು ಋಷಿಮುನಿಗಳಾಗಿದ್ದರು ಮತ್ತು ವಿಷಯಗಳನ್ನು ಚೆನ್ನಾಗಿ ಅರಿತಿದ್ದ ಜ್ಞಾನಿಗಳಾಗಿದ್ದರು. ರಾಜ, ಯುಗದ ಸೃಷ್ಟಿಕರ್ತ. ಆದ್ದರಿಂದ ಪದ್ಧತಿಗಳನ್ನು ಮಾತ್ರ ಅವನು ಬದಲಾಯಿಸಬಲ್ಲವನಾಗಿದ್ದನು. ಆದರೆ ಕಾನೂನುಗಳನ್ನು ಅವನು ಬದಲಾಯಿಸುವಂತಿರಲಿಲ್ಲ. ಸ್ಮೃತಿಗಳಲ್ಲಿ ಯಾವ ಆಧಾರದ ಮೇಲೆ ದಂಡನೆಯನ್ನು ಸೂಚಿಸಲಾಗಿದೆಯೋ ಅದನ್ನು ಬದಲಾಯಿಸಲು ರಾಜನಿಗೆ ಅವಕಾಶವಿರಲಿಲ್ಲ.

ಇದು, ಹಿಂದೂ ಸಿದ್ಧಾಂತಕಾರರ ದೃಷ್ಟಿಯಲ್ಲಿ ನ್ಯಾಯ ಸಂರಕ್ಷಣಾ ಕಾರ್ಯದ ಒಂದು ಭಾಗವಾಗಿತ್ತು. ರಾಜನು ಸಾಮಾಜಿಕ ರಕ್ಷಣೆಯ ತತ್ತ್ವ ಮತ್ತು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು ಇವುಗಳ ಮೂರ್ತಸ್ವರೂಪನಾಗಿದ್ದನೆಂದು ಹೇಳಬಹುದಾಗಿತ್ತು. ಇದರಿಂದ ವ್ಯಕ್ತಿಯು ಯಾವುದರಿಂದಲೂ ಪೀಡಿತನಾಗದೆ, ಸಮಾಜದಲ್ಲಿ

ಸಂತೋಷದಿಂದ ಬಾಳಲು ಸಾಧ್ಯವಿತ್ತು. ಕಾನೂನನ್ನು ಅನುಷ್ಠಾನಕ್ಕೆ ತರುವುದು ರಾಜನ ಪ್ರಪ್ರಥಮ ಕರ್ತವ್ಯವೆಂದು ಪರಿಗಣಿಸಲಗಿತ್ತು. ಇದು ಪರಿಪಾಲನೆ ಮತ್ತು ರಕ್ಷಣೆಯ ಒಂದು ಅವಿಭಾಜ್ಯ ಅಂಗವಾಗಿತ್ತು. ಹಾಗಾದರೆ, ರಾಜನು ನಿರ್ವಹಿಸಬೇಕಾಗಿದ್ದುದು ಎಂತಹ ನ್ಯಾಯವನ್ನು ಎಂಬ ಪ್ರಶ್ನೆ ಏಳುತ್ತದೆ. ಹಿಂದೂ ಸಿದ್ಧಾಂತಕಾರರು ಈ ವಿಷಯದಲ್ಲಿ ನಮಗೆ ಯಾವ ಸಂದೇಹವನ್ನೂ ಉಳಿಸಿಲ್ಲ. ಶಾಂತಿಪರ್ವದಲ್ಲಿ ರಾಜನು ಭೀಷ್ಮನನ್ನು ಹೀಗೆ ಕೇಳುತ್ತಾನೆ: "ನ್ಯಾಯವೆಂದರೆ ಯಾವುದು? ಅದರ ಗುಣಲಕ್ಷಣವೇನು? ಅದು ಯಾವ ರೂಪದಲ್ಲಿರುತ್ತದೆ? ಅದರ ಮೂಲತತ್ತ್ವವೇನು? ಅದು ಹೇಗೆ ಮತ್ತೆ ಜಾಗೃತವಾಗಿಯೇ ಉಳಿಯುತ್ತದೆ? ಜನರ ಮಧ್ಯೆ ನ್ಯಾಯ ಹೇಗೆ ಉಳಿದುಕೊಂಡುಬರುತ್ತದೆ? ನ್ಯಾಯ, ಸದಾ ಹೇಗೆ ಎಚ್ಚೆತ್ತುಕೊಂಡಿರುತ್ತದೆ? ಅದು ಹೇಗೆ ನಿರಂತರವಾಗಿ ರೂಪುಗೊಳ್ಳುತ್ತಿರುತ್ತದೆ? ಅದು ಎಲ್ಲಿ ನೆಲೆಸಿರುತ್ತದೆ? ಅದರ ವಿಧಾನಗಳಾವುವು?"[೭]

ಈ ಪ್ರಶ್ನೆಗಳು ಎಲ್ಲ ವಿಷಯಗಳನ್ನೂ ಒಳಗೊಂಡಿರುವುದು ಮಾತ್ರವಲ್ಲದೆ, ಒಂದು ಸಾಮಾಜಿಕ ತತ್ತ್ವವಾಗಿ ನ್ಯಾಯ ಎಂಬ ಭಾವನೆಗೆ ಸಂಬಂಧಿಸಿದ ಎಲ್ಲ ಮುಖ್ಯ ವಿಷಯಗಳೂ ಅದರಲ್ಲಿವೆ.

ಈ ಪ್ರಶ್ನೆಗಳಿಗೆ ಭೀಷ್ಮನು ಉತ್ತರಗಳನ್ನು ಕೊಟ್ಟಿರುತ್ತಾನೆ. ಈ ಉತ್ತರಗಳಲ್ಲಿ, ಹಿಂದೂಗಳ ದೃಷ್ಟಿಯಲ್ಲಿ ನ್ಯಾಯ ಎಂಬುದು ಅತ್ಯುತ್ತಮವಾಗಿ ಅಭಿವ್ಯಕ್ತಗೊಂಡಿದೆ.

ನ್ಯಾಯ ನಿರ್ವಹಣೆಯಲ್ಲಿ ದಂಡನೆ (ದಂಡ) ನ್ಯಾಯಕ್ಕೆ ಧಕ್ಕೆ ಉಂಟಾಗದಂತೆ ನೋಡಿಕೊಳ್ಳಲು ರಾಜ ಸದಾ ಎಚ್ಚೆತ್ತುಕೊಂಡಿರುತ್ತಾನೆ. ಆದ್ದರಿಂದ ಅವನ ಪ್ರಾಮಾಣಿಕತೆಗೆ ಭಂಗವುಂಟಾಗಬಾರದು. ಅವನಲ್ಲಿರುವ ಪ್ರಾಮಾಣಿಕತೆಗೆ ಅಳಿವುಂಟಾಗಬಾರದು. ಅದು ಜಗತ್ತಿನ ರಕ್ಷಕನಾದ ಮಹಾವಿಷ್ಣುವಿನ ಅಂಶ. ಅದು ಶಾಶ್ವತವಾದ ಮತ್ತು ಚಿರಸ್ಥಾಯಿಯಾದ ದೇವರ ಒಂದು ರೂಪ. ಲಕ್ಷ್ಮಿ ಎಂಬ ಹೆಸರಿನಿಂದ ಪರಿಚಿತಳಾಗಿರುವ ಲಕ್ಷ್ಮಿ ದೇವರ ಪುತ್ರಿ, ಅವಳು ಸಂಪತ್ತಿನ ಅಧಿದೇವತೆ. ನೀತಿ (ನೈತಿಕ ಕಾನೂನುಗಳು) ಸರಸ್ವತಿ (ವಿದ್ಯಾಧಿದೇವತೆ) ಮತ್ತು ದಂಡನೀತಿ (ನಿರ್ಬಂಧಕ ನ್ಯಾಯ).

ಇಲ್ಲಿ ಭೀಷ್ಮನು ಎರಡು ಅತಿ ಮುಖ್ಯ ವಿಚಾರಗಳನ್ನು ತರುತ್ತಾನೆ. ಮೊದಲನೆಯದಾಗಿ, ನ್ಯಾಯಾವು ಸಮಾಜವನ್ನು ಒಟ್ಟಿಗೆ ಬೆಸೆಯುತ್ತದೆ. ಇದು ರಕ್ಷಣೆಗೆ ಸಹಕಾರಿಯಾದ ಒಂದು ದೊಡ್ಡ ತತ್ತ್ವ. ಎರಡನೆಯದಾಗಿ, ಆರ್ಥಿಕ ಅಭ್ಯುದಯ, ನೀತಿವಂತರಾಗಿ ನೆಮ್ಮದಿಯಿಂದ ಬಾಳುವುದು ಮತ್ತು ಸಾಂಸ್ಕೃತಿಕ ಮುನ್ನಡಿ– ಇವೆಲ್ಲವೂ ನ್ಯಾಯವನ್ನು ಅವಲಂಬಿಸಿರುತ್ತವೆ.ಸಮಾಜವು ನ್ಯಾಯದ ಆಧಾರದ ಮೇಲೆ ನಿಂತಿದೆ. ಅದು, ನ್ಯಾಯವನ್ನೇ ಅವಲಂಬಿಸಿರುತ್ತದೆ. ಅದು ಸಮಾಜವನ್ನೇ ರೂಪಿಸುತ್ತದೆ. ರಾಜನು ಸದಾ ಜಾಗೃತನಾಗಿರಬೇಕು. ರಾಜನ

ನಿಸ್ಪೃಹತೆ, ಅವನ ನ್ಯಾಯನಿರ್ವಹಣೆಯನ್ನು ಅವಲಂಬಿಸಿರುತ್ತದೆ. ಮನು ಸಹ ಇದೇ ಅಂಶವನ್ನು ಒತ್ತಿ ಹೇಳಿದ್ದಾನೆ: "ದಂಡನೆಯೇ ರಾಜ, ಅದೇ ಪ್ರಭು. ಅದರಿಂದಲೇ ಸಂರಕ್ಷಣೆ ದೊರೆಯುತ್ತದೆ. ಅದು ಇಡೀ ರಾಜ್ಯವನ್ನು ನಿಯಂತ್ರಣದಲ್ಲಿಟ್ಟಿರುತ್ತದೆ. ಬುದ್ಧಿವಂತರಾದವರು, ದಂಡನೆಯೇ ಸಾಮಾಜಿಕ ಸಂಸ್ಥೆಯ ಸುರಕ್ಷತೆಯೆಂದು ಪರಿಗಣಿಸುತ್ತಾರೆ."

ನಿಜವಾಗಿ, ಕಾನೂನುದಾತನಂತಿರುವ ಮನು, ನ್ಯಾಯವು ಘನತೆಯ ಸ್ವರೂಪ ಮತ್ತು ಅದು ಸರ್ವವ್ಯಾಪಿ ಎಂದಿದ್ದಾನೆ. ಎಲ್ಲರೂ ನಿದ್ರಿಸುತ್ತಿರುವಾಗ, ನ್ಯಾಯ ಎಚ್ಚರವಾಗಿರುತ್ತದೆ. ನ್ಯಾಯಕ್ಕಾಗಿ ದಂಡನೆ ವಿಧಿಸುವುದು ಧರ್ಮ ಎಂಬುದನ್ನು ಜ್ಞಾನಿಗಳು ಬಲ್ಲರು. ನ್ಯಾಯಾಡಳಿತವನ್ನು ಸೂಕ್ತವಾಗಿ ನಿರ್ವಹಿಸಿಕೊಂಡು ಹೋದಾಗ ಮಾತ್ರ ಜನರು ಸುಖವಾಗಿರುತ್ತಾರೆ. ಸಂತೋಷದಿಂದಿರುತ್ತಾರೆ.

ನ್ಯಾಯಕ್ಕೆ ಅತ್ಯಂತ ಘನವಾದ ಸ್ಥಾನವನ್ನು ಕೊಡಲಾಯಿತು. ಅದರೊಂದಿಗೆ, ರಾಜನು ತನ್ನ ಮನಸ್ಸಿಗೆ ಬಂದಂತೆ ನ್ಯಾಯವೊದಗಿಸುವ ಅಧಿಕಾರವನ್ನು ಚಲಾಯಿಸದಂತೆ ನೋಡಿಕೊಳ್ಳಲು ನ್ಯಾಯದಾತರು ಮತ್ತು ಆಚಾರ್ಯರುಗಳು ಕೆಲವು ನಿರ್ಬಂಧಗಳನ್ನು ಸಹ ಸೂಚಿಸಿದರು. ನ್ಯಾಯವಾಗಿ ನೀಡುವ ದಂಡನೆಯು ರಾಜನು ಮಾಡಿದ ಎಲ್ಲ ಸತ್ಕರ್ಮಗಳನ್ನು ನಾಶಪಡಿಸುತ್ತದೆ. ಇದರಿಂದ ಅವನು ಸ್ವರ್ಗಕ್ಕೆ ಹೋಗುವ ಅವಕಾಶವನ್ನು ಕಳೆದುಕೊಳ್ಳುತ್ತಾನೆ. ಆದ್ದರಿಂದ ರಾಜನು ಯಾರಿಗಾಗಲಿ ಅನ್ಯಾಯವಾಗುವಂತಹ ದಂಡನೆಯನ್ನು ನೀಡಬಾರದು. ಪ್ರತಿಯೊಂದು ಪ್ರಕರಣದಲ್ಲೂ, ಅದರಲ್ಲಿರುವ ಒಳಿತು–ಕೆಡುಕು ಅಂಶಗಳನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಿ, ಅನಂತರ ತಪ್ಪಿತಸ್ಥರಿಗೆ ದಂಡನೆ ನೀಡಬೇಕೆಂಬ ನಿಯಮವನ್ನು ಕಾನೂನುದಾತರು ವಿಧಿಸಿದ್ದಾರೆ. ಪ್ರತಿಯೊಂದು ಸಂದರ್ಭದಲ್ಲೂ ಸ್ಥಳ, ಸಮಯ, ಸಾಮರ್ಥ್ಯ ಮತ್ತು ತಿಳಿವಳಿಕೆ– ಇವುಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಿ ನೋಡಿದ ನಂತರವೇ ತೀರ್ಮಾನಕ್ಕೆ ಬರಬೇಕು. ಮನುವಿನ ವ್ಯಾಖ್ಯಾನಕಾರನಾಗಿದ್ದ ಕುಲ್ಲೂಕ ಭಟ್ಟ ಎಂಬಾತನು ಕಾನೂನುದಾತರು ವಿಧಿಸಿರುವ ಪ್ರತಿಬಂಧಕಾಜ್ಞೆಗಳನ್ನು ಮುಂದೆ ಕಂಡ ರೀತಿಯಲ್ಲಿ ವಿವರಿಸಿದ್ದಾರೆ.

"ಪ್ರತಿಯೊಂದು ಸ್ಥಳದಲ್ಲೂ, ಕೆಳಗೆ ಕೊಟ್ಟಿರುವ ವಿವರಣೆಯ ಆಧಾರದ ಮೇಲೆ ದಂಡನೆಯನ್ನು ನೀಡಬೇಕು."

"ದಂಡನೆಯನ್ನು ನೀಡುವಾಗ ಆನುವಂಶಿಕ ಪ್ರವೃತ್ತಿ, ಧ್ಯೇಯೋದ್ದೇಶಗಳು, ಸಮಯ, ಸ್ಥಳ, ಹಣಕಾಸು ಪರಿಸ್ಥಿತಿ ಇವೇ ಮುಂತಾದ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಮಾತ್ರ, ಶಿಕ್ಷೆಯನ್ನು ಕೊಡಬೇಕು."

ಅನುಬಂಧಂ ಪರಿಜ್ಞಾಯ ದೇಶಕಾಲೌ ಚ ತತ್ತ್ವತಃ
ಸರಾಪರಾಧೌ ಚಾಲೋಕ್ಯ ದಂಡಂ ದಂಡ್ಯೇಷು ಪಾತಯೇತ್"

ಪಠ್ಯದ ಪೂರ್ಣ ಅರ್ಥ ಹೀಗಿದೆ:

ಒಬ್ಬ ವ್ಯಕ್ತಿ ತನ್ನ ಸಂಬಂಧಿಗಳ ಆಸೆ–ಆಕಾಂಕ್ಷೆಗಳ ಈಡೇರಿಕೆಗಾಗಿ ಅಥವಾ ಧಾರ್ಮಿಕ ಸಂಘಗಳ ಸಹಯೋಗಕ್ಕಾಗಿ ಅಥವಾ ಮದ್ಯಪಾನ, ಜೂಜು ಅಥವಾ ತಪ್ಪು ಅಭಿಪ್ರಾಯಗಳನ್ನು ಉತ್ತೇಜಿಸುವುದಕ್ಕಾಗಿ ಪದೇಪದೇ ಹಾದಿ ತಪ್ಪಲು ಪ್ರೇರಿತನಾಗುವುದು– ಇವೆಲ್ಲವೂ ಅನುಬಂಧದ ಪ್ರಕರಣಗಳು. ದೇಶವೆಂದರೆ ಗ್ರಾಮ, ಅರಣ್ಯ, ಮರುಭೂಮಿ, ನೀರು, ಹುಟ್ಟಿದ ಸ್ಥಳ ಇತ್ಯಾದಿ. ಕಾಲ ಎಂದರೆ ರಾತ್ರಿ, ಹಗಲು, ಸಮೃದ್ಧಿಯ ಸಮಯ ಅಥವಾ ಅಭಾವದ ಸಮಯ, ಬಾಲ್ಯ, ಶಿಶುತನ, ಯೌವ್ವನ ಇತ್ಯಾದಿ.

ಸಾನ ಎಂದರೆ ಸಾಮರ್ಥ್ಯ ಮತ್ತು ಅಸಾಮರ್ಥ್ಯ, ಶ್ರೀಮಂತಿಕೆ ಮತ್ತು ಬಡತನ. ಅಪರಾಧಗಳಲ್ಲಿ ಹದಿನೆಂಟು ವಿಧಗಳಿವೆ. ಆದ್ದರಿಂದ ಒಬ್ಬ ವ್ಯಕ್ತಿಯ ಅಪರಾಧದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮುಂಚೆ ಕೆಲವೊಂದು ಅಂಶಗಳನ್ನು ಪರಿಶೀಲಿಸುವುದು ಅಗತ್ಯವಾಗುತ್ತದೆ. ಆ ವ್ಯಕ್ತಿಗೆ ಸಂಬಂಧಿಸಿದಂತೆ, ಹಿಂದಿನ ಸಂಗತಿಗಳನ್ನು ಪರಿಶೀಲಿಸಬೇಕು. ಅನಂತರ ಪರಿಣಾಮಗಳನ್ನು ಕುರಿತು ಯೋಚಿಸಬೇಕಾಗುತ್ತದೆ. ಈ ಎಲ್ಲ ಅಂಶಗಳನ್ನು ಅತಿ ಎಚ್ಚರಿಕೆಯಿಂದ ಪರಿಶೀಲಿಸಿ, ಒಂದು ತೀರ್ಮಾನಕ್ಕೆ ಬರಬೇಕು. ಸುಸ್ಥಿರವಾಗಿ ನೆಲೆಸಿರುವ ಪರಿಸ್ಥಿತಿಗೆ ಹಾಗೂ ವ್ಯವಸ್ಥೆಗೆ ಧಕ್ಕೆಯುಂಟಾಗದ ರೀತಿಯಲ್ಲಿ ಶಿಕ್ಷೆಯನ್ನು ಕೊಡಬೇಕಾಗುತ್ತದೆ.

ರಾಜನು ತನ್ನ ನ್ಯಾಯನಿರ್ವಹಣಾ ಕಾರ್ಯದಲ್ಲಿ ನಿರಂಕುಶನಾಗಿ ವರ್ತಿಸಬಾರದು. ಹಿಂದುಮುಂದು ನೋಡದೆ ದಿಢೀರನೆ ತೀರ್ಪು ನೀಡಬಾರದು. ರಾಜನೇ ಕಾನೂನಿನ ಒಂದು ಬಾಹು. ರಾಜನು ನೀತಿ–ಧರ್ಮಗಳ ನೆಲೆವೀಡು. ನ್ಯಾಯವನ್ನೊದಗಿಸುವ ಮೂಲಕ ಅವನು ಸಮಾಜವನ್ನು ಸಂರಕ್ಷಿಸಬೇಕು.

ಸರ್ವಜನರ ಸುಖ–ಸಮೃದ್ಧಿಗಳೇ ಸಂರಕ್ಷಣೆಯ ಧ್ಯೇಯವಾಗಿರಬೇಕು. ರಾಜನ ಯಾವುದೇ ಕ್ರಮವಾಗಲಿ ಅಥವಾ ಪ್ರಯತ್ನವಾಗಲಿ, ಅದರ ಮುಖ್ಯ ಧ್ಯೇಯ, ಪ್ರಜೆಗಳ ಹಿತಸಂರಕ್ಷಣೆಯೇ ಆಗಿರಬೇಕು. "ಯಾರು ಪ್ರಜೆಗಳ ಪ್ರೀತಿಯನ್ನು ಸದಾ ಗಳಿಸಿರುತ್ತಾನೆಯೋ ಅವನೇ ರಾಜ." ಇದೇ ರಾಜ ಎಂಬ ಶಬ್ದದ ಅರ್ಥ. ರಾಜನ ಧ್ಯೇಯೋದ್ದೇಶಗಳು ಮತ್ತು ಕರ್ತವ್ಯಗಳನ್ನು ವಿವರಿಸಿರುವ ಕೌಟಿಲ್ಯ ಹೀಗೆ ತಿಳಿಸಿದ್ದಾನೆ: "ಸಮುತ್ಥಾನೇನ ಯೋಗಕ್ಷೇಮ ಸಂಧಾನಮ್" – ಅಂದರೆ ಪ್ರಜಾಸಮುದಾಯದ ಯೋಗಕ್ಷೇಮವನ್ನು ಸದಾ ನೋಡಿಕೊಳ್ಳುತ್ತಿರಬೇಕು. ಅದಕ್ಕಾಗಿ ರಾಜನು ಸದಾ ಪ್ರಯತ್ನಿಸುತ್ತಿರಬೇಕು.

ಜನರ ಹಿತಕ್ಕಾಗಿ ಇಂತಹ ಪ್ರಯತ್ನವನ್ನು ಅವಿರತವಾಗಿ ಮುಂದುವರಿಸುವುದೇ ರಾಜನ ಮತ್ತು ರಾಜ್ಯದ ಮುಂದಿರುವ ಕರ್ತವ್ಯ. ಧರ್ಮವನ್ನು ಎತ್ತಿಹಿಡಿಯುವುದು, ನ್ಯಾಯ ನಿರ್ವಹಣೆ ಮಾಡುವುದು ಮತ್ತು ಜನರನ್ನು ಸಂರಕ್ಷಿಸುವುದು – ಇವಿಷ್ಟಕ್ಕೇ ರಾಜನ ಕಾರ್ಯ ಸೀಮಿತಗೊಳ್ಳಬಾರದು. ಇವು ಕೇವಲ ನಿಷ್ಕ್ರಿಯ ಗುಣಧರ್ಮಗಳು. ರಾಜನು ಇನ್ನೂ ಹೆಚ್ಚು ಕ್ರಿಯಾತ್ಮಕ ಕರ್ತವ್ಯಗಳನ್ನು ಹೊಂದಿರುತ್ತಾನೆ. ಅವನ್ನು ಕೌಟಿಲ್ಯ ಹೀಗೆ ವಿವರಿಸಿದ್ದಾನೆ.

ಪ್ರಜಾಸುಖೇ ಸುಖಂ ರಾಜ್ಞಃ
ಪ್ರಜಾನಾಂ ಚ ಹಿತೇ ಹಿತಂ
ನಾತ್ಮಪ್ರಿಯಂ ಹಿತಂ ರಾಜ್ಞಃ
ತಸ್ಮಾದ್ ನಿತ್ಯೋತ್ಥಿತೋ ರಾಜಾ
ಕುರ್ಯಾದ್ ಅರ್ಥಾನುಶಾಸನಮ್
ಅರ್ಥಸ್ಯ ಮೂಲಂ ಉತ್ಥಾನಮ್
ಅನರ್ಥಸ್ಯ ವಿಪರ್ಯಯಃ

ಜನರ ಸುಖ–ಸಂತೋಷಗಳೇ ರಾಜನ ಸುಖಸಂತೋಷಗಳು; ಜನರ ಹಿತವೇ ರಾಜನ ಹಿತ; ಅವನ ಸ್ವಂತ ಹಿತ, ಅವನ ನಿಜವಾದ ಹಿತವಲ್ಲ. ಅವನ ಜನರ ಹಿತವೊಂದೇ ನಿಜವಾದ ಹಿತ. ಆದ್ದರಿಂದ ರಾಜನು ತನ್ನ ಪ್ರಜೆಗಳ ಕ್ಷೇಮ ಮತ್ತು ಅಭ್ಯುದಯಕ್ಕಾಗಿ ಸಕ್ರಿಯ ಪ್ರಯತ್ನದಲ್ಲಿ ತೊಡಗಬೇಕು.

ಉತ್ಸಾಹಭರಿತ ಪ್ರಯತ್ನ ಅಭ್ಯುದಯಕ್ಕೆ ಚೇತನವೀಯುತ್ತದೆ. ಪ್ರಯತ್ನಶೀಲತೆ ಇಲ್ಲವಾದಾಗ ವಿನಾಶಕ್ಕೆ ನಾಂದಿಯಾಗುತ್ತದೆ.

ಮಹಾಭಾರತದಲ್ಲಿ ಅನೇಕ ನೈತಿಕ ನಿಬಂಧನೆಗಳಿವೆ. ಅವೆಲ್ಲವೂ ಈ ಮೇಲಿನ ತತ್ತ್ವಗಳ ಮೇಲೆ ಆಧಾರಗೊಂಡಿವೆ. ಇವಕ್ಕೆ ಮತ್ತಷ್ಟನ್ನು ಸೇರಿಸುವ ಅಗತ್ಯವಿರುವುದಿಲ್ಲ. ಈ ಸಂದರ್ಭದಲ್ಲಿ ಮಹಾಭಾರತದಲ್ಲಿರುವ ಅತಿ ಮುಖ್ಯ ಅಂಶವೊಂದನ್ನು ನಾವು ಮರೆಯಬಾರದು. ಭೀಷ್ಮಾಚಾರ್ಯ, ಯುಧಿಷ್ಠಿರನಿಗೆ ಎಷ್ಟೋ ಹಿತವಚನಗಳನ್ನು ನೀಡಿದ್ದಾನೆ. ಧೃತರಾಷ್ಟ್ರನು ನೀಡಿರುವ ಹಿತವಚನಗಳು ಇವೆಲ್ಲಕ್ಕಿಂತಲೂ ಅತಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ಅಂಧನಾಗಿದ್ದ ಧೃತರಾಷ್ಟ್ರ ತನ್ನ ಪುತ್ರ ದುರ್ಯೋಧನನ ಬಗ್ಗೆ, ರಾಜಧಾನಿಯಲ್ಲಿ ಜನರನ್ನು ಉದ್ದೇಶಿಸಿ ಹೇಳಿದ ಮಾತುಗಳು ಅಸಾಧಾರಣವಾದವು. ಯುಧಿಷ್ಠಿರನು ಒಬ್ಬ ಆದರ್ಶಪ್ರಾಯನಾಗಿದ್ದ ದೊರೆ. ಅಂತಹ ದೊರೆಗೆ ಭೀಷ್ಮನು ಹೀಗೆ ಹೇಳುತ್ತಾನೆ: ಜನರ ಹಿತರಕ್ಷಣೆಯ ಪ್ರಶ್ನೆ ಬಂದಾಗ ರಾಜನು ತನ್ನ ಹಿತವನ್ನು ಕಡೆಗಣಿಸಬೇಕೆಂಬ ಹಿತವಚನ ನೀಡುತ್ತಾನೆ. ಆದರೆ, ಧೃತರಾಷ್ಟ್ರನು ತನ್ನ ಜನರನ್ನು ಉದ್ದೇಶಿಸಿ ಹೇಳಿದ ಕೆಲವು ಮಾತುಗಳಿಗೆ ಯಾವುದೂ

ಸಾಟಿಯಾಗಲಾರದು. ಆ ಸಂದರ್ಭವನ್ನು ನಾವು ಈಗ ಇಲ್ಲಿ ಸ್ಮರಿಸಿಕೊಳ್ಳಬಹುದು. ಧುರ್ಯೋದನ ಮತ್ತು ಅವನ ಸೋದರರು ಯುದ್ಧದಲ್ಲಿ ಹತರಾದರು. ಅನಂತರ ಪಾಂಡವರು ಸಿಂಹಾಸನಾಧೀಶರಾದರು. ಇವೆಲ್ಲವೂ ನಡೆದ ಬಳಿಕ, ಮೃತರಾಜನ ತಂದೆ ಧೃತರಾಷ್ಟ್ರ ಸ್ವಲ್ಪ ಕಾಲ ರಾಜಧಾನಿಯಲ್ಲೇ ನೆಲೆಸಿರುತ್ತಾನೆ. ಸ್ವಲ್ಪ ಕಾಲಾನಂತರ ಅವನು ಅರಣ್ಯಕ್ಕೆ ಹೊರಟುಹೋಗಲು ನಿರ್ಧರಿಸುತ್ತಾನೆ. ಇದಕ್ಕೆ ಮುಂಚೆ, ಅವನು ರಾಜಧಾನಿಯಲ್ಲಿದ್ದ ಎಲ್ಲ ಜನರ ಸಮೂಹವನ್ನು ಉದ್ದೇಶಿಸಿ, ಮಾತನಾಡುತ್ತಾನೆ. ಆಗ ಧೃತರಾಷ್ಟ್ರನು ತನ್ನ ಮಗನನ್ನು ಸಮರ್ಥಿಸಿಕೊಳ್ಳುತ್ತಾನೆ. ಪುರು ವಂಶದವರು ಹೇಗೆ ಧರ್ಮದಿಂದ ರಾಜ್ಯವನ್ನಾಳುತ್ತಿದ್ದರೆಂಬುದನ್ನು ಅವನು ಸ್ಮರಿಸಿಕೊಳ್ಳುತ್ತಾನೆ. ಆ ಪರಂಪರೆಯಲ್ಲಿ ಬಂದ ಪ್ರತಿಯೊಬ್ಬ ರಾಜನು, ಜನರ ಹಿತವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ರಾಜ್ಯಭಾರ ಮಾಡುತ್ತಿದ್ದನು. ದುರ್ಯೋಧನನೇ ಸ್ವತಃ ಅತಿ ಹೆಚ್ಚಿನ ವಿನಾಶಕ್ಕೆ ಕಾರಣಭೂತನಾದನು. ಅವನ ಅತಿಯಾಸೆಯೇ ಇದಕ್ಕೆ ಮೂಲವಾಯಿತು. ಆದರೂ ಅವನು ತನ್ನ ವಂಶದ ಪರಂಪರೆಯನ್ನು ಸಂಪೂರ್ಣವಾಗಿ ಕಾಪಾಡಿದನು. ಧರ್ಮ ಮತ್ತು ನ್ಯಾಯವನ್ನು ಎತ್ತಿ ಹಿಡಿಯುವ ಈ ಪರಂಪರೆಯನ್ನು ಅವನು ಎಂದಿಗೂ ಬಿಡಲಿಲ್ಲ ಎಂದು ಧೃತರಾಷ್ಟ್ರ ಹೇಳಿದನು.

ಜನಸಮೂಹದ ನಾಯಕನಾಗಿದ್ದ ಶಾಕಲ್ಯನು ಧೃತರಾಷ್ಟ್ರ ಆಡಿದ ಮಾತುಗಳಿಗೆ ಉತ್ತರ ಕೊಡುತ್ತಾ, ಈ ರೀತಿ ತಿಳಿಸಿದನು:

ಶಂತನು ಮತ್ತು ಚಿತ್ರಾಂಗದನಂತೆ, ಭೀಷ್ಮ ಮತ್ತು ಪಾಂಡುವಿನ ಬೆಂಬಲ ಹಾಗೂ ನಿಮ್ಮ ಯೋಗ್ಯ ಸಲಹೆಯೊಂದಿಗೆ, ನಿಮ್ಮ ತಂದೆ ಅನುಸರಿಸುತ್ತಿದ್ದಂತಹ ಮಾರ್ಗದಲ್ಲೇ ದುರ್ಯೋಧನನು ನಮ್ಮನ್ನು ಕಾಪಾಡಿದ್ದಾನೆ. ಅವನು ಯಾವ ರೀತಿಯಲ್ಲೂ ನಮ್ಮ ಮೇಲೆ ದಬ್ಬಾಳಿಕೆ ನಡೆಸಲಿಲ್ಲ. ನಮ್ಮನ್ನು ಪೀಡಿಸಲಿಲ್ಲ. ನಿಮ್ಮ ತಂದೆಯ ಮೇಲೆ, ನಾವು ಎಷ್ಟು ನಂಬಿಕೆ ಇಟ್ಟಿದ್ದೆವೋ ಅಷ್ಟೇ ನಂಬಿಕೆಯನ್ನು ಅವನಲ್ಲಿಟ್ಟು, ನಾವು ಸಂತೋಷದಿಂದ ಬಾಳುತ್ತಿದ್ದೆವು.

ನೀತಿಶಾಸ್ತ್ರವೇ ಪ್ರಧಾವಾಗಿರುವಂತಹ ಒಂದು ಗ್ರಂಥ, ಮಹಾಭಾರತ. ಅದನ್ನು ಐದನೆಯ ವೇದವೆಂದೇ ಕರೆಯಲಾಗುತ್ತದೆ. ಆದರೂ ಅದರಲ್ಲಿ ಗಮನಾರ್ಹವಾದ ಒಂದು ಅಂಶವಿದೆ. ಅದೇನೆಂದರೆ ರಾಜನ ಕರ್ತವ್ಯಗಳನ್ನು ತಿಳಿಸುವ ಅಧ್ಯಾಯಗಳಲ್ಲಿ, ರಾಜನ ಜಾತ್ಯತೀತ ಸ್ವಭಾವಕ್ಕೆ ಅತಿ ಹೆಚ್ಚಿನ ಮಹತ್ವ ಕೊಡಲಾಗಿದೆ. ಇದರೊಂದಿಗೆ, ಜನರತ್ತ ರಾಜನ ಕರ್ತವ್ಯಗಳೇನು ಎಂಬುದನ್ನು ವಿವರಿಸಲಾಗಿದೆ.

ಜನರ ಕ್ಷೇಮಾಭಿವೃದ್ಧಿಯನ್ನು ನೋಡಿಕೊಳ್ಳುವುದೇ ರಾಜರುಗಳ ಪ್ರಮುಖ ಧರ್ಮ. "ಯೋಗಕ್ಷೇಮಾನುಸಂಧಾನಮ್." ಈ ಧರ್ಮವು, ಯಜ್ಞಯಾಗಾದಿಗಳಿಂದ ಮತ್ತು ಇತರ ಸಮಾರಂಭಗಳಿಂದ, ನೇರವಾಗಿ ಸತ್ಪರಿಣಾಮಗಳನ್ನು ಪಡೆಯುವುದಕ್ಕಿಂತಲೂ ಮಿಗಿಲಾದುದು. ಜನರಿಗೆ ಯಾವುದು ಒಳ್ಳೆಯದು ಎಂಬುದು

ರಾಜನು ತನ್ನ ಮನಸ್ಸಿಗೆ ಬಂದಂತೆ ನಿರ್ಧರಿಸಬಾರದು: ಅವನು ಜನರ ಮನಸ್ಸಿನಲ್ಲಿ ಏನಿದೆ ಎಂಬುದನ್ನರಿತು, ಅದಕ್ಕೆ ತಕ್ಕಂತೆ ಕ್ರಮ ಕೈಗೊಳ್ಳಬೇಕು. ಈ ವಿಷಯದಲ್ಲೂ ಒಮ್ಮತದ ಅಭಿಪ್ರಾಯವನ್ನು ಗ್ರಂಥಗಳಲ್ಲಿ ಸೂಚಿಸಲಾಗಿದೆ. ಈ ಸಂಬಂಧದಲ್ಲಿ ಮಹಾಭಾರತದಲ್ಲಿ ರಂಜನೀಯವಾದ ಒಂದು ಉಪಮಾಲಂಕಾರವನ್ನು ಕೊಡಲಾಗಿದೆ. ಇದರಲ್ಲಿ ಒಬ್ಬ ರಾಜನನ್ನು ಒಬ್ಬಳು ಗರ್ಭಿಣಿ ಹೆಂಗಸೆಂದು ಪರಿಗಣಿಸಿಕೊಳ್ಳುವಂತೆ ಕೇಳಿಕೊಂಡು, ಮುಂದಿನದನ್ನು ಹೀಗೆ ವಿವರಿಸಲಾಗಿದೆ. "ಹೆಂಗಸೊಬ್ಬಳು ಗರ್ಭಿಣಿಯಾದಾಗ ಅವಳಿಗೆ ಎಷ್ಟೋ ಹಿಂಸೆಯಾಗುತ್ತದೆ; ಅನನುಕೂಲವಾಗುತ್ತದೆ; ಆದರೂ ಅವಳು ತನ್ನ ದುಃಖ–ಸಂಕಟಗಳನ್ನು ಅದುಮಿಟ್ಟುಕೊಳ್ಳುತ್ತಾಳೆ. ಅವಳು ತನ್ನ ಸುಖವನ್ನು ಚಿಂತಿಸದೆ, ಉದರದಲ್ಲಿರುವ ಮಗುವಿಗೆ ಬೇಕಾದುದನ್ನು ಪೂರೈಸುತ್ತಾಳೆ. ಅದೇ ರೀತಿ ರಾಜನೊಬ್ಬನು ತನ್ನ ಆಸೆ–ಆಕಾಂಕ್ಷೆಗಳನ್ನು ಬದಿಗಿಡುತ್ತಾನೆ. ಜನರ ಇಚ್ಛೆಗನುಗುಣವಾಗಿ ನಡೆದುಕೊಳ್ಳುತ್ತಾನೆ."

ಯಥಾ ಹಿ ಗರ್ಭಿಣೀ ಹಿತ್ವಾ
ಸ್ವಂ ಪ್ರಿಯಂ ಮಾನಸೋನುಗಮ್
ಗರ್ಭಸ್ಯ ಹಿತಮಾದತ್ತೇ
ತಥಾ ರಾಜ್ಞೋಪಿ ಅಸಂಶಯಮ್
ವರಿತವ್ಯಂ ಕುರುಶ್ರೇಷ್ಠಂ
ನಿತ್ಯಂ ಧರ್ಮಾನುವರ್ತಿನಾ
ಸ್ವಂ ಪ್ರಿಯಂ ಸಮಭಿತ್ಯಜ್ಯ
ಯದ್ಯತ್ ಲೋಕಹಿತಮ್ ಭವೇತ್

ಈ ತತ್ತ್ವಕ್ಕೆ ಇತರ ಬೋಧಕರುಗಳು ಸಹ ಅಷ್ಟೇ ಮಹತ್ವ ಕೊಟ್ಟಿದ್ದಾರೆ. ಕೌಟಿಲ್ಯ, ಶುಕ್ರ, ಕಾಮಂದಕ ಹಾಗೂ ಪುರಾಣಗಳ ಗ್ರಂಥಕರ್ತರುಗಳು ಈ ನಿಬಂಧನೆಗಳನ್ನು ಮತ್ತೆ ಮತ್ತೆ ನಮೂದಿಸಿದ್ದಾರೆ. ಇದು ರಾಜನೀತಿಯ ಪ್ರಥಮ ತತ್ತ್ವ ಅಥವಾ ನಿಯಮ ಎಂಬುದರಲ್ಲಿ ಸಂದೇಹವಿಲ್ಲ. ಇದು ಸರ್ವಸಾಮಾನ್ಯವಾದ ಒಂದು ವಿಷಯ. ಇದನ್ನು ಎಲ್ಲರೂ ಅಂಗೀಕರಿಸಿದ್ದಾರೆ. ಯಾವ ಬರಹಗಾರನೂ ವಿರೋಧಿಸಿಲ್ಲ.

ಆದ್ದರಿಂದ ಈ ವಿಷಯದ ಬಗ್ಗೆ ಗ್ರಂಥಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಹೋಗುವ ಅಗತ್ಯವಿಲ್ಲ. ಈ ತತ್ತ್ವವು, ತಮಗೆ ಯಾವಾಗಲೂ ಮಾರ್ಗದರ್ಶನ ಮಾಡುತ್ತಾ ಬಂದಿದೆಯೆಂದು ರಾಜರುಗಳೇ ಹೇಳಿಕೊಳ್ಳುತ್ತಿದ್ದರು. ಎಲ್ಲ ದೊಡ್ಡ ರಾಜರುಗಳು ತಮ್ಮ ಶಿಲಾಶಾಸನಗಳಲ್ಲಿ, ರಾಜಧರ್ಮಕ್ಕೆ ಬದ್ಧವಾಗಿ ತಾವು ನಡೆದುಕೊಳ್ಳುತ್ತಿರುವುದಾಗಿ ತಿಳಿಸಿದ್ದಾರೆ. ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಕೆಲಸ

ಮಾಡುವ ಏಕಮಾತ್ರ ಉದ್ದೇಶದಿಂದ ತಾವು ರಾಜಪಟ್ಟವನ್ನು ಸ್ವೀಕರಿಸಿದ್ದಾಗಿ ಗಂಗಾ ಮನೆತನದ ರಾಜರುಗಳು ಸ್ಪಷ್ಟಪಡಿಸಿದ್ದಾರೆ. ಮೂಲ ಗ್ರಂಥವೊಂದರಲ್ಲಿ ಹೀಗೆ ತಿಳಿಸಲಾಗಿದೆ: "ಸಂಯಗ್ ಪ್ರಜಾಪಾಲನಾ ಮಾತ್ರ ಅಧಿಗತ–ರಾಜ–ಪ್ರಯೋನಸ್ಯ." ಇದರ ಅನುವಾದ "ತನ್ನ ಪ್ರಜೆಗಳನ್ನು ಚೆನ್ನಾಗಿ ಸಂರಕ್ಷಿಸುವ ಏಕಮಾತ್ರ ಸಾಧನವಾಗಿ ತನ್ನ ಅಧಿಕಾರವನ್ನು ಬಳಸುವುದೇ ರಾಜನ ಉದ್ದೇಶವಾಗಿತ್ತು." ಇದೇ ಆದರ್ಶವನ್ನು ಎಲ್ಲ ಸಂಪ್ರದಾಯಸ್ಥ ರಾಜರುಗಳು ಒಪ್ಪಿಕೊಂಡಿದ್ದರು.

ಸಾಮಾಜಿಕ ವ್ಯವಸ್ಥೆಯನ್ನು ಎತ್ತಿಹಿಡಿಯುವ ರಾಜನ ಕರ್ತವ್ಯವು, ಪ್ರಜಾಸಂರಕ್ಷಣಾ ಕರ್ತವ್ಯದ ಒಂದು ಭಾಗವಾಗಿತ್ತು. ಯಾವಾಗಲೂ ಇದನ್ನು ಹಾಗೆಯೇ ಪರಿಗಣಿಸಲಾಗಿತ್ತು. ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದೆಂದರೆ, ಬದಲಾಯಿಸಲಾಗದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದೆಂದು ಅರ್ಥಮಾಡಿಕೊಳ್ಳಬಾರದು. ಯುಗವೊಂದನ್ನು ಸೃಷ್ಟಿಸುವವನೇ ರಾಜನೆಂದು ಈಗಾಗಲೇ ಹೇಳಲಾಗಿದೆ. ಸಮಾಜದಲ್ಲಾಗುವ ದುರುಪಯೋಗಗಳನ್ನು ತಡೆಗಟ್ಟಿ, ಅವನ್ನು ಸರಿಪಡಿಸುವುದು, ಪದ್ಧತಿಗಳನ್ನು ಪರಿಷ್ಕರಿಸುವುದು ಹಾಗೂ ಇನ್ನು ಉತ್ತಮವಾದ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆಗೆ, ಸೂಕ್ತ ಪ್ರವೃತ್ತಿಯನ್ನು ಆರಂಭಿಸುವುದು– ಇವೆಲ್ಲವೂ ರಾಜನ ಹೊಣೆಗಾರಿಕೆ. ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಬೇಕು. ಸಮಾಜದಲ್ಲಿ ಎಲ್ಲ ಜನರನ್ನೂ ಒಗ್ಗೂಡಿಸುವಂತಹ ಶಿಸ್ತನ್ನು ಮುಂದುವರಿಸಿಕೊಂಡು ಹೋಗಬೇಕು. ಅರ್ಥವನ್ನು ಕಳೆದುಕೊಂಡಿರುವಂತಹ ಪದ್ಧತಿಗಳು ಮತ್ತು ಅಭ್ಯಾಸಗಳನ್ನು ಅಂತ್ಯಗೊಳಿಸುವುದು ಸಹ ರಾಜನ ಕರ್ತವ್ಯಗಳಲ್ಲೊಂದಾಗಿರುತ್ತದೆ. ಇಂತಹ ಅಪ್ರಯೋಜಕ ಪದ್ಧತಿಗಳು ಸಮಾಜಕ್ಕೆ ದೊರೆಯಾಗುತ್ತವೆ.

ಜನರಲ್ಲಿ ನೈತಿಕ ಜಾಗೃತಿ ಇರುವಮತೆಯೂ ರಾಜನು ನೋಡಿಕೊಳ್ಳಬೇಕು. ಅವರಲ್ಲಿ ಸಂತೃಪ್ತಿ ಇರಬೇಕು. ಅಷ್ಟೇ ಅಲ್ಲದೆ, ಜನರು ಆರ್ಥಿಕಾಭಿವೃದ್ಧಿ ಸಾಧಿಸುವಂತೆ ನೋಡಿಕೊಳ್ಳಲು ಸಹ ರಾಜನು ವಿಶೇಷ ಗಮನ ಕೊಡಬೇಕು. ವ್ಯಾಪಾರ ಮತ್ತು ಕೈಗಾರಿಕೆಗಳನ್ನು ಉತ್ತೇಜಿಸಬೇಕಾದುದು ಸಹ ರಾಜನ ಕರ್ತವ್ಯ. ಬೇಸಾಯಕ್ಕೆ ಹೆಚ್ಚಿನ ಗಮನ ಕೊಟ್ಟು ಪ್ರತಿಯೊಬ್ಬ ಬೇಸಾಯಗಾರನಿಗೂ ಅವನ ದುಡಿಮೆಗೆ ತಕ್ಕ ಪ್ರತಿಫಲ ಸಿಗುವಂತೆ ಮಾಡುವುದು ರಾಜನ ಕರ್ತವ್ಯ. ನೀತಿಶಾಸ್ತ್ರದ ಮೇಲಿನ ಬರಹಗಾರರು ಈ ಅಭಿಪ್ರಾಯಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ರಾಜನ ಕರ್ತವ್ಯಗಳು ಜಾತ್ಯತೀತ ಭಾವನೆಯಿಂದ ಕೂಡಿವೆ. ಆದ್ದರಿಂದ ಈ ಮೇಲೆ ತಿಳಿಸಿದ ಅಂಶಗಳಿಗೆ ರಾಜನು ಹೆಚ್ಚು ಗಮನಕೊಡುತ್ತಾನೆ. ಒಬ್ಬ ರಾಜನು ಆರ್ಥಿಕ ಸಮೃದ್ಧಿಗಾಗಿ ಕೆಲಸ ಮಾಡದಿದ್ದರೆ, ಅವನು ತನ್ನ ಕೆಲಸ–ಕಾರ್ಯಗಳನ್ನು ತೃಪ್ತಿಕರವಾಗಿ

ನಿರ್ವಹಿಸಿದಂತಾಗುವುದಿಲ್ಲವೆಂಬುದು ಕೌಟಿಲ್ಯನ ವಾದ. ಜನರ ಮೇಲೆ ಹೆಚ್ಚಿನ ತೆರಿಗೆಯ ಭಾರ ಬೀಳಬಾರದು. ಅವರು ತೆರಿಗೆಯನ್ನು ಸುಲಭವಾಗಿ ಪಾವತಿ ಮಾಡುವಂತಿರಬೇಕು. ಉತ್ಪನ್ನಗಳಾಗಿದ್ದರೆ ಆರನೆಯ ಒಂದು ಭಾಗದಷ್ಟು ಮಾತ್ರ ರಾಜನಿಗೆ ಸಲ್ಲಬೇಕು. ವ್ಯಾಪಾರಿಗಳಾಗಿದ್ದರೆ, ಅವನು ಸಾಮಗ್ರಿಗಳ ಮೇಲೆ ಮಾತ್ರ ತೆರಿಗೆ ಕೊಡಬೇಕು.

ರಾಜನು ವಿಶೇಷವಾಗಿ ಗಣಗಳು (Ganas) ಅಥವಾ ಕಾರ್ಪೊರೇಷನ್‌ಗಳ ಸಂರಕ್ಷಕನಾಗಿದ್ದನು. ಕಾರ್ಪೊರೇಷನ್‌ಗಳು ಮತ್ತು ವೃತ್ತಿಪರ ಸಂಸ್ಥೆಗಳು ತಮ್ಮದೇ ಆದ ವ್ಯವಸ್ಥೆಯನ್ನು ಹೊಂದಿದ್ದವು. ಆರ್ಥಿಕ ಜೀವನ ಸ್ವತಂತ್ರವಾಗಿ ಸಾಗುತ್ತಿತ್ತು. ರಾಜಕೀಯ ಚಟುವಟಿಕೆಗಳಿಂದ ಆರ್ಥಿಕ ಜೀವನದ ಮೇಲೆ ಯಾವ ಪರಿಣಾಮವೂ ಉಂಟಾಗುತ್ತಿರಲಿಲ್ಲ. ರಾಜಕೀಯ ಬದಲಾವಣೆಗಳು ಜನರ ಆರ್ಥಿಕ ಜೀವನದ ಮೇಲೆ ಯಾವುದೇ ಪ್ರಭಾವವನ್ನೂ ಬೀರುತ್ತಿರಲಿಲ್ಲ. ಈ ಸಂಬಂಧದಲ್ಲಿ ಒಂದು ಮುಖ್ಯ ಅಂಶವನ್ನು ಗಮನಿಸಬಹುದು. ಜನರ ಆರ್ಥಿಕ ಜೀವನವು ರಾಜ್ಯದ ಹತೋಟಿಯಿಂದ ಮುಕ್ತವಾಗಿದ್ದರೂ, ಅವನ ಈ ಜೀವನದ ಮೇಲೆ ಕಾರ್ಪೊರೇಷನ್‌ಗಳ ಮತ್ತು ಕಸಬುಗಾರರ ಗಿಲ್ಡ್‌ಗಳ ನಿಯಂತ್ರಣ ಅತಿಯಾಗಿತ್ತು. ಈ ಕಾರ್ಪೊರೇಷನ್‌ಗಳು ಮತ್ತು ಗಿಲ್ಡ್‌ಗಳು. ರಾಜ್ಯದೊಡನೆ ನೇರ ಸಂಪರ್ಕ ಇಟ್ಟುಕೊಂಡಿದ್ದವು. ಅದ್ದರಿಂದ, ರಾಜನಿಂದ ಅವು ತಕ್ಷಣವೇ ರಕ್ಷಣೆ ಪಡೆಯುತ್ತಿದ್ದವು.

ರಾಜನ ಕರ್ತವ್ಯಗಳು ಜಾತ್ಯತೀತ ಸ್ವರೂಪದ್ದಾಗಿದ್ದವು. ಆದ್ದರಿಂದ ರಾಜರು ಧರ್ಮದೊಡನೆ ಯಾವ ಸಂಬಂಧವನ್ನೂ ಪಡೆದಿರಲಿಲ್ಲ. ದೇಶದಲ್ಲಿನ ಧಾರ್ಮಿಕ ಜೀವನದಲ್ಲಿ ರಾಜನ ಸ್ಥಾನ ಯಾವ ತೆರನಾಗಿತ್ತು ಎಂಬುದನ್ನು ನಾವೀಗ ಪರಿಶೀಲಿಸಬಹುದು. ಆಗ ಸುಸಂಘಟಿತ ಚರ್ಚ್ ಇರಲಿಲ್ಲ. ಅದನ್ನು ಬೆಂಬಲಿಸುವ ಪುರೋಹಿತಶಾಹಿಯೂ ಇರಲಿಲ್ಲ. ಸಮಾಜದಿಂದ ವಿಧೇಯತೆ ಪಡೆಯುವುದಕ್ಕೆ ಸಂಬಂಧಿಸಿದಂತೆ ಯಾವುದೇ ಪೈಪೋಟಿ ಇರಲಿಲ್ಲ. ಇವೆಲ್ಲಕ್ಕೂ ಸರಿಸಮನಾದ ಪರಿಣಾಮಕಾರಿ ಅಧಿಕಾರ ರಾಜನ ಬಳಿ ಇರಲಿಲ್ಲ. ಬ್ರಾಹ್ಮಣರು ಪುರೋಹಿತ ವರ್ಗದವರಾಗಿದ್ದರು. ಅವರಿಗೆ ಯಾವ ಸಾಂಘಿಕ ಸ್ಥಾನಮಾನ ಇರಲಿಲ್ಲ. ಜನರ ಆತ್ಮಸಾಕ್ಷಿಗನುಗುಣವಾಗಿ ಅವರನ್ನು ಒಗ್ಗೂಡಿಸುವುದಕ್ಕೆ ಅಥವಾ ಬೇರಾಗಿಸುವುದಕ್ಕೆ ಯಾವುದೇ ಸಾಂಸ್ಥಿಕ ಅಧಿಕಾರವನ್ನೂ ಅವರು ಪಡೆದಿದರಲಿಲ್ಲ. ಅತ್ಯುನ್ನತ ಸ್ಥಾನದಲ್ಲಿದ್ದ ಒಬ್ಬ ಋಷಿ ಶಾಪವನ್ನು ಮಾತ್ರ ಕೊಡಬಲ್ಲವನಾಗಿದ್ದ. ಯಾರನ್ನಾಗಲಿ ಜಾತಿಯಿಂದ ಹೊರಹಾಕುವ, ಬಹಿಷ್ಕಾರ ಹಾಕುವ ಅಥವಾ ನಿಷೇಧಿಸುವ ಪ್ರಶ್ನೆಯೇ ಇರಲಿಲ್ಲ. ಜಾತಿಗಳಿಗನುಗುಣವಾಗಿ ಕೆಲಸ ಕಾರ್ಯಗಳ ವಿಭಜನೆಯಾಗುತ್ತಿದ್ದ ಸಮಾಜದಲ್ಲಿ, ಬ್ರಾಹ್ಮಣರನ್ನು ವ್ಯಕ್ತಿಗತವಾಗಿ ಅಲ್ಲದಿದ್ದರೂ ಒಂದು ಗುಂಪಾಗಿ, ರಾಜಕೀಯ ಅಧಿಕಾರದಿಂದ ಪ್ರತ್ಯೇಕವಾಗಿಡಲಾಗಿತ್ತು.

ಧರ್ಮ ಮತ್ತು ಅರ್ಥದ ನಡುವೆ ಹಾಗೂ ಬ್ರಹ್ಮ ಮತ್ತು ಕ್ಷಾತ್ರದ ನಡುವಣ ವ್ಯತ್ಯಾಸವನ್ನು ಸ್ವಲ್ಪವೂ ಸಂದೇಹಕ್ಕೆ ಎಡೆಯಿಲ್ಲದಂತೆ ಸ್ಪಷ್ಟಪಡಿಸಲಾಗಿತ್ತು. ಕಾಲಾನಂತರದಲ್ಲಿ ಬ್ರಾಹ್ಮಣರು ಸಹ ರಾಜರುಗಳಾದರು. ಆಗ ಅವರು ಕ್ಷತ್ರಿಯ ಸ್ಥಾನವನ್ನು ಪಡೆದುಕೊಂಡರು. ಆಗ ಬ್ರಾಹ್ಮಣರಿಗಿದ್ದ ಸ್ಥಾನದಿಂದಾಗಿ, ಆ ರಾಜನು, ಸಂಪೂರ್ಣ ನಿರಂಕುಶ ಪ್ರಭುವಾಗುವುದು ಬಹಳ ಕಷ್ಟವಾಗಿತ್ತು. ಹಿಂದೂ ಸಮಾಜದ ಲಕ್ಷಣ ಹಾಗೂ ಅದಕ್ಕೆ ಧಾರ್ಮಿಕ ನಾಯಕರೊಬ್ಬರು ಇಲ್ಲದೆ ಇದ್ದುದರಿಂದ ಬ್ರಾಹ್ಮಣರಿಗೆ ಧರ್ಮಾಧಿಪತ್ಯವೊಂದನ್ನು ಸ್ಥಾಪಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ ದೇವರ ನಗರ (City of God) ಮತ್ತು ಮಾನವ ನಗರ (City of Man) ಇವುಗಳ ನಡುವೆ ಮಧ್ಯಂತರ ಯುಗದಲ್ಲಿದ್ದಂತಹ ವ್ಯತ್ಯಾಸವನ್ನು ಭಾರತದಲ್ಲಿ ಎಲ್ಲೂ ಕಾಣಲು ಅವಕಾಶವಿರಲಿಲ್ಲ.

ಸಮಾಜದ ಬಗ್ಗೆ, ಹಿಲ್‌ಡೆ ಬ್ರ್ಯಾಂಡಿಯನ್ ತಮ್ಮದೇ ಆದ ದೃಷ್ಟಿಕೋನ ಹೊಂದಿದ್ದರು. ಅದರಂತೆ, ಜಾತ್ಯತೀತ ಕಾರ್ಯಶಕ್ತಿಯ ವಿರುದ್ಧ ಕ್ರೈಸ್ತ ಮತಾಧಿಕಾರಿಗಳ ಪರವಾದ ಪ್ರತಿನಿಧಿಯೊಬ್ಬರು ದೇವರ ಹೆಸರಿನಲ್ಲಿ ರಾಜರುಗಳು ಮತ್ತು ರಾಜ್ಯದ ಮೇಲೆ ಅಧಿಕಾರ ಚಲಾಯಿಸತೊಡಗಿದರು. ಇದು ಭಾರತೀಯರ ವಿಚಾರಗಳಿಗೆ ಮತ್ತು ಭಾವನೆಗಳಿಗೆ ವಿರುದ್ಧವಾಗಿತ್ತು. ಮತ್ತು ಪರಕೀಯವಾಗಿತ್ತು. ಮಾನವರ ನಗರ ಯಾವಾಗಲೂ ದೇವರ ನಗರಕ್ಕೆ ಅಧೀನವಾಗಿರಬೇಕೆಂಬುದು ಈ ಕ್ರೈಸ್ತರ ತತ್ತ್ವವಾಗಿತ್ತು ಈ ರೀತಿ ಪ್ರಾಪಂಚಿಕ ಮತ್ತು ಧಾರ್ಮಿಕ ಶಕ್ತಿಗಳೆರಡನ್ನೂ ಪಟ್ಟು ಬಿಡದೆ ಹಿಡಿದಿರುವ ಪ್ರವೃತ್ತಿ, ಬ್ರಾಹ್ಮಣ ಚಿಂತನಕಾರರಿಗೆ ತಿಳಿದಿರಲಿಲ್ಲ. ಇದು ಧರ್ಮದ ಬಗ್ಗೆ ಅವರಿಗಿದ್ದ ವಿಚಾರಕ್ಕೆ ವಿರುದ್ಧವಾಗಿತ್ತು.

ಯೂರೋಪ್‌ನಲ್ಲಿ, ಪ್ರಜಾಸತ್ತೆ ಮತ್ತು ಏಕಚಕ್ರಾಧಿಪತ್ಯ ಎರಡೂ ಇರುವ ರಾಜ್ಯಗಳಲ್ಲಿ ನಿರಂಕುಶಾಧಿಕಾರ ವಿವಿಧ ರೂಪಗಳಲ್ಲಿ ಇದ್ದವೆಂಬುದನ್ನು ಮರೆಯಬಾರದು. ಈ ರಾಜ್ಯಗಳು ಧರ್ಮದ ಆಧಾರದ ಮೇಲೆ ಪ್ರಭುತ್ವ ನಡೆಸುತ್ತಿದ್ದ ರಾಜ್ಯಗಳಿಗೆ ಸವಾಲನ್ನೊಡ್ಡುವಂತಹ ಪರಿಸ್ಥಿತಿಗೆ ಬಂದಿದ್ದವು. ದೇವರೇ ನೀಡಿದ ಆದೇಶದ ಮೇಲೆ, ದೇವರ ಪ್ರತಿನಿಧಿಯಾಗಿ ಚರ್ಚ್‌ನ ಪ್ರಮುಖರು ಅಧಿಕಾರ ಚಲಾಯಿಸುತ್ತಿದ್ದರು. ಇದಕ್ಕೆ ಪೈಪೋಟಿಯಾಗಿ, ಯೂರೋಪ್‌ನಲ್ಲಿ ರಾಜರು ಸಾರ್ವಭೌಮಾಧಿಕಾರವನ್ನು ಬೆಳೆಸಿಕೊಂಡರು. ಪೋಪ್‌ಗೆ ಎದುರಾಗಿ ನಿಂತ ಚಕ್ರವರ್ತಿ ಪ್ರಾಪಂಚಿಕ ವ್ಯವಹಾರಗಳ ನಿರ್ವಹಣೆಗೆಂದು ದೇವರು ತಮ್ಮನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿದ್ದಾನೆಂದು ಹೇಳಿಕೊಳ್ಳತೊಡಗಿದನು. ನಿರಂಕುಶ ಅಧಿಕಾರವನ್ನು ದೇವರೇ ತಮಗೆ ಕೊಟ್ಟಿದ್ದಾನೆಂದು ಈ ಚಕ್ರವರ್ತಿ ಮತ್ತು ಚರ್ಚಿನ ಪ್ರತಿನಿಧಿ ಇಬ್ಬರೂ ಹೇಳಿಕೊಳ್ಳುತ್ತಿದ್ದರು. ಈ ನಿಟ್ಟಿನಲ್ಲಿ ರಾಜ್ಯ ಮತ್ತು ಚರ್ಚ್ ಎರಡೂ ಒಗ್ಗೂಡಿದ್ದವು. ಆದ್ದರಿಂದ ಪೋಪ್‌ನಲ್ಲಿರದೇ ಚಕ್ರವರ್ತಿಯಲ್ಲಿದ್ದ ಕೆಲವು ಅಧಿಕಾರಗಳಲ್ಲೂ ಮತ್ತು

ಚಕ್ರವರ್ತಿಯಲ್ಲಿರದೇ ಪೋಪ್‌ನಲ್ಲಿದ್ದ ಕೆಲವು ಅಧಿಕಾರಗಳಲ್ಲೂ ದೇವರಿದ್ದನು. ನಿರಂಕುಶಾಧಿಕಾರ ಇರದಿದ್ದ ಒಂದು ಸಮಾಜವನ್ನು ಊಹಿಸಿಕೊಳ್ಳುವುದೂ ಅವರಿಗೆ ಸಾಧ್ಯವಿರಲಿಲ್ಲ. ಚರ್ಚ್ ಅನ್ನು ಪ್ರಾಪಂಚಿಕ ವಿಷಯಗಳಿಂದ ಪ್ರತ್ಯೇಕವಾಗಿರಿಸಲಾಗಿತ್ತು. ಅವನ್ನು ಜಾತ್ಯತೀತ ರಾಜ್ಯವೊಂದರ ಅಧಿಕಾರ ವ್ಯಾಪ್ತಿಗೆ ವರ್ಗಾಯಿಸಲಾಗಿತ್ತು. ಹಾಬ್ಸ್, ಬೋಡಿನ್, ಆಸ್ಟಿನ್ ಮತ್ತು ಇತರರು ಒಂದೆಡೆ, ಹಿಲ್ಡರ್‌ಬ್ರ್ಯಾಂಡ್ ಮತ್ತು ಎಗ್ಗಿಡಿಯೊ ಕೊಲ್ಲೊನ ಇನ್ನೊಂದೆಡೆ ಹಾಗೂ ಪಿಯರ್–ಡಿ–ವಿಗ್ನೆ ಮತ್ತು ಮಾರ್ಸಿಲಿಯಸ್ ಪಡೋವ– ಇವರು ಮತ್ತೊಂದೆಡೆ ತಮ್ಮದೇ ಆದ ಅಭಿಪ್ರಾಯಗಳನ್ನು ಪ್ರತಿಪಾದಿಸಿದರು.

ಯೂರೋಪ್‌ನಲ್ಲಿ ರಾಜ್ಯ ಸರ್ವೋಚ್ಚ ಸ್ಥಾನ ಪಡೆದಿತ್ತು. ಅದು ತನ್ನದೇ ಆದ ನಿರ್ಧಾರ ತೆಗೆದುಕೊಳ್ಳುತ್ತಿತ್ತು. ಅದಕ್ಕೆ ಬೇರೆಯವರ ಅಭಿಪ್ರಾಯಕ್ಕೆ ಬದ್ಧವಾಗಿರಬೇಕಾದ ಅಗತ್ಯವಿರಲಿಲ್ಲ. ಯಾವುದೇ ನೈತಿಕ ಹಕ್ಕಾಗಲಿ, ಅದರ ಕಾರ್ಯಕಲಾಪಗಳನ್ನು ನಿರ್ಬಂಧಿಸಲು ಸಾಧ್ಯವಿರಲಿಲ್ಲ.

ಹಿಂದೂ ರಾಜ್ಯದಲ್ಲಿ ನಿರಂಕುಶ ಪ್ರಭುತ್ವವೇ ಇರಲಿಲ್ಲ. ಭಾರತೀಯ ಸಿದ್ಧಾಂತದಲ್ಲಿ ರಾಜನು ರಾಜಕೀಯ ಒಡಲಿನಲ್ಲಿ ಕೇವಲ ಒಂದು ಅಂಗ ಮಾತ್ರವಾಗಿದ್ದನು. ಪರಮಾಧಿಕಾರ ಎಂಬುದು ಹಿಂದೂಗಳಿಗೆ ಒಂದು ಸಮ್ಮಿಶ್ರ ಭಾವನೆಯಾಗಿತ್ತು. ರಾಜ್ಯವು ಕೇವಲ ಆಡಳಿತ ನೋಡಿಕೊಳ್ಳುವಂತಹ ಒಂದು ವ್ಯವಸ್ಥೆಯಾಗಿತ್ತು; ಆದ್ದರಿಂದ ಹಿಂದೂ ರಾಜರುಗಳಿಗೆ ತಾತ್ವಿಕ ಸ್ವರೂಪದ ಬೇಡಿಕೆಗಳು ಹೆಚ್ಚಾಗಿ ಇರಲಿಲ್ಲ. ರಾಜ್ಯದಲ್ಲಿ ಆಡಳಿತ ನೋಡಿಕೊಳ್ಳಲು ಒಂದು ದೊಡ್ಡ ವ್ಯವಸ್ಥೆಯಿತ್ತು. ಅದನ್ನು ಹದಿನೆಂಟು ಇಲಾಖೆಗಳಾಗಿ ವಿಭಜಿಸಲಾಗಿತ್ತು. ರಾಜತರಂಗಿಣಿಯಲ್ಲಿರುವ ಒಂದು ಚರಣ(ಮೊದಲ ತರಂಗ ೫–೧೨೦)ದಲ್ಲಿ ಹೀಗೆ ತಿಳಿಸಲಾಗಿದೆ: ರಾಜನಾಗಿದ್ದ ಜಲಂಕ, ರಾಜ್ಯದಲ್ಲಿ ಹದಿನೆಂಟು ಇಲಾಖೆಗಳನ್ನು ನಿರ್ಮಿಸಿದನು. ಅನಂತರ, ಆದರ್ಶಪ್ರಾಯನಾಗಿದ್ದ ಪಾಂಡವ ರಾಜ ಯುಧಿಷ್ಠಿರನ ಸಂವೈಧಾನಿಕ ವ್ಯವಸ್ಥೆಯನ್ನು ಉದ್ಘಾಟಿಸಿದನು. ಮಂತ್ರಿಮಂಡಳ, ಪ್ರಧಾನ ಪುರೋಹಿತರು, ಯುವರಾಜರು, ಮುಖ್ಯ ನ್ಯಾಯಾಧೀಶ, ಸೇನೆಯ ಪ್ರಧಾನ ದಂಡನಾಯಕ, ಅರಮನೆಯ ಪಾರುಪತ್ಯಗಾರ, ಅರಮನೆಯ ಉಗ್ರಾಣಿ, ಸೆರೆಮನೆಗಳ ಸೂಪರಿಂಟೆಂಡೆಂಟ್, ಖಜಾಂಚಿ, ಲೆಕ್ಕಪತ್ರಗಳ ಶೋಧಕ, ಪಬ್ಲಿಕ್ ಪ್ರಾಸಿಕ್ಯೂಟರ್, ರಾಜಧಾನಿಯ ಆಡಳಿತಾಧಿಕಾರಿ, ಮುಖ್ಯ ಎಂಜಿನಿಯರ್, ಮುಖ್ಯ ನ್ಯಾಯಾಧೀಶರು, ಕೋಟೆಗಳ ಪಾಲಕರು, ಕವಾಯತುಗಳ ವಾರ್ಡನ್, ಅರಣ್ಯಗಳ ಸೂಪರಿಂಟೆಂಡೆಂಡ್– ಇವು ಆ ಹದಿನೆಂಟು ಇಲಾಖೆಗಳಾಗಿದ್ದವು. ಇಲಾಖಾ ವ್ಯವಸ್ಥೆ ತುಂಬ ವ್ಯಾಪಕವಾದ ಸ್ವರೂಪವನ್ನು ಹೊಂದಿತ್ತು. ೧೯ನೆಯ ಶತಮಾನಕ್ಕೆ ಮುಂಚೆ, ಯೂರೋಪ್‌ನಲ್ಲಿ ರಾಜ್ಯಗಳ ಬಗ್ಗೆ ಇದ್ದ ಭಾವನೆಗಿಂತ, ಭಾರತದ ಚಿಂತನೆ ಮತ್ತು ವಿಚಾರ ಎಷ್ಟು

ಭಿನ್ನವಾಗಿತ್ತು ಎಂಬುದನ್ನು ಇದು ತೋರಿಸುತ್ತದೆ. ಆಗ ಆಡಳಿತ ವ್ಯವಸ್ಥೆ ಅಷ್ಟೊಂದು ಮುಂದುವರಿದಿರಲಿಲ್ಲ. ಆಡಳಿತ ವ್ಯವಸ್ಥೆ ಇನ್ನೂ ಪಕ್ವತೆ ಪಡೆದಿರಲಿಲ್ಲ. ೨೦ನೆಯ ಶತಮಾನ ಆರಂಭವಾಗುವುದಕ್ಕೆ ಮುಂಚೆ, ಯೂರೋಪ್‌ನಲ್ಲಿ ರಾಜಕೀಯ ತತ್ತ್ವಜ್ಞಾನಿಗಳು ರೂಪಿಸುತ್ತಿದ್ದ ಸಿದ್ಧಾಂತಗಳಲ್ಲಿ ಆಡಳಿತ ವ್ಯವಸ್ಥೆಯ ವಿಷಯ ಇರುತ್ತಿದ್ದುದು ಬಹಳ ವಿರಳವಾಗಿತ್ತು. ಇದು ಗಮನಾರ್ಹವಾದ ಒಂದು ಮುಖ್ಯ ಅಂಶ.

ರಾಜಕೀಯ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸುವುದು ಭಾರತದ ರಾಜಕೀಯ ಚಿಂತನೆಯ ಒಂದು ಮುಖ್ಯ ಲಕ್ಷಣವಾಗಿತ್ತು. ಎಲ್ಲ ಬರಹಗಾರರು ಈ ಅಂಶಕ್ಕೆ ಅತಿ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಒಂದು ರಾಜ್ಯ ಏಳು ಪ್ರಕೃತಿಗಳನ್ನು ಅಥವಾ ಭಾಗಗಳನ್ನು ಹೊಂದಿದೆಯೆಂಬುದು ಭಾರತೀಯರಲ್ಲಿರುವ ಭಾವನೆಯಾಗಿದೆ. ಆದರೆ ಭಾರತೀಯರ ವಿಚಾರದಲ್ಲಿ ಚರ್ಚ್‌ಗೆ ಅಥವಾ ಅದಕ್ಕೆ ಸಮನಾದ ಬೇರಾವ ಸಂಸ್ಥೆಗೆ ಸ್ಥಾನ ಕೊಟ್ಟಿಲ್ಲ. ಇದೊಂದು ಗಮನಿಸಬೇಕಾದ ಅಂಶ. ರಾಜನು, ರಾಜ್ಯದ ಅಂಗಗಳಲ್ಲಿ ಒಂದು ಅಂಗ ಮಾತ್ರವಾಗಿದ್ದಾನೆ. ಇಡೀ ರಾಜ್ಯದ ಸಮಗ್ರ ಭಾಗ ಅವನಾಗಿಲ್ಲ. ಆದರೆ ಪಾಶ್ಚಾತ್ಯದ ಚಿಂತನೆಯಲ್ಲಿ ರಾಜನಿಗೆ ತುಂಬ ಪ್ರಬಲವಾದ ಸ್ಥಾನವಿತ್ತು. ಆದರೆ ಭಾರತದಲ್ಲಿ ಅತ್ಯಂತ ಪ್ರಬಲನಾಗಿದ್ದ ಒಬ್ಬ ರಾಜನಿಗೂ, ಎಲ್ಲ ಅಧಿಕಾರಗಳಿರಲಿಲ್ಲ. ಏಕೆಂದರೆ ರಾಜನಿಗೆ ಸಂಪೂರ್ಣ ಅಧಿಕಾರಗಳನ್ನು ಕೊಡುವುದು ರಾಜಧರ್ಮಕ್ಕೆ ವಿರುದ್ಧವಾಗಿತ್ತು. ಅಷ್ಟೇ ಅಲ್ಲದೆ, ಹಾಗೆ ಮಾಡುವುದು, ರಾಜ್ಯದ ಸಾಂಸ್ಥಿಕ ಲಕ್ಷಣಕ್ಕೂ ವಿರುದ್ಧವಾಗಿತ್ತು.

ಇದಲ್ಲದೆ, ಭಾರತೀಯ ಸಮಾಜದಲ್ಲಿ ಜಾತಿ ಪದ್ಧತಿಯಿತ್ತು. ಈ ಪದ್ಧತಿ ಒಂದು ಬಲವಾದ ತಳಹದಿಯನ್ನು ಹೊಂದಿತ್ತು. ಆದ್ದರಿಂದ ರಾಜನು ಎಷ್ಟೇ ಪ್ರಭಾವಶಾಲಿಯಾಗಿದ್ದರೂ, ಈ ಪದ್ಧತಿಯಲ್ಲಿ ಹಸ್ತಕ್ಷೇಪ ಮಾಡುವಂತಿರಲಿಲ್ಲ. ನಾಲ್ಕು ವಿಭಾಗಗಳುಳ್ಳ ಜಾತಿಪದ್ಧತಿ ಆದರ್ಶಗಳ ಮೇಲೆ ಆಧಾರಿತವಾಗಿದ್ದ ಒಂದು ಕಾಲ್ಪನಿಕ ವ್ಯವಸ್ಥೆಯೆಂದು ಎಮಿಲಿ ಸೆನಾರ್ಟ್, ಎಷ್ಟೋ ಕಾಲದ ಹಿಂದೆಯೇ ಸೂಚಿಸಿದ್ದನು. ವರ್ಣಾಶ್ರಮಧರ್ಮದ ಹೆಸರಿನಲ್ಲಿ ವಿಭಜಿತಗೊಂಡಿದ್ದ ನಾಲ್ಕು ಗುಂಪುಗಳಿದ್ದವು. ಅವು ಸಮಾಜದ ಮೇಲೆ ಪ್ರಬಲವಾದ ಹಿಡಿತವನ್ನು ಹೊಂದಿದ್ದವು. ಅವು ತಮ್ಮದೇ ಆದ ಸಾಮ್ರಾಜ್ಯದಲ್ಲಿ ಕಾರ್ಯತತ್ಪರವಾಗಿರುತ್ತಿದ್ದವು. ಈ ಗುಂಪುಗಳನ್ನು ದುರ್ಬಲಗೊಳಿಸುವ, ಅವುಗಳನ್ನು ಕಡೆಗಾಣುವ ಯಾವ ಪ್ರಯತ್ನವೂ ನಡೆಯುತ್ತಿರಲಿಲ್ಲ. ಅಂತಹ ಪ್ರಯತ್ನವೇನಾದರೂ ನಡೆದಲ್ಲಿ ಅದನ್ನು ಕ್ರಾಂತಿಕಾರಕವೆಂದು ಪರಿಗಣಿಸಲಾಗುತ್ತಿತ್ತು. ಅದನ್ನು ಅಕ್ಷಮ್ಯ ಅಪರಾಧವೆಂದು ಭಾವಿಸಲಾಗುತ್ತಿತ್ತು. ಸಮಾಜದಲ್ಲಿ ಜಾತಿಪದ್ಧತಿ ಇದ್ದಾಗ, ಯಾವ ಯಾವ ಜಾತಿ, ಯಾವ ಯಾವ ಕಾರ್ಯವನ್ನು ನಿರ್ವಹಿಸಬೇಕೋ ಅದನ್ನು ನಿಶ್ಚಿತಪಡಿಸಲಾಗಿತ್ತು. ಇಂತಹ ವ್ಯವಸ್ಥೆಯಲ್ಲಿ

ರಾಜನು ನಿರಂಕುಶನಾಗಿ ವರ್ತಿಸುವಂತಿರಲಿಲ್ಲ. ಅಂತಹ ಕ್ರಮವನ್ನು ಪ್ರತಿಬಂಧಿಸಲಾಗಿತ್ತು. ಚಕ್ರವರ್ತಿ ಎಷ್ಟೇ ಪ್ರಬಲನಾಗಿದ್ದರೂ ಈ ವಿಷಯದಲ್ಲಿ ಅವನು ಏನನ್ನಾಗಲಿ ಮಾಡಲು ಅಶಕ್ತನಾಗಿದ್ದನು. ಉದಾಹರಣೆಗೆ ಶೂದ್ರನೊಬ್ಬನನ್ನು ಬ್ರಾಹ್ಮಣನ ಸ್ಥಾನಕ್ಕೆ ಏರಿಸಲು ಅವನಿಗೆ ಸಾಧ್ಯವಿರಲಿಲ್ಲ. ನಿರಂಕುಶಪ್ರಭುವಿನ ರಾಜ್ಯದಲ್ಲಿ ಕಾನೂನು ಪರಿಮಿತಿ ಎಂಬುದೇನೂ ಇರಲಿಲ್ಲ. ರಾಜನು ಭೌತಿಕ ಕಾನೂನುಗಳ ವಿರುದ್ಧವಾಗಿ ಏನನ್ನು ಬೇಕಾದರೂ ಮಾಡಬಹುದಾಗಿತ್ತು.

ಜನರ ನಡೆವಳಿಕೆ, ಅಭಿಪ್ರಾಯ ಮತ್ತು ಸಂಬಂಧಗಳ ಬಗ್ಗೆ ಯಾವ ಕ್ರಮವನ್ನಾಗಲಿ ಕೈಗೊಳ್ಳಲು ನಿರಂಕುಶರಾಜ ಸರ್ವಶಕ್ತನಾಗಿದ್ದ. ಐರ್ಲೆಂಡಿನಲ್ಲಿ ನಡೆಯುತ್ತಿದ್ದ ೫£ಗಿಂತ ಹೆಚ್ಚು ಯೋಗ್ಯತೆಯುಳ್ಳ ಯಾವ ಕ್ಯಾಥೊಲಿಕನೂ ಇಲ್ಲವೆಂದು ಘೋಷಿಸಬಹುದಾಗಿತ್ತು. ಸ್ಪೆಯ್‌ನ ಮೂರ್‌ಗಳು, ಫ್ರಾನ್ಸ್‌ನ ಹಗ್ಯುನಾಟ್ಸ್ ಮತ್ತು ನಾಜ಼ಿ ಜರ್ಮನಿಯರು ಮಾಡುತ್ತಿದ್ದಂತೆ ಧರ್ಮ, ಜನಾಂಗ ಅಥವಾ ಅಭಿಪ್ರಾಯದ ಮೇಲೆ, ಯಾರನ್ನಾಗಲಿ ದೇಶದಿಂದ ಹೊರಹಾಕಬಹುದಾಗಿತ್ತು. ಹಿಂದೂ ರಾಜ್ಯವು ಇಂತಹ ಹಕ್ಕು ಇರಬೇಕೆಂದು ಎಂದೂ ಕೇಳಿರಲಿಲ್ಲ. ಹಿಂದೂಗಳು ಜನರಿಗೆ ಸರ್ಕಾರಕ್ಕೆ ವಿಧೇಯರಾಗಿರುವುದಕ್ಕೆ ಒಂದು ಮಿತಿಯನ್ನು ವಿಧಿಸಿದ್ದರು. ಹಿಂದೂಗಳು ಮಾನವೀಯ ಮೌಲ್ಯಗಳ ಬಗ್ಗೆ ಯೂರೋಪಿಯನ್ನರಿಗಿಂತಲೂ ಉತ್ತಮ ಭಾವನೆ ಹೊಂದಿದ್ದರು. ಯೂರೋಪಿಯನ್ನರಂತೆ ಆಧುನಿಕ ರಾಜ್ಯದಲ್ಲಿ ದೇವರ ನಗರ ಮತ್ತು ಮಾನವ ನಗರ ಎರಡನ್ನೂ ಏಕೀಕರಿಸಿರಲಿಲ್ಲ.

* * * *

೫. ರಾಜ ಮತ್ತು ಜನತೆ

ಹದಿನಾಲ್ಕನೆಯ ಲೂಯಿ ತನ್ನ ಪ್ರಸಿದ್ಧ ಹೇಳಿಕೆಯೊಂದರಲ್ಲಿ "ನಾನೇ ರಾಜ್ಯ" *I am the State* ಎಂದು ತಿಳಿಸಿದ್ದಾನೆ. ಈ ಹೇಳಿಕೆಯನ್ನು ಭಾರತದಲ್ಲಿ ನೀತಿಶಾಸ್ತ್ರಗಳನ್ನು ಬರೆದವರಾರೂ ಅನುಮೋದಿಸಲಿಲ್ಲ. ರಾಜರುಗಳೇ ಇಂತಹ ಹೇಳಿಕೆಯನ್ನು ಒಪ್ಪಲಿಲ್ಲ. ರಾಜ್ಯವು ಏಳು ಪ್ರಕೃತಿಗಳಿಂದ ರಚಿತವಾಗಿದೆಯೆಂಬುದನ್ನು ನಾವು ಈಗಾಗಲೇ ತಿಳಿದಿದ್ದೇವೆ. "ರಾಜ್ಯ" ಎಂಬುದನ್ನು ಕೌಟಿಲ್ಯ ಹೀಗೆ ವಿವರಿಸುತ್ತಾನೆ. "ರಾಜ್ಯವು ಏಳು ಅವಯವಗಳಿಂದ ಕೂಡಿದೆ. ಅವು ಯಾವುವೆಂದರೆ 'ಸ್ವಾಮಿ ಅಥವಾ ರಾಜ, ಅಧಿಕಾರಿವರ್ಗ, ಭೂಪ್ರದೇಶ, ಕೋಟೆ, ಕೋಶ (ಖಜಾನೆ), ಸೈನ್ಯ ಮತ್ತು ಮಿತ್ರರು.' ಪ್ರಕೃತಿಗಳ ಈ ಸಿದ್ಧಾಂತವನ್ನು ಪ್ರತಿಯೊಬ್ಬ ಬರಹಗಾರರು ಮತ್ತಷ್ಟು ವಿಕಾಸಪಡಿಸಿದ್ದಾರೆ. ಒಂದು ರಾಜ್ಯವು ಒಬ್ಬ ರಾಜ, ಮಾನ್ಯತೆ ಪಡೆದ ಒಂದು ಭೂಪ್ರದೇಶ ಮತ್ತು ಅಧಿಕಾರಿ ವರ್ಗ– ಇವಿಷ್ಟನ್ನೂ ಹೊಂದಿರಬೇಕು. ಈ ಅಂಶವನ್ನು ಎಲ್ಲ ರಾಜಕೀಯ ಸಿದ್ಧಾಂತಗಳಲ್ಲೂ ಒಪ್ಪಿಕೊಳ್ಳಲಾಗಿದೆ. ರಾಜ್ಯದ ಒಂದು ಅಂಗವಾಗಿ ಅಮಾತ್ಯ ಅಥವಾ ಅಧಿಕಾರಿವರ್ಗ ಇರಬೇಕೆಂಬುದು ಹಿಂದೂ ರಾಜಕೀಯ ಚಿಂತನೆಯ ಒಂದು ವಿಶೇಷ ಕೊಡುಗೆಯಾಗಿದೆ. ಸರ್ಕಾರದ ಕಾರ್ಯನಿರ್ವಾಹಕ ವ್ಯವಸ್ಥೆಯು ರಾಜ್ಯದ ಅವಿಭಾಜ್ಯ ಅಂಗ. ಇದರ ಅವಶ್ಯಕತೆಯನ್ನು ಆಧುನಿಕ ಯುಗದ ಅಧಿಕಾರಿಗಳು ಪದೇ ಪದೇ ಒತ್ತಿ ಹೇಳಿದ್ದಾರೆ. ಹಿಂದೂ ಸಿದ್ಧಾಂತದಲ್ಲಿ ಇದಕ್ಕೆ ಮನ್ನಣೆ ನೀಡಲಾಗಿದೆ. ರಕ್ಷಣಾ ವ್ಯವಸ್ಥೆಗೆ ಸೇರಿದ ಕೋಟೆ ಮತ್ತು ಸೈನ್ಯವನ್ನು ಪ್ರತ್ಯೇಕವಾಗಿ ವ್ಯವಸ್ಥೆಗೊಳಿಸಲಾಯಿತು. ಅದಕ್ಕೂ, ಸಾಮಾನ್ಯ ಆಡಳಿತಕ್ಕೂ ಯಾವ ಸಂಬಂಧವೂ ಇರಲಿಲ್ಲ. ಬಹುತೇಕ ಆಧುನಿಕ ರಾಜ್ಯಗಳಲ್ಲಿ ರಕ್ಷಣಾ ವ್ಯವಸ್ಥೆಯು, ನಾಗರಿಕ ಸರ್ಕಾರದ ಪರಾಮರ್ಶೆಯ ವ್ಯಾಪ್ತಿಯಿಂದ ಹೊರಗಿರುತ್ತದೆ. ಪಾರ್ಲಿಮೆಂಟರಿ ವ್ಯವಸ್ಥೆಯೊಳಗಿರುವ ಒಂದು ರಾಜ್ಯ, ರಕ್ಷಣಾ ವ್ಯವಸ್ಥೆಯ ಮೇಲೂ ಅಧಿಕಾರ ಹೊಂದಿರುತ್ತದೆ ಎಂಬ ಭಾರತೀಯರ ಭಾವನೆಯಲ್ಲಿ ರಾಜ್ಯವು ಸಮಗ್ರತೆಯುಳ್ಳ ಒಂದು ವ್ಯವಸ್ಥೆ. ರಾಜ್ಯವು ಇಂತಹ ಒಂದು ಸಮಗ್ರ ವ್ಯವಸ್ಥೆಯಾಗಿರುವುದರಿಂದ "ನಾನೇ ರಾಜ್ಯ" ಎಂದು ರಾಜನು ಹೇಳಿಕೊಳ್ಳುವಂತಹ ಒಂದು ಸಿದ್ಧಾಂತಕ್ಕೆ ಅವರ ನೈತಿಕ ಬೆಂಬಲವಿರಲಿಲ್ಲ. ಈ ಸಂಬಂಧವಾಗಿ ಕೌಟಿಲ್ಯ

ನೀಡಿರುವ ಹೇಳಿಕೆಗೆ ವಿದ್ವಾಂಸರು ತಮ್ಮ ವ್ಯಾಖ್ಯಾನ ನೀಡಿ, ರಾಜ್ಯ ಮತ್ತು ರಾಜ– ಎರಡೂ ಒಂದೇ ಎಂಬ ಅರ್ಥ ವಿವರಣೆ ನೀಡಿದರು.

"ರಾಜಾ ರಾಜ್ಯಮಿತಿ ಪ್ರಕೃತಿ ಸಂಕ್ಷೇಪಃ" ಎಂದಿದ್ದಾನೆ ಕೌಟಿಲ್ಯ. ಎಲ್ಲ ಘಟಕಾಂಶಗಳು ಕೂಡಿ, ರಾಜನಾಗಿದ್ದಾನೆ ಎಂಬುದು ಇದರ ಸಂಕ್ಷಿಪ್ತ ಅರ್ಥ.

ಮೇಲೆ ತಿಳಿಸಿದ ಅಭಿಪ್ರಾಯಕ್ಕೂ ಮತ್ತು ರಾಜ್ಯ ಹಾಗೂ ರಾಜ ಒಂದೇ ಎಂಬ ಹೇಳಿಕೆಗೂ ಒಂದು ಮುಖ್ಯ ವ್ಯತ್ಯಾಸವಿದೆ. ಈ ಸಂಬಂಧದಲ್ಲಿ ನಾವು ಒಂದು ಪ್ರಮುಖ ಅಂಶವನ್ನು ಗಮನಿಸಬೇಕಾಗುತ್ತದೆ. ರಾಜನೊಳಗಿರಬೇಕಾದ ಏಳು ಪ್ರಕೃತಿಗಳು ಅಂದರೆ ಘಟಕಾಂಶಗಳು ಯಾವುದೆಂಬುದನ್ನು ಕೌಟಿಲ್ಯ ಈಗಾಗಲೇ ವಿವರಿಸಿದ್ದಾನೆ. ಅವನು ಈ ಎಲ್ಲ ಏಳು ಅಂಶಗಳಿಗೂ ಮಹತ್ವ ಕೊಟ್ಟಿದ್ದಾನೆ. ರಾಜಕೀಯ ರಂಗದಲ್ಲಿ ಈ ಎಲ್ಲ ಅಂಶಗಳು ಬಹಳ ಅಗತ್ಯವೆಂದು ಅವನು ಹೇಳಿದ್ದಾನೆ. "ರಾಜಾ ರಾಜ್ಯಮ್ ಇತಿ ಪ್ರಕೃತಿ ಸಂಕ್ಷೇಪಃ." ರಾಜನ ಪರಮಾಧಿಕಾರದಲ್ಲಿ ಈ ಎಲ್ಲ ಏಳು ಘಟಕಾಂಶಗಳು ಸೇರಿಕೊಂಡಿರುತ್ತವೆ ಎಂಬುದೇ ಇದರ ತಾತ್ಪರ್ಯ.

ಒಂದು ವಾದವಿದೆ. ಕೋಶ ಅಥವಾ ಖಜಾನೆ, ಸರ್ಕಾರಿ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದೆ. ಅದರ ಪ್ರಾಮುಖ್ಯತೆಯ ದೃಷ್ಟಿಯಿಂದ, ಅದನ್ನು ಒಂದು ಪ್ರತ್ಯೇಕ ಘಟಕವನ್ನಾಗಿ ಪರಿಗಣಿಸಲಾಗಿದೆ. ವಿದೇಶಾಂಗ ನೀತಿ, ಕಡೆಯಲ್ಲಿ ಬರುತ್ತದೆ. ವಿದೇಶಾಂಗ ನೀತಿಯನ್ನು ಹೊಂದಿರದ ಒಂದು ರಾಜ್ಯ, ಪೂರ್ಣವಾಗಿ ಸರ್ವತಂತ್ರ ಸ್ವತಂತ್ರ ರಾಜ್ಯವಾಗುವುದಿಲ್ಲ ಎಂಬುದು ಹಿಂದೂ ಬರಹಗಾರರ ಅಭಿಪ್ರಾಯ. ಏಕೆಂದರೆ ಸಂರಕ್ಷಣೆಯೇ ಒಂದು ರಾಜ್ಯದ ಉದ್ದೇಶ. ಮಿತ್ರದೇಶಗಳೊಡನೆ ಸಂಪರ್ಕ ಇಟ್ಟುಕೊಳ್ಳದೆ ಸಂರಕ್ಷಣೆ ಪರಿಪೂರ್ಣವಾಗುವುದಿಲ್ಲ. ಆಗ ಸೈನ್ಯವು ದುರ್ಬಲಗೊಳ್ಳುತ್ತದೆ. ಅದರ ಮೇಲೆ, ಶತ್ರುಗಳ ದಾಳಿಗೆ ಹೆಚ್ಚಿನ ಅವಕಾಶವಿರುತ್ತದೆ. ಆದ್ದರಿಂದ ಒಂದು ದೇಶ ಮಿತ್ರದೇಶಗಳೊಡನೆ ಮೈತ್ರಿ ಒಪ್ಪಂದಗಳನ್ನು ಏರ್ಪಡಿಸಿಕೊಂಡಾಗ ಅವು ಈ ಒಪ್ಪಂದಕ್ಕೆ ಬದ್ಧವಾಗಿರುತ್ತವೆ.

ನೀತಿಶಾಸ್ತ್ರಗಳನ್ನು ಬರೆದಿರುವವರು ಉಪಯೋಗಿಸಿರುವ ತಾಂತ್ರಿಕ ಶಬ್ದಗಳ ಬಗ್ಗೆ ಪ್ರಸ್ತಾಪಿಸದೇ ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಹಿಂದೂ ರಾಜ್ಯವೊಂದು ನಿಶ್ಚಿತಪಡಿಸಲಾಗಿರುವ ಒಂದು ಪ್ರದೇಶವನ್ನು ಹೊಂದಿರಬೇಕು. ಈ ಪ್ರದೇಶಕ್ಕೆ ಒಬ್ಬ "ಸ್ವಾಮಿ" ಅಥವಾ ಸರ್ವೋಚ್ಚ ಪ್ರಾಧಿಕಾರವಿರಬೇಕು. ಸರ್ಕಾರದ ಕಾರ್ಯ ನಿರ್ವಹಣೆಗಾಗಿ ಒಂದು ವ್ಯವಸ್ಥೆ ಇರಬೇಕು. ಅಲ್ಲಿ ಮಿಲಿಟರಿ ಪಡೆ (ಸೈನ್ಯ) ಇರಬೇಕು. ಮತ್ತು ವಿದೇಶಾಂಗ ನೀತಿಯನ್ನು ಹೊಂದಿರಬೇಕು. ಇವೆಲ್ಲಕ್ಕೂ ಆಧಾರವಾಗಿ, ಸುಭದ್ರ ಹಣಕಾಸು ವ್ಯವಸ್ಥೆ ಇರಬೇಕು. ಈ ಪ್ರಕೃತಿಗಳಲ್ಲಿ ಯಾವುದನ್ನೂ ಹೊಂದಿರದ ಒಂದು ರಾಜಕೀಯ ಸಮುದಾಯವನ್ನು ಒಂದು ಸ್ವತಂತ್ರ ರಾಜ್ಯವೆಂದು

ಪರಿಗಣಿಸಲು ಸಾಧ್ಯವಾಗುವುದಿಲ್ಲ. ಒಂದು ರಾಜ್ಯ ಒಳಗೊಂಡಿರಬೇಕಾದ ಮುಖ್ಯ ಘಟಕಗಳಲ್ಲಿ ಒಬ್ಬನಾದ ರಾಜನು, ಅತಿ ಮುಖ್ಯವೆಂಬುದರಲ್ಲಿ ಸಂದೇಹವಿಲ್ಲ. ರಾಜನು ಒಂದು ರಾಜ್ಯದ ಅಧಿಪತಿ. ರಾಜ್ಯ ನಿರ್ವಹಿಸಬೇಕಾದ ಕೆಲಸ ಕಾರ್ಯಗಳನ್ನು ನಿರ್ದೇಶಿಸುವ ಅಧಿಕಾರ ರಾಜನಿಗಿರುತ್ತದೆ. ಕೌಟಿಲ್ಯನು ಹೀಗೆ ಹೇಳಿದ್ದಾನೆ: "ರಾಜಾ ರಾಜ್ಯಂ ಇತಿ ಪ್ರಕೃತಿ ಸಂಕ್ಷೇಪ." ರಾಜ್ಯದಲ್ಲಿನ ಸರ್ವೋಚ್ಚ ಪ್ರಾಧಿಕಾರವೆಂದರೇನು ಎಂಬುದರ ಅರ್ಥವನ್ನು ಕೌಟಿಲ್ಯ ಇಲ್ಲಿ ತಿಳಿಸಿದ್ದಾನೆ. ರಾಜ್ಯ ಒಳಗೊಂಡಿರಬೇಕಾದ ಇತರ ಪ್ರಕೃತಿಗಳಿಲ್ಲದೆ, ರಾಜನು ಸರ್ವೋಚ್ಚ ಪ್ರಾಧಿಕಾರ ಎನಿಸಿಕೊಳ್ಳಲಾರ.

ರಾಜನು, ಇತರ ರಾಜರುಗಳೊಡನೆ ಮತ್ತು ತನ್ನ ರಾಜ್ಯದೊಡನೆ ವ್ಯವಹರಿಸಲು ಪ್ರೇರಣೆ ನೀಡುವ ಮೂರು ಶಕ್ತಿಗಳಿವೆ ಎಂಬುದು ಹಿಂದೂ ಸಿದ್ಧಾಂತಕಾರರ ಅಭಿಪ್ರಾಯ. (ಇವು ಬೇರೆ ಬೇರೆ ಬಗೆಯ ಶಕ್ತಿಗಳಾಗಿರುತ್ತವೆ. ಇವು ಬೇರೆ ಬೇರೆ ಪ್ರಮಾಣಗಳಲ್ಲಿರುತ್ತವೆ. ಇವು ರಾಜನಲ್ಲಿರಬೇಕಾದ ಮೂರು ಆವಶ್ಯಕ ಲಕ್ಷಣಗಳು.) ಈ ಶಕ್ತಿಗಳನ್ನು ಮಂತ್ರಶಕ್ತಿ, ಪ್ರಭುಶಕ್ತಿ ಮತ್ತು ಉತ್ಸಾಹಶಕ್ತಿ ಎಂದು ಕರೆಯಲಾಗುತ್ತಿತ್ತು. ಒಳ್ಳೆಯ ಸಮಾಲೋಚನೆ, ಮಂತ್ರಾಲೋಚನೆ ಮತ್ತು ಬುದ್ಧಿವಂತಿಕೆಯಿಂದ ಮಾಡಿದ ನೀತಿ ನಿರ್ದೇಶನ– ಇವುಗಳಿಂದ ಪಡೆದ ಶಕ್ತಿಯೇ ಮಂತ್ರಶಕ್ತಿ. ರಾಜ್ಯದ ಆರ್ಥಿಕ ಮತ್ತು ಹಣಕಾಸು ಸಂಪನ್ಮೂಲಗಳಿಂದ ಪಡೆದ ಶಕ್ತಿ ಪ್ರಭುಶಕ್ತಿ ಅಥವಾ ಕೋಶಶಕ್ತಿ. ಕಾರ್ಯ ನಿರ್ವಹಿಸಲು ಬೇಕಾದ ಶಕ್ತಿಯೇ ಉತ್ಸಾಹಶಕ್ತಿ. ಅಂದರೆ ಇದು ಸಶಸ್ತ್ರ ಪಡೆಗಳು ಹೊಂದಿರುವ ಬಲಕ್ಕೆ ಅನ್ವಯಿಸುತ್ತದೆ. ರಾಜನ ಬಲವಷ್ಟೇ ಅಲ್ಲದೆ, ಪ್ರತಿಯೊಂದು ರಾಜ್ಯದ ಬಲವೂ ಈ ಮೂರು ಶಕ್ತಿಗಳ ಮೇಲೆ ಆಧಾರಿತವಾಗಿರುತ್ತದೆ. ರಾಜ್ಯದ ಶಕ್ತಿಯು, ಅದರ ನೀತಿ, ಹಣಕಾಸು ಸಂಪನ್ಮೂಲಗಳು ಮತ್ತು ಸಶಸ್ತ್ರ ಪಡೆಗಳ ಬಲ– ಇವುಗಳನ್ನು ಆಧರಿಸಿರುತ್ತದೆ. ಇವು ಮೂರು ಇಲ್ಲದೇ ಹೋದರೆ, ರಾಜನು ಬರೀ ಹೆಸರಿಗೆ ಮಾತ್ರ ರಾಜನಾಗಿರುತ್ತಾನೆ. ಈ ಮೂರು ಶಕ್ತಿಗಳು ಮಿಳಿತಗೊಂಡಾಗ ಅವು ರಾಜನ ಅಧಿಕಾರ ಸ್ಥಾನಕ್ಕೆ ಜೀವ ತುಂಬುತ್ತದೆ.

ಶಕ್ತಿಗಳ ಈ ವಿಭಜನೆ ಬಹಳ ಸ್ವಾರಸ್ಯಕರ. ಉನ್ನತ ದಜೆಯ ಧೋರಣೆ, ಸುಭದ್ರ ಹಣಕಾಸು ವ್ಯವಸೆ ಮತ್ತು ಸೇನಾಪಡೆ– ಇವು ಮೂರೂ ಒಂದನ್ನೊಂದು ಅವಲಂಬಿಸಿವೆ. ಇವು ಒಂದಕ್ಕೊಂದು ಪೂರಕವಾಗಿವೆ ಎಂಬುದನ್ನು ಹಿಂದೂ ವಿಚಾರ ಪರಿಣತರು ಕಂಡುಕೊಂಡಿದ್ದರು. ಅತ್ಯಂತ ಜಾಣತನದಿಂದ ನೀತಿ ನಿರ್ದೇಶನ ಮಾಡುವುದು ಇತರ ಎರಡು ಶಕ್ತಿಗಳಿಗಿಂತ ಉತ್ಕೃಷ್ಟವಾದುದೆಂದು ಅವರು ಪರಿಗಣಿಸಿದ್ದರು. ಅದು ಮಂತ್ರಶಕ್ತಿ ಎಂಬುದು ಸ್ವತಃಸಿದ್ಧವಾಗಿದೆ. ಕೌಟಿಲ್ಯನು 'ಮಂತ್ರ' ಎಂಬುದರ ತನ್ನ ವಿವರಣೆಗೆ ಐದು ಅಂಶಗಳನ್ನು ಸೇರಿಸಿದ್ದಾನೆ. ಅವು ಹೀಗಿವೆ: ಒಂದು ನೀತಿಯನ್ನು ಅಥವಾ ಧೋರಣೆಯನ್ನು ಆರಂಭಿಸುವ ವಿಧಾನಗಳ ಬಗ್ಗೆ ಸಮಾಲೋಚನೆ ನಡೆಯುವುದು, ವ್ಯಕ್ತಿಯ ದೃಢನಿರ್ಧಾರ ಮತ್ತು ಖರ್ಚು–

ವೆಚ್ಚಗಳ ಸಾಧನಗಳು, ಸಮಯದ ಸೂಕ್ತತೆಯನ್ನು ಪರಿಶೀಲಿಸುವುದು, ಒಂದು ಸ್ಥಳದ ಸೂಕ್ತತೆಯನ್ನು ಪರಿಶೀಲಿಸುವುದು ಇತ್ಯಾದಿ ಮತ್ತು ಅಡ್ಡಿಆತಂಕಗಳನ್ನು ನಿವಾರಿಸಿ, ಯಾವುದನ್ನಾಗಲೀ ಯಶಸ್ವಿಯಾಗಿ ಸಮಾಪ್ತಿಗೊಳಿಸುವುದು. ಆದ್ದರಿಂದ ಮಂತ್ರಶಕ್ತಿಯು ಹಣಕಾಸು ಮತ್ತು ಇತರ ವಿಷಯಗಳ ಪರಿಶೀಲನೆಯನ್ನು ಸಹ ಒಳಗೊಂಡಿರಬೇಕೆಂಬುದು ಕೌಟಿಲ್ಯನ ಅಭಿಪ್ರಾಯ. ಚಮತ್ಕಾರದಿಂದ ರೂಪಿಸಿದ ನೀತಿಯನ್ನು ಅನುಸರಿಸಬೇಕಾದ ಅಗತ್ಯವೇನಿಲ್ಲ. ಸಶಸ್ತ್ರ ಪಡೆಯಿದ್ದರೆ, ಅದರ ಬಲವೊಂದರಿಂದಲೇ ತಾವು ಏನನ್ನು ಬೇಕಾದರೂ ಸಾಧಿಸಬಹುದೆಂದು ಭಾವಿಸುವ ರಾಜರುಗಳನ್ನು ಕೌಟಿಲ್ಯನು ಖಂಡಿಸುತ್ತಾನೆ. ಸೈನ್ಯವು, ಉನ್ನತ ಮಟ್ಟದ ನೀತಿಯನ್ನು ಜಾರಿಗೊಳಿಸುವುದಕ್ಕೆ ಪೂರಕವಾದ ಒಂದು ವ್ಯವಸ್ಥೆ. ಮಂತ್ರ ಒಳಗೊಂಡಿರುವ ಎಲ್ಲ ಐದು ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಇಂತಹ ಒಂದು ನೀತಿಯನ್ನು ನಿರ್ಧರಿಸಲಾಗುತ್ತದೆ. ಇದು ಕೌಟಿಲ್ಯನಿಂದಲೇ ರೂಪಿತವಾದ ಒಂದು ಸಿದ್ಧಾಂತ.

ರಾಜರು, ತಮ್ಮ ಸ್ವಂತ ವಿಷಯಗಳಲ್ಲಿ ಹಾಗೂ ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಎಷ್ಟು ನೀತಿವಂತರಾಗಿರಬೇಕೆಂಬುದನ್ನು ನೀತಿ ಗ್ರಂಥಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಿರೂಪಿಸಲಾಗಿದೆ. ಮಹಾಭಾರತದಲ್ಲಿ ಇಬ್ಬರ ನಡುವಣ ಸಂಘರ್ಷಕ್ಕೆ ಒಪ್ಪಿಗೆ ಕೊಡಲಾಗಿದೆ. ಉದಾರಹಣೆಗೆ ದ್ರೋಣ ಸೋಲುವಂತೆ ಮಾಡಲು ದೊರೆ ಯುಧಿಷ್ಠಿರ ಒಂದು ಸುಳ್ಳು ಹೇಳಲೇಬೇಕಾಗುತ್ತದೆ. ಅವನು ದ್ರೋಣನಿಗೆ ಕೇಳಿಸುವ ರೀತಿಯಲ್ಲಿ, ಅವನ ಮಗ ಅಶ್ವತ್ಥಾಮನನ್ನು ಯುದ್ಧದಲ್ಲಿ ಕೊಲ್ಲಲಾಗಿದೆಯೆಂದು ಕೂಗಿ ಹೇಳಬೇಕಾಗುತ್ತದೆ. ಶ್ರೀ ಕೃಷ್ಣನ ಸಲಹೆಯ ಮೇರೆಗೆ ಯುಧಿಷ್ಠಿರನು ಈ ಸುಳ್ಳು ಹೇಳಬೇಕಾಗುತ್ತದೆ. ರಾಜ್ಯವನ್ನು ಪಡೆಯುವುದಕ್ಕಾಗಿಯೂ ಸಹ ತಾನು ಅಸತ್ಯವನ್ನು ಹೇಳಲು ಸಿದ್ಧನಿಲ್ಲವೆಂದು ಯುಧಿಷ್ಠಿರ ಶ್ರೀಕೃಷ್ಣನಿಗೆ ಹೇಳಿದನು. ಪ್ರತಿಭಟನೆ ಮಾಡಿದನು. ಆಗ ಕೃಷ್ಣ ಒಂದು ಮಣ್ಣಿನ ಆನೆಯನ್ನು ಮಾಡಿದನು. ಅದಕ್ಕೆ ಅಶ್ವತ್ಥಾಮ ಎಂದು ಹೆಸರಿಟ್ಟನು. ಆನಂತರ ಆ ಮಣ್ಣಿನ ಆನೆಯನ್ನು ಕೆಡವಿದನು. ಹೀಗೆ ಮಾಡುವ ಮೂಲಕ ಶ್ರೀಕೃಷ್ಣನು ಯುಧಿಷ್ಠಿರನ ಮನಸ್ಸಿಗಾಗಿದ್ದ ನೋವನ್ನು ನಿವಾರಿಸಲೆತ್ನಿಸಿದನು. ರಾಜಕೀಯ ರಂಗದಲ್ಲಿ ಹೀಗೆ ಮಾಡುವುದು ಅಗತ್ಯವಾಗುವುದೆಂದು ಹೇಳಿ, ಕೃಷ್ಣ ತನ್ನ ಕ್ರಮವನ್ನು ಸಮರ್ಥಿಸಿಕೊಂಡನು. ಆದರೆ ಮಹಾಭಾರತ ನ್ಯಾಯನೀತಿಗಳನ್ನು ಸಾರುವ ಒಂದು ಮಹಾಗ್ರಂಥವೆನಿಸಿಕೊಂಡಿರುವುದರಿಂದ, ಅದು ರಾಜಕೀಯದಲ್ಲಿನ ಅಗತ್ಯದಿಂದಾಗಿ ಹೀಗೆ ಮಾಡಬೇಕಾಯಿತೆಂಬ ಕಾರಣವನ್ನು ಒಪ್ಪುವುದಿಲ್ಲ. ಈ ಒಂದು ಸುಳ್ಳು ಹೇಳಿ, ತಪ್ಪು ಎಸಗಿದ ಯುಧಿಷ್ಠಿರನಿಗೆ ತಕ್ಕ ಪ್ರಾಯಶ್ಚಿತ್ತವಾಗಲೇಬೇಕೆಂದು ಒತ್ತಾಯಪಡಿಸಲಾಗುತ್ತದೆ. ಸಾರ್ವಜನಿಕ ಮತ್ತು ಸ್ವಂತ ವಿಷಯಗಳಲ್ಲಿ ಅನುಸರಿಸ

ಬೇಕಾದ ನೀತಿಗಳ ನಡುವಣ ಘರ್ಷಣೆ ರಾಜಕೀಯ ರಂಗದಲ್ಲಿ ಕಂಡುಬರುವ ಒಂದು ಮೂಲ ಸಂಘರ್ಷವೆಂಬುದನ್ನು ಈ ಕತೆ ತೋರಿಸಿಕೊಡುತ್ತದೆ. ಕೌಟಿಲ್ಯನ ನಂತರ ಬಂದ, ನೀತಿಶಾಸ್ತ್ರ ಲೇಖಕರು, ನೀತಿಯ ಅನುಸರಣೆ, ಒಬ್ಬ ವ್ಯಕ್ತಿಯ ಖಾಸಗಿ ಜೀವನಕ್ಕೆ ಸಂಬಂಧಿಸಿದುದೆಂದು ಅಭಿಪ್ರಾಯಪಟ್ಟಿದ್ದಾರೆ. ರಾಜನು, ಒಬ್ಬ ಒಳ್ಳೆಯ ಮನುಷ್ಯನಾಗಿರಬೇಕು. ಸಾರ್ವಜನಿಕ ವ್ಯವಹಾರಗಳನ್ನು ನಿರ್ವಹಿಸುವಾಗ ನಿಶ್ಚಿತಪಡಿಸಿದ ನೀತಿಗನುಗುಣವಾಗಿ ಅವನು ನಡೆದುಕೊಳ್ಳಬೇಕು ಎಂದಿದ್ದಾರೆ. ಮಾನವನ ಅತ್ಯುನ್ನತ ನೈತಿಕ ಕರ್ತವ್ಯವೇನೆಂಬುದು ಹಿಂದೂ ಚಿಂತನೆಯಲ್ಲಿ ಅಭಿವ್ಯಕ್ತವಾಗಿಲ್ಲವೆಂಬುದು ಹೆಗಲ್‌ನ ಅಭಿಪ್ರಾಯ. ರಾಜ್ಯವು ಮಾತ್ರ ಪ್ರಜೆಗಳಿಗೆ ರಕ್ಷಣೆಯನ್ನು ಒದಗಿಸಬಲ್ಲುದೇ ವಿನಃ ಇದು ಬೇರಾರಿಂದಲೂ ಸಾಧ್ಯವಿಲ್ಲ. ರಾಜ್ಯವೊಂದೇ ಜನರನ್ನು ಸನ್ಮಾರ್ಗಕ್ಕೆ ತರಬಲ್ಲುದು. ಆದ್ದರಿಂದ ರಾಜ್ಯದ ರಕ್ಷಣೆಗೆ ಅಗತ್ಯವಿರುವ ಎಲ್ಲ ವಿಧಾನಗಳನ್ನು ಅನುಸರಿಸಲು ರಾಜ್ಯಕ್ಕೆ ಅವಕಾಶವಿರುತ್ತದೆ ಎಂದೂ ಹಿಂದೂ ಗ್ರಂಥಕರ್ತರು ಹೇಳುತ್ತಾರೆ. ಒಬ್ಬ ರಾಜನು ತನ್ನ ರಾಜ್ಯದ ರಕ್ಷಣೆಗಾಗಿ, ನೈತಿಕ ಅಥವಾ ಅನೈತಿಕವಾದ ಎಲ್ಲ ಮಾರ್ಗಗಳನ್ನೂ ಅನುಸರಿಸಲೇ ಬೇಕಾಗುತ್ತದೆ. ಇಲ್ಲದಿದ್ದರೆ ರಾಜನು ಆ ಸ್ಥಾನಕ್ಕೆ ಯೋಗ್ಯನಲ್ಲವೆಂದು ಪರಿಗಣಿಸಲಾಗುತ್ತದೆ. ಒಂದು ರಾಜ್ಯವು, ನೀತಿಗಳೆಲ್ಲವನ್ನೂ ಮೀರಿದ ಉನ್ನತ ಮಟ್ಟದಲ್ಲಿರುತ್ತದೆ. ಆದ್ದರಿಂದ, ಒಬ್ಬ ರಾಜನು ಪ್ರಜೆಗಳ ಹಿತದೃಷ್ಟಿಯಿಂದ, ರಾಜ್ಯದೊಳಗಿರುವ ಗುಪ್ತ ಶತ್ರುಗಳಿಗೆ ವಿಷವುಣಿಸುವುದಕ್ಕೆ ಅಥವಾ ಕೊಲೆ ಮಾಡುವುದಕ್ಕೆ ಹಿಂಜರಿಯಬಾರದು. ರಾಜ್ಯದ ಹಿತಕ್ಕಾಗಿ, ಅನ್ಯರಾಜ್ಯಗಳಲ್ಲೂ ಅಶಾಂತಿ ಮತ್ತು ಅಸಮಾಧಾನ ಉಂಟುಮಾಡಿದರೂ ತಪ್ಪಾಗುವುದಿಲ್ಲ ಎಂಬ ಒಂದು ಸಿದ್ಧಾಂತವನ್ನು ಕೌಟಿಲ್ಯನು ಮುಂದಿಟ್ಟನು.

ಸಾರ್ವಜನಿಕ ಕ್ಷೇತ್ರದಲ್ಲಿನ ನೀತಿ–ನಿಯಮಗಳು, ಧೋರಣೆಗಳಿಗೆ ಅಡಚಣೆ ಉಂಟು ಮಾಡಬಾರದು ಎಂದು ಬೋಧಿಸುವುದಕ್ಕೂ ಕೌಟಿಲ್ಯ ಹಿಂದುಮುಂದು ನೋಡುವುದಿಲ್ಲ. ಒಬ್ಬ ರಾಜನು ಗುಣವಂತನಾಗಿರಬೇಕು. ತನ್ನ ಆಸೆ ಆಮಿಷಗಳನ್ನು ನಿಗ್ರಹಿಸಬೇಕು. ತನ್ನ ಮನಸ್ಸಿನ ಮೇಲೆ ತಾನು ಜಯ ಸಾಧಿಸಬೇಕು. ಆಗ ಸಾರ್ವಜನಿಕ ಮತ್ತು ಖಾಸಗಿ ಜೀವನದಲ್ಲಿನ ನೈತಿಕತೆಯ ನಡುವಣ ಘರ್ಷಣೆಯ ವಿಸ್ತಾರವನ್ನು ಸುಲಭವಾಗಿ ತಿಳಿಯಬಹುದು ಎನ್ನುತ್ತಾನೆ ಕೌಟಿಲ್ಯ. ಹಿಂದೂ ರಾಜಕೀಯ ಸಿದ್ಧಾಂತವು, ಯೂರೋಪ್‌ನ ವಾಸ್ತವವಾದಿ ವಿಚಾರಪಂಥದ ಚಿಂತನೆಗೆ ಅತಿ ಹತ್ತಿರವಾಗಿದೆ. ಮೆಕಿಯವೆಲ್ಲಿ ಈ ಪಂಥದ ಖ್ಯಾತ ಪ್ರತಿಪಾದಕ. ರಾಜನು ಗುಣವಂತನಾಗಿರಬೇಕೆಂಬುದನ್ನು ಮೆಕಿಯವೆಲ್ಲಿಯಂತೆಯೇ, ಕೌಟಿಲ್ಯ ಮತ್ತು ಅವನ ನಂತರ ಬಂದವರು ಸಹ ಒತ್ತಿ ಹೇಳಿದರು. ಆದರೆ ಒಂದು ರಾಜ್ಯದ ಹಿತರಕ್ಷಣೆಯ ಪ್ರಶ್ನೆ ಬಂದಾಗ, ಯಾವುದೇ ಕಠಿಣ ಕ್ರಮವನ್ನಾಗಲೀ ಕೈಗೊಳ್ಳಲು ರಾಜನ ಈ

ಗುಣವಂತಿಕೆ ಅಡ್ಡ ಬರಬಾರದು ಅಥವಾ ಪ್ರತಿಬಂಧಿಸ ಬಾರದು. ರಾಜಮನೆತನದಲ್ಲಿ ರಾಜನಿಗೆ ಯಾರು ನಿಷ್ಠರಾಗಿಲ್ಲವೋ, ಅಂತಹವರನ್ನು ದೂರವಿಡಬೇಕೆಂದು ಕೌಟಿಲ್ಯ ರಾಜರಿಗೆ ಸಲಹೆ ನೀಡುತ್ತಾನೆ. ರಾಜ್ಯದಲ್ಲಿ ಶಾಂತಿ ಭಂಗವುಂಟುಮಾಡುವವರನ್ನು ಹತ್ತಿಕ್ಕಲು ಕೆಲವು ಕಾರ್ಯಕರ್ತರನ್ನು ಬಳಸಿಕೊಳ್ಳಬೇಕೆಂದು ರಾಜರಿಗೆ ಸಲಹೆ ನೀಡುವುದಕ್ಕೂ ಕೌಟಿಲ್ಯ ಹಿಂಜರಿಯುವುದಿಲ್ಲ. ಗೂಢಚರ್ಯೆಗಾಗಿ, ರಾಜನು ವೇಶ್ಯೆಯರನ್ನು ಮತ್ತು ಜೂಜುಕೋರರನ್ನು ಸಹ ಬಳಸಿಕೊಳ್ಳಬಹುದೆಂದು ಸೂಚನೆ ಕೊಡಲಾಗಿತ್ತು. ರಾಜ್ಯದಲ್ಲಿ ರಾಜನ ಅಧಿಕಾರವನ್ನು ಮೊಟಕುಗೊಳಿಸಲು ಕಾರ್ಪೊರೇಷನ್‌ಗಳು ಪ್ರಯತ್ನಿಸಬಹುದು. ಆಗ ಅಂತಹ ಕಾರ್ಪೊರೇಷನ್‌ಗಳಲ್ಲಿ ಒಡಕು ಹುಟ್ಟಿಸಿ, ಅವನ್ನು ವಿಭಜನೆಗೊಳಿಸುವ ಒಂದು ಸಾಮಾನ್ಯ ವಿಧಾನವನ್ನು ಸಹ ಅನುಸರಿಸಬಹುದೆಂದು ಶಿಫಾರಸು ಮಾಡಲಾಯಿತು. ಈ ಎಲ್ಲ ಸಲಹೆಗಳನ್ನು ಒಂದು ಕುಟುಂಬಕ್ಕೆ ನೀಡುವಂತಹ ಹಿತವಚನಗಳಿಗೆ ಹೋಲಿಸಬಹುದು. ಇಂತಹುದೇ ವಿಚಾರವನ್ನು ೧೫ನೇ ಶತಮಾನದಲ್ಲಿ ಫ್ಲಾರೆಂಟಿನ್ ಪ್ರತಿಪಾದಿಸಿದ್ದನು.

ಪ್ರಜೆಗಳ ಮೇಲೆ ರಾಜನು ಸಂಪೂರ್ಣ ಅಧಿಕಾರ ಹೊಂದಿರುತ್ತಾನೆ. ರಾಜನಿಗೆ ನಿಷ್ಠರಾಗಿರುವುದು ಪ್ರಜೆಗಳ ಕರ್ತವ್ಯ ಎಂದು ಮಹಾಭಾರತದಲ್ಲಿ ಮಾತ್ರವಲ್ಲದೆ, ನೀತಿಶಾಸ್ತ್ರದ ಮೇಲೆ ಬರೆಯಲಾಗಿರುವ ಅನೇಕ ಪುಸ್ತಕಗಳಲ್ಲಿ ಮತ್ತು ಗ್ರಂಥಗಳಲ್ಲಿ ತಿಳಿಸಲಾಗಿದೆ. ಹಿಂದೂ ಸಿದ್ಧಾಂತದ ಪ್ರಕಾರ, ಸಮುದಾಯದಿಂದ ಅನ್ಯನಾದ ಒಬ್ಬ ವ್ಯಕ್ತಿಗೆ ಯಾವ ಹಕ್ಕೂ ಇರುವುದಿಲ್ಲ. ರಾಜ್ಯದಲ್ಲಿ ಸ್ವಾತಂತ್ರ್ಯ ಎಂಬ ವಿಚಾರವೇ ಬರುವುದಿಲ್ಲ. ರಾಜ್ಯದಲ್ಲಿ ಸಂರಕ್ಷಣೆಗೆ ಅತಿ ಹೆಚ್ಚು ಒತ್ತುಕೊಡಲಾಗಿದೆ. ಆದ್ದರಿಂದ, ರಾಜನಿಗೆ ಸಂಬಂಧಿಸಿದಂತೆ ಪ್ರಜೆಗಳಿಗೆ ಯಾವ ಹಕ್ಕಾಗಲಿ ಇರುವುದಿಲ್ಲ. ಆದರೆ ಅವರಿಗೆ ಉಳಿದಿರುವ ಮಾರ್ಗವೆಂದರೆ ದಂಗೆ ಏಳುವುದೊಂದೇ. ಗುಣವಂತನಲ್ಲದ ಮತ್ತು ನೀತಿವಂತನಲ್ಲದ ರಾಜನ ವಿರುದ್ಧ ದಂಗೆ ಏಳುವ ಹಕ್ಕು ಜನರಿಗೆ ಖಂಡಿತ ಇದೆಯೆಂದು ಶುಕ್ರನೀತಿಸಾರದ ಎರಡನೆಯ ಅಧ್ಯಾಯದಲ್ಲಿ ತಿಳಿಸಲಾಗಿದೆ. ಇದು ತೀವ್ರವಾದಿಗಳ ಚಿಂತನೆಯಷ್ಟೇ ಅಲ್ಲ. ಇಂತಹ ಸಿದ್ಧಾಂತಕ್ಕೆ ಮಹಾಭಾರತದಲ್ಲೇ ಸಂಪೂರ್ಣ ಸಮರ್ಥನೆಯಿದೆ. ನಿರಂಕುಶಾಡಳಿತ ನಡೆಸುತ್ತಿರುವ ಒಬ್ಬ ರಾಜನ ವಿರುದ್ಧ ಪ್ರಜೆಗಳು ದಂಗೆಯೆದ್ದು, ಅಂತಹ ರಾಜನನ್ನು ಪದಚ್ಯುತಗೊಳಿಸಬಹುದೆಂದು ಅದರಲ್ಲಿ ಸುಸ್ಪಷ್ಟಪಡಿಸಲಾಗಿದೆ. ಇಂತಹ ದಂಗೆಗಳು ನಡೆದು, ನ್ಯಾಯಸಮ್ಮತವಾಗಿ ಅಧಿಕಾರದಲ್ಲಿದ್ದ ರಾಜರುಗಳನ್ನು, ದಂಗೆಯ ಮೂಲಕ ಪದಚ್ಯುತಗೊಳಿಸಿದ ಅನೇಕ ಉದಾಹರಣೆಗಳನ್ನು ಸಹ ಕೊಡಲಾಗಿದೆ. ರಾಜನ ಬಳಿ ಇರುವ ಮಂತ್ರಿಗಳು ತಪ್ಪಿತಸ್ಥರಾಗಿ ನಡೆದುಕೊಂಡು ಧರ್ಮವಿನಾಶಕರಾಗಿದ್ದರೆ, ಅಂತಹ ಮಂತ್ರಿಗಳನ್ನು ಕೊಲ್ಲಬೇಕೆಂದು ಹೇಳಿರುವ ವಾಮದೇವನ ಮಾತಗಳನ್ನು ಭೀಷ್ಮನು ಉಲ್ಲೇಖಿಸಿದ್ದಾನೆ ಯಾವ ರಾಜನು ಜನರಿಗೆ ಸಂರಕ್ಷಣೆ ನೀಡುವುದಿಲ್ಲವೋ ಅಂತಹ ರಾಜನ ವಿರುದ್ಧ

ಜನರು ಶಸ್ತ್ರಸಜ್ಜಿತರಾಗಿ ಅವನನ್ನು ಕೊಂದುಬಿಡಬೇಕೆಂದು ಸಹ ತಿಳಿಸಲು ಭೀಷ್ಮನು ಹಿಂಜರಿಯುವುದಿಲ್ಲ.[೮] ರಾಜ ಮತ್ತು ಅವನ ಪ್ರಜೆಗಳ ನಡುವಣ ಸಂಬಂಧಗಳ ಬಗ್ಗೆ ಹೇಳುವುದಾದರೆ ಹಿಂದೂ ಸಿದ್ಧಾಂತವು ಹೆಚ್ಚುಕಡಿಮೆ ಪಶ್ಚಿಮದಲ್ಲಿ ಹಾಬ್ಸ್ ಬೋಧಿಸಿದ ಸಿದ್ಧಾಂತಕ್ಕೆ ಹತ್ತಿರವಾಗುತ್ತದೆ. ನಿರಂಕುಶ ಪ್ರಭುತ್ವದ ವಿರುದ್ಧ ಬಂಡಾಯವೇಳುವ ಹಕ್ಕು ಪ್ರಜೆಗಳಿಗಿದೆಯೆಂಬ ಸಿದ್ಧಾಂತವನ್ನು ಹಾಬ್ಸ್ ಪ್ರಚುರ ಪಡಿಸಿದ್ದನು. ರಾಜರು ಸಹ ಕೆಲವು ನಿರ್ಬಂಧಗಳಿಗೆ ಒಳಪಟ್ಟಿದ್ದರು. ನೀತಿ, ನ್ಯಾಯ ಮತ್ತು ಧರ್ಮಗಳ ಆಧಾರದ ಮೇಲೆ ರಾಜನು ಈ ನಿರ್ಬಂಧಗಳಿಗೆ ಒಳಪಟ್ಟಿದ್ದನು. ಧರ್ಮದ ಮೇಲೆ ಆಧಾರಿತವಾಗಿದ ನೀತಿನಿಯಮಗಳನ್ನು ರಾಜನು ಮೀರಿ ನಡೆಯುವಂತಿರಲಿಲ್ಲ. ಪ್ರಜೆಗಳನ್ನು ರಕ್ಷಿಸುವುದು ರಾಜನ ಒಂದು ನೈತಿಕ ಕರ್ತವ್ಯ. ಆದರೆ ಒಬ್ಬ ವ್ಯಕ್ತಿ ಇಂತಹ ರಕ್ಷಣೆಯನ್ನು ಪಡೆಯುವುದು ತನ್ನ ಹಕ್ಕು ಮತ್ತು ಅದನ್ನು ಒದಗಿಸುವುದು ರಾಜನ ಕರ್ತವ್ಯ ಎಂದು ಹೇಳುವುದು ಸಾಧ್ಯವಿರಲಿಲ್ಲ. ವ್ಯಕ್ತಿಗತ ಸ್ವಾತಂತ್ರ್ಯದ ಒಂದು ರಾಜಕೀಯ ಕಲ್ಪನೆ, ಇನ್ನೂ ಯಾರಿಗೂ ಬಂದಿರಲಿಲ್ಲ. ಇದಕ್ಕಾಗಿ ರಾಜನನ್ನು ಒತ್ತಾಯಪಡಿಸಿ, ಬಂಡಾಯ ನಡೆಸಬೇಕಾಗುವುದೆಂದು ಸತತವಾಗಿ ಬೆದರಿಕೆ ಹಾಕುವಂತಹ ಚರ್ಚ್ ಕೂಡ ಇರಲಿಲ್ಲ. ಆದ್ದರಿಂದ ವೈಯಕ್ತಿಕ ಸ್ವಾತಂತ್ರ್ಯದ ಬೇಡಿಕೆ ಅಷ್ಟೊಂದು ಪ್ರಬಲವಾಗಿರಲಿಲ್ಲ. ಯೂರೋಪ್‌ನಲ್ಲಿ, ಕುಲೀನರು ಮತ್ತು ರಾಜನ ನಡುವಣ ಹೋರಾಟದ ಪರಿಣಾಮವಾಗಿ ವ್ಯಕ್ತಿಗತ ಸ್ವಾತಂತ್ರ್ಯದ ಭಾವನೆ ಬೆಳೆಯಿತು. ಚರ್ಚ್‌ನ ಬೆಂಬಲದಿಂದ ಕುಲೀನರು ರಾಜನಿಂದ ಸ್ವಾತಂತ್ರ್ಯದ ಹಕ್ಕು ಪಡೆದುಕೊಂಡರು. ಇದೇ ಮ್ಯಾಗ್ನಕಾರ್ಟ ಎಂದು ಪ್ರಸಿದ್ಧವಾಗಿದೆ. ಇಂದು ಸ್ವಾತಂತ್ರ್ಯವೆಂದರೆ ಯಾವ ಒಂದು ಭಾವನೆ ಇದೆಯೋ ಅಂತಹ ಭಾವನೆ, ಇಂಗ್ಲೆಂಡ್‌ನಲ್ಲಿ ಅಥವಾ ಮಧ್ಯಯುಗದಲ್ಲಿದ್ದ ಕಾರ್ಪೊರೇಷನ್‌ಗಳಲ್ಲಿ ಇರಲಿಲ್ಲ. ಹಕ್ಕು ಬಾಧ್ಯತೆಗಳ ಬಗ್ಗೆಯೂ ಆ ಯುಗದಲ್ಲಿ ಅಂತಹ ವ್ಯವಹಾರಜ್ಞಾನವಿರಲಿಲ್ಲ. ಒಂದು ರಾಜ್ಯದಲ್ಲಿ ನ್ಯಾಯಾಲಯಗಳಿಗೆ ಮಾತ್ರ ಸ್ವಾತಂತ್ರ್ಯವನ್ನು ಕಾಪಾಡಲು ಮತ್ತು ಎತ್ತಿಹಿಡಿಯಲು ಸಾಧ್ಯವಿರುತ್ತಿತ್ತು. ಆಗ ಒಂದು ರಾಜ್ಯವೆಂದರೆ, ಕಾನೂನಿನ ಮೂಲಕ ಸಂರಕ್ಷಿಸಲ್ಪಡುತ್ತಿರುವ ಒಂದು ಪ್ರದೇಶವೆಂದು ಪರಿಗಣಿಸಲಾಗುತ್ತಿತ್ತು. ಅದು ಒಂದು ಸ್ವಭಾವಸಿದ್ಧ ರಾಜ್ಯವಾಗಿರಲಿಲ್ಲ. ಅಂತಿಮ ವಿಶ್ಲೇಷಣೆಯಲ್ಲಿ ಒಂದು ಅಂಶ ಸ್ಪಷ್ಟವಾಗುತ್ತದೆ. ಒಂದು ರಾಜ್ಯದ ಮೇಲೆ ಕಾನೂನುಗಳು ಮತ್ತು ಸಂವಿಧಾನಗಳು ಎಷ್ಟೇ ಪರಿಮಿತಿಗಳನ್ನು ವಿಧಿಸಬಹುದು. ಆದರೂ, ರಾಜ್ಯ ಅಥವಾ ರಾಜನಲ್ಲಿ ಅಂತರ್ಗತವಾಗಿರುವ ಮತ್ತು ಕಾಯ್ದಿರಿಸಲಾಗಿರುವ ಕೆಲವು ಅಧಿಕಾರಗಳಿವೆ. ವ್ಯಕ್ತಿಯ ಸ್ವಾತಂತ್ರ್ಯ ಇದಕ್ಕ ಮಣಿಯಲೇಬೇಕಾಗುತ್ತದೆ.

ಸಾಮಾನ್ಯ ಸಮಯದಲ್ಲಿ, ನ್ಯಾಯನಿಯಮಗಳಿರುವ ಮತ್ತು ಅದಕ್ಕೆ ಸರಿಸಮನಾದ ಸಂಸ್ಥೆಗಳಿರುವ ಒಂದು ರಾಜ್ಯದಲ್ಲಿ ವ್ಯಕ್ತಿಯು ಸ್ವಾತಂತ್ರ್ಯವನ್ನು

ಅನುಭವಿಸುತ್ತಾನೆ. ಇಂತಹ ಸ್ವಾತಂತ್ರ್ಯವನ್ನು ಸದಾ ಅನುಭವಿಸುವಂತೆ ಒಬ್ಬ ನಾಗರಿಕನಿಗೆ ಖಾತರಿ ನೀಡುವಂತಹ ಒಂದು ವಿಧಾನವನ್ನು ಇನ್ನೂ ರೂಪಿಸಿಲ್ಲ. ಸಾಂವಿಧಾನಿಕ ಭರವಸೆಗಳನ್ನು ಅಥವಾ ಗ್ಯಾರಂಟಿಗಳನ್ನು ತಡೆಹಿಡಿಯಲು, ಎಲ್ಲ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಅವಕಾಶ ಮಾಡಿಕೊಂಡಿರುತ್ತವೆ. ತುರ್ತು ಪರಿಸ್ಥಿತಿಯೊಂದರಲ್ಲಿ ನ್ಯಾಯನಿರ್ಣಯ ತೆಗೆದುಕೊಳ್ಳುವ ಅಧಿಕಾರ ರಾಜ್ಯಕ್ಕೆ ಮಾತ್ರ ಇರುತ್ತದೆ. ಅಂತಹ ಸಮಯದಲ್ಲಿ ರಾಜ್ಯವು ಎಲ್ಲ ನಾಗರಿಕ ಹಕ್ಕುಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಬಹುದು ಅಥವಾ ವಜಾ ಮಾಡಬಹುದು. ಸ್ವಾತಂತ್ರ್ಯದ ತಾಯ್ನಾಡು ಎಂದು ಕರೆಸಿಕೊಳ್ಳುವ ಇಂಗ್ಲೆಂಡ್‌ನಲ್ಲೂ, ಎರಡು ಮಹಾಯುದ್ಧಗಳ ಕಾಲದಲ್ಲಿ ಇಂತಹ ಅನುಭವ ಉಂಟಾಗಿದೆ. ಆಧುನಿಕ ಜೀವನದಲ್ಲಿರುವಂತಹ ಪರಿಸ್ಥಿತಿಯಲ್ಲಿ, ವ್ಯಕ್ತಿಯ ಸ್ವಾತಂತ್ರ್ಯ ತನ್ನದೇ ಆದ ಕೆಲವು ಪರಿಮಿತಿಗಳನ್ನು ಹೊಂದಿರುತ್ತದೆ. ಈ ಸ್ವಾತಂತ್ರ್ಯದಿಂದ ಎಲ್ಲಿಯವರೆಗೆ ರಾಜ್ಯಕ್ಕೆ ಅಪಾಯ ಇರುವುದಿಲ್ಲವೋ ಅಲ್ಲಿಯವರೆಗೂ ಅದನ್ನು ಸಹಿಸಿಕೊಳ್ಳಲಾಗುತ್ತದೆ. ಅಮೆರಿಕನ್ ಮತ್ತು ಫ್ರೆಂಚ್ ಕ್ರಾಂತಿಗಳಾದ ನಂತರದ ೧೭೦ ವರ್ಷಗಳಲ್ಲಿ, ಮಾನವಕುಲವು ವ್ಯಕ್ತಿಗತವಾದ ಹಕ್ಕುಗಳಿಗೆ ತುಂಬ ಮಹತ್ವ ನೀಡುತ್ತಿದೆ. ಈ ನಿಟ್ಟಿನಲ್ಲಿ, ಉದಾರವಾದ ರಾಜಕೀಯ ನೀತಿಗಳನ್ನು ಪ್ರಯೋಗಿಸಿ ನೋಡಲಾಗಿದೆ. ಇದರಲ್ಲಿ ಸಾಧಿಸಲಾಗಿರುವ ಸಫಲತೆ ಎಷ್ಟೇ ಆಗಿರಲಿ, ಒಂದು ಉದ್ದೇಶವಂತೂ ಈಡೇರಿದೆ. ಒಬ್ಬ ವ್ಯಕ್ತಿಯು ತನ್ನ ಸಾಮರ್ಥ್ಯವನ್ನು ತಾನೇ ಅರಿತುಕೊಂಡು, ಅದನ್ನು ಸಂರಕ್ಷಿಸಿಕೊಳ್ಳಲು ಸಾಧ್ಯವಾಗಿದೆ. ರಾಜ ಮತ್ತು ರಾಜ್ಯದ ಹತೋಟಿಯಿಂದ ಮುಕ್ತವಾಗಿ, ತನ್ನ ಯೋಗ್ಯತೆಯನ್ನು ತಾನು ಅರಿತುಕೊಳ್ಳಲು ವ್ಯಕ್ತಿಗೆ ಅವಕಾಶವಾಗಿದೆ.

ಹಿಂದೂ ರಾಜಕೀಯ ಸಿದ್ಧಾಂತದ ದೃಷ್ಟಿಯಿಂದ ನೋಡಿದಾಗ, ಈ ದಿಶೆಯಲ್ಲಿ ಯಾವ ಪ್ರಯತ್ನವೂ ನಡೆದಿಲ್ಲ. ಹಾಗಾಗಿ ವ್ಯಕ್ತಿಗೆ ಯಾವ ಹಕ್ಕಾಗಲಿ ಇರಲಿಲ್ಲ.

ಪುತ್ರಾ ಇವ ಪಿತುರ್ಗೇಹೇ ವಿಷಯೇ ಯಸ್ಯ ಮಾನವಾಃ
ನಿರ್ಭಯಾ ವಿಚರಿಷ್ಯಂತಿ ಸ ರಾಜಾ ರಾಜಸತ್ತಮಃ
ಅಗೂಢವಿಭವಾ ಯಸ್ಯ ನರಾ ರಾಷ್ಟ್ರ ನಿವಾಸಿನಃ
ನ ಯಾಪನಯ ವೇತ್ತಾ ಯಸ ರಾಜಾ ರಾಜಸತ್ತಮಃ ॥

ರಾಜನು ತನ್ನ ಪ್ರಜೆಗಳಿಗೆ ಪಿತೃಸಮಾನನಾಗಿರುವುದರಿಂದ, ಅವನು ತುಂಬ ದಯಾಳುವಾಗಿರಬೇಕೆಂದು ಕೇಳಿಕೊಳ್ಳಲಾಗುತ್ತಿತ್ತು. ಜನರಿಂದ ಅಪಾರ ಪ್ರೀತಿಯನ್ನು ಗಳಿಸಬೇಕಾದ ಅಗತ್ಯ ರಾಜನಿಗಿದೆಯೆಂದು ತಿಳಿಸಲು, ಅನೇಕ ಪ್ರತಿಬಂಧಕಗಳನ್ನು ರೂಪಿಸಲಾಗಿತ್ತು. "ಯಾವ ರಾಜನನ್ನು ಪ್ರಜೆಗಳು ಭಯದಿಂದ ನೋಡುವರೋ ಅವನೊಬ್ಬ ನೀಚರಾಜ" ಎಂದು ಶುಕ್ರನು ತಿಳಿಸಿದ್ದಾನೆ. "ಯಾವ ರಾಜನಿರುವ

ಪ್ರದೇಶದಲ್ಲಿ ಜನರು ತಮ್ಮ ಮನೆಗಳಲ್ಲಿ ಓಡಾಡುವಂತೆ, ನಿರ್ಭೀತಿಯಿಂದ ಸ್ವತಂತ್ರವಾಗಿ ಅಡ್ಡಾಡುವರೋ ಆ ರಾಜನು ರಾಜರುಗಳಲ್ಲಿಯೇ ಅತ್ಯುತ್ತಮನಾದವನು" ಎಂದು ಮಹಾಭಾರತ ತಿಳಿಸುತ್ತದೆ. ಇಂತಹ ರಾಜ್ಯವೊಂದರಲ್ಲಿ ಜನರು ತಮ್ಮ ಸಂಪತ್ತನ್ನು ಬಚ್ಚಿಡಬೇಕಾದ ಅಗತ್ಯವಿರುವುದಿಲ್ಲ. ಅಲ್ಲಿರುವ ರಾಜನಿಗೆ ಸರಿ–ತಪ್ಪುಗಳ ಅರಿವು ಚೆನ್ನಾಗಿರುತ್ತದೆ. ಇದೊಂದು ಒಳ್ಳೆಯ ಆದರ್ಶವಾಗಿತ್ತೆಂಬುದರಲಲಿ ಸಂದೇಹವಿರಲಿಲ್ಲ. ಆದರೆ ಬರಿ ಆದರ್ಶವನ್ನು ನಿರೂಪಿಸುವುದರಿಂದ, ಸ್ವಾತಂತ್ರ್ಯ ದೊರೆಯುವ ಖಾತರಿ ಇರುವುದಿಲ್ಲ. ಯಾವುದೇ ತುರ್ತು ಪರಿಸ್ಥಿತಿ ಇಲ್ಲದ ಸಾಮಾನ್ಯ ಸ್ಥಿತಿಗತಿಗಳಲ್ಲಿ ಕೂಡ ಒಬ್ಬ ದುಷ್ಟ ರಾಜನು ಈ ಆದರ್ಶಗಳನ್ನು ನಿರ್ಲಕ್ಷಿಸುವುದನ್ನು ತಪ್ಪಿಸಲು ಹಿಂದೂ ಸಂಸ್ಥೆ ಏನು ಮಾಡಿತು. ಅನೇಕ ರಾಜರುಗಳು ಈ ತತ್ವಗಳನ್ನು ಕಿಂಚಿತ್ತೂ, ಪಾಲಿಸದೆ, ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದರು ಮತ್ತು ಅವರನ್ನು ಪೀಡಿಸುತ್ತಿದ್ದರು. ಇತಿಹಾಸವನ್ನು ವಿವರವಾಗಿ ನಿರೂಪಿಸಿರುವ ರಾಜತರಂಗಿಣಿ ಈ ವಿಷಯವನ್ನು ತಿಳಿಸಿದೆ. ಈ ಪರಿಸ್ಥಿತಿಯನ್ನು ನಿವಾರಿಸಲು ನಾಗರಿಕರ ಮುಂದಿದ್ದ ಕ್ರಮಗಳು ಉಪಯೋಗಕ್ಕೆ ಬರಲಿಲ್ಲ. ಯಾರೂ ಅವನ್ನು ಆಚರಣೆಗೆ ತರುವ ಪ್ರಯತ್ನ ಮಾಡಲಿಲ್ಲ. ಜನರು ಬಂಡಾಯ ಅಥವಾ ಪ್ರತಿರೋಧಕ ಆಂದೋಲನ ಮೂಲಕ ರಾಜರುಗಳ ದಬ್ಬಾಳಿಕೆಯಿಂದ ಮುಕ್ತರಾಗಬಹುದಿತ್ತು. ಸಾರ್ವಜನಿಕರಿಗೆ ಇರುವ ಹಕ್ಕುಗಳ ಉಲ್ಲಂಘನೆ ಭಾರಿ ಪ್ರಮಾಣದಲ್ಲಿ ಆದಾಗ ಮಾತ್ರವಲ್ಲದೆ ಅತ್ಯಂತ ಬಡ ಹಾಗೂ ಕೆಳವರ್ಗದ ಜನರ ಹಕ್ಕುಗಳ ಉಲ್ಲಂಘನೆಯಾದಾಗಲೂ ಜನರು ತಮ್ಮ ಹಕ್ಕುಗಳನ್ನು ಎತ್ತಿಹಿಡಿಯಬೇಕು. ಈ ನಿಯಮ ಹಿಂದೂ ಸಿದ್ಧಾಂತಕಾರರಿಗೆ ಸ್ವಲ್ಪವೂ ತಿಳಿದಿರಲಿಲ್ಲ. ಈ ನಿಯಮವನ್ನು ಅವರು ಗುರುತಿಸಿರಲೇ ಇಲ್ಲ.

ಹಿಂದೂಗಳ ದೃಷ್ಟಿಯಲ್ಲಿ ರಾಜ್ಯಕ್ಕೂ ದೇವರು–ಧರ್ಮ ಇವುಗಳಿಗೂ ಯಾವ ಸಂಬಂಧವೂ ಇರಲಿಲ್ಲ. ಇದೊಂದುಮಹತ್ವದ ಸಂಗತಿ. ರಾಜ್ಯ ಮತ್ತು ಧರ್ಮ ಇವುಗಳ ನಡುವೆ ಅವರು ಯಾವ ಸಂಬಂಧವನ್ನೂ ಕಲ್ಪಿಸಿಕೊಂಡಿರಲಿಲ್ಲ. ಹಿಂದೂ ರಾಜ್ಯವೊಂದರಲ್ಲಿ ಒಬ್ಬ ವ್ಯಕ್ತಿಯು ಸಮಾಜದಲ್ಲಿ ಇತರ ವ್ಯಕ್ತಿಗಳೊಡನೆ ಎಂತಹ ಸಂಬಂಧ ಹೊಂದಿರುತ್ತಾನೆ ಎಂಬುದು ಮುಖ್ಯವಾಗಿತ್ತೇ ಹೊರತು, ದೇವರಿಗೂ ರಾಜ್ಯಕ್ಕೂ ಯಾವ ಸಂಬಂಧವಾಗಲಿ ಇರಲಿಲ್ಲ. ಆದ್ದರಿಂದ ರಾಜನು ಪೌರೋಹಿತ್ಯ ಸ್ವರೂಪದ ಯಾವ ಕಾರ್ಯವನ್ನೂ ನಿರ್ವಹಿಸುತ್ತಿರಲಿಲ್ಲ. ರಾಜನು ಸಂಪೂರ್ಣವಾಗಿ ಜಾತ್ಯತೀತ ಸ್ವರೂಪದ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ದೇವರು ತನಗೆ ಕೊಟ್ಟಿದ್ದ ವಿಪುಲ ಅಧಿಕಾರದ ಆಧಾರದ ಮೇಲೆ ರಾಜನು ಆಡಳಿತ ನಡೆಸುತ್ತಿರಲಿಲ್ಲ. ರಾಜನು ಜಾತ್ಯತೀತ ಸ್ಥಾನದಲ್ಲಿದ್ದುದರಿಂದ, ಅದಕ್ಕೆ ಅನುಗುನವಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದನು.

ಹಲವಾರು ಬಗೆಯ ಧಾರ್ಮಿಕ ನಂಬಿಕೆಗಳನ್ನು ಹೊಂದಿದ್ದ ಸಮುದಾಯ ವೊಂದರಲ್ಲಿ, ಸ್ವಲ್ಪವೂ ಜಾತೀಯ ಭಾವನೆಗಳಿಲ್ಲದೆ ರಾಜನು ಹೇಗೆ ಆಡಳಿತ ನಡೆಸುತ್ತಿದ್ದನೆಂಬ ಒಂದು ಪ್ರಶ್ನೆ ಉದ್ಭವಿಸಬಹುದು. ಇದಕ್ಕೆ ಬಹಳ ಸರಳವಾದ ಉತ್ತರವಿದೆ. ಸೀಜ಼ರ್‌ಗೆ ಎಷ್ಟು ಸಲ್ಲಬೇಕೋ ಅಷ್ಟು ಸೀಜ಼ರ್‌ಗೆ ಮತ್ತು ದೇವರಿಗೆ ಎಷ್ಟು ಸಲ್ಲಬೇಕೋ ಅಷ್ಟು ದೇವರಿಗೆ ಎಂಬ ತತ್ತ್ವವನ್ನು ಏಸುಕ್ರಿಸ್ತನು ರೂಪಿಸಿದ್ದನು. ಇದು ಜನರು ಮತ್ತು ಧರ್ಮಾಧಿಕಾರದ ನಡುವಣ ಸಂಬಂದಗಳ ನಿರ್ದೇಶನಾ ತತ್ತ್ವವಾಗಿತ್ತು. ಭಾರತದಲ್ಲೂ ಇದೇ ತತ್ತ್ವವನ್ನು ಅನುಸರಿಸಲು ಸಾಧ್ಯವಾಗಿತ್ತು. ಏಕೆಂದರೆ ರಾಜ್ಯಕ್ಕೆ ಪೈಪೋಟಿಯಾಗಿ ನಿಲ್ಲುವಂತಹ ಚರ್ಚ್ ಇರಲಿಲ್ಲ. ಹಿಂದೂಧರ್ಮವು ವ್ಯಕ್ತಿಗತವಾಗಿತ್ತು. ಅದು ಸಾಂಸ್ಥಿಕ ಸ್ವರೂಪ ಪಡೆದಿರಲಿಲ್ಲ. ಆದ್ದರಿಂದ ಯೂರೋಪ್‌ನಲ್ಲಿದ್ದಂತೆ ದೇವರು ಮತ್ತು ಮಾನವರ ನಡುವೆ, ಪ್ರಾಬಲ್ಯಕ್ಕಾಗಿ ನಡೆದಂತಹ ಸಂಘರ್ಷಕ್ಕೆ ಭಾರತದಲ್ಲಿ ಎಡೆ ಇರಲಿಲ್ಲ. ಭಾರತದಲ್ಲಿ ಪುರೋಹಿತ ವರ್ಗ ಅಥವಾ ಪಾದ್ರಿಗಳು ಸಹ ಇರಲಿಲ್ಲ. ಬ್ರಾಹ್ಮಣರು ತಮಗೆ ಧರ್ಮದ ಬಗ್ಗೆ ಇರುವಷ್ಟು ಜ್ಞಾನ ಬೇರಾರಿಗೂ ಇಲ್ಲವೆಂದು ಹೇಳಿಕೊಳ್ಳುತ್ತಿದ್ದರು. ಆದರೆ, ಪಾಶ್ಚಾತ್ಯರು ಹೊಂದಿದ್ದ ಅರ್ಥದಲ್ಲಿ ಅವರು ಪುರೋಹಿತವರ್ಗದವರಾಗಿರಲಿಲ್ಲ. ಭಾರತದಲ್ಲಿ ಎಲ್ಲರ ಹಿತಾಸಕ್ತಿಗಳಲ್ಲೂ ಏಕತೆಯಿತ್ತು; ಜನರೆಲ್ಲರೂ ಒಂದು ಸಾಮಾನ್ಯ ಆಧ್ಯಾತ್ಮಿಕ ತತ್ತ್ವಕ್ಕೆ ನಿಷ್ಠರಾಗಿದ್ದರು. ಸೀಜ಼ರ್ ಮತ್ತು ಪಾಯಿಂಟ್ ಫೆಕ್ಸ್ ಮ್ಯಾಕ್ಸಿಮಸ್‌ನ ಅಧಿಕಾರವನ್ನು ಮಿಳಿತಗೊಳಿಸುವ ಚರ್ಚ್‌ನ ಉದ್ದೇಶ ಭಾರತದಂತಹ ಸಮಾಜವೊಂದರಲ್ಲಿ ಈಡೇರುವುದು ಸಾಧ್ಯವಿಲ್ಲ. ಈ ಸಮಾಜದಲ್ಲಿ ವ್ಯಕ್ತಿ ತನ್ನ ಧರ್ಮವನ್ನು ಆಚರಿಸಿಕೊಂಡು ಹೋಗುತ್ತಾನೆ. ಇಲ್ಲಿ ಮೂಲಭೂತ ಧಾರ್ಮಿಕ ಭಾವನೆಗಳು, ವ್ಯಕ್ತಿ ಆಚರಿಸಿಕೊಂಡು ಹೋಗುವ ಧರ್ಮದ ಮೇಲೆ ಆಧಾರಗೊಂಡಿರುತ್ತವೆ. ಮಧ್ಯಯುಗದಲ್ಲಿ ಡಾಂಟೆ ಮತ್ತು ಪಡೋವಾದ ಮಾರ್ಸಿಲಿಯಸ್ ರಾಜಪ್ರಭುತ್ವದ ಹಕ್ಕನ್ನು ಪ್ರತಿಪಾದಿಸಿದರು. ಅವರು ಪ್ರತಿಪಾದಿಸಿದ ಈ ಸಿದ್ಧಾಂತ ಸಹ ಭಾರತೀಯರಿಗೆ ಪರಕೀಯವಾಗಿತ್ತು. ಜನರ ಮೇಲೆ ಒತ್ತಾಯ ಹೇರುವ ಅಧಿಕಾರವುಳ್ಳ ಚರ್ಚ್ ಭಾರತದಲ್ಲಿರಲಿಲ್ಲ. ಚರ್ಚ್‌ನ ಅಧಿಪತಿಗಳು ನಡೆಸುವ ಪ್ರಭುತ್ವಕ್ಕೆ ಸಂಬಂಧಿಸಿದಂತೆ, ಹಿಲ್ಡರ್‌ಬ್ರ್ಯಾಂಡ್, ಮುಂದಿಟ್ಟಿದ್ದ ಒಂದು ಸಿದ್ಧಾಂತವನ್ನು ಅನುಸರಿಸುವುದು ಸಹ ಭಾರತಕ್ಕೆ ಸಾಧ್ಯವಿರಲಿಲ್ಲ. ರಾಜರುಗಳು ಸರ್ವೋಚ್ಚ ಅಧಿಕಾರವನ್ನು ಬೆಳೆಸಿಕೊಳ್ಳುವುದು ಸಹ ಅಷ್ಟೇ ಅಸಾಧ್ಯವಾಗಿತ್ತು. ಪವಿತ್ರಗ್ರಂಥಗಳಲ್ಲಿ ಸೂಚಿಸಿರುವ ಧರ್ಮವು ರಾಜರುಗಳನ್ನು ಮತ್ತು ಪುರೋಹಿತರುಗಳನ್ನು ಮೀರಿದ ಧರ್ಮವಾಗಿತ್ತು. ಇದು ತುಂಬ ಉನ್ನತವಾದುದಾಗಿತ್ತು. ಆದ್ದರಿಂದ ರಾಜನು ಸರ್ವೋಚ್ಚ ಅಧಿಕಾರ ಪಡೆಯುವುದಕ್ಕಾಗಲಿ ಅಥವಾ ರಾಜ್ಯ ಸರ್ವಶಕ್ತವಾಗುವುದಕ್ಕಾಗಲಿ ಸಾಧ್ಯವಿರಲಿಲ್ಲ.

ಜಾತೀಯ ಸಂಸ್ಥೆಗಳು ಮತ್ತು ಸಮಾಜದ ನಡುವೆ ಕಡಿಯಲಾಗದ ಸಂಬಂಧವಿತ್ತು. ಆದ್ದರಿಂದ ರಾಜ್ಯ, ಸಂಪೂರ್ಣ ಅಧಿಕಾರವನ್ನು ಪಡೆಯಲು ಸಾಧ್ಯವಿರಲಿಲ್ಲ. ಹಿಂದೂಗಳಲ್ಲಿ ನಾಲ್ಕು ವರ್ಣಗಳು ಅಥವಾ ಜಾತಿಗಳಿದ್ದವು. ಇದು ಕೇವಲ ತಾತ್ತ್ವಿಕ ವಿಭಜನೆಯಾಗಿತ್ತು. ಆದರೆ ನಿಜವಾಗಿ, ಹಿಂದೂ ಸಮಾಜದಲ್ಲಿ ಅಸಂಖ್ಯಾತ ಜಾತಿಗಳಿದ್ದವು. ಈ ಜಾತಿಗಳ ಆಧಾರದ ಮೇಲೆ ಸಮಾಜವು ವ್ಯವಸ್ಥೆಗೊಂಡಿತ್ತು. ಈ ಜಾತಿಗಳು ತಮ್ಮ ತಮ್ಮೊಳಗೆ ಸಂಬಂಧ ಹೊಂದಿದ್ದವು. ಆದರೂ ಇವು ನಾಲ್ಕು ಮುಖ್ಯ ವರ್ಣಗಳ ವ್ಯಾಪ್ತಿಗೆ ಒಳಪಟ್ಟಿದ್ದವು. ಜಾತಿ ಪದ್ಧತಿಯ ಮೇಲೆ ಆಧಾರಗೊಂಡಿದ್ದ ಸಮಾಜವು ರಾಜರುಗಳು ಮತ್ತು ಪುರೋಹಿತರುಗಳಿಗಿಂತಲೂ ಶಕ್ತಿಯುತವಾಗಿತ್ತು. ಇದರಿಂದ ಸಾಮಾಜಿಕ ಜೀವನದಲ್ಲಿ ರಾಜನು, ಯಾವ ಅಧಿಕಾರವಾಗಲಿ ಇಲ್ಲದೆ, ದುರ್ಬಲನಾಗಿದ್ದನು. ಇಹ–ಪರಗಳ ಮೇಲೆ ತಮಗೆ ಹತೋಟಿಯಿದೆಯೆಂದು ಹೇಳಿಕೊಳ್ಳುತ್ತಿದ್ದ ಬ್ರಾಹ್ಮಣರ ವಾದವು ಸಹ ಪ್ರಭಾವಶೂನ್ಯವಾಗಿತ್ತು.

ಚರ್ಚ್ ಇಲ್ಲದೇ ಇದ್ದುದರಿಂದ, ಹಿಂದೂ ರಾಜ್ಯವು, ಪಾಶ್ಚಾತ್ಯ ದೇಶಗಳ ಚಿಂತನೆಗಳಲ್ಲಿದ್ದುದಕ್ಕಿಂತ ವಿಭಿನ್ನ ಸ್ವರೂಪ ಪಡೆದಿತ್ತು. ಅಷ್ಟೇ ಅಲ್ಲದೆ, ಹಿಂದೂ ಸಮಾಜದಲ್ಲಿ ವಂಶಪಾರಂಪರ್ಯವಾಗಿ ಬರುವ ಕುಲೀನರ ಪ್ರಭುತ್ವ (ಅರಿಸ್ಟಾಕ್ರಸಿ) ಸಹ ಇರಲಿಲ್ಲ. ಪಾಶ್ಚಾತ್ಯ ದೇಶಗಳಲ್ಲಿದ್ದಂತಹ ವಿಶಿಷ್ಟ ದರ್ಜೆಯ ಶ್ರೀಮಂತರ ಅಥವಾ ಕುಲೀನರ ಪ್ರಭುತ್ವವು, ಅಲ್ಲಿದ್ದ ಊಳಿಗಮಾನ್ಯ ಪದ್ಧತಿಯ (ಫ್ಯೂಡಲಿಸಂ) ಫಲಸ್ವರೂಪವೆಂಬುದನ್ನು ನಾವು ಮರೆಯಬಾರದು. ಸೀಜ಼ರ್‌ಗಳ ಕಾಲದಲ್ಲಿದ್ದ ರೋಮನ್ ಸಾಮ್ರಾಜ್ಯದಲ್ಲಿ ಕೂಡಾ ಅಧಿಕಾರದಲ್ಲಿದ್ದವರು, ರಾಯಭಾರಿಗಳು, ಸೆನೇಟರ್‌ಗಳು ಮುಂತಾದವರೆಲ್ಲರೂ ಕುಲೀನ ವರ್ಗಕ್ಕೆ ಸೇರಿದವರಾಗಿದ್ದರು. ಆದರೆ ಪ್ರಾದೇಶಿಕವಾಗಿ ಇಂತಹ ಕುಲೀನರ ಅಥವಾ ಶ್ರೀಮಂತರ ವರ್ಗದ ಪ್ರಭುತವವಿರಲಿಲ್ಲ. ಊಳಿಗಮಾನ್ಯ ಪದ್ಧತಿ ಜಾರಿಗೆ ಬಂದಾಗ, ಶ್ರೀಮಂತವರ್ಗದ ಪ್ರಭುತ್ವ ಅಸ್ತಿತ್ವಕ್ಕೆ ಬಂದಿತು: ಭಾರೀ ಪ್ರಮಾಣದಲ್ಲಿ ಭೂಮಿಯನ್ನು ಹೊಂದಿದ್ದ ಈ ಶ್ರೀಮಂತರು, ಪಾರಂಪರಿಕವಾಗಿ ಕೆಲವು ಹಕ್ಕುಬಾಧ್ಯತೆಗಳನ್ನು ಹೊಂದಿದ್ದರು. ರಾಜನು, ಪ್ರೈಮಸ್ ಇಂಟರ್ ಪೇರ್ಸ್ (Primus Inter Pares) ಆಗಿದ್ದನು. ಸ್ಪೇಯಿನ್‌ನಲ್ಲಿ ಶ್ರೀಮಂತ ವರ್ಗದವರು, ರಾಜನಿಗೆ ಸರಿಸಮಾನರಾಗಿದ್ದರು. ಹಣದ ವಿಷಯವೊಂದನ್ನು ಬಿಟ್ಟು ಉಳಿದೆಲ್ಲಾ ವಿಷಯಗಳಲ್ಲೂ ತಾವು ರಾಜನಿಗೆ ಸರಿಸಮಾನರೆಂದು, ಈ ವರ್ಗದವರು ಹೇಳಿಕೊಳ್ಳಬಹುದಿತ್ತು. ರಾಜ್ಯವೆಂದರೆ ಮೂರು ಎಸ್ಟೇಟ್‌ಗಳನ್ನು ಹೊಂದಿದ್ದ ಒಂದು ಘಟಕವೆಂಬ ಭಾವನೆಯಿತ್ತು. ಕ್ರೈಸ್ತ ಪಾದ್ರಿಗಳು (ಪುರೋಹಿತವರ್ಗ), ಶ್ರೀಮಂತ ವರ್ಗ ಮತ್ತು ಜನಸಾಮಾನ್ಯರು ಇವರನ್ನು ರಾಜ್ಯ ಒಳಗೊಂಡಿರುತ್ತಿತ್ತು. ಮೂಲತಃ, ಇದೊಂದು ಊಳಿಗಮಾನ್ಯ

ವ್ಯವಸ್ಥೆಯಾಗಿತ್ತು. ಭಾರತದಲ್ಲಿ ಪರಂಪರಾಗತ ಸ್ಥಾನ ಹೊಂದಿದ್ದ ಮೂರು ಎಸ್ಟೇಟ್‌ಗಳಿಗೆ ಸ್ಥಾನವಿರಲಿಲ್ಲ. ಹಿಂದೂ ರಾಜ್ಯಗಳಲ್ಲಿ ಸಾಮಂತರು ಮತ್ತು ಮಂಡಲೇಶ್ವರರು ಇದ್ದರು. ಸರಿಯಾಗಿ ಹೇಳಬೇಕೆಂದರೆ ಇವರು ಶ್ರೀಮಂತ ವರ್ಗದವರಾಗಿರಲಿಲ್ಲ. ಆದರೆ, ಇವರು ಅಧೀನ–ರಾಜರುಗಳಾಗಿದ್ದರು. ಇವರು, ದೊಡ್ಡ ರಾಜ್ಯಗಳ ಪರಮಾಧಿಕಾರವನ್ನು ಒಪ್ಪಿಕೊಂಡಿದ್ದರು. ಇಲ್ಲವೇ ಅವರ ಮೇಲೆ ಜಯ ಸಾಧಿಸಿ, ಅದೇ ಸ್ಥಾನದಲ್ಲಿ ಮುಂದುವರಿಯಲು ಅವಕಾಶ ಕೊಡಲಾಗಿತ್ತು. ಈ ಅಧೀನ ರಾಜರುಗಳು ತಮ್ಮವರೇ ಆದ ಪ್ರಜೆಗಳನ್ನು ಹೊಂದಿದ್ದರು. ಇತರ ರಾಜರುಗಳಂತೆಯೇ ಅವರು ಈ ಪ್ರಜೆಗಳತ್ತ ಅದೇ ರೀತಿಯ ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ಕೌಟಿಲ್ಯನಾಗಲಿ ಅಥವಾ ನೀತಿಶಾಸ್ತ್ರ ಬರೆದಿರುವ ಬೇರೆ ಯಾರೇ ಆಗಲಿ, ಈ ಅಧೀನ ರಾಜರ ಬಗ್ಗೆ ಏನನ್ನೂ ತಿಳಿಸಿಲ್ಲ. ಒಂದು ರಾಜ್ಯದಲ್ಲಿ ಶ್ರೀಮಂತ ವರ್ಗದವರ ಪ್ರಭುತ್ವವಿದ್ದ ಬಗ್ಗೆ ನಮ್ಮ ಪುರಾಣಗಳಲ್ಲೂ ಯಾವುದೇ ಪ್ರಸ್ತಾಪವಿಲ್ಲ. ಅವುಗಳಲ್ಲಿ ಸರ್ಕಾರಿ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತಿತ್ತೆಂಬುದನ್ನು ಪೂರ್ಣ ವಿವರಗಳೊಂದಿಗೆ ತಿಳಿಸಲಾಗಿದೆ. ಅಧಿಕಾರಿಗಳ ಕೆಲಸಕಾರ್ಯಗಳನ್ನು ಮಾತ್ರ ವಿವರಿಸಲಾಗಿದೆ. ಶ್ರೀಮಂತ ವರ್ಗದವರ ಆಡಳಿತ ಅಥವಾ ಪ್ರಭುತ್ವ ಇರಲೇ ಇಲ್ಲ ಎಂಬುದು ಖಚಿತವಾಗಿದೆ.

ಪ್ರಾಚೀನ ಭಾರತದಲ್ಲಿ ರಾಜರುಗಳು ಆಳುತ್ತಿದ್ದ ರಾಜ್ಯಗಳಿದ್ದವು. ಆ ರಾಜ್ಯಗಳಲ್ಲಿ ವಂಶಪಾರಂಪರ್ಯವಾಗಿ ಬಂದ ಶ್ರೀಮಂತವರ್ಗದ ಪ್ರಭುತ್ವ ಇರಲಿಲ್ಲ. ಸಮಾಜದಲ್ಲಿದ್ದ ಜಾತಿ ಪದ್ಧತಿಯೇ ಇದಕ್ಕೆ ಕಾರಣವಾಗಿತ್ತು. ಜಾತಿಗಳಿಂದಾಗಿ ಸಮಾಜವು ಸಮನಾಗಿ ವಿಭಜನೆಗೊಂಡಿತ್ತು. ಆದ್ದರಿಂದ ಹುಟ್ಟಿನ ಆಧಾರದ ಮೇಲೆ, ಬೇರೆ ಯಾವ ವರ್ಗದ ನಿರ್ಮಾಣವಾಗಲಿ ಅಸಾಧ್ಯವಾಗಿತ್ತು. ಸಮುದಾಯದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡಂತಹ ಯಾವುದೇ ವಂಶಾನುಗತ ಶ್ರೀಮಂತ ವರ್ಗವಾಗಲಿ ಅಸ್ತಿತ್ವಕ್ಕೆ ಬರಲು ಸಾಧ್ಯವಾಗಲಿಲ್ಲ. ಜಾತಿ ಪದ್ಧತಿ ಇದ್ದುದರಿಂದ, ಅದು, ಭಾರೀ ಭೂಮಾಲೀಕರು, ತಮ್ಮದೇ ಆದ ಒಂದು ಶ್ರೀಮಂತ ವರ್ಗವನ್ನು ಸ್ಥಾಪಿಸಿಕೊಳ್ಳಲು ಅವಕಾಶ ಕೊಟ್ಟಿರಲಿಲ್ಲ.

ಮಹಾಭಾರತ ಕಾಲದಲ್ಲಿ ವೃಷ್ಣಿ, ಅಂಧಕ ಮತ್ತು ಭೋಜರು, ತಮ್ಮದೇ ಆದ ಬುಡಕಟ್ಟು ಜನರ ಪ್ರಭುತ್ವವನ್ನು ಸ್ಥಾಪಿಸಿಕೊಂಡಿದ್ದರು (ಆಲಿಗಾರ್ಕೀಸ್). ಇದಕ್ಕೂ ಬಹಳ ಹಿಂದೆ ಲಿಚ್ಛವಿಗಳು, ಶಾಕ್ಯರು ಮತ್ತು ಯೌಂಧೇಯರು ಇಂತಹುದೇ ತಮ್ಮ ಪ್ರಭುತ್ವಗಳನ್ನು ಸ್ಥಾಪಿಸಿಕೊಂಡಿದ್ದರು. ವೃಷ್ಣಿಗಳು, ಅಂಧಕರು ಮತ್ತು ಭೋಜರು, ಯಾದವರಾಗಿದ್ದರು. ಇವರ ಸರ್ಕಾರವನ್ನು ಕುಲೀನ ವರ್ಗಕ್ಕೆ ಸೇರಿದ ಕೆಲವರು ನಡೆಸಿಕೊಂಡು ಹೋಗುತ್ತಿದ್ದರು. ಅವರು ತಮ್ಮದೇ ಆದ ಪ್ರಭುತ್ವ ಹೊಂದಿದ್ದರೆಂದು ಮಹಾಭಾರತದಿಂದ ತಿಳಿದುಬರುತ್ತದೆ. ತಾವು ರಾಜನ್ಯ ಗಣಕ್ಕೆ ಸೇರಿದವರೆಂದು

ಅಥವಾ ತಮ್ಮದು ಪರಮಾಧಿಕಾರವನ್ನು ಹೊಂದಿರುವ ಒಂದು ಆಡಳಿತ ವ್ಯವಸ್ಥೆಯೆಂದು ಅವರು ಹೇಳಿಕೊಳ್ಳುತ್ತಿದ್ದರು. ಇತಿಹಾಸದ ಕಾಲದಲ್ಲಿ ಇಂತಹುದೇ ಪ್ರಭುತ್ವ ಹೊಂದಿದ್ದ ಲಿಚ್ಛವಿಗಳಿದ್ದರು. ಇವರ ಬಗ್ಗೆ ಹಿಂದೂ ಮತ್ತು ಬೌದ್ಧ ಸಾಹಿತ್ಯದಲ್ಲಿ ಹೆಚ್ಚು ವಿವರವಾದ ಮತ್ತು ನಿಖರವಾದ ಮಾಹಿತಿಯಿದೆ. ಲಿಚ್ಛವಿ ಬುಡಕಟ್ಟು ಜನರಲ್ಲಿ ಪ್ರತಿಯೊಬ್ಬ ವ್ಯಕ್ತಿ ತಾನೊಬ್ಬ ರಾಜನೆಂದೇ ಪರಿಗಣಿಸಿದ್ದನೆಂದು *ಲಲಿತ ವಿಸ್ತರ* (ಲೆಜ್‌ಮನ್ ಆವೃತ್ತಿ, ಪು.೨೧)ದಲ್ಲಿ ತಿಳಿಸಲಾಗಿದೆ. (ಏಕೈಕ ಇವ ಮಾನ್ಯತೆ ಅಹಂ ರಾಜ ಅಹಂ ರಾಜೇತಿ.) ವೆನಿಸ್‌ನ "ಸೈರಿನ್ಯೆಟೀಸ್"ನಂತಹ ಶ್ರೀಮಂತ ಬುಡಕಟ್ಟು ಜನರು, ಹೆಚ್ಚುಕಡಿಮೆ ಸಾರ್ವಭೌಮತ್ವವನ್ನೇ ಪಡೆದಿದ್ದರು. ಗುಪ್ತ ಮನೆತನಕ್ಕೆ ಸೇರಿದವರೊಬ್ಬರು, ಲಿಚ್ಛವಿ ಮಹಿಳೆಯೊಬ್ಬಳನ್ನು ಮದುವೆಯಾದರು. ಇದರಿಂದ, ಈ ಮನೆತನಕ್ಕೆ ಹಿರಿಮೆ ಬಂದಿತು ಎಂದು ಹೇಳಲಾಗುತ್ತಿತ್ತು. ಚಕ್ರವರ್ತಿ ಸಮುದ್ರಗುಪ್ತ ತನೊಬ್ಬ ಲಿಚ್ಛವಿ ದೌಹಿತ್ರೇಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನು. ಅವನು, ತಾಯಿಯ ಕಡೆಯಿಂದ ಲಿಚ್ಛವಿಗಳ ಮೊಮ್ಮಗನಾಗಿದ್ದನು. ಶಾಕ್ಯರು ಸಹ ತಮ್ಮದೇ ಆದ ಶ್ರೀಮಂತಿಕೆ ಪ್ರಭುತ್ವವನ್ನು ಸ್ಥಾಪಿಸಿಕೊಂಡಿದ್ದರು. ಈ ರಾಜ್ಯಗಳಲ್ಲಿನ ಪರಮಾಧಿಕಾರವು ಕೆಲವೇ ಜನರ ಪ್ರಭುತ್ವದ ಕೈಲಿ ಕೇಂದ್ರೀಕೃತವಾಗಿತ್ತು; ರಾಜರ ಆಳ್ವಿಕೆಗೊಳಪಟ್ಟಿದ, ರಾಜ್ಯವೊಂದರಲ್ಲಿ ವಂಶಪಾರಂಪರ್ಯವಾಗಿ ಬಂದ, ಶ್ರೀಮಂತವರ್ಗದ ಪ್ರಭುತ್ವವಿದ್ದ ಯಾವ ಉದಾಹರಣೆಯಾಗಲಿ ಪುರಾಣಗ್ರಂಥಗಳಲ್ಲಿ ಕಂಡುಬರುವುದಿಲ್ಲ.

ಮೊದಲನೆಯ ಮತ್ತು ಎರಡನೆಯ ಎಸ್ಟೇಟ್‌ಗಳು ಇರಲಿಲ್ಲವೆಂದ ಮೇಲೆ, ಮೂರನೆಯ ಎಸ್ಟೇಟ್‌ಗೆ ಸೇರಿದ ಜನಸಾಮಾನ್ಯರ ಪರಿಸ್ಥಿತಿ ಹೇಗಿತ್ತು? ಜನರಿಗೂ ರಾಜನಿಗೂ ಎಂತಹ ಸಂಬಂಧವಿತ್ತು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ರಾಜನು ಪರಮಾಧಿಕಾರವುಳ್ಳವನಾಗಿದ್ದನು. ಜನರ ಸಂರಕ್ಷಕನಾಗಿದ್ದನು. ಅದೇ ಸಮಯದಲ್ಲಿ ರಾಜನು ಜನಸಾಮಾನ್ಯರ ಸೇವಕನೆಂಬುದನ್ನು ಸಹ ಸ್ಪಷ್ಟಪಡಿಸಲಾಗಿತ್ತು. ಒಂದು ರಾಜ್ಯದಲ್ಲಿ ರಾಜನು ಪ್ರಜೆಗಳಿಗೆ ಸಲ್ಲಿಸಿದ ಸೇವೆಗಾಗಿ, ಜನರು ಅವನಿಗೆ ವೇತನದ ರೂಪದಲ್ಲಿ ತೆರಿಗೆಯನ್ನು ಕೊಡುತ್ತಾರೆ. ಅತ್ಯಂತ ಹಿಂದಿನ ಕಾಲದಿಂದ ಹಿಡಿದು ಶುಕ್ರನವರೆಗೆ, ರಾಜಧರ್ಮದ ಬಗ್ಗೆ ಬರೆದಿರುವ ಎಲ್ಲ ಲೇಖಕರು ಈ ಅಂಶವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಇದೇ ಅಂಶವನ್ನು ಶುಕ್ರನು ಸ್ಫುಟವಾದ ಶಬ್ದಗಳಲ್ಲಿ ಹೀಗೆ ವ್ಯಕ್ತಪಡಿಸಿದ್ದಾನೆ. "ಬ್ರಹ್ಮನೇ ರಾಜನನ್ನು ಜನರ ಸೇವಕನನ್ನಾಗಿ ಮಾಡಿದ್ದಾನೆ. ಅದಕ್ಕೆ ಪ್ರತಿಫಲವಾಗಿ ರಾಜನು ಜನರಿಂದ ಸಂಭಾವನೆಯನ್ನು ಪಡೆಯುತ್ತಾನೆ. ಜನರ ಸಂರಕ್ಷಣೆಗಾಗಿ, ರಾಜನು ಪರಮಾಧಿಕಾರವನ್ನು ಹೊಂದಿರುತ್ತಾನೆ."

ಸ್ವಭಾಗ ಭೃತ್ಯ ದಾಸ್ಯತ್ವೇ
ಪ್ರಜಾನಾಮ್ ಚ ನೃಪಾಃ ಕೃತಾಃ

ಬ್ರಹ್ಮನಾ ಸ್ವಾಮಿ ರೂಪೇಽಸ್ತು
ಪಾಲನಾರ್ಥಮ್ ಹಿ ಸರ್ವದಾ ॥

ಪರಮಾಧಿಕಾರವು ಬರೀ ಒಂದು ರೂಪ ಹಾಗೂ ಅಧಿಕಾರವ್ಯವಸ್ಥೆ. ಇದು, ಜನರ ಸೇವೆಗಾಗಿ, ರಾಜನಿಗಿರುವ ಒಂದು ವಿಧಾನ. ಆದರೆ ಜನರು ರಾಜನೊಡನೆ ಯಾವ ರೀತಿಯ ಸಂಬಂಧ ಹೊಂದಿರುತ್ತಾರೆ? ರಾಜನು, ತನ್ನ ಪ್ರಜೆಗಳನ್ನು ತನ್ನ ಮಕ್ಕಳೆಂದೇ ಪರಿಗಣಿಸಬೇಕು. ಇದು ಕೇವಲ ಒಂದು ನೈತಿಕ ಭಾವನೆ. ಒಂದು ಕಾಲ್ಪನಿಕ ಬಂಧ. ಇದು ರಾಜನಿಗೆ ಯಾವ ಹಕ್ಕುಬಾಧ್ಯತೆಯನ್ನಾಗಲಿ ನೀಡುವುದಿಲ್ಲ ಅಥವಾ ಯಾವ ನಿರ್ಬಂಧವನ್ನಾಗಲಿ ವಿಧಿಸುವುದಿಲ್ಲ. ಪ್ರಜೆಗಳು ಮತ್ತು ರಾಜನ ನಡುವಣ ಸಂಪರ್ಕಕ್ಕಾಗಿ ಯಾವುದಾದರೂ ಸಂಘ–ಸಂಸ್ಥೆಯಿತ್ತೇ? ಹಿಂದೂ ರಾಜಕೀಯ ಸಿದ್ಧಾಂತದ ಪ್ರಕಾರ, ಇದಾವುದಕ್ಕೂ ಮಾನ್ಯತೆ ಇರಲಿಲ್ಲ. ರಾಜನು, ರಾಜಧರ್ಮದ ಪ್ರಕಾರ ತಾನು ನಿರ್ವಹಿಸಬೇಕಾಗಿದ್ದ ಕೆಲಸ ಕಾರ್ಯಗಳನ್ನು ಮತ್ತು ನೈತಿಕ ಕರ್ತವ್ಯಗಳನ್ನು ಮಾತ್ರ ಈಡೇರಿಸುತ್ತಿದ್ದನು. ಜನರು ಮತ್ತು ರಾಜನ ನಡುವೆ ಸಾಂಸ್ಥಿಕ ಸ್ವರೂಪದ ಯಾವ ಸಂಬಂಧವಾಗಲಿ ಇರಬೇಕೆಂದು ನೀತಿಶಾಸ್ತ್ರ ಹೇಳಿಲ್ಲ.

ನೀತಿಗೆ ಸಂಬಂಧಿಸಿದ ಪಠ್ಯಪುಸ್ತಕಗಳಲ್ಲಿ ಹಾಗೂ ಸಾಹಿತ್ಯಕ ಮತ್ತು ಐತಿಹಾಸಿಕ ದಾಖಲೆಗಳಲ್ಲಿ ರಾಜಸಭಾ ಅಥವಾ ರಾಜನ ಸಮಾಲೋಚನಾ ಮಂಡಳಿ ಬಗ್ಗೆ ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ ಶುಕ್ರ, ಸಮಾಲೋಚನಾ ಸಭೆಯ ವಿವರಗಳನ್ನು ನೀಡಿದ್ದಾನೆ. ಈ ಸಭೆಯಲ್ಲಿ ಸಾರ್ವಜನಿಕರ ಪ್ರಶ್ನೆಗಳನ್ನು ಪರಿಶೀಲಿಸಿ, ಅವುಗಳ ಬಗೆಗ ಚರ್ಚೆ ನಡೆಸಲಾಗುತ್ತಿತ್ತು. ರಾಜರು ಸಹ ತಮ್ಮದೇ ಆದ ಸಮಾಲೋಚನಾ ಮಂಡಳಿಗಳನ್ನು ಹೊಂದಿದ್ದರೆಂಬುದರಲ್ಲಿ ಸಂಶಯವಿಲ್ಲ. ಯಾವ ಮನುಷ್ಯನೂ ಅನ್ಯರ ನೆರವಿಲ್ಲದೆ, ಸ್ವತಃ ರಾಜ್ಯವನ್ನು ಆಳಲು ಸಾಧ್ಯವಾಗದು. ಆದ್ದರಿಂದ ರಾಜನು ಅನ್ಯರಿಂದ ಸಲಹೆಗಳನ್ನು ಪಡೆಯಲೇಬೇಕಾಗುತ್ತದೆ. ತನ್ನ ಸ್ನೇಹಿತರೊಂದಿಗೆ ಸಮಾಲೋಚನೆ ನಡೆಸಬೇಕಾಗುತ್ತದೆ. ರಾಜನು ತನ್ನ ಯೋಜನೆಗಳ ಕುರಿತು ಚರ್ಚಿಸಬೇಕಾಗುತ್ತದೆ. ಶುಕ್ರನು ಹೀಗೆ ತಿಳಿಸಿದ್ದಾನೆ:

"ಒಂದು ಕೆಲಸ ಅತಿ ಸಣ್ಣದಾಗಿರಬಹುದು. ಒಬ್ಬನೇ ವ್ಯಕ್ತಿ ಆ ಕೆಲಸವನ್ನು ಸ್ವಲ್ಪ ಕಷ್ಟಪಟ್ಟು ನಿರ್ವಹಿಸಬಹುದು. ಆದರೆ ಒಂದು ರಾಜ್ಯದ ಮುಂದಿರುವ ದೊಡ್ಡ ದೊಡ್ಡ ವ್ಯವಹಾರಗಳನ್ನು ಬೇರೆಯವರ ಸಹಾಯ ಇಲ್ಲದೆ ಹೇಗೆ ನಿರ್ವಹಿಸಲು ಸಾಧ್ಯವಾಗುತ್ತದೆ? ರಾಜನಿಗೆ ಅಸಾಧಾರಣವಾದ ಜ್ಞಾನ ಮತ್ತು ಪಾಂಡಿತ್ಯ ಇರಬಹುದು. ಶಾಸ್ತ್ರಗಳಲ್ಲಿ ಪ್ರಾವೀಣ್ಯವಿರಬಹುದು. ರಾಜ್ಯ ನಡೆಸುವ ತಂತ್ರದಲ್ಲಿ ನಿಷ್ಣಾತನಾಗಿರಬಹುದು. ಆದರೆ ರಾಜಕೀಯ ವಿಷಯಗಳಲ್ಲಿ, ತನ್ನ ಮಂತ್ರಿಗಳ

ಸಲಹೆ ಪಡೆಯದೆ ತಾನೇ ನಿರ್ಧಾರ ತೆಗೆದುಕೊಳ್ಳಲು ರಾಜನಿಗೆ ಸಾಧ್ಯವಾಗುವುದಿಲ್ಲ. ವ್ಯವಹಾರಕುಶಲನಾದ ರಾಜನು, ಚರ್ಚೆಯಲ್ಲಿ ಭಾಗವಹಿಸಿದ್ದ ತನ್ನ ಮಂತ್ರಿಗಳು, ಅಧಿಕಾರಿಗಳು ಮತ್ತು ಪ್ರಜೆಗಳ ಅನುಮೋದಿತ ಸಲಹೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ರಾಜನು ತನ್ನ ಮನಸ್ಸಿನಲ್ಲಿರುವಂತೆ ವರ್ತಿಸಬಾರದು (ಅಧ್ಯಾಯ ೨).

ಮಂತ್ರಿಮಂಡಳ, ನಿಜವಾಗಿ ರಾಜ್ಯದ ಒಂದು ಸಮಗ್ರ ಭಾಗ. ಒಬ್ಬ ರಾಜನು ತನ್ನ ಮನಸ್ಸಿಗೆ ಬಂದಂತೆ ಆಡಳಿತ ನಡೆಸಲು ಯತ್ನಿಸಿದರೆ, ಅವನು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅನರ್ಹನೆಂದೇ ಮನು ತಿಳಿಸುತ್ತಾನೆ. ಮಂತ್ರಿಮಂಡಳದ ಅಭಿಪ್ರಾಯಗಳೇ ರಾಜನ ಅಭಿಪ್ರಾಯಗಳಿಗಿಂತ ಉತ್ತಮವಾಗಿದ್ದು, ಮೇಲುಗೈ ಪಡೆದಿರಬೇಕು ಎಂಬುದು ಹಿಂದೂ ಪರಿಣತರ ಸಾರ್ವತ್ರಿಕ ತತ್ತ್ವವಾಗಿತ್ತು. ಇದು ಬರಿ ತತ್ತ್ವವಾಗಿಯೇ ಉಳಿದಿರಲಿಲ್ಲ. ಇದನ್ನು ಸಾಮಾನ್ಯವಾಗಿ ಅನುಷ್ಠಾನಕ್ಕೆ ತರಲಾಗುತ್ತಿತ್ತು. ಶಿಲಾಶಾಸನಗಳಲ್ಲಿರುವ ದಾಖಲೆಗಳಿಂದ ಇದು ರುಜುವಾತಾಗಿದೆ. ಸುದರ್ಶನ ಸರೋವರವನ್ನು ದುರಸ್ತಿಗೊಳಿಸಬೇಕೆಂಬ ರುದ್ರದಾಮನ ಒಂದು ಸೂಚನೆಯನ್ನು ಅವನ ಮಂತ್ರಿಮಂಡಳ ತಳ್ಳಿಹಾಕಿತ್ತು. ರಾಜನು ಕೊಟ್ಟ ಸಲಹೆಗಳನ್ನು ಮಂತ್ರಿಮಂಡಳ ತಳ್ಳಿಹಾಕಿದ ಹಲವಾರು ನಿದರ್ಶನಗಳನ್ನು ರಾಜತರಂಗಿಣಿ ನೀಡುತ್ತದೆ. ಮಂತ್ರಿಗಳು ಮತ್ತು ರಾಜನ ನಡುವಣ ಸಂಬಂಧಗಳು ಹೇಗಿರಬೇಕೆಂದು ಸೂಚಿಸುವ ಕಟ್ಟುನಿಟ್ಟಾದ ನಿಯಮಾವಳಿ ಇರುತ್ತಿತ್ತು.

ಮಂತ್ರಿಮಂಡಳದ ಕೆಲಸ ಯಾವುದಿತ್ತು? ಅದು, ಎಲ್ಲ ಮುಖ್ಯ ವಿಷಯಗಳನ್ನು ಪರಿಶೀಲಿಸುತ್ತಿತ್ತು. ಅತ್ಯಂತ ಪ್ರಮುಖ ವಿಷಯಗಳನ್ನು ಮಂತ್ರಿಮಂಡಳ ಗುಪ್ತ ಚರ್ಚಿಸಬೇಕಾದುದರ ಮಹತ್ವವವನ್ನು ಕೌಟಿಲ್ಯ ತಿಳಿಸಿದ್ದಾನೆ. (ಭಾಗ ೧, ಅಧ್ಯಾಯ ೧೫) ಈ ಸಂದರ್ಭದಲ್ಲಿ, ಅವನು ಬಹುಮುಂಚಿನ ಲೇಖಕ ವಿಶಾಲಾಕ್ಷ ಎಂಬಾತನ ಮಾತುಗಳನ್ನು ಉಲ್ಲೇಖಿಸಿದ್ದಾನೆ. ಮಂತ್ರಿಮಂಡಳವು ಈ ಕೆಳಕಂಡ ವಿಷಯಗಳನ್ನು ಅವಗಾಹನೆಗೆ ತಂದುಕೊಂಡು, ಚರ್ಚಿಸಬೇಕಾಗುತ್ತಿತ್ತು. ನೀತಿಯನ್ನು ನಿರ್ಧರಿಸುವುದು, ಆ ನೀತಿಯನ್ನು ಈಡೇರಿಸಲು ಅನುಸರಿಸಬೇಕಾದ ವಿಧಾನವನ್ನು ಆಯ್ಕೆ ಮಾಡುವುದು, ಹಣಕಾಸು ನೀತಿಗಳನ್ನು ರೂಪಿಸುವುದು ಮತ್ತು ಖರ್ಚು–ವೆಚ್ಚಗಳನ್ನು ನಿಯಂತ್ರಿಸುವುದು, ರಾಜ್ಯದ ಭದ್ರತೆಯನ್ನು ನಿರ್ವಹಿಸಿಕೊಂಡು ಬರುವುದು, ನೈಸರ್ಗಿಕ ಪ್ರಕೋಪಗಳಿಂದುಂಟಾದ ಹಾನಿಯನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳುವುದು, ಇತ್ಯಾದಿ. ವ್ಯಕ್ತಿಗಳೊಂದಿಗೆ ಚರ್ಚೆ, ಸಾಮೂಹಿಕ ಸಮಾಲೋಚನೆ ಮುಂತಾದವುಗಳಲ್ಲದೆ ಇನ್ನೂ ಒಂದು ಮನ್ನಣೆ ಪಡೆದ ಕಾರ್ಯವಿಧಾನವಿತ್ತು. ಕೌಟಿಲ್ಯ ನೀಡಿರುವ ಕೆಲವು ಎಚ್ಚರಿಕೆಗಳೊಂದಿಗೆ ಆ ವಿಧಾನವನ್ನು ಕೆಳಗೆ ಸೂಚಿಸಲಾಗಿದೆ. "ತುರ್ತು ಕ್ರಮ ಕೈಗೊಳ್ಳಬೇಕಾಗಿಬಂದಾಗ, ರಾಜನು ತನ್ನ ಇಬ್ಬರು ಮಂತ್ರಿಗಳನ್ನು ಕರೆದು, ಅನಂತರ ತನ್ನ ಎಲ್ಲ ಮಂತ್ರಿಗಳ ಸಭೆಯನ್ನು ನಡೆಸಬೇಕು. ಅವರಿಗೂ ಅದೇ ವಿಷಯವನ್ನು ತಿಳಿಯಪಡಿಸಬೇಕು. ಬಹುಸಂಖ್ಯಾತ ಸದಸ್ಯರು ಯಾವ ಸಲಹೆಯನ್ನು ನೀಡುವರೋ, ರಾಜನು ಅದರಂತೆ ನಡೆದುಕೊಳ್ಳಬೇಕು. (ಶ್ಯಾಮಾಶಾಸ್ತ್ರಿಗಳ ಆವೃತ್ತಿ ಪು.೨೯). ಇದರಿಂದ, ರಾಜರುಗಳಿಗೆ ಅವರ ಮಂತ್ರಿಮಂಡಳದಲ್ಲಿರುವ ಮಂತ್ರಿಗಳು ಸಹಾಯ ಮಾಡುತ್ತಿದ್ದರೆಂಬುದು ಸ್ಪಷ್ಟವಾಯಿತು. ಅಂದಮಾತ್ರಕ್ಕೆ, ಮಂತ್ರಿಗಳು ಹೊಣೆಗಾರಿಕೆ ಕುರಿತ ತತ್ತ್ವ ಹಿಂದೂ ಬರಹಗಾರರಿಗೆ ತಿಳಿದಿತ್ತು ಎಂದಾಗಲೀ ಅಥವಾ ಅವರು ಅದನ್ನು ಒಪ್ಪಿಕೊಂಡಿದ್ದರು ಎಂದಾಗಲೀ ವಾದಿಸುವುದು ತಾರ್ಕಿಕವಲ್ಲ. "ಸಾಂವಿಧಾನಿಕ ರಾಜಪ್ರಭುತ್ವ" ಎಂದು ಕರೆಯಬಹುದಾದ ಒಂದು ವ್ಯವಸ್ಥೆಯಲ್ಲಿ, ಸಲಹಾಕಾರರನ್ನು ಯಾರು ಆರಿಸುತ್ತಾರೆ ಎಂಬುದು ಒಂದು ಮೂಲಪ್ರಶ್ನೆ. ರಾಜನೇ ತನ್ನ ಸಲಹಾಕಾರರನ್ನು ಆರಿಸಿಕೊಂಡರೆ ಅಥವಾ ಆ ಸಲಹಾಕಾರರು ಅವನು ಅಧಿಕಾರಿಗಳೇ ಆಗಿದ್ದರೆ, ಜನರಿಗೆ ಧ್ವನಿಯೆತ್ತುವ ಅವಾಶವೇ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ, ರಾಜನ ಅಧಿಕಾರಕ್ಕೆ ಪರಿಮಿತಿಯೇ ಇರುವುದಿಲ್ಲ. ರಾಜನಿಗೆ, ತಮ್ಮ ಪರವಾಗಿ, ಯಾರು ಸಲಹೆಗಳನ್ನು ಕೊಡಬೇಕೆಂಬುದನ್ನು ಜನರೇ ನಿರ್ಧರಿಸಿದರೆ, ಆಗ, ಜನರು ರಾಜ್ಯದೊಡನೆ ನಿಕಟ ಸಂಪರ್ಕ ಪಡೆದಿದ್ದಾರೆ ಎಂದು ಹೇಳಬಹುದು. ರಾಜನಿಗೆ ಸಲಹೆ ನೀಡುವ ಹಕ್ಕನ್ನು ಜನರು ಪ್ರಾತಿನಿಧಿಕ ಸಂಸ್ಥೆಗಳ ಮೂಲಕ, ಕಾರ್ಪೊರೇಷನ್‌ಗಳ ಮೂಲಕ, ಕೋಮು ಪಂಚಾಯತ್‌ಗಳ ಮೂಲಕ ಅಥವಾ ಅಂತಹುದೇ ಸಂರಚಿತ ವ್ಯವಸ್ಥೆಗಳ ಮೂಲಕ ಚಲಾಯಿಸಬಹುದು. ಹಿಂದೂ ರಾಜರುಗಳ ವಿಷಯದಲ್ಲಿ, ಇಂತಹ ಕಾರ್ಯವಿಧಾನ ಎಲ್ಲೂ ಸೂಚಿಸಿಲ್ಲ. ಧರ್ಮಶಾಸ್ತ್ರದಲ್ಲಿ ಕೂಡ, ಇಂತಹ ಕಾರ್ಯವಿಧಾನ ಕಂಡುಬರುವುದಿಲ್ಲ.

ಆದರೆ ಇವೆಲ್ಲದರ ಅನುಸರಣೆಯಲ್ಲಿ ಪರಿಸ್ಥಿತಿ ಬೇರೆಯಾಗಿರುತ್ತದೆ. ರಾಜನಿಗೆ ತನ್ನ ಸಲಹಾಕಾರರನ್ನು ಆಯ್ದುಕೊಳ್ಳುವ ಸಂಪೂರ್ಣ ಹಕ್ಕು ಇದೆಯೆಂಬ ಸಿದ್ಧಾಂತ ಏನೇ ಇರಲಿ, ಮುಂಚಿನ ಹಿಂದೂ ಸಾಮ್ರಾಜ್ಯಗಳಲ್ಲಿ ಕೆಲವು ಸಾಂವಿಧಾನಿಕ ಹಕ್ಕುಗಳು ವಿಕಾಸಗೊಂಡಿದ್ದವು. ವಾಣಿಜ್ಯಕ ಗಣಗಳು ಅಥವಾ ಕಾರ್ಪೊರೇಷನ್‌ಗಳು ಅಭಿವೃದ್ಧಿಗೊಂಡಿದ್ದವು. ಅವು ಕೆಲವು ಜಾತಿಗಳಿಗೆ ಮತ್ತು ಸಮುದಾಯಗಳಿಗೆ ರಾಜನಿಗೆ ಸಲಹೆ ನೀಡುವ ಹಕ್ಕುಗಳನ್ನು ಕೊಟ್ಟಿದ್ದವು ಮತ್ತು ಅವುಗಳನ್ನು ರಾಜ್ಯದ ಒಂದು ಸಮಗ್ರ ಅಂಗವಾಗಿರುವಂತೆ ಮಾಡಿದ್ದವು. 'ನಾರದಸ್ಮೃತಿ'ಯಲ್ಲಿರುವ ಕೆಲವು ಹೇಳಿಕೆಗಳು ರಾಜ್ಯದಿಂದ ಮಾನ್ಯತೆ ಪಡೆದಿದ್ದ, ನೈಗಮಗಳು ಮತ್ತು ಗಣಗಳಂತಹ ಕಾರ್ಪೊರೇಷನ್‌ಗಳಿದ್ದವು ಎಂಬುದನ್ನು ರುಜುವಾತುಪಡಿಸುತ್ತವೆ. ನೈಗಮ ನಾಗರಿಕರನ್ನು ಒಳಗೊಂಡಿದ್ದ ಒಂದು ಕಾರ್ಪೊರೇಷನ್ ಆಗಿತ್ತೆಂದು ವಿವರಿಸಲಾಗಿದೆ. ಶ್ರೇಣಿಗಳು ಅಥವಾ ವ್ಯಾಪಾರಿಗಳ ಸಂಘ ಮತ್ತು ಗಣಗಳು ಅಥವಾ ಸಾರ್ವತ್ರಿಕ ಕಾರ್ಪೊರೇಷನ್‌ಗಳು ನಾಗರಿಕ ಹಕ್ಕುಗಳನ್ನು ಹೊಂದಿದ್ದಂತಹ ಮಾನ್ಯತೆ ಪಡೆದ

ಸಂಸ್ಥೆಗಳಾಗಿದ್ದವು. ಈ ಸಂಸ್ಥೆಗಳು ಅನಂತರ ನ್ಯಾಯಾಸ್ಥಾನದ ಅಧಿಕಾರವನ್ನು ಸಹ ಚಲಾಯಿಸತೊಡಗಿದವು. ಕುಲಗಳು ವಿಚಾರಣೆ ನಡೆಸಿರದಿದ್ದಂತಹ ಮೊಕದ್ದಮೆಗಳನ್ನು ಶ್ರೇಣಿಗಳು ವಿಚಾರಣೆಗೆ ತೆಗೆದುಕೊಳ್ಳುತ್ತಿದ್ದವೆಂದು ಮತ್ತು ಶ್ರೇಣಿಗಳು ಬಿಟ್ಟಿದ್ದ ಮೊಕದ್ದಮೆಗಳನ್ನು ಗಣಗಳು ವಿಚಾರಣೆಗೆ ಎತ್ತಿಕೊಳ್ಳುತ್ತಿದ್ದವು" ಎಂದು ಶುಕ್ರ, ೪ನೇ ಮತ್ತು ೫ನೇ ಅಧ್ಯಾಯಗಳಲ್ಲಿ ತಿಳಿಸಿದ್ದಾನೆ. ಅವನು ಈ ರೀತಿ ತಿಳಿಸಿದ್ದಾನೆ: "ಜಾತಿ ಜಾನಪದಾನ್ ಧರ್ಮಾನ್ ಶ್ರೇಣಿ ಧರ್ಮಾಂಶ್ಚ ಧರ್ಮವಿದ್ ಸಮೀಕ್ಷ್ಯ ಕುಲಧರ್ಮಾಂಶ್ಚ ಸ್ವ ಧರ್ಮಾನ್ ಪ್ರತಿಪಾದಯೇತ್." ಕುಶಲಕಲಾವಿದರ ಸಂಘ–ಸಂಸ್ಥೆಗಳು ತುಂಬ ಪ್ರವರ್ಧಮಾನಕ್ಕೆ ಬಂದಿದ್ದವೆಂದು ನಾಸಿಕ್ ಮತ್ತು ಜುನ್ನಾರ್‌ನಲ್ಲಿರುವ ಶಿಲಾಶಾಸನಗಳು ತಿಳಿಸುತ್ತವೆ. ಕುಂಬಾರರು, ನೇಕಾರರು ಮತ್ತು ಇತರ ಸಮುದಾಯಗಳು ತಮ್ಮ ಕಸಬಿನ ಆಧಾರದ ಮೇಲೆ ಸಂಘಗಳನ್ನು ರಚಿಸಿಕೊಂಡಿದ್ದವು. ಅವು ಬಹುಟ್ಟಿಗೆ ಸ್ವಯಮಾಡಳಿತ ಹೊಂದಿದವು.[೯] ರಾಜನು ತನ್ನ ಮುಖ್ಯಸ್ಥನೊಬ್ಬನ ಮುಖಾಂತರ ಈ ಸಂಘ–ಸಂಸ್ಥೆಗಳೊಡನೆ ವ್ಯವಹರಿಸುತ್ತಿದ್ದನು. ಇಂತಹ ಸಂಘ–ಸಂಸ್ಥೆಗಳಿಗೆ ರಾಜರುಗಳೇ, ಅವುಗಳ ಆಡಳಿತ ನಿರ್ವಹಣೆಗಾಗಿ ದತ್ತಿ ಬಿಡುತ್ತಿದ್ದರು. ಇಂತಹ ಕಾರ್ಪೊರೇಷನ್‌ಗಳು ಇದ್ದುದರಿಂದ, ಅವು, ಜನರು ಮತ್ತು ರಾಜ್ಯದ ನಡುವಣ ಸಂಬಂಧಗಳಿಗೆ ಸಾಂಸ್ಥಿಕ ಸ್ವರೂಪವನ್ನು ಕೊಟ್ಟಿದ್ದವು. ಸೈದ್ಧಾಂತಿಕವಾಗಿ ಹೇಳುವುದಾದರೆ ಇಂತಹ ಸಂಬಂಧಗಳಿಗೆ ಎಡೆ ಇರಲಿಲ್ಲ. ಈ ಕಾರ್ಪೊರೇಷನ್‌ಗಳಿಗೆ ಎಷ್ಟೊಂದು ಹಕ್ಕುಗಳಿದ್ದವೆಂಬುದಕ್ಕೆ, ಶಿಲಾಶಾಸನಗಳಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳಿವೆ.

ರಾಜನು, ಚರ್ಚ್‌ಗಳು, ಶ್ರೀಮಂತ ಕುಲದವರು ಮತ್ತು ಜನಸಾಮಾನ್ಯರೊಡನೆ ಎಂತಹ ಸಂಬಂಧಗಳನ್ನು ಹೊಂದಿದ್ದನೆಂಬುದನ್ನು ನಾವು ಈಗಾಗಲೇ ಪರಿಶೀಲಿಸಿದ್ದೇವೆ. ಪಾಶ್ಚಾತ್ಯ ಶಬ್ದಾವಳಿಯಲ್ಲಿ ಈ ಮೂರು ವರ್ಗಗಳಿಗೆ ಮೂರು ಎಸ್ಟೇಟ್‌ಗಳೆಂಬ ಹೆಸರಿದೆ. ಈಗ ನಾವು ರಾಜ ಮತ್ತು ಆಡಳಿತ ವ್ಯವಸ್ಥೆಯ ನಡುವಣ ಸಂಬಂಧಗಳನ್ನು ಪರಿಶೀಲಿಸೋಣ. ಹಿಂದೂ ಸಿದ್ಧಾಂತದ ಪ್ರಕಾರ ಅಧಿಕಾರವರ್ಗ ರಾಜ್ಯದ ಮುಖ್ಯ ಘಟಕಗಳಲ್ಲೊಂದಾಗಿದೆ. ಈ ವಿಷಯದಲ್ಲಿ ಭಾರತೀಯ ಚಿಂತನಕಾರರು ಐರೋಪ್ಯ ರಾಜಕೀಯ ಚಿಂತನಕಾರರಿಗಿಂತಲೂ ಬಹಳ ಮುಂದಿದ್ದರು. ಈ ಶತಮಾನದ ಆರಂಭದವರೆಗೆ, ರಾಜ್ಯ ಮತ್ತು ನಾಗರಿಕ ಸೇವಾ ವ್ಯವಸ್ಥೆ– ಇವೆರಡರ ನಡುವೆ ಇರುವ ಆಂತರಿಕ ಸಂಬಂಧವನ್ನು ರಾಜಕೀಯ ಶಾಸ್ತ್ರದ ಮೇಲಿನ ಯೂರೋಪಿಯನ್ ಬರಹಗಾರರು ಮನಗಂಡಿರಲಿಲ್ಲ. ರಾಜ್ಯದ ಸಮಸ್ಯೆಯೆಂದರೆ, ಸ್ವಾತಂತ್ರ್ಯ ಮತ್ತು ಪ್ರಜೆಗಳ ವಿಧೇಯತೆ ಇವೆರಡನ್ನೂ ಸರಿ ಹೊಂದಿಸುವುದಷ್ಟೇ ಎಂದು ಅವರು ತಿಳಿದಿದ್ದರು. ನಮ್ಮ ಈ ಕಾಲದವರೆಗೆ, ಯೂರೋಪಿಯನ್ ಚಿಂತನಕಾರರು ಗ್ರೀಕ್ ತತ್ತ್ವಜ್ಞಾನಿಗಳಿಂದ ಅಥವಾ ರೋಮನ್

ಪರಂಪರೆಯ ನ್ಯಾಯಶಾಸ್ತ್ರ ಪಾರಂಗತರಿಂದ ಪ್ರೇರಿತರಾಗಿದ್ದರು. ಅವರು ರಾಜನ ಪರಮಾಧಿಕಾರ ಸಿದ್ಧಾಂತಕ್ಕಷ್ಟೇ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಭಾರತದಲ್ಲಿ, ಪರಮಾಧಿಕಾರದ ತಾತ್ತ್ವಿಕ ಆಧಾರವು ಮುಖ್ಯ ಪ್ರಶ್ನೆಯಾಗಿರಲಿಲ್ಲ. ರಾಜ್ಯದ ಸಂಘಟನಾ ಸ್ವರೂಪಕ್ಕೆ ಅತಿ ಹೆಚ್ಚಿನ ಗಮನ ಕೊಡಲಾಗಿತ್ತು.

ಅರಿಸ್ಟಾಟ್ಲ್ ವಿವಿಧ ಬಗೆಯ ರಾಜ್ಯಗಳನ್ನು ಸುವ್ಯವಸ್ಥೆಗೊಳಿಸುವ ಪ್ರಯತ್ನ ಮಾಡುತ್ತಿದ್ದನು. ಆಗ, ಅವನ ಸಮಕಾಲೀನನಾಗಿದ್ದ ಕೌಟಿಲ್ಯನು ರಾಜ್ಯದ ಎಲ್ಲ ಕಾರ್ಯಕಲಾಪಗಳೂ ಜನರ ಹಿತ ಮತ್ತು ಕ್ಷೇಮಾಭಿವೃದ್ಧಿಯೊಂದನ್ನೇ ಮುಖ್ಯ ಧ್ಯೇಯವನ್ನಾಗಿ ಹೊಂದಿರಬೇಕೆಂಬ ಒಂದು ಸೂತ್ರವನ್ನು ರೂಪಿಸಿದನು. ರಾಜ್ಯವನ್ನು ದೊಡ್ಡ ಇಲಾಖೆಗಳಾಗಿ ವ್ಯವಸ್ಥೆಗೊಳಿಸಬೇಕು ಎಂಬುದಕ್ಕೆ ಅವನು ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದನು. ಅವನು ಸೂಚಿಸಿರುವ ಮುಖ್ಯ ನಾಗರಿಕ ಇಲಾಖೆಗಳೆಂದರೆ: ಲೆಕ್ಕ ಪತ್ರಗಳು, ರಾಜ್ಯಾದಾಯ, ಗಣಿಗಳು, ಶಸ್ತ್ರಾಸ್ತ್ರಗಳು, ಸುಂಕಗಳು, ತೆರಿಗೆ, ಬೇಸಾಯ, ಅಬ್ಕಾರಿ ಸುಂಕ ಮತ್ತು ಪಶುಸಂಗೋಪನೆ.

ಒಂದು ರಾಜ್ಯದ ಆಡಳಿತ ವ್ಯವಸ್ಥೆ ಹೇಗಿರಬೇಕೆಂಬುದನ್ನು ಕೌಟಿಲ್ಯ ಸುದೀರ್ಘವಾಗಿ ತಿಳಿಸಿದ್ದಾನೆ. ರಾಜ್ಯವು ಅದರ ಎಲ್ಲಾ ಇಲಾಖೆಗಳ ಸಮಗ್ರ ಕಾರ್ಯಚಟುವಟಿಕೆಗಳ ಒಂದು ಸಂಕೀರ್ಣವೆಂದು ಅರ್ಥೈಸಲಾಗಿತ್ತು. ಜನಜೀವನದ ಪ್ರತಿಯೊಂದು ಕ್ಷೇತ್ರವು ಈ ಇಲಾಖೆಗಳ ವ್ಯಾಪ್ತಿಗೆ ಒಳಪಟ್ಟಿತ್ತು. ದಾಸ್ತಾನು ಮಳಿಗೆ, ವಾಣಿಜ್ಯ ಅರಣ್ಯ ಉತ್ಪನ್ನಗಳು, ತೂಕ ಮತ್ತು ಅಳತೆ, ಸುಂಕ, ನೇಯ್ಗೆ, ಕೃಷಿ, ಗಣಿಗಳು, ಅರಣ್ಯಗಳು, ಭೂಮಿ, ಮದ್ಯ– ಈ ಇಲಾಖೆಗಳ ಮೂಲಕ, ರಾಜ್ಯವು ಜನರ ಆರ್ಥಿಕ ಜೀವನವನ್ನು ನಿಯಂತ್ರಿಸುತ್ತಿತ್ತು: 'ಕುಟುಂಬಗಳು ಜಾತಿಗಳು ಮತ್ತು ಎಲ್ಲ ಸಂಘಸಂಸ್ಥೆಗಳಲ್ಲಿ ಶಿಸ್ತು ಮೂಡಿಸಿ, ಅವನ್ನು ಒಂದು ಸರಿಯಾದ ಸ್ಥಿತಿಯಲ್ಲಿ ಇಡುವುದು ರಾಜನ ಕರ್ತವ್ಯವೆಂದು ಯಾಜ್ಞವಲ್ಕ್ಯ ತಿಳಿಸಿದ್ದಾರೆ. ಶ್ರೇಣಿಗಳು, ಗಣಗಳು ಮತ್ತು ಜನಪದಗಳು ತಮ್ಮ ಕರ್ತವ್ಯಗಳನ್ನು[೧೦] ಸರಿಯಾಗಿ ನಿರ್ವಹಿಸದೆ, ಅವುಗಳಿಂದ ವಿಚಲಿತಗೊಂಡಲ್ಲಿ, ಅವನ್ನು ಶಿಸ್ತಿಗೊಳಪಡಿಸುವುದು ರಾಜನ ಹೊಣೆಯೆಂದು ಸಹ ಯಾಜ್ಞವಲ್ಕ್ಯರು ತಿಳಿಸಿದ್ದಾರೆ. ಜೀವನದಲ್ಲಿ ನಡೆಯುವ ಕಾರ್ಯಕಲಾಪಗಳಲ್ಲಿ ನಿಯಂತ್ರಣಕ್ಕೊಳಪಡದೇ ಇರುವ ಯಾವ ಕ್ಷೇತ್ರವೂ ಇರಲಿಲ್ಲ. ಕೌಟಿಲ್ಯನು ನಮೂದಿಸಿರುವ ಇಲಾಖೆಗಳಲ್ಲಿ, ವೇಶ್ಯೆಯರನ್ನು ನಿಯಂತ್ರಿಸುವ ಒಂದು ಇಲಾಖೆಯೂ ಸೇರಿದೆ. ಪುರಸಭಾ ಸಂಸ್ಥೆ ಸಹ ಅಷ್ಟೇ ಮುಖ್ಯವಾದ ಒಂದು ವಿಷಯವಾಗಿತ್ತು.

ಇವು, ಕೇವಲ ತಾತ್ತ್ವಿಕ ವಿಷಯಗಳ ವಿಸ್ತರಣೆಯಾಗಿರಲಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೊಡಲಾಗಿರುವ ವಿವರವಾದ ಸೂಚನೆಗಳಿಂದ ಈ ಅಂಶವನ್ನು ಸುಲಭವಾಗಿ ತಿಳಿಯಬಹುದು. ಅದರಲ್ಲಿ, ಲೆಕ್ಕ ಪತ್ರಗಳ ಕಚೇರಿಯ ಕೆಲಸಕಾರ್ಯಗಳು

ಹೇಗೆ ನಡೆಯಬೇಕೆಂಬ ಬಗ್ಗೆ ವಿವರವಾದ ಸೂಚನೆಗಳನ್ನು ಕೊಡಲಾಗಿದೆ. ಕಚೇರಿಗೆ ಅಗತ್ಯವಾಗಿ ಬೇಕಾದ ಸೌಲಭ್ಯಗಳನ್ನು ಕೌಟಿಲ್ಯನು ವಿವರಿಸಿದ್ದಾನೆ. ಕಾರಕೂನರು ಕುಳಿತುಕೊಳ್ಳಲು ಸೂಕ್ತ ಆಸನಗಳು, ಲೆಕ್ಕದ ಪುಸ್ತಕಗಳನ್ನು ಇರಿಸಲು ಕಪಾಟುಗಳು ಮುಂತಾದವು ತುಂಬ ಅಗತ್ಯವೆಂದು ತಿಳಿಸಿದ್ದಾನೆ. ಅನಂತರ, ಅವನು ಒಂದು ಇಲಾಖೆಯಲ್ಲಿರಬೇಕಾದ ನಾನಾ ವಿಭಾಗಗಳನ್ನು ಸೂಚಿಸುತ್ತಾನೆ. ಅಕ್ಕಪಕ್ಕದ ರಾಜ್ಯಗಳೊಡನೆ ಹಣಕಾಸು ವ್ಯವಹಾರಗಳನ್ನು ನಡೆಸಲು ಒಂದು ಪ್ರತ್ಯೇಕ ವಿಭಾಗವಿರಬೇಕು. ಶ್ರೇಣಿಗಳು, ಗಣಗಳು ಮತ್ತು ಇತರ ನಿಗಮಗಳೊಡನೆ ವ್ಯವಹರಿಸುವುದಕ್ಕಾಗಿ, ಪ್ರತ್ಯೇಕ ವಿಭಾಗವಿರಬೇಕು. ಸರ್ಕಾರದ ವಾಣಿಜ್ಯಸಂಬಂಧವಾದ ಕಾರ್ಯಾಚರಣೆಗಳ ಲೆಕ್ಕಪತ್ರಗಳಲ್ಲಿ ಈ ವಿವರಗಳಿರಬೇಕು: "ಯಾವ ಯಾವ ಕೆಲಸ ನಡೆಯಿತೋ ಅದರ ವರ್ಣನೆ, ಆ ಕೆಲಸದಿಂದ ಲಭಿಸಿದ ಫಲಿತಾಂಶಗಳು, ಲಾಭ, ನಷ್ಟ, ಖರ್ಚು, ತಡವಾಗಿ ಬಂದ ವರಮಾನ, ವ್ಯಾಜಿಯ ಮೊತ್ತ ಅಂದರೆ (ವಸ್ತುಗಳ ಅಥವಾ ನಗದು ರೂಪದಲ್ಲಿ ಬಂದ ಸಂಭಾವನೆ), ನೇಮಿಸಿಕೊಳ್ಳಲಾದ ಸರ್ಕಾರಿ ಏಜೆನ್ಸಿಯ ಸ್ಥಾನಮಾನ, ಕೆಲಸಗಾರರಿಗೆ ನೀಡಲಾದ ವೇತನದ ಮೊತ್ತ, ಕೆಲಸಕ್ಕೆ ನೇಮಿಸಿಕೊಂಡಿದ್ದ ಉಚಿತ ಕಾರ್ಮಿಕರ ಸಂಖ್ಯೆ, ತೊಡಗಿಸಲಾದ ಬಂಡವಾಳದ ಮೊತ್ತ" ಇವೆಲ್ಲ ದಾಖಲೆಗಳನ್ನು ಮತ್ತೊಂದು ವಿಭಾಗದಲ್ಲಿ ಸುರಕ್ಷಿತವಾಗಿ ಇಟ್ಟಿರಬೇಕು. ಅತ್ಯಮೂಲ್ಯವಾದ ಪ್ರಶಸ್ತ ಮುತ್ತುರತ್ನಗಳನ್ನು ತೂಗಿ, ಅದನ್ನು ದಾಖಲಿಸಿ, ಭದ್ರವಾಗಿ ಇಟ್ಟಿರಲು ಸಹ ಒಂದು ಪ್ರತ್ಯೇಕ ವಿಭಾಗವಿತ್ತು. ಲೆಕ್ಕಪತ್ರಗಳ ಇಲಾಖೆಯ ಬಗ್ಗೆ ವಿಸ್ತೃತ ಹಾಗೂ ವ್ಯಾಪಕ ವರ್ಣನೆ ಇದಾಗಿದ್ದು, ಇದಕ್ಕಿಂತಲೂ ಹೆಚ್ಚಿನದನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ.

ರಾಜ್ಯದ ಸಾಂಸ್ಥಿಕ ಮತ್ತು ಆಡಳಿತಾತ್ಮಕ ಸ್ವರೂಪ ಹೇಗಿರಬೇಕು ಎಂಬುದಕ್ಕೆ ಅರ್ಥಶಾಸ್ತ್ರ ಕುರಿತ ಲೇಖಕರು ಹೆಚ್ಚು ಮಹತ್ವ ಕೊಟ್ಟಿದ್ದರು. ಪರಮಾಧಿಕಾರಕ್ಕೆ ಸಂಬಂಧಪಟ್ಟ ವಿಷಯ ಅವರಿಗೆ ಅಷ್ಟೊಂದು ಮುಖ್ಯವಾಗಿ ಕಾಣಿಸಲಿಲ್ಲ. ಗ್ರೀಕ್ ಬರಹಗಾರರು ನಿರಂಕುಶ ಪ್ರಭುತ್ವ, ಕುಲೀನರ ಪ್ರಭುತ್ವ ಮತ್ತು ಪ್ರಜಾಪ್ರಭುತ್ವ ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜಕೀಯ ವ್ಯವಸ್ಥೆ ಬಗ್ಗೆ ಚಿಂತಿಸುತ್ತಿದ್ದರು. ಇಂತಹ ಯಾವುದೇ ಚಿಂತನೆಯಾಗಲಿ, ಭಾರತೀಯ ಚಿಂತನಕಾರರ ಮೇಲೆ ಯಾವ ಪ್ರಭಾವವನ್ನೂ, ಬೀರಲಿಲ್ಲ. ರಾಜಕೀಯ ವ್ಯವಸ್ಥೆಯಲ್ಲಿ ರಾಜಪ್ರಭುತ್ವ ಸಹ ಒಂದು ಮಾದರಿಯೆಂದು ಅವರು ಪರಿಗಣಿಸಿದ್ದರು. ರಾಜರ ಪರಮಾಧಿಕಾರವು, ಸಾಂಪ್ರದಾಯಿಕವಾದ ಇತರ ರೂಪಗಳಲ್ಲೂ ಇದ್ದಿತೆಂದು ಅವರು ಒಪ್ಪಿಕೊಂಡಿದ್ದರು. ಅತಿ ಮುಂಚಿನ ಗ್ರಂಥಗಳಲ್ಲಿದ್ದಂತಹ ಪರಮಾಧಿಕಾರದ ತತ್ತ್ವವನ್ನೇ ಹಿಂದೂ ಲೇಖಕರು ಪುನಃ ನಮೂದಿಸಿದ್ದಾರೆ. ಅವರು, ಅಷ್ಟರಲ್ಲೇ ಸಂತೃಪ್ತರಾಗಿದ್ದಾರೆ.

ಆದರೆ, ರಾಜ್ಯದ ಸ್ವರೂಪದ ಬಗ್ಗೆ ಈ ಲೇಖಕರು ಹೊಂದಿದ್ದ ಸಿದ್ಧಾಂತದ ಮೇಲೆ ಅದು ಯಾವುದೇ ಪರಿಣಾಮವನ್ನೂ ಉಂಟುಮಾಡಲಿಲ್ಲ.

ಸರ್ಕಾರಿ ಆದಾಯದೊಂದಿಗೆ ರಾಜನಿಗಿದ್ದ ಸಂಬಂಧ, ಹಿಂದೂ ಚಿಂತನಕಾರರ ಪರಿಶೀಲನೆಯಲ್ಲಿದ್ದ ಅತಿ ಮುಖ್ಯ ವಿಷಯವಾಗಿತ್ತು. ಹಿಂದೂ ರಾಜರುಗಳ ಆದಾಯ ವ್ಯವಸ್ಥೆ ಅತಿ ಕಟ್ಟುನಿಟ್ಟಿನದಾಗಿತ್ತು. ಇದು ವಿದ್ವಾಂಸರುಗಳ ಅಧ್ಯಯನಕ್ಕೆ ಅತಿ ಗಹನವಾದ ವಿಷಯವಾಗಿತ್ತು. ಈ ವಿಷಯದಲ್ಲಿ ಡಾ. ಯು. ಘೋಷಾಲ್ ತುಂಬ ಗಾಢವಾದ ವಿಶ್ಲೇಷಣೆ ನಡೆಸಿದ್ದಾರೆ. ನಾನು ಆ ವಿಶ್ಲೇಷಣೆಯ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ವಿದ್ಯಾರ್ಥಿಗಳು ಇದರಿಂದ ತಮಗೆ ಬೇಕಾದ ಎಲ್ಲ ಮಾಹಿತಿಯನ್ನು ಪಡೆಯಬಹುದು. ಇಲ್ಲಿ ನಾವು ರಾಜ್ಯದ ಆದಾಯದೊಂದಿಗೆ ರಾಜನು ಹೊಂದಿದ್ದ ಸಂಬಂಧದ ಬಗ್ಗೆ ಮಾತ್ರ ಪರಿಶೀಲಿಸೋಣ. ತೆರಿಗೆ–ನಿಯಮವನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಆ ನಿಯಮದ ಪ್ರಕಾರ, ರಾಜನು ಪ್ರಜೆಗಳನ್ನು ಸಂರಕ್ಷಿಸಿದ್ದಕ್ಕಾಗಿ, ಒಟ್ಟು ಉತ್ಪನ್ನದ ಆರನೆಯ ಒಂದು ಭಾಗದಷ್ಟನ್ನು ಪ್ರತಿಫಲವಾಗಿ ಪಡೆಯಲು ಅರ್ಹತೆಯುಳ್ಳವನಾಗಿದ್ದನು. ಅಷ್ಟೇ ಅಲ್ಲದೆ, ವ್ಯಾಪಾರದ ಸರಕುಗಳಲ್ಲೂ ರಾಜನಿಗೆ ಪಾಲು ದೊರೆಯುತ್ತಿತ್ತು. ಈ ರೀತಿ ಸಂಗ್ರಹಿಸಿದ ಹಣದ ಸರ್ವಸ್ವಾಮ್ಯ ರಾಜನದಾಗಿತ್ತೇ? ಈ ಹಣದಲ್ಲಿ, ಸಂರಕ್ಷಣೆಗಾಗಿ ಎಷ್ಟು ಮೊತ್ತ ಖರ್ಚಾಯಿತು ಎನ್ನುವುದು ಪ್ರಸ್ತಾಪಿಸಬೇಕಾದ ಮೊದಲ ವಿಷಯ. "ಪ್ರಜೆಗಳನ್ನು ಸಂರಕ್ಷಿಸುವುದು ರಾಜನೊಬ್ಬನ ಪ್ರಪ್ರಥಮ ಕರ್ತವ್ಯ. ಇದಕ್ಕಾಗಿ ಪ್ರತಿಫಲವನ್ನು (ಆರನೇ ಒಂದುಭಾಗದಷ್ಟು) ಪಡೆಯುತ್ತಿರುವ ರಾಜನು ತನ್ನ ಕರ್ತವ್ಯವನ್ನು ಈಡೇರಿಸಲೇಬೇಕಾಗುತ್ತದೆ. ಅವನು ಈ ಕಟ್ಟುಪಾಡಿಗೆ ಒಳಪಟ್ಟಿರುತ್ತಾನೆ" ಎನ್ನುತ್ತಾನೆ ಮನು.[೧೧] ಒಬ್ಬ ರಾಜನು ತನ್ನ ಈ ಕರ್ತವ್ಯವನ್ನು ನಿರ್ವಹಿಸದೇ ತೆರಿಗೆ ಹಣವನ್ನು ಮಾತ್ರ ತಪ್ಪದೇ ವಸೂಲು ಮಾಡಿಕೊಂಡರೆ, ಅವನು ಖಂಡಿತ ನರಕಕ್ಕೆ ಹೋಗುತ್ತಾನೆ. ಜನರು ಮಾಡಿದ ತಪ್ಪುಗಳು ಮತ್ತು ಅಪರಾಧಗಳ ಪಾಪ ರಾಜನಿಗೇ ತಟ್ಟುತ್ತದೆ. ಆರನೇ ಒಂದು ಭಾಗದಷ್ಟು ಹಣವನ್ನು ಜನರಿಂದ ಪಡೆದುಕೊಂಡು, ಅದನ್ನು ಅವರ ಸಂರಕ್ಷಣೆಗಾಗಿಯೇ ರಾಜನು ವೆಚ್ಚ ಮಾಡಬೇಕಾಗುತ್ತದೆ ಎಂದು ಮಹಾಭಾರತ ತಿಳಿಸುತ್ತದೆ.[೧೨]

ರಾಜ್ಯಾದಾಯಕ್ಕೆ ಸಂಬಂಧಿಸಿದಂತೆ ಶುಕ್ರನ ಅಭಿಪ್ರಾಯ ಸಂಪೂರ್ಣ ಭಿನ್ನವಾಗಿತ್ತು. ಒಂದು ರಾಜ್ಯದ ಬಲ, ಅದರಲ್ಲಿರುವ ಪ್ರಜೆಗಲು ಎಷ್ಟು ಅಭ್ಯುದಯ ಹೊಂದಿದ್ದಾರೆ ಎನ್ನುವುದನ್ನು ಅವಲಂಬಿಸಿರುತ್ತದೆ ಎಂಬುದು ಶುಕ್ರನ ತತ್ತ್ವವಾಗಿತ್ತು. ಒಂದು ರಾಜ್ಯದ ಹಣಕಾಸು ವ್ಯವಸ್ಥೆ ಸುಭದ್ರವಾಗಿರಬೇಕಾದರೆ, ಜನರ ಮೇಲೆ ಹೆಚ್ಚಿನ ತೆರಿಗೆ ಹಾಕಬಾರದು. ತೆರಿಗೆಯು ತುಂಬ ಲಘುವಾಗಿರಬೇಕು ಎಂಬುದು

ಆತನ ಅಭಿಪ್ರಾಯ. ರಾಜರುಗಳು ತಮ್ಮ ಆನಂದ ಮತ್ತು ಭೋಗಕ್ಕಾಗಿ ಜನರ ಮೇಲೆ ತೆರಿಗೆಯ ಭಾರ ಹಾಕುವುದನ್ನು ಶುಕ್ರ ಕಟುವಾಗಿ ವಿರೋಧಿಸಿದ್ದನು.[೧೩] ರಾಜನ ಬಳಿ ತನ್ನ ಪ್ರಜೆಗಳ ಸಂರಕ್ಷಣೆಗಾಗಿ ಸಂಪತ್ತು ಇರಬೇಕೇ ಹೊರತು, ಬೇರಾವ ಉದ್ದೇಶಕ್ಕೂ ಅಲ್ಲ.[೧೪] ಹೆಚ್ಚಿನ ಪ್ರಮಾಣದಲ್ಲಿ ಸುಂಕ ಮತ್ತು ತೆರಿಗೆಯನ್ನು ವಿಧಿಸುವುದರಿಂದ ಜನರನ್ನು ಪೀಡಿಸಿದಂತಾಗುತ್ತದೆ. "ಅತಿಯಾದ ಆಸೆಯಿಂದ ರಾಜನು ಜನರಿಂದ ತೆರಿಗೆ ವಸೂಲು ಮಾಡಿದಲ್ಲಿ, ಜನರ ಜೊತೆಗೆ ತಾನು ಸಹ ನಿರ್ನಾಮ ಹೊಂದುತ್ತಾನೆ. ರಾಜನ ಬಳಿ ಸಂಪತ್ತು ಇರುವುದೇ ಸಾರ್ವಜನಿಕರಿಗಾಗಿ ಮತ್ತು ಆ ಸಂಪತ್ತು ಜನರ ಒಳಿತಿಗಾಗಿಯೇ ವಿನಿಯೋಗಬೇಕು" ಎನ್ನುತ್ತಾನೆ ಶುಕ್ರ. "ಸೈನ್ಯದ ನಿರ್ವಹಣೆಗಾಗಿ, ಪ್ರಜೆಗಳ ಸಂರಕ್ಷಣೆಗಾಗಿಮತ್ತು ಯಜ್ಞ ಯಾಗಾದಿಗಳನ್ನು ನಡೆಸುವುದಕ್ಕಾಗಿ ರಾಜನು ತೆರಿಗೆಯನ್ನು ಸಂಗ್ರಹಿಸಬೇಕು. ರಾಜನು ಸ್ವಂತ ಉದ್ದೇಶಕ್ಕಾಗಿ ಮತ್ತು ಭೋಗಜೀವನಕ್ಕಾಗಿ ತೆರಿಗೆ ವಸೂಲು ಮಾಡಿದರೆ, ಅವನು ನರಕಕ್ಕೆ ಹೋಗುತ್ತಾನೆ." ರಾಜನು ತನ್ನ ಮನದಾಸೆಗಳನ್ನು ಈಡೇರಿಸಿಕೊಳ್ಳಲು ರಾಜ್ಯದ ಆದಾಯವನ್ನು ದುರುಪಯೋಗಿಸಲು ಸಾಧ್ಯವಿಲ್ಲ ಎಂಬುದು ಈಗ ಸುಸ್ಪಷ್ಟವಾಯಿತು. ಒಬ್ಬ ರಾಜನು ತೆರಿಗೆಗಳನ್ನು ಸಂಗ್ರಹಿಸಿ, ಅದನ್ನು ಪ್ರಜೆಗಳ ಸಂರಕ್ಷಣೆಗಾಗಿ ಖರ್ಚು ಮಾಡದಿದ್ದರೆ ಅವನೊಬ್ಬ ಕಳ್ಳದೊರೆ ಎಂದು ಮಹಾಭಾರತ ಹೇಳುತ್ತದೆ.[೧೫]

ಹಣಕಾಸು ಮಂತ್ರಿಯೊಬ್ಬನ ಕೆಲಸ ಕಾರ್ಯಗಳನ್ನು ಶುಕ್ರ ಹೀಗೆ ವರ್ಣಿಸಿದ್ದಾನೆ: "ಒಬ್ಬ ಸುಮಂತ್ರನು, ರಾಜನಿಗೆ ಕೂಡಿಟ್ಟಿರುವ ಸರಕುಗಳ ಪ್ರಮಾಣವನ್ನು ಸಾಲಗಳ ಒಟ್ಟು ಮೊತ್ತವನ್ನು, ಮತ್ತಿತರ ವಿವರಗಳನ್ನು ತಿಳಿಯಗೊಡಬೇಕು. ಒಂದು ವರ್ಷದ ಅವಧಿಯಲ್ಲಿ ಎಷ್ಟು ಹಣವನ್ನು ವೆಚ್ಚ ಮಾಡಲಾಯಿತು, ಚರ ಮತ್ತು ಸ್ಥಿರ ಸ್ವತ್ತುಗಳಿಂದ ಎಷ್ಟು ಹಣ ಹೆಚ್ಚಾಗಿ ಬಂದಿತು ಮತ್ತು ಎಷ್ಟು ಮೊತ್ತ ಉಳಿತಾಯವಾಯಿತು ಎಂಬ ಎಲ್ಲ ವಿವರಗಳನ್ನು ಅವನು ರಾಜನಿಗೆ ನೀಡಬೇಕು. ರಾಜ್ಯದಲ್ಲಿ ಎಷ್ಟು ನಗರಗಳು, ಹಳ್ಳಿಗಳು ಮತ್ತು ಅರಣ್ಯಗಳಿವೆ, ಸಾಗುವಳಿಯಾಗುತ್ತಿರುವ ಜಮೀನಿನ ಪ್ರಮಾಣ, ಕಂದಾಯವನ್ನು ಯಾರು ಸ್ವೀಕರಿಸಿದ್ದಾರೆ, ಎಷ್ಟು ಆದಾಯ ಬಂದಿದೆ, ಗೇಣಿಯ ಮೊತ್ತವನ್ನು ಕೊಟ್ಟ ನಂತರ ಉಳಿದ ಹಣವನ್ನು ಯಾರು ಸ್ವೀಕರಿಸುತ್ತಾರೆ, ಸಾಗುವಳಿಯಾಗದೆ ಉಳಿದಿರುವ ಜಮೀನಿನ ಪ್ರಮಾಣ, ತೆರಿಗೆಗಳು ಮತ್ತು ದಂಡದ ಮೂಲಕ ಬಂದ ಆದಾಯ, ಸಾಗುವಳಿಯಾಗದ ಭೂಮಿಯಿಂದ ಬಂದ ಕಂದಾಯದ ಮೊತ್ತ, ಅರಣ್ಯಗಳಿಂದ ಬಂದ ಲಾಭ, ಗಣಿಗಳು ಮತ್ತು ಆಭರಣಗಳ ಮೂಲಕ ಬಂದ ಹಣ– ಇವೆಲ್ಲಾ ವಿವರಗಳನ್ನು ಮಂತ್ರಿ ನೀಡಬೇಕು."[೧೬]

ರಾಜ್ಯದಲ್ಲಿರುವ ಹಣಕಾಸನ್ನು ರಾಜದ ವಶಕ್ಕೇ ಬಿಡುತ್ತಿರಲಿಲ್ಲ. ಆದ್ದರಿಂದ ರಾಜನು ಆ ಹಣವನ್ನು ತನ್ನ ಮನಸ್ಸಿಗೆ ಬಂದಂತೆ ಖರ್ಚು ಮಾಡುವುದಕ್ಕೆ

ಅವಕಾಶವಿರಲಿಲ್ಲ. ಹಣಕಾಸು ಮಂತ್ರಿ, ಪ್ರತಿವರ್ಷ ಒಂದು ಆಯ–ವ್ಯಯ ಪಟ್ಟಿಯನ್ನು ತಯಾರಿಸಬೇಕಾಗುತ್ತಿತ್ತು. ಎಷ್ಟು ಹಣಬಂದಿತು ಮತ್ತು ಎಷ್ಟು ಖರ್ಚಾಯಿತು ಎಂಬುದನ್ನು ಸೂಚಿಸುವ ಪತ್ರವನ್ನು ಸಿದ್ಧಪಡಿಸಬೇಕಾಗುತ್ತಿತ್ತು. ರಾಜ್ಯದಲ್ಲಿರುವ ಸಂಪನ್ಮೂಲಗಳನ್ನು ಸುದೀರ್ಘವಾಗಿ ಪರಿಶೀಲಿಸಬೇಕಾಗುತ್ತಿತ್ತು. ಕೌಟಿಲ್ಯನು ಒಬ್ಬ ವಾಸ್ತವಿಕ ಆಡಳಿತಗಾರನಾಗಿದ್ದನು. ಆದ್ದರಿಂದ ಲೆಕ್ಕಪತ್ರಗಳ ಕಚೇರಿ ಎಷ್ಟು ವ್ಯವಸ್ಥಿತವಾಗಿ ಇರಬೇಕೆಂಬುದನ್ನು ಅವನು ತಿಳಿಸಿದ್ದಾನೆ. ಆ ಕಚೇರಿಯು ಹೇಗೆ ವ್ಯವಸ್ಥೆಗೊಂಡಿರಬೇಕು ಎಂಬುದರ ಅವನ ವರ್ಣನೆಯನ್ನು ಸಹ ಈಗಾಗಲೇ ನಾವು ಗಮನಿಸಿದ್ದೇವೆ. ಹಿಂದೂ ರಾಜರುಗಳು ರಾಜ್ಯದ ಹಣಕಾಸು ವ್ಯವಸ್ಥೆಯನ್ನು ಎಷ್ಟು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬರುತ್ತಿದ್ದರು ಎಂಬುದು ಇದರಿಂದ ವೇದ್ಯವಾಗುತ್ತದೆ.

ರಾಜ್ಯಕ್ಕೆ ಬರುವ ಆದಾಯವು ರಾಜನ ಖಾಸಗಿ ಸ್ವತ್ತೆಂಬ ಭಾವನೆ ಕೆಲವರಲ್ಲಿತ್ತು. ಆದರೆ ಹಿಂದೂ ಸಿದ್ಧಾಂತದಲ್ಲಿ ಇಂತಹ ಭಾವನೆಗೆ ಸ್ವಲ್ಪವೂ ಸಮರ್ಥನೆ ದೊರೆಯುವುದಿಲ್ಲ. ಅ ಹಣದಲ್ಲಿ ಸ್ವಲ್ಪ ಮೊತ್ತವನ್ನು ಮಾತ್ರ, ರಾಜನು ತನ್ನ ನಿರ್ವಹಣೆಗಾಗಿ ಉಪಯೋಗಿಸಿಕೊಳ್ಳುವ ಅರ್ಹತೆ ಪಡೆದಿರುತ್ತಾನೆ. ರಾಜನು ಅತಿಯಾಸೆಯಿಂದ ಹಣವನ್ನು ಬಚ್ಚಿಡುವುದು ಸಹ ಪಾಪಕರವೆಂದು ಪರಿಗಣಿಸಲಾಗಿತ್ತು. ತೆರಿಗೆಗಳ ಮೂಲಕ ಸಂಗ್ರಹಿಸಲಾದ ಹಣವನ್ನು ರಾಜನು ತನ್ನ ರಂಜನೆಗಾಗಿ ಹಾಗೂ ಭೋಗ ಜೀವನಕ್ಕಾಗಿ ಉಪಯೋಗಿಸಿಕೊಳ್ಳುವುದು ಅವನ ದುರ್ದೆಶೆಗೆ ಕಾರಣವಾಗುವುದೆಂದು ಸಹ ಭಾವಿಸಲಾಗಿತ್ತು. ರಾಜನ ಸಂಪತ್ತು ಇರುವುದೇ ಜನಸಾಮಾನ್ಯರ ರಕ್ಷಣೆಗಾಗಿ. ಆದರೆ ರಾಜನು ಅದನ್ನು ತನ್ನ ಉದ್ದೇಶಗಳಿಗಾಗಿ ಬಳಸಿಕೊಂಡಲ್ಲಿ, ಅವನು ಒಬ್ಬ ಕಳ್ಳನಿಗಿಂತಲೂ ಕಡೆಯಾಗುತ್ತಾನೆ ಎಂದು ಹಿಂದೂ ರಾಜಕೀಯ ಸಿದ್ಧಾಂತದಲ್ಲಿ ಸುಸ್ಪಷ್ಟಪಡಿಸಲಾಗಿದೆ.

೬. ರಾಜ, ಸಾಮ್ರಾಜ್ಯ ಮತ್ತು ನಿರಂಕುಶ ಪ್ರಭುತ್ವ

"ರಾಜನನ್ನು ಬ್ರಹ್ಮನೇ ಸೃಷ್ಟಿಸುತ್ತಾನೆ. ಅವನು ಜನಸೇವಕ. ಈ ಸೇವೆಗೆ ಪ್ರತಿಫಲವಾಗಿ ರಾಜ ತನ್ನ ಆದಾಯವನನು ಪಡೆದುಕೊಳ್ಳುತ್ತಾನೆ. ಅವನಿಗಿರುವ ಪರಮಾಧಿಕಾರ ಪ್ರಜೆಗಳನ್ನು ಸಂರಕ್ಷಿಸುವುದಕ್ಕಾಗಿ ಮಾತ್ರ." (ಶುಕ್ರ, ಪು. ೨೦.)

ಮೂಲತಃ, ಆರ್ಯರ ದೊರೆಗಳು ನಾಯಕರು ಮಾತ್ರ ಆಗಿದ್ದರು. ಇದಕ್ಕೆ ಮೊದಲು ಆರ್ಯರಲ್ಲದ ಜನರು ತಮ್ಮದೇ ಆದ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಈ ವ್ಯವಸ್ಥೆಯಲ್ಲಿ ರಾಜ ಪ್ರಭುತ್ವ ವಂಶಪಾರಂಪರ್ಯವಾಗಿ ಬರುತ್ತಿತ್ತು. ಇದೊಂದು ಸ್ಥಿರ ಪದ್ಧತಿಯಾಗಿತ್ತು. ವೇದಗಳ ಯುಗದಲ್ಲಿ ಆರ್ಯರು ಅಲೆಮಾರಿಗಳಾಗಿದ್ದರು. ಅನಂತರ, ಅವರು ಸ್ವದೇಶೀಯರೊಡನೆ ಸಂಪರ್ಕವೇರ್ಪಡಿಸಿಕೊಂಡರು. ಸಮಾಜದಲ್ಲಿ ಸ್ಥಿರವಾಗಿ ನೆಲೆಸಿದರು. ಇದಾದ ನಂತರ ಸಮ್ರಾಟ ಮತ್ತು ಚಕ್ರವರ್ತಿ ಇರಬೇಕೆಂಬ ವಿಚಾರ ಅವರ ಮನಸ್ಸಿಗೆ ಬಂದಿತು. ಈ ರೀತಿಯಲ್ಲಿ ರಾಜನು, ಇತರರನ್ನು ತನ್ನ ಅಧೀನದಲ್ಲಿಟ್ಟುಕೊಂಡು ಸಾಮ್ರಾಟನಾಗಿ, ಪ್ರಭುತ್ವದಲ್ಲಿ ಮೆರೆಯಬಹುದೆಂಬ ಆಲೋಚನೆ ಅವರಲ್ಲಿ ಕಾಣಿಸಿಕೊಳ್ಳತೊಡಗಿತು. ಆರ್ಯರು ತಮ್ಮ ಭೂಪ್ರದೇಶವನ್ನು ವಿಸ್ತರಿಸಿಕೊಂಡ ನಂತರ, ಅವರಲ್ಲಿ ನಿಜವಾದ ಬದಲಾವಣೆ ಉಂಟಾಯಿತು. ರಾಜನ ಬಗೆಗೆ ಅವರ ವಿಚಾರದಲ್ಲಿ ಬದಲಾವಣೆ ಕಂಡುಬಂದಿತು. ಅತಿಕ್ರಮಣ ನಡೆಸುತ್ತಾ ಬಂದ ಬುಡಕಟ್ಟು ಜನರು ಗಂಗಾ ಕಣಿವೆಯ ಅನೇಕ ಬಯಲುಗಳಲ್ಲಿ ನೆಲೆಸುತ್ತಾ ಹೋದರು. ಸಾಕಷ್ಟು ಅಧಿಕಾರವುಳ್ಳ ಸಾಮ್ರಾಟನಿರಬೇಕೆಂಬ ಅವರ ಯೋಚನೆ ನಿಜಸ್ವರೂಪವನ್ನು ಕಂಡಿತು. ಈ ಸಾಮ್ರಾಟನು ತನ್ನ ಅಧಿಕಾರಬಲದಿಂದ, ಇತರ ರಾಜರುಗಳನ್ನು ತನ್ನ ಆಧೀನಕ್ಕೆ ತೆಗೆದುಕೊಂಡು, ಇತರ ರಾಜ್ಯಗಳನ್ನು ತಮ್ಮ ಹತೋಟಿಗೆ ತಂದುಕೊಳ್ಳಲು ಸಾಧ್ಯವಾಯಿತು. ಹೀಗೆ ಸಾಮ್ರಾಜ್ಯವನ್ನು ಕಟ್ಟುವುದು ಹಿಂದೂ ರಾಜಕೀಯ ಪರಂಪರೆಯ ಒಂದು ಲಕ್ಷಣವಾಯಿತು. ರಾಜಕೀಯ ವ್ಯವಸ್ಥೆ ಮೊದಲು ಆರ್ಯಾವರ್ತದವರೆಗಿತ್ತು. ಅನಂತರ ಅದು ಇಡೀ ಭಾರತಕ್ಕೆ ವ್ಯಾಪಿಸಿತು. ಈ ರಾಜಕೀಯ ಪ್ರಭುತ್ವ, ವಿಂಧ್ಯಪರ್ವತದ ಉತ್ತರಕ್ಕೆ ಇಡೀ ಹಿಂದೂಸ್ಥಾನಕ್ಕೆ, ಅನಂತರ ಹಿಮಾಲಯದಿಂದ ರಾಮೇಶ್ವರದವರೆಗೆ ಇಡೀ ಭಾರತಕ್ಕೆ ವಿಸ್ತರಿಸಿತು.

ಸೈನ್ಯವನ್ನು ಬಳಸಿ, ಒಂದು ಪ್ರದೇಶವನ್ನು ವಶಪಡಿಸಿಕೊಂಡ ಮಾತ್ರಕ್ಕೆ ಒಬ್ಬ ರಾಜ, ಚಕ್ರವರ್ತಿಯಾಗಲಾರ. ಹೆಚ್ಚೆಂದರೆ ಅವನು ಒಬ್ಬ ದೊಡ್ಡ ದೊರೆ ಅಥವಾ ಮಹಾರಾಜ ಎನಿಸಿಕೊಳ್ಳಬಹುದು. ಆದರೆ ಅವನು ಸಾಮ್ರಾಟ ಎನಿಸಿಕೊಳ್ಳಲಾರ. ಒಬ್ಬ ರಾಜನು ಸಮ್ರಾಟನಾಗಬೇಕಾದರೆ, ಅವನು ಅಶ್ವಮೇಧ ಅಥವಾ ಇನ್ಯಾವುದಾದರೂ ಯಜ್ಞಯಾಗಾದಿಗಳನ್ನು ಮಾಡಬೇಕು. ವೇದಗಳ ಕಾಲದಲ್ಲಿ ಸಾಮ್ರಾಟ ಪದವಿ ವಂಶಪಾರಂಪರ್ಯವಾಗಿರಲಿಲ್ಲ. ಅದು ವ್ಯಕ್ತಿತಗತವಾದ ಸ್ಥಾನವಾಗಿತ್ತು. ಆಗ ಸಾಮ್ರಾಟನಿಗೆ ಹೆಚ್ಚಿಗೆ ಅಧಿಕಾರವಾಗಲಿ ಅಥವಾ ಉನ್ನತಾಧಿಕಾರವಾಗಲಿ ಇರಲಿಲ್ಲ. ಸಂಪ್ರದಾಯಬದ್ಧ ಹಿಂದೂ ಸಾಮ್ರಾಜ್ಯದ ವ್ಯಾಪ್ತಿಯನ್ನು ಕೌಟಿಲ್ಯನು ಹೀಗೆ ವಿವರಿಸಿದ್ದಾನೆ: "ಇದರ ಪ್ರದೇಶವು ಹಿಮಾಲಯದಿಂದ ಹಿಡಿದು ಸಮುದ್ರದವರೆಗೆ ೯,೦೦೦ ಯೋಜನಗಳಷ್ಟು ದೂರದವರೆಗೆ ವ್ಯಾಪಿಸಿದೆ. ಉತ್ತರದತ್ತ ಓರೆಯಾಗಿ ಸಾಗುವ ಪ್ರದೇಶವು ಸಹ ಈ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದೆ.

'ದೇಶಪೃಥ್ವಿ; ತಸ್ಯಾಂ ಐರಾವತ್ ಸಮುದ್ರಾಂತರಮ್ ಉದೀಚಿನಾಂ
ನವ ಯೋಜನ ಸಹಸ್ರ ಪರಿಣಾಮ ತಿರ್ಯಕ್ ಚಕ್ರವರ್ತಿ ಕ್ಷೇತ್ರಂ'

ಇವಿಷ್ಟೂ ಚಕ್ರವರ್ತಿಯ ಪ್ರಭುತ್ವಕ್ಕೊಳಪಟ್ಟ ಪ್ರದೇಶವಾಗಿದೆ."

ಮಹಾಭಾರತ ಯುದ್ಧದ ಕಾಲದಿಂದ, ಸಾಮ್ರಾಜ್ಯವು ವಂಶಪಾರಂಪರ್ಯವಾಗಿ ಒಬ್ಬರಿಂದೊಬ್ಬರಿಗೆ ಬರುವ ಪದ್ಧತಿ ಬೆಳೆದುಬಂದಿದೆ. ಸಾಮ್ರಾಜ್ಯವು ವಂಶಪಾರಂಪರ್ಯವಾಗಿ ಬರುವ ಪದ್ಧತಿ ಒಂದು ಪರಂಪರೆಯಾಗಿ ಮುಂದುವರಿದುಕೊಂಡು ಬಂದಿತೆಂದು ಪುರಾಣಗಳಿಂದ ತಿಳಿದುಬರುತ್ತದೆ. ಇದೊಂದು ಸಂಪ್ರದಾಯಬದ್ಧ ಪದ್ಧತಿಯಾಯಿತು. ಮೌರ್ಯರ ಕಾಲದಲ್ಲಿ ಸ್ವಲ್ಪಮಟ್ಟಿಗೆ ಸಾಮ್ರಾಜ್ಯ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಯಿತು. ಮೌರ್ಯವಂಶದ ಮೂವರು ಭಾರತದ ಚಕ್ರವರ್ತಿಗಳಾಗಿದ್ದರು. ಸೇನಾಪತಿ ಪುಷ್ಯಮಿತ್ರ, ಸಾಮ್ರಾಟನೆಂಬ ಪದವಿಯನ್ನು ಅಂಗೀಕರಿಸಲಿಲ್ಲ. ಆದರೆ ಅಶ್ವಮೇಧವನ್ನು ನೆರವೇರಿಸುವ ಮೂಲಕ, ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದನು. ಇದನ್ನು ಕಾಳಿದಾಸನ ಮಾಲವಿಕಾಗ್ನಿಮಿತ್ರದಲ್ಲಿ ಕಾಣಬಹುದು. ಕ್ರಿ.ಶ. ೧೫೦ರಿಂದ ೩೫೫ರವರೆಗೆ ಸಾಮ್ರಾಜ್ಯ ಪರಂಪರೆ ಇಲ್ಲದೆ, ದೊಡ್ಡ ಅಂತರ ಉಂಟಾಗಿತ್ತು. ಈ ಅವಧಿಯ ನಂತರ, ಗುಪ್ತರು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದರು. ಅವರು ತಮ್ಮ ಸಾಮ್ರಾಜ್ಯದ ಸಾಧನೆಗಳನ್ನು ನಾಣ್ಯಗಳು, ಸ್ತಂಭಗಳು ಮತ್ತು ಸಾಹಿತ್ಯದ ಮೂಲಕ ಪ್ರಕಟಪಡಿಸಿದರು. ಆದರೆ ಭರಶೈವರು ಮತ್ತು ವಾಕಾಟಕರು, ಗುಪ್ತರಿಗಿಂತಲೂ ಹೆಚ್ಚಿನದನ್ನು ಸಾಧಿಸಿದರೆಂದು ಸಂಶೋಧನೆ ತೋರಿಸಿದೆ. ಇವರ ಸಾಧನೆ, ಇನ್ನೂ ಮಹತ್ವಪೂರ್ಣವಾಗಿತ್ತೆಂದು ಸಂಶೋಧನೆ ಸೂಚಿಸಿದೆ. ಇವರು ಸಾಮ್ರಾಟರೆಂಬ

ಗೌರವಕ್ಕೆ ಪಾತ್ರರಾಗಿದ್ದಷ್ಟೇ ಅಲ್ಲದೆ, ಅನೇಕ ಬಾರಿ ಅಶ್ವಮೇಧ ಯಾಗಗಳನ್ನು ನಡೆಸಿ ಇಡೀ ಉತ್ತರಭಾರತವನ್ನು ಒಂದು ಸಾಮ್ರಾಜ್ಯವಾಗಿ ಒಗ್ಗೂಡಿಸಿದರು. ಅವರು ತಾಮ್ರಫಲಕ ಶಾಸನವೊಂದರಲ್ಲಿ ಹೆಮ್ಮೆಯಿಂದ ಹೀಗೆ ಘೋಷಿಸಿದ್ದಾರೆ. "ಭರಶೈವರು ಸಾಮ್ರಾಜ್ಯದ ಪಟ್ಟವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಭಾಗೀರಥಿ ನದಿಯ ಪವಿತ್ರ ಜಲದ ಅಭಿಷೇಕ ಮಾಡಲಾಯಿತು. ಹತ್ತು ಅಶ್ವಮೇಧ ಯಾಗಗಳು ಪೂರ್ಣಗೊಂಡ ಬಳಿಕ, ಶೌರ್ಯದಿಂದ ಆ ಜಲವನನು ತರಲಾಯಿತು."

ಪರಾಕ್ರಮಾಧಿಗತ ಭಾಗಿರಥ್ಯಾವ ಲಜಲ ಮೂರ್ಧಾಭಿಷಿಕ್ತಾನಾಮ್
ದಶಾಶ್ವಮೇಧ ಅವಭೃತ ಸ್ನಾನಾನಾಮ್ ಭಾರಶಿವಾನಾಂ॥

(ಜಯಸ್ವಾಲ್, *ಹಿಸ್ಟರಿ ಆಫ್ ಇಂಡಿಯಾ*, ಪು.೭)

ಈ ಮಹಾನ್ ವಂಶದಿಂದ, ಸಾಮ್ರಾಜ್ಯ ಪರಂಪರೆಯನ್ನು ವಾಕಾಟಕರು ವಹಿಸಿಕೊಂಡರು. ಈ ವಂಶದ ಒಂದನೆಯ ಪ್ರವರಸೇನನು ನಾಲ್ಕು ಅಶ್ವಮೇಧ ಯಾಗಗಳನ್ನು ನೆರವೇರಿಸಿ, ಸಾಮ್ರಾಟ ಪದವಿಯನ್ನು ಪಡೆದುಕೊಂಡನು. ಈ ಸಾಮ್ರಾಟ ಸ್ಥಾನವನ್ನು ವಾಕಾಟಕರಿಂದ ಗುಪ್ತರು ಪಡೆದುಕೊಂಡರು. ಗುಪ್ತರ ಸ್ಥಾನವು ಸುಪರಿಚಿತವಾಗಿದೆ. ಭಾರತೀಯ ಇತಿಹಾಸದಲ್ಲಿ ಅವರು ಮಾನ್ಯತೆ ಪಡೆದಿದ್ದಾರೆ. ಇದನ್ನು ಆ ವಂಶದ ಸಾಧನೆಯೆಂದಷ್ಟೇ ಇತ್ತೀಚಿನವರೆಗೆ ಪರಿಗಣಿಸಲಾಗಿತ್ತು. ಈ ಸಾಮ್ರಾಟ ಪರಂಪರೆ, ಆ ವಂಶದೊಂದಿಗೆ ತನ್ನ ಅಂತ್ಯವನ್ನು ಕಂಡುಕೊಂಡಿತು. ಯಾವ ದೃಷ್ಟಿಯಿಂದಲೂ ಇದು ಸರಿಯಾದುದಲ್ಲವೆಂದು ಒತ್ತಿಹೇಳುವುದು ಅಗತ್ಯವಾಗಿದೆ. ಈ ಪರಂಪರೆ, ವಾಕಾಟಕರ ಮುಖಾಂತರ ಗುಪ್ತರಿಗೆ ರವಾನೆಯಾಯಿತು. ಸಮುದ್ರಗುಪ್ತನ ಸಂತತಿಯವರು ಅನೇಕ ಶತಮಾನಗಳ ಕಾಲ ಸಾಮ್ರಾಜ್ಯವನ್ನು ಆಳಿದರು. ಅನಂತರ ಆರ್ಯಾವರ್ತದಲ್ಲಿ ಅವರ ಆಳ್ವಿಕೆ ಕೊನೆಗೊಂಡಿತು. ಇದಾದ ಬಳಿಕ ಅಲ್ಲಿ ಅರಾಜಕತೆ ಉಂಟಾಯಿತು. ಇದರ ಪರಿಣಾಮವಾಗಿ, ಆರ್ಯಾವರ್ತ ವಿಭಜನೆಗೊಂಡು, ಉತ್ತರದಲ್ಲಿ ಶಿಲಾದಿತ್ಯ ವಂಶದ ಮತ್ತು ದಕ್ಷಿಣದಲ್ಲಿ ಚಾಲುಕ್ಯರ ಪಾಲಾಯಿತು. ವಿಂಧ್ಯಪ್ರದೇಶದಲ್ಲಿ, ಸಾಮ್ರಾಜ್ಯದ ಪ್ರಭುತ್ವವನ್ನು ಪುನಶ್ಚೇತನಗೊಂಡಿದ್ದ ವಾಕಟಕರಿಂದ, ಚಾಲುಕ್ಯರು ಪಡೆದುಕೊಂಡರು. ಒಂದನೆಯ ಪುಲಕೇಶಿ, ವಾತಾಪಿಯಲ್ಲಿ ಅಶ್ವಮೇಧಯಾಗವನ್ನು ನಡೆಸಿ, ಗೌರವವನ್ನು ಹೆಚ್ಚಿಸಿಕೊಂಡನು. ಏನೇ ಆದರೂ, ಅವರು ಈ ಪರಂಪರೆಯನ್ನು ಜೀವಂತವಾಗಿ ಇಟ್ಟಿದ್ದರು. ಅಶ್ವಮೇಧ ಯಾಗವನ್ನು ನೆರವೇರಿಸುವ ಮೂಲಕ, ಸಾಮ್ರಾಜ್ಯದ ಕೀರ್ತಿಯನ್ನು ಮುಂದುವರಿಸಿಕೊಂಡು ಹೋದರು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ವಿಷಯವಿದೆ. ಭಾರತದ ನ್ಯಾಯಸಮ್ಮತ ಮೂರ್ಧಾಭಿಷಿಕ್ತ ಚಕ್ರವರ್ತಿ ಎಂಬ ವಿಚಾರ, ಮುಸಲ್ಮಾನರ ದಾಳಿಯ ನಂತರ, ಯಾವ ರೀತಿಯಲ್ಲೂ,

ಅಂತ್ಯ ಕಾಣಲಿಲ್ಲ. ಏಕೆಂದರೆ ವಿಜಯನಗರದ ಚಕ್ರವರ್ತಿಗಳು ಈ ಪರಂಪರೆಯನ್ನು ಪೂರ್ಣವಾಗಿ ಉಳಿಸಿಕೊಂಡರು. ಚಾಲುಕ್ಯರೊಡನೆ ಅವರು ಸಂಬಂಧವನ್ನು ಇಟ್ಟುಕೊಂಡಿದ್ದರು. ಈ ಸಂಬಂಧಕ್ಕೆ ತುಂಬ ಮಹತ್ವ ಕೊಟ್ಟಿದ್ದರು. ಇದರಿಂದ ಪೌರಾಣಿಕ ಸಾಮ್ರಾಟರ ಶ್ರೇಣಿಗೆ ತಾವು ಸಹ ಬಂದರು. ಮಧುರದಲ್ಲಿರುವ ಮದನಗೋಪಾಲಸ್ವಾಮಿ ದೇವಾಲಯದಲ್ಲಿ, ವಿಜಯನಗರದ ಚಕ್ರವರ್ತಿಗಳನ್ನು ಸತ್ಯಾಶಯ ಕುಟುಂಬದಲ್ಲೇ 'ಅತ್ಯುತ್ಕೃಷ್ಟ'ರಾದವರೆಂದು ಮತ್ತು ಚಾಲುಕ್ಯರ 'ಮುತ್ತುರತ್ನ'ಗಳೆಂದು ವರ್ಣಿಸಲಾಗಿದೆ. ಚಾಲುಕ್ಯರು ಸಾಮ್ರಾಟ ಪರಂಪರೆಯೊಡನೆ ಹೊಂದಿದ್ದ ನಿಕಟ ಸಂಬಂಧವನ್ನು ಗುರುತಿಸಿದಾಗ, ರಾಜಧಾನಿಯ ಹೆಸರು ಹಂಪಿ–ಹಸ್ತಿನಾವತಿಯಾಗಿ ಏಕೆ ಮಾರ್ಪಟ್ಟಿತು ಎಂಬುದರ ಮಹತ್ವ ಅರಿವಾಗುತ್ತದೆ. ತತ್ತ್ವಶಃ ಹಸ್ತಿನಾವತಿ ಹಿಂದೂ ಭಾರತದ ನ್ಯಾಯಸಮ್ಮತ ರಾಜಧಾನಿಯಾಗಿತ್ತು. ಆ ಸಾಮ್ರಾಜ್ಯದ ಭವ್ಯತೆ ಮತ್ತು ಕೀರ್ತಿಗಳನ್ನು ಈ ಶಬ್ದಗಳಲ್ಲಿ ವರ್ಣಿಸಲಾಗಿತ್ತು: "ಸಿಂಹಾಸನವೇರಿ ರಾಜ್ಯವನ್ನಾಳುತ್ತಿದ್ದ ಸಾಮ್ರಾಟನ ಸಾಮ್ರಾಜ್ಯ ಸೇತುವಿನಿಂದ ಹಿಡಿದು ಸುಮೇರುವರೆಗೆ, ಪೂರ್ವದಲ್ಲಿ ಸೂರ್ಯೋದಯವಾಗುತ್ತಿದ್ದ ಬೆಟ್ಟದಿಂದ ಹಿಡಿದು ಪಶ್ಚಿಮದ ಪರ್ವತ ಶ್ರೇಣಿಯವರೆಗೆ ವಿಸ್ತರಿಸಿತ್ತು. ಈ ಸಾಮ್ರಾಟನ ಕೀರ್ತಿಯು ನೃಗ, ನಳ, ನಹುಷ ಮುಂತಾದವರ ಪ್ರಸಿದ್ಧಿ ಹಾಗೂ ಪ್ರಾಮಾಣಿಕೆಯನ್ನು ಸಹ ಮೀರಿಸುವಂತಿತ್ತು."

ಮುಸ್ಲಿಮರು ಉತ್ತರ ಭಾರತವನ್ನು ಆಕ್ರಮಿಸಿಕೊಂಡ ಬಳಿ, ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಎರಡು ಬಗೆಯ ಅಭಿಪ್ರಾಯಗಳಿದ್ದವು. ಮುಸ್ಲಿಮರು ಆಕ್ರಮಿಸಿಕೊಂಡ ಭಾಗವನ್ನು ದೆಹಲಿಯ ಸುಲ್ತಾನರು, ಭಾರತ ಸಾಮ್ರಾಜ್ಯವೆಂದು ಕರೆದುಕೊಂಡರು. ಇನ್ನೊಂದೆಡೆ ವಿಜಯನಗರದ ಚಕ್ರವರ್ತಿಗಳು, ಚಾಲುಕ್ಯರ ಪರಂಪರೆಯಿಂದ ಬಂದಿರುವ ತಾವು ಜಂಬೂದ್ವೀಪದ ನ್ಯಾಯಸಮ್ಮತ ಪ್ರಭುಗಳು, ತಮ್ಮ ರಾಜ್ಯ ಸೇತುವಿನಿಂದ ಸುಮೇರುವರೆಗೆ ವಿಸ್ತರಿಸಿದೆ. ಆದ್ದರಿಂದ ಉಳಿದ ಭಾಗವೆಲ್ಲಾ ಭಾರತವೇ ಆಗಿದೆ. ಆದ್ದರಿಂದ ತಮ್ಮ ರಾಜಧಾನಿಯನ್ನು ಹಂಪೆ–ಹಸ್ತಿನಾಪುರ ಎಂದು ಕರೆಯಲಾಗುತ್ತಿದೆ ಎಂದು ಹೇಳಿಕೊಂಡರು. ತಾಳಿಕೋಟೆ ಯುದ್ಧವಾದ ಬಳಿಕ, ಈ ಸಾಮ್ರಾಟ ಪರಂಪರೆ ಕೆಲವು ದಶಕಗಳವರೆಗೆ ವಿಜಯನಗರದ ಅರಸರಲ್ಲೇ ಉಳಿದಿತ್ತು. ಅನಂತರ ಅದನ್ನು ಶಿವಾಜಿಯು ತನ್ನ ವಶಕ್ಕೆ ತೆಗೆದುಕೊಂಡನು. ಅನಂತರ ಹೊಸ ಹಿಂದೂ ಸಾಮ್ರಾಜ್ಯವು ಭಾರತದ ಇತಿಹಾಸಪ್ರಸಿದ್ಧ ಮನೆತನಗಳೊಂದಿಗೆ ಸಂಬಂಧ ಪಡೆದಿದೆಯೆಂದು ಹೇಳಿಕೊಳ್ಳುವ ಪ್ರಯತ್ನ ನಡೆಯಿತು. ಶಿವಾಜಿಯು ತಾನು ಉದಯಪುರದ ಸಿಸೋದಿಯಾ ವಂಶಕ್ಕೆ ಸೇರಿದವನೆಂದು ಘೋಷಿಸಿಕೊಂಡನು. ಇದಕ್ಕಾಗಿ, ಅವನು ಒಂದು ಕೃತ್ರಿಮ ವಂಶಾವಳಿಯನ್ನು ಸೃಷ್ಟಿಸಿಕೊಂಡಿದ್ದಂತೆ ಕಾಣುತ್ತದೆ. ತಾನು ನ್ಯಾಯಸಮ್ಮತವಾಗಿ

ಹಿಂದೂ ಸಾಮ್ರಾಜ್ಯಕ್ಕೆ ಸೇರಿದವನೆಂದು ಶಿವಾಜಿ ಪ್ರತಿಪಾದಿಸಿಕೊಳ್ಳುತ್ತಿದ್ದನು. ಇತಿಹಾಸದುದ್ದಕ್ಕೂ ಇದ್ದ ಅನೇಕ ಸಾಮ್ರಾಜ್ಯಗಳೊಡನೆ ತನ್ನ ಸಾಮ್ರಾಜ್ಯದ ಸಂಬಂಧವಿತ್ತೆಂದು ಸಹ ಅವನು ಹೇಳಿಕೊಳ್ಳುತ್ತಿದ್ದನು. ಆದ್ದರಿಂದ ಶಿವಾಜಿಯು ವೇದೋಕ್ತ ವಿಧಿ–ವಿಧಾನಗಳಿಮದ ಸಿಂಹಾಸನಾಧೀಶನಾದನು. ಹಿಂದೂ ಸಂಪ್ರದಾಯಕ್ಕೆ ಅನುಗುಣವಾಗಿ ತಾನು ಮೂಧ್ರಾಭಿಷಿಕ್ತ ಚಕ್ರವರ್ತಿಯಾದುದಾಗಿ ಶಿವಾಜಿ ಸಾರಿಕೊಂಡನು.

ಸಾಮ್ರಾಜ್ಯಶಾಹಿತ್ವ ಬೆಳೆಯತೊಡಗಿತು. ಅದರ ಜೊತೆಯಲ್ಲೇ ಇನ್ನೊಂದು ಗಮನಾರ್ಹ ಪ್ರವೃತ್ತಿ ಕಂಡುಬಂದಿತು. ದೊರೆಗಳು ಮತ್ತು ಚಕ್ರವರ್ತಿಗಳು ತಮಗೆ ನಿರಂಕುಶಾಧಿಕಾರ ಇದೆಯೆಂದು ಹೇಳಿಕೊಳ್ಳತೊಡಗಿದರು. ಇದಕ್ಕಾಗಿ ಅವರು ಅಧಿಕಾರಸ್ಥಾನದ ಹೆಸರುಗಳನ್ನು ಸಹ ಬದಲಾಯಿಸಿಕೊಳ್ಳುತ್ತಿದ್ದುದು ಸಹ ಗಮನಾರ್ಹ. ನಮಗೆ ಲಭ್ಯವಿರುವ ಶಿಲಾಶಾಸನಗಳು ಮತ್ತು ಇತರ ದಾಖಲೆಗಳಿಂದ ನಮಗೆ ಇದು ತಿಳಿದುಬರುತ್ತದೆ.

ಸಮ್ರಾಟ ಮತ್ತು ಅಧಿಪತಿ ಎಂಬ ಶಬ್ದಗಳು ಧಾರ್ಮಿಕ ಗ್ರಂಥಗಳು ಮತ್ತು ಸಾಹಿತ್ಯದಲ್ಲಿ ಕಂಡುಬರುತ್ತವೆ. ಇವು ವರ್ಣನೆಗಾಗಿ ಬಳಸಿದ ಶಬ್ದಗಳಾಗಿವೆ. ಆದರೆ ಇಂತಹ ಶಬ್ದಗಳು, ರಾಜಕೀಯ ಮತ್ತು ಇತಿಹಾಸಕ್ಕೆ ಸಂಬಂಧಪಟ್ಟ ಸಾಹಿತ್ಯದಲ್ಲಿ, ಒಂದನೆಯ ಶತಮಾನಕ್ಕೆ ಮುಂಚೆ ಕಂಡುಬರುವುದಿಲ್ಲ. ಅಷ್ಟೇ ಅಲ್ಲದೆ, ಮುಂಚೆ ಆಳ್ವಿಕೆ ನಡೆಸಿದ ಎಷ್ಟೋ ರಾಜರುಗಳು ತಮ್ಮ ಭವ್ಯತೆಯನ್ನು ಮೆರೆದುಕೊಳ್ಳುವುದಕ್ಕೂ ಕೂಡಾ ಇಂತಹ ಶಬ್ದಗಳನ್ನು ಉಪಯೋಗಿಸಿಕೊಳ್ಳುತ್ತಿರಲಿಲ್ಲ. ಮಹಾಭಾರತದಲ್ಲಿ ರಾಜ ಮತ್ತು ಮಹಾರಾಜ ಎಂಬ ಶಬ್ದಗಳನ್ನು ಮಾತ್ರ ಬಳಸಲಾಗಿದೆ. ರಾಮಾಯಣದಲ್ಲೂ ಈ ಎರಡೇ ಶಬ್ದಗಳನ್ನು ಉಪಯೋಗಿಸಲಾಗಿದೆ. ಚಂದ್ರಗುಪ್ತನಾಗಲಿ ಅಥವಾ ಅಶೋಕನಾಗಲಿ, ರಾಜ ಮತ್ತು ಮಹಾರಾಜ ಇವೆರಡಕ್ಕೂ ಮಿಗಿಲಾದ ಯಾವುದೇ ಬಿರುದನ್ನೂ ಹೊಂದಿರಲಿಲ್ಲ. ಈಶಾನ್ಯ ಸರಹದ್ದಿನಲ್ಲಿ ವಿದೇಶೀ ಆಕ್ರಮಣ ನಡೆದ ನಂತರ, ವೈಭವೀಕರಿಸಿಕೊಳ್ಳುವ ಹೊಸ ವಿಚಾರಗಳು ಆರಂಭವಾದವು. ಕುಶಾನರು ಮತ್ತು ಶಾಕ್ಯರು, ಪರ್ಶಿಯನ್ ದೊರೆಗಳು ಮತ್ತು ಬ್ಯಾಕ್ಟ್ರಿಯನ್ ಗ್ರೀಕರು ಹೊಂದಿರುತ್ತಿದ್ದ ಅತ್ಯಾಡಂಬರದ 'ಬಿರುದುಗಳನ್ನು ಇಟ್ಟುಕೊಳ್ಳಲಾರಂಭಿಸಿದರು. ಕನಿಷ್ಕನು ತನ್ನ ತಾಮ್ರಫಲಕದ ಕೆತ್ತನೆಗಳಲ್ಲಿ, ತನ್ನನ್ನು ತಾನೇ "ಮಹಾರಾಜಸ್ಯ, ರಾಜಾಧಿರಾಜಸ್ಯ ದೇವಪುತ್ರಸ್ಯ" ಎಂದು ಕರೆದುಕೊಳ್ಳುವುದಕ್ಕೆ ಹಿಂಜರಿಯಲಿಲ್ಲ.

ಈ ಸರಳ ಹಿಂದೂ ಬಿರುದುಗಳು ಅತೀ ಶೀಘ್ರದಲ್ಲೇ ಮಾರ್ಪಾಡಾದವು. ಈ ವಿದೇಶೀ ರಾಜರುಗಳು 'ಶಹನ್ ಶಾ' ಮತ್ತು ದೇವಪುತ್ರ ಎಂಬಂತಹ ಪರಕೀಯ ಬಿರುದುಗಲನ್ನು ಇಟ್ಟುಕೊಂಡಿದ್ದರು. ಗುಪ್ತ ವಂಶದ ಚಕ್ರವರ್ತಿಗಳು

ಮಹಾರಾಜಾಧಿರಾಜ ಮತ್ತು ಪರಮೇಶ್ವರ ಎಂಬ ಬಿರುದು ಹೊತ್ತಿದ್ದರು. ಅಂದಿನಿಂದ ಅತಿ ಸಣ್ಣಪುಟ್ಟ ರಾಜರುಗಳು ಸಹ ಅತಿ ಸಂಭಾವಿತರಾಗಿದ್ದ ತಮ್ಮ ಆಸ್ಥಾನದ ಪಂಡಿತರುಗಳನ್ನು ಬಿರುದಿಗಾಗಿ ಹೊಸ ಹೊಸ ಶಬ್ದಗಳನ್ನು ಕಂಡುಹಿಡಿಯುವಂತೆ ಸದಾ ಒತ್ತಾಯಪಡಿಸುತ್ತಿದ್ದರು. ಇದರ ಪರಿಣಾಮವಾಗಿ, ಹತ್ತನೆಯ ಶತಮಾನದಲ್ಲಿ ಬಂಗಾಳದ ಸೇನವಂಶದ ದೊರೆಗಳ ಬಳಿ ಅತ್ಯಧಿಕ ಸಂಖ್ಯೆಯ ಬಿರುದುಗಳ ದಾಸ್ತಾನಿತ್ತು. ಈ ಬಿರುದುಗಳು ಈ ರೀತಿ ಇದ್ದವು:

"ಮಹಾರಾಜಾಧಿರಾಜ, ಪರಮೇಶ್ವರ, ಪರಮ ಮಹೇಶ್ವರ, ಪರಮ ಮಹಾರಕ, ಮುಖರಾಜಾಧಿರಾಜ, ಶ್ರೀಮದ್ ವಿಜಯಸೇನದೇವ"
(ವಿಜಯಸೇನನ ಬ್ಯಾರಕ್‌ಪುರ ತಾಮ್ರ ಫಲಕ)

ಸಯಾಮ್‌ನ ದೊರೆ, ತಾನೇ ಹೊಂದಿದ್ದ ಬಿರುದಿನ ವೈಖರಿಯೊಂದಿಗೆ ಇದನ್ನು ಹೋಲಿಸಿ ನೋಡಬಹುದು:

'ಪರಮ ರಾಜಾಧಿರಾಜರಮಾಧಿಪತಿ ಶ್ರೀ ಶ್ಯಂಥ ಪರಮ ಮಹಾ ಚಕ್ರವರ್ತಿ ರಾಜಾಧಿರಾಜಾಧಿಪತೀಂದ್ರ ಧರಣೀಂದ್ರಧಿರಾಜ ಸಕಲ ಚಕ್ರಬಲಾಧಿಪೇಂದ್ರ' ಇತ್ಯಾದಿ.

ಬಿರುದುಗಳಲ್ಲಾದ ಈ ಬದಲಾವಣೆ ಬರೀ ಆಡಂಬರ ಪ್ರದರ್ಶನವಾಗಿತ್ತೇ ವಿನಃ, ಇದು ಯಾರನ್ನೂ ಅಪಮಾನಗೊಳಿಸುವ ಉದ್ದೇಶ ಹೊಂದಿರಲಿಲ್ಲವೆಂದು ವಾದಿಸಬಹುದು. ಬಿರುದುಗಳಲ್ಲಿ ಉಂಟಾದ ಮಾರ್ಪಾಟು, ಎಷ್ಟರ ಮಟ್ಟಿನ ಮಾನಸಿಕ ಪರಿವರ್ತನೆಯನ್ನು ತರುತ್ತದೆ ಎಂಬುದು ಮುಖ್ಯ. ಗುಪ್ತವಂಶದ ರಾಜರುಗಳು ಮಹಾರಾಜಾಧಿರಾಜ, ಮಹೇಶ್ವರ ಮತ್ತು ಪರಮೇಶ್ವರ ಎಂಬ ಬಿರುದುಗಳನ್ನು ಇಟ್ಟುಕೊಂಡಿದ್ದರು. ಇದು ಚಕ್ರವರ್ತಿಗಳಾಗಿ ತಮಗಿದ್ದ ಸರ್ವೋಚ್ಚ ಅಧಿಕಾರವನ್ನು ಅದು ಪ್ರತಿಬಿಂಬಿಸುತ್ತಿತ್ತು. ಈ ಭೂಮಿಯ ಸಂರಕ್ಷಕರಾಗಿ, ಅವರ ಸಾಧನೆಗಳನ್ನು ಈ ಬಿರುದುಗಳು ಒತ್ತಿ ಹೇಳುತ್ತಿದ್ದವು. ವಿದೇಶೀಯರ ಆಕ್ರಮಣದಿಂದ ತಮ್ಮ ನಾಡನ್ನು ರಕ್ಷಿಸುವ ಒಬ್ಬ ರಾಜನು ತನ್ನ ಹಿಂದಿದ್ದ ಎಲ್ಲ ರಾಜರುಗಳಿಗಿಂತ ಹೆಚ್ಚು ಅಧಿಕಾರವನ್ನು ಚಲಾಯಿಸುತ್ತಿದ್ದನೆಂಬುದು ಇತಿಹಾಸದಲ್ಲಿ ದೃಢಪಟ್ಟಿದೆ. ಆದರೆ ಗುಪ್ತವಂಶದ ರಾಜರುಗಳು ಅನುಸರಿಸುತ್ತಿದ್ದ ಕೆಲವು ವಿಧಾನಗಳೇ ಬೇರೆಯಾಗಿದ್ದವು. ಅವರು ಸಂಪ್ರದಾಯಗಳನ್ನು ಎತ್ತಿಹಿಡಿದರು. ಅವುಗಳನ್ನು ಪಾಲಿಸಿಕೊಂಡು ಬಂದರು. ಅವನ್ನು ಉಳಿಸುವುದಕ್ಕಾಗಿ ಶ್ರಮಿಸಿದರು. ಅಷ್ಟೇ ಅಲ್ಲ, ಅವರು ಪುನರುಜ್ಜೀವಿತ ಭಾರತದ ವಿಜಯಶಾಲಿ ಮುಖಂಡರೂ ಆಗಿದ್ದರು. ಆದರೆ, ಸಮುದ್ರಗುಪ್ತ, ಎರಡನೆಯ ಚಂದ್ರಗುಪ್ತ ಮತ್ತು ಸ್ಕಂದಗುಪ್ತ ಇವರುಗಳ ಪ್ರಭುತ್ವದಲ್ಲಿ, ರಾಜರುಗಳ ಬಗ್ಗೆ ಹಿಂದೂ ಸಂಪ್ರದಾಯದಲ್ಲಿದ್ದ ಕೆಲವು ರೀತಿ–ನೀತಿಗಳು ಬದಲಾದವು. ಅವರು ಸಂಪ್ರದಾಯಗಳಿಂದ ವಿಚಲಿತರಾದರು. ಈ

ರಾಜರುಗಳು ಇಟ್ಟುಕೊಂಡಿದ್ದ ಬಿರುದುಗಳೇ, ಈ ಬದಲಾವಣೆಯನ್ನು ತೋರಿಸುತ್ತವೆ. ಅವರಾದ ನಂತರ, ಥಾನೇಶ್ವರ ವಂಶದವರು ಆಧಿಪತ್ಯವನ್ನು ವಹಿಸಿಕೊಂಡರು. ಅವರುಗಳು ಸಹ ಇಂತಹುದೇ ಉನ್ನತಮಟ್ಟದ ಬಿರುದುಗಳನ್ನು ಹೊಂದಿದ್ದರು. ಹೂಣರನ್ನು ತಾವು ದೇಶದಿಂದ ಹೊರಗಟ್ಟಿದ ಕಾರಣವನ್ನು ನೀಡಿ, ಅವರು ಈ ಬಿರುದನ್ನು ಇಟ್ಟುಕೊಂಡರು. ಮಧುವನದಲ್ಲಿದ್ದ ಶ್ರೀ ಹರ್ಷನ ತಾಮ್ರಫಲಕದ ಕೆತ್ತನೆಯಲ್ಲಿ ಈ ವಿಷಯ ಬೆಳಕಿಗೆ ಬಂದಿದೆ. ಚಾಲುಕ್ಯರು ಅದರಲ್ಲೂ ವಿಶೇಷವಾಗಿ ಎರಡನೆಯ ಪುಲಕೇಶಿ, ಹರ್ಷನ ಮೇಲೆ ಜಯ ಗಳಿಸಿದವನು. "ಹರ್ಷ ವಿಚ್ಛೇದ ಹೇತು"ವಾದನು. ಅವನೂ ಬಿರುದುಗಳ ವಿಷಯದಲ್ಲಿ ಹಿಂದೆ ಬೀಳಲಿಲ್ಲ. ಚಾಲುಕ್ಯರಿಂದ ಈ ಚಕ್ರಾಧಿಪತ್ಯದ ಬಿರುದುಗಳು ವಿಜಯನಗರದ ಮನೆತನಕ್ಕೆ ರವಾನೆಯಾದವು.

ರಾಜರಿಗೆ ಸಂಬಂಧಿಸಿದಂತೆ ಮುಂಚೆ ಸಂಪ್ರದಾಯಗಳು ತುಂಬ ಕಟ್ಟುನಿಟ್ಟಾಗಿರಲಿಲ್ಲ. ಅವು ಬಹಳ ಸಡಿಲವಾಗಿದವು. ಕಾಲಾನಂತರದಲ್ಲಿ ಈ ಸಂಪ್ರದಾಯಗಳನ್ನು ಕಠಿಣಗೊಳಿಸಲಾಯಿತು. ಹೀಗಾಗಿದ್ದಕ್ಕೆ ಕಾರಣವೇನು ಎಂಬುದನ್ನು ನಾವು ಈಗ ಪರಿಶೀಲಿಸಬಹುದು. ಆರ್ಯಾವರ್ತದಲ್ಲಿ ಮುಸ್ಲಿಮರ ಆಳ್ವಿಕೆ ಸ್ಥಾಪಿತವಾದನಂತರ, ಸಂಪ್ರದಾಯಬದ್ಧವಾಗಿದ್ದ, ಹಿಂದೂ ರಾಜ್ಯಗಳಿಗೆ, ಎರಡು ಉದಾಹರಣೆಗಳೆಂದರೆ ವಿಜಯನಗರ ಮತ್ತು ಮರಾಠ ರಾಜ್ಯಗಳು. ಈ ಎರಡೂ ರಾಜ್ಯಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ರಾಷ್ಟ್ರರಕ್ಷಣೆಯ ಮಹದುದ್ದೇಶವೇ ಆಧಾರವಾಗಿತ್ತು. ಹಿಂದೂ ಧರ್ಮವನ್ನು ಸಂರಕ್ಷಿಸುವ ಮೂಲ ಉದ್ದೇಶದಿಂದ ರಾಜ್ಯವನ್ನು ಸಂಘಟಿಸಲಾಯಿತು. ಅದರ ಸರ್ವೋಚ್ಚ ಪ್ರಾಧಿಕಾರವನ್ನು ಪ್ರತಿಷ್ಠಾಪಿಸಲಾಯಿತು. ಒಂದು ಸಮಾಜದ ರಕ್ಷಣೆ ಅಥವಾ ಉಳಿವಿನ ಪ್ರಶ್ನೆ ಬಂದಾಗ, ಪರಂಪರಾಗತವಾಗಿ ತನಗೆ ಬಂದಿರುವ ಎಲ್ಲ ಒಳ್ಳೆಯ ಮತ್ತು ಕೆಟ್ಟ ಅಂಶಗಳನ್ನು ಬಿಗಿಯಾಗಿ ಹಿಡಿದಿಟ್ಟುಕೊಳ್ಳಲು ಸಮಾಜ ಪ್ರಯತ್ನಿಸುತ್ತದೆ. ಇದು ರಾಷ್ಟ್ರವೊಂದರ ಮನೋವೈಜ್ಞಾನಿಕ ಪ್ರವೃತ್ತಿ.

ಹಿಂದಿನಿಂದ ಬಂದಿರುವುದೆಲ್ಲವನ್ನೂ ಉಳಿಸಿಕೊಳ್ಳುವುದು ಒಂದು ರಾಷ್ಟ್ರೀಯ ಗುಣವಾಗುತ್ತದೆ. ಇದೊಂದು ರಾಷ್ಟ್ರದ ಘನತೆ–ಗೌರವಗಳ ಅಂಶವಾಗುತ್ತದೆ. ಇದು ಸುಧಾರಣೆಗಳಿಗೆ ಕಾಲವಲ್ಲ. ಈಗಿರುವುದನ್ನು ರಕ್ಷಿಸಿಕೊಂಡು ಬರುವುದು ರಾಜ್ಯದ ಕರ್ತವ್ಯ ಎಂಬುದು ಆಗಿನ ಧೋರಣೆಯಾಗಿತ್ತು. ಆದ್ದರಿಂದ ರಾಜರುಗಳ ಸಂಪ್ರದಾಯಬದ್ಧತೆ ರಾಜ್ಯದ ಮುಖ್ಯ ಲಕ್ಷಣವಾಯಿತು. ವಿಜಯನಗರ ಮತ್ತು ಮರಾಠ ಸಾಮ್ರಾಜ್ಯಗಳು ಹಾಗೂ ಉದಯಪುರ, ಮಹಮ್ಮದೀಯರ ಪ್ರಭಾವಕ್ಕೊಳಗಾಗದೆ, ಅವರ ವಿರುದ್ಧ ಸೆಟೆದು ನಿಂತವು. ಮುಘಲರನ್ನು ಬಲವಾಗಿ ಪ್ರತಿರೋಧಿಸಿದವು. ಈ ರಾಜ್ಯಗಳು ಸಂಪ್ರದಾಯ ಸಂರಕ್ಷಣೆಯ ಭದ್ರಕೋಟೆಗಳಾದವು.

ಸ್ವತಂತ್ರ ಭಾರತದಲ್ಲಿ ಕೆಲವೊಂದು ಪದ್ಧತಿಗಳಿಗೆ ಸಾರ್ವತ್ರಿಕ ಒಪ್ಪಿಗೆ ಇರಲಿಲ್ಲ. ಅಂತಹ ಪದ್ಧತಿಗಳನ್ನು ಬದಲಾಗದಂತಹ ಕಟ್ಟಾ ಸಂಪ್ರದಾಯವೆಂದು ಪರಿಗಣಿಸಲಾಯಿತು.

ಬ್ರಿಟಿಷರ ಕಾಲದಲ್ಲಿ, ರಾಜರುಗಳ ಬಗ್ಗೆ ಹಿಂದೂಗಳಿಗಿದ್ದ ವಿಚಾರ ಬದಲಾಯಿತು. ಈ ಬದಲಾವಣೆ ಉಂಟಾದ ಬಗೆ ತುಂಬ ಕುತೂಹಲಕಾರಿ. ರಾಜ್ಯವು ಸರ್ವಶಕ್ತ ಎಂಬ ಯೂರೋಪಿಯನ್ನರ ಸಿದ್ಧಾಂತವನ್ನು ಬ್ರಿಟಿಷರು ಅಂಗೀಕರಿಸಿದರು. ರಾಜ್ಯವು ಸರ್ವೋಚ್ಚ ಶಕ್ತಿ ಹೊಂದಿದೆಯೆಂಬ ಭಾವನೆಯನ್ನು ಬ್ರಿಟಿಷರಿಂದ ಪಡೆದ ಭಾರತೀಯ ರಾಜರುಗಳು, ತಾವು ನಿರಂಕುಶ ಪ್ರಭುಗಳೆಂದು ಭಾವಿಸತೊಡಗಿದರು. ಇದು, ಹಿಂದೂಗಳ ವಿಚಾರಕ್ಕೆ ಸಂಪೂರ್ಣ ವಿರುದ್ಧವಾದುದಾಗಿತ್ತು. ಈ ಅವಧಿಯಲ್ಲಿ ಭಾರತೀಯ ರಾಜರುಗಳು, ಶಾಸನವನ್ನು ಮಾಡುವ ಸಂಪೂರ್ಣ ಅಧಿಕಾರವನ್ನು ಚಲಾಯಿಸತೊಡಗಿದರು. (ಬ್ರಿಟೀಷ್ ಸರ್ಕಾರದ ಸರ್ವೋನ್ನತ ಅಧಿಕಾರಕ್ಕೆ ಒಳಪಟ್ಟಂತೆ) ರಾಜರುಗಳು ನ್ಯಾಯ ಮತ್ತು ಕಾನೂನಿನ ಮೂಲಬಿಂದುವಿನಂತಾದರು. ರಾಜರು, ನೀತಿಶಾಸ್ತ್ರದಲ್ಲಿ ಹೇಳಿರುವಂತಹ ಅಧಿಕಾರವನ್ನು ಪಡೆದುಕೊಂಡಿದ್ದಲ್ಲದೆ, ಯೂರೋಪ್‌ನಲ್ಲಿ ಪಾಶ್ಚಾತ್ಯ ನ್ಯಾಯ ಪಾರಂಗತರು ರೂಪಿಸಿದ್ದಂತಹ ಅಧಿಕಾರಗಳನ್ನು ಸಹ ತಮ್ಮದಾಗಿಸಿಕೊಂಡರು. ಇದು, ಪೌರ್ವಾತ್ಯ ಮತ್ತು ಪಾಶ್ಚಾತ್ಯ ನಿರಂಕುಶಾಧಿಕಾರಗಳ ವಿಚಿತ್ರ ಮಿಶ್ರಣವಾಗಿತ್ತು. ರಾಜರು ಧಾರ್ಮಿಕ ವಿಷಯಗಳಲ್ಲೂ, ಐರೋಪ್ಯ ಮಾದರಿಯ ಶಾಸನಗಳನ್ನು ಜಾರಿಗೆ ತಂದರು. ಸಾಮಾಜಿಕ ಕಾನೂನು ಮತ್ತು ನಿಯಮಗಳನ್ನು ಸಹ ಐರೋಪ್ಯರ ಮಾದರಿಗನುಗುಣವಾಗಿ ಬದಲಾಯಿಸಿದರು. ಬ್ರಿಟಿಷರ ಕಾಲದಲ್ಲಿ ಭಾರತೀಯ ರಾಜರುಗಳು, ವ್ಯಾಪಕವಾದ ಪರಮಾಧಿಕಾರವನ್ನು ಪಡೆದಿದ್ದರು. ಗುಪ್ತರ ಮತ್ತು ವಿಜಯನಗರದ ಅರಸರು ಸಹ ಇಷ್ಟೊಂದು ಅಧಿಕಾರವನ್ನು ಹೊಂದಿರಲಿಲ್ಲ. ಆದರೆ ಭಾರತೀಯ ರಾಜರು, ಬ್ರಿಟಿಷ್ ಪ್ರಭುಗಳ ಸರ್ವೋಚ್ಚತೆಗೆ ಭಂಗವುಂಟಾಗದಂತಹ ರೀತಿಯಲ್ಲಿ ಅಧಿಕಾರ ಚಲಾಯಿಸಬಹುದಾಗಿತ್ತು. ಅಷ್ಟೇ ಅಲ್ಲದೆ, ಈ ಅಧಿಕಾರ ದೆಹಲಿಯಲ್ಲಿದ್ದ ಸರ್ಕಾರದ ಅಭಿಪ್ರಾಯಗಳು ಮತ್ತು ಧೋರಣೆಗಳಿಗೆ ಅನುಗುಣವಾಗಿರಬೇಕಾಗಿರುತ್ತಿತ್ತು. ಭಾರತದ ರಾಜರು, ಪಾಶ್ಚಾತ್ಯ ರಾಜಕೀಯ ಸಿದ್ಧಾಂತವನ್ನು ಚೆನ್ನಾಗಿ ಅರಿತುಕೊಂಡರು. ಸರ್ಕಾರದ ಬಗ್ಗೆ ಬ್ರಿಟಿಷರಿಗಿದ್ದ ವಿಚಾರಧಾರೆಯಿಂದ ಅವರು ಪ್ರಭಾವಿತರಾಗಿದ್ದರು. ಆದ್ದರಿಂದ ಅವರು, ತಮ್ಮ ಅಧಿಕಾರವನ್ನು ವಿಸ್ತೃತಗೊಳಿಸಿಕೊಂಡು, ಮತ್ತಷ್ಟು ಬಲಾಢ್ಯವಾಗಬೇಕಿತ್ತು. ಅಷ್ಟೇ ಅಲ್ಲದೆ, ಅವರು ತಮ್ಮ ರಾಜ್ಯಗಳನ್ನು ಹಿಂದೆಂದೂ ಕಂಡರಿಯದಂತಹ ನಿರಂಕುಶ ಪ್ರಭುತ್ವವುಳ್ಳ ರಾಜ್ಯಗಳಾಗಿ ಪರಿವರ್ತಿಸಿಕೊಳ್ಳಬೇಕಾಗಿತ್ತು. ಆದರೆ ಹಾಗೆ ಆಗದಿದ್ದುದು ಒಂದು ವ್ಯತಿಕ್ರಮ. ಇದನ್ನು ತುಂಬ ನಿಕಟವಾಗಿ ಪರೀಕ್ಷಿಸಿದಾಗ

ಇಂತಹ ಒಂದು ಫಲಿತಾಂಶ ಅನಿವಾರ್ಯವಾಗಿತ್ತೆಂದು ಕಂಡುಬರುತ್ತದೆ. ನಾವು ಮುಂಚೆಯೇ ಸೂಚಿಸಿದಂತೆ, ಪಾಶ್ಚಾತ್ಯರ ಭಾವನೆಯಲ್ಲಿ ರಾಜ್ಯಕ್ಕೆ ಸಂಬಂದಿಸಿದಂತೆ ಯಾವುದೇ ಪರಿಮಿತಿಗಳಿರುವುದಿಲ್ಲ. ಐರೋಪ್ಯರ ಸಿದ್ಧಾಂತದಲ್ಲಿ ಆಜ್ಞಾಪಾಲನೆಯಲ್ಲಿ ಎರಡು ಅಭಿಪ್ರಾಯ ಅಥವಾ ವಿಭಿನ್ನತೆ ಇರುವ ಪ್ರಶ್ನೆಯೇ ಇಲ್ಲ. ಯೂರೋಪ್‌ನ ರಾಜ್ಯವೊಂದರಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ನಂತೆ ಪಾರ್ಲಿಮೆಂಟರಿ ವ್ಯವಸ್ಥೆಯೇ ಆಗಿರಬಹುದು ಅಥವಾ ಕಮ್ಯೂನಿಸ್ಟ್ ರಾಜ್ಯಗಳಲ್ಲಿರುವಂತೆ ಏಕಚಕ್ರಾಧಿಪತ್ಯವಾಗಿರ ಬಹುದು, ಕಾನೂನು ವಿಷಯದಲ್ಲಿ ಅದು ಸರ್ವಶಕ್ತವಾಗಿರುತ್ತದೆ. ಇಂಗ್ಲೆಂಡ್ ಮತ್ತು ಇತರ ಪ್ರಜಾಸತ್ತಾತ್ಮಕ ದೇಶಗಳಲ್ಲಿ ರಾಜಿ ಪ್ರಯತ್ನಗಳ ಮೂಲಕ ಜನರು ಮೂಲಭೂತ ಹಕ್ಕುಗಳನ್ನು ಪಡೆಯಬಹುದು. ಆದರೆ ಆ ಹಕ್ಕುಗಳು ಸಾಂಸ್ಥಿಕವಾಗಿರುತ್ತವೆ. ಆದ್ದರಿಂದ ಅವು ರಾಜ್ಯದ ಸಂಪೂರ್ಣ ಅಧಿಕಾರಕ್ಕೆ ಅಧೀನವಾಗಿರಬೇಕಾಗುತ್ತದೆ.

ರಾಜರುಗಳು ದೈವಿಕ ಹಕ್ಕು, ಈಗ ಎಲ್ಲೂ ನ್ಯಾಯಸಮ್ಮತವಾಗಿರುವುದಿಲ್ಲ. ಅದು ಸಮರ್ಥನೆಯನ್ನು ಕಳೆದುಕೊಂಡಿದೆ. ಆದರೆ ರಾಜ್ಯಗಳ ದೈವಿಕ ಹಕ್ಕು ಒಂದು ತತ್ತ್ವಜ್ಞಾನದ ವಿಷಯವಾಗಿದೆ. ಆದ್ದರಿಂದ ಅದನ್ನು ಯಾರೂ ಪ್ರಶ್ನಿಸುವುದಿಲ್ಲ. ದೈವಿಕ ಹಕ್ಕಿನ ಈ ಭಾವನೆ ಬಹಳ ಪ್ರಾಚೀನವಾದುದು. ಈ ಭಾವನೆ ಅರಿಸ್ಟಾಟಲ್‌ನ ಕಾಲದಿಂದಲೂ ಸಾಗಿಬಂದಿದೆ. ರಾಜ್ಯವು ಒಂದು ಸಹಜ ವ್ಯವಸ್ಥೆ. ಈ ರಾಜ್ಯದ ಮೂಲಕ, ತನ್ನ ಎಲ್ಲ ಆಸೆ–ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಬಹುದೆಂಬುದನ್ನು ಮಾನವ ಕಂಡುಕೊಂಡನು ಎಂದು ಅರಿಸ್ಟಾಟಲ್ ಹೇಳಿದ್ದನು. ರಾಜ್ಯವು ಎಲ್ಲ ಅಧಿಕಾರಗಳ ಒಂದು ಸಂಕೀರ್ಣ ಮತ್ತು ಆಗರ. ಆದ್ದರಿಂದ ತನ್ನ ಎಲ್ಲ ಆದೇಶಗಳನ್ನು ಜನತೆ ಪಾಲಿಸುವಂತೆ ಮಾಡುವ ಅಧಿಕಾರ ರಾಜ್ಯಕ್ಕಿದೆ ಎಂಬ ಐರೋಪ್ಯರ ಚಿಂತನೆಗೆ ಹೆಗೆಲ್ ಮತ್ತು ರೂಸ್ಸೊ ಅವರ ತತ್ತ್ವದಿಂದ ಮತ್ತು ಆಸ್ಟಿನ್‌ನ ನ್ಯಾಯವಾದದಿಂದ, ತುಂಬ ಬೆಂಬಲ ಹಾಗೂ ಸಮರ್ಥನೆ ದೊರೆತಿದೆ.

ಜನರ ಸ್ವಾತಂತ್ರ್ಯ ಸಂಸ್ಥೆಯ ಮೇಲೆ ಆಧಾರಿತವಾಗಿದೆಯೇ ಹೊರತು, ರಾಜ್ಯದಿಂದಲೇ ನೇರವಾಗಿ ದೊರೆಯುತ್ತದೆ ಎಂಬ ಭಾವನೆಯ ಆಧಾರದ ಮೇಲಲ್ಲ. ಸಂಸ್ಥೆಗಳಿಲ್ಲದೆ ಸ್ವಾತಂತ್ರ್ಯಸಂರಕ್ಷಣೆ ಸಾಧ್ಯವಿಲ್ಲವೆಂಬ ಯೂರೋಪಿಯನ್ನರ ವಿಚಾರಗಳು ಭಾರತಕ್ಕೆ ಬಂದಿದ್ದವು. ಇವೆಲ್ಲವುಗಳ ಪರಿಣಾಮವಾಗಿ, ಭಾರತದಲ್ಲಿ ಉಳಿದುಕೊಂಡಿದ್ದ ರಾಜರುಗಳು ನಿರಂಕುಶ ಪ್ರಭುಗಳಾಗಿ ಮಾರ್ಪಾಟಾದರು. ಈ ಸಂದರ್ಭದಲ್ಲಿ ಅವರು ತಮಗೆ ಧರ್ಮ ವಿಧಿಸಿದ್ದ ಪ್ರತಿಬಂಧಕಗಳನ್ನು ಸಹ ಗಣನೆಗೆ ತಂದುಕೊಳ್ಳಲಿಲ್ಲ.

* * * *

ಉಪಸಂಹಾರ

ಭಾರತದ ರಾಜಕೀಯ ವಿಚಾರಧರೆ ಇಂದು ಎಷ್ಟರಮಟ್ಟಿಗೆ ಮಹತ್ವ ಪಡೆದಿದೆ? ಅದು ರಾಜಕೀಯ ಜೀವನ ಮತ್ತು ಚಿಂತನೆಯ ಮೇಲೆ ಯಾವುದಾದರೂ ಪ್ರಭಾವ ಬೀರಿದೆಯೆ? ಭಾರತೀಯ ಸಮಾಜವನ್ನು ವ್ಯವಸ್ಥಿತಗೊಳಿಸುವುದರಲ್ಲಿ ಅದರಿಂದ ಮಹತ್ವದ ಕೊಡುಗೆಯೇನಾದರೂ ಇದೆಯೇ? ಸಮುದಾಯ ಜೀವನದ ಆದರ್ಶಗಳಿಗೆ ಅಥವಾ ರಾಜಕೀಯ ಕಾರ್ಯಾಚರಣೆಗೆ ಅದರ ಕೊಡುಗೆ ಇದೆಯೇ? ನೇರವಾಗಿ ಹೇಳುವುದಾದರೆ, ಇದಕ್ಕೆ ಉತ್ತರ ನಕಾರಾತ್ಮಕವಾಗಿರುತ್ತದೆ, ನಿಜ. ಏಳು ಪ್ರಕೃತಿಗಳ ಪ್ರಾಚೀನ ಸಿದ್ಧಾಂತ ಅಥವಾ ರಾಜ್ಯದ ಪ್ರಕಾರಗಳು ಮತ್ತು ಪರಿಪಾಲನೆ ಅಥವಾ ಸಂರಕ್ಷಣೆ, ಹೊರಗಿನಿಂದ ಅಥವ ಒಳಗಿನಿಂದ ರಾಜ್ಯದ ರಕ್ಷಣೆ ಇವೆಲ್ಲವೂ ಹಿಂದೆ ಎಷ್ಟು ಮಹತ್ವ ಪಡೆದಿದ್ದವೋ, ಅಷ್ಟೇ ಮಹತ್ವವನ್ನು ಇಂದಿಗೂ ಪಡೆದಿವೆ. ಭಾರತದಲ್ಲಿ ಇಂದು ಇರುವ ಹೊಸ ರಾಜ್ಯವು, ಈ ಎಲ್ಲ ಅಂಶಗಳಲ್ಲೂ ಭೀಷ್ಮ, ಕೌಟಿಲ್ಯ ಮತ್ತು ಶುಕ್ರ ಇವರ ಸಿದ್ಧಾಂತಗಳ ಆಧಾರದ ಮೇಲೆ ನಿಂತಿಲ್ಲ. ಇವಕ್ಕಿಂತಲೂ ಹೆಚ್ಚಾಗಿ, ಹಿಂದೂ ಕಾನೂನು ಮತ್ತು ನಿಯಮಗಳನ್ನು ಮನು, ಯಾಜ್ಞವಲ್ಕ್ಯ ಮತ್ತು ನಾರದ – ಇವರ ಸಿದ್ಧಾಂತಗಳ ಆಧಾರದ ಮೇಲೆ ರೂಪಿಸಲಾಗಿದೆ. ಅನಂತರ ಬಂದ ವಿಜಯನಗರ ಸಾಮ್ರಾಜ್ಯ ಮತ್ತು ಮರಾಠ ರಾಜ್ಯದಂತಹ, ಸಾಮ್ರಾಜ್ಯಗಳು ಸಂಪೂರ್ಣವಾಗಿ ಭಾರತೀಯ ಸ್ವರೂಪದ್ದಾಗಿದ್ದವು. ಹಿಂದೂ ಸಿದ್ಧಾಂತಗಳ ಆಧಾರದ ಮೇಲೆ ಈ ಸಾಮ್ರಾಜ್ಯಗಳು ಸ್ಥಾಪನೆಗೊಂಡಿದ್ದವು. ಅವು ಮುಸ್ಲಿಮ್ ರಾಜಕೀಯ ಪದ್ಧತಿಯಿಂದ ಸ್ವಲ್ಪಮಟ್ಟಿಗೆ ಪರಿಷ್ಕೃತಗೊಂಡಿದ್ದವು. ಭಾರತದ ಹೊಸ ಗಣರಾಜ್ಯವು, ಪಾಶ್ಚಾತ್ಯ ರಾಷ್ಟ್ರಗಳ ರಾಜಕೀಯ ಚಿಂತನೆ ಮತ್ತು ಅನುಭವದಿಂದ ತನ್ನ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ನಮ್ಮ ಫೆಡರಲ್ ರಚನೆ, ಪಾರ್ಲಿಮೆಂಟರಿ ಸ್ವರೂಪ, ಕ್ಯಾಬಿನೆಟ್ ಪದ್ಧತಿ, ಮೂಲಭೂತ ಹಕ್ಕುಗಳು, ಸಾಂವಿಧಾನಿಕ ನ್ಯಾಯಬದ್ಧತೆಯನ್ನು ನಿರ್ಧರಿಸಲು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ, ಅಷ್ಟೇ ಅಲ್ಲ, ನಮ್ಮ ರಾಜಕೀಯ ಜೀವನದ ಎಲ್ಲ ಪ್ರಮುಖ ಅಂಶಗಳನ್ನು ನಾವು ಪಾಶ್ಚಾತ್ಯ ದೇಶಗಳಿಂದ ಪಡೆದುಕೊಂಡಿದ್ದೇವೆ. ಆಧುನಿಕ ಭಾರತವು, ಮನು, ಯಾಜ್ಞವಲ್ಕ್ಯ ಮತ್ತು ಇತರ ಧರ್ಮಶಾಸ್ತ್ರ ಬರಹಗಾರರನ್ನು ಅಸ್ತಿತ್ವದಿಂದಲೇ ಹೊರಹಾಕಿ, ಹಿಂದೂಗಳಿಗೆ ಒಂದು ಹೊಸ ಕಾನೂನು ವ್ಯವಸ್ಥೆಯನ್ನು ಒದಗಿಸಿದಲ್ಲಿ, ರಾಜನು 'ಕಾಲಸ್ಯ ಕಾರಣಮ್' ಎಂಬ ಸಿದ್ಧಾಂತದ ಆಧಾರದಮೇಲೆ

ಅಥವಾ ರಾಜನೇ ಯುಗದ ಸೃಷ್ಟಿಕರ್ತನೆಂಬ ಕಾರಣದ ಮೇಲೆ ಅದನ್ನು ಸಮರ್ಥಿಸಿಕೊಳ್ಳಬೇಕಾಗಿಲ್ಲ. ಭಾರತದ ಇಂದಿನ ರಾಜಕೀಯ ಜೀವನದಲ್ಲಿ, ಇಂತಹ ಕ್ರಾಂತಿಕಾರಿ ಶಾಸನಕ್ಕೆ ಯಾವುದೇ ಸಮರ್ಥನೆಯೂ ಬೇಕಾಗಿಲ್ಲ. ಏಕೆಂದರೆ ನಾವು ಸ್ಥಾಪಿಸಿಕೊಂಡಿರುವ ರಾಜ್ಯವು, ರಾಜಕೀಯ ಸಮುದಾಯವೇ ಸರ್ವಶಕ್ತವಾದುದೆಂಬ ಪಾಶ್ಚಿಮಾತ್ಯ ಭಾವನೆಯನ್ನೇ ಪ್ರತಿಬಿಂಬಿಸುತ್ತಿದೆ. ಅದು ಶಾಸನ ಅಂಗೀಕರಿಸುವ ಮತ್ತು ಕಾರ್ಯಗತಗೊಳಿಸುವ ಸಂಪೂರ್ಣ ಅಧಿಕಾರದಿಂದ ಸಜ್ಜುಗೊಂಡಿದೆ. ಅದು ತನ್ನ ಕಾರ್ಯಾಂಗ ಮತ್ತು ಶಾಸಕಾಂಗದ ಕೆಲಸಕಾರ್ಯಗಳ ಮೇಲೆ ಯಾವುದೇ ಪರಿಮಿತಿಯನ್ನಾಗಲಿ ವಿಧಿಸಿರಬಹುದು. ಆದರೆ ಅದನ್ನು ಧರ್ಮದ ಅಲಂಘನೀಯತೆಯ ಆಧಾರದ ಮೇಲಾಗಲಿ ಅಥವಾ ಸಮಾಜ ಮತ್ತು ಧರ್ಮಕ್ಕೆ ಸಂಬಂಧಿಸಿದ ಯಾವುದೇ ಶಾಸನವನ್ನಾಗಲಿ ಮಾಡಲು ರಾಜನು ಅಸಮರ್ಥನೆಂಬ ಆಧಾರದ ಮೇಲಾಗಲಿ ವಿಧಿಸಲಿಲ್ಲ. ಈ ಪರಿಮಿತಿಯನ್ನು ಸ್ವಯಂಪ್ರೇರಿತವಾಗಿ ವಿಧಿಸಲಾಯಿತು. ರಾಷ್ಟ್ರದಲ್ಲಿ ಜನರು ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸಿದಾಗ, ಈ ಪರಿಮಿತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡುವ ಸಾಧ್ಯತೆಯಿದೆ. ನವಭಾರತವು ತನ್ನ ರಾಜಕೀಯ ಮತ್ತು ಸಾಂವಿಧಾನಿಕ ಅಂಶಗಳಲ್ಲಿ, ಪ್ರಾಚೀನ ಭಾರತದ ರಾಜಕೀಯ ವಿಚಾರಗಳಿಂದ, ಏನನ್ನೂ ತೆಗೆದುಕೊಂಡಿಲ್ಲ ಅಥವಾ ಸೇರಿಸಿಕೊಂಡಿಲ್ಲವೆಂಬುದು ಸುಸ್ಪಷ್ಟವಾಗಿದೆ.

ನಮ್ಮ ಮೂಲ ರಾಜಕೀಯ ಚಿಂತನೆಯ ಪರಂಪರೆ ಇನ್ನು ಜೀವಂತವಾಗಿದೆ. ಆದರೂ, ನಮ್ಮ ಇಂದಿನ ರಾಜಕೀಯ ಅನುಭವ ಇನ್ನು ಏಕೆ ವಿದೇಶೀ ಮೂಲಗಳ ಮೇಲೆಯೇ ಆಧಾರಿತವಾಗಿದೆ? ಇದಕ್ಕೆ ಸರಳ ಕಾರಣವಿದೆ. ಹದಿಮೂರನೆಯ ಶತಮಾನದ ನಂತರ, ಭಾರತದ ರಾಜಕೀಯ ಚಿಂತನೆಯ ಬೆಳವಣಿಗೆ ನಿಂತುಹೋಯಿತು. ಆದ್ದರಿಂದ ಅದಕ್ಕೆ ಮಾರ್ಗದರ್ಶಿಯಾಗುವಂತಹ ಹೊಸ ರಾಜಕೀಯ ಅನುಭವ ಇಲ್ಲದಂತಾಯಿತು. ಇದರ ಪರಿಣಾಮವಾಗಿ, ವ್ಯಾಖ್ಯಾನಕಾರರು ಮತ್ತು ನಿಬಂಧಗಳ ಲೇಖಕರು, ಹಿಂದೆ ಇದ್ದ ಆಚಾರ್ಯರುಗಳು ಏನು ಹೇಳಿದ್ದರೋ ಅದನ್ನೇ ಪುನರಾವರ್ತಿಸಿದರು. ಯೂರೋಪ್‌ನಲ್ಲೂ ಜ್ಞಾನೋದಯದ ಅವಧಿಯ ತರುವಾಯ, ರಾಜಕೀಯ ಚಿಂತನೆಯಲ್ಲಿ ಮುನ್ನಡೆ ಕಂಡುಬಂದಿತು. ಆ ಅವಧಿಯಲ್ಲಿ, ಹದಿನೆಂಟನೆಯ ಶತಮಾನದ ಕ್ರಾಂತಿಕಾರಿ ಚಿಂತನಕಾರರು, ಚರ್ಚ್‌ನ ಮತ್ತು ರಾಜಪ್ರಭುತ್ವದ ತಳಹದಿಯನ್ನೇ ಪ್ರಶ್ನಿಸತೊಡಗಿದ್ದರು. ಅಮೆರಿಕಾದ ಮತ್ತು ಫ್ರೆಂಚ್ ಕ್ರಾಂತಿಗಳು ಹಾಗೂ ೧೬೮೮ರಲ್ಲಿ ನಡೆದ ವಿಗ್–ಕ್ರಾಂತಿ – ಇವುಗಳಿಂದ ಉಂಟಾದ ಅನುಭವ, ಹೊಸ ರಾಜಕೀಯ ಚಿಂತನೆಗೆ ಬುನಾದಿ ಹಾಕಿಕೊಟ್ಟಿತು. ಇದು, ಮಧ್ಯಯುಗದಲ್ಲಿದ್ದ ರಾಜಕೀಯ ವಿಚಾರಗಳಿಗೆ ಭಂಗವುಂಟುಮಾಡಿತು. ಭಾರತೀಯ ರಾಜಕೀಯ ಚಿಂತನೆ, ಹೆಚ್ಚು ಕಡಿಮೆ ಮಧ್ಯಯುಗದ ರಾಜಕೀಯ ಸಿದ್ಧಾಂತಗಳಿಗೆ

ಸಮಾನವಾಗಿತ್ತು. ಇದು, ಬಹುಶಃ ಯೂರೋಪ್‌ನ ರಾಜಕೀಯ ಚಿಂತನೆಯ ಲಾಕಿಯನ್ ಪೂರ್ವ ಪ್ರಬಲ ಸಿದ್ಧಾಂತಗಳಿಗೂ ಸ್ವಲ್ಪ ಹೆಚ್ಚು ಸುಧಾರಣಾ ಮತ್ತು ಜಾತ್ಯತೀತ ತತ್ತ್ವವನ್ನು ಹೊಂದಿತ್ತು. ಆದರೆ ರೂಸ್ಸೊ ಮತ್ತು ಅವನ ಕ್ರಾಂತಿಕಾರಕ ಸಿದ್ಧಾಂತದ ನಂತರ ಪರಿಸ್ಥಿತಿ ಬೇರೆ ಸ್ವರೂಪ ಪಡೆಯಿತು.

ಹೆಗಿಲಿಯನ್ ಸಿದ್ಧಾಂತವು ಹತ್ತೊಂಬತ್ತನೆಯ ಶತಮಾನದ ಒಂದು ವಿಶಿಷ್ಟ ಲಕ್ಷಣವಾಗಿ ಹೊರಹೊಮ್ಮಿತು. ಆಸ್ಟೀನ್‌ನ ನ್ಯಾಯಪರತಾವಾದ ಈ ಸಿದ್ಧಾಂತದೊಡನೆ ಸೇರಿಕೊಂಡಿತ್ತು. ಆದರೂ ಫ್ರಾನ್ಸ್‌ನ ಕ್ರಾಂತಿಕಾರಿ ಸರ್ಕಾರ, ಆ ವೇಳೆಗಾಗಲೇ ಸಂಪೂರ್ಣ ಅಧಿಕಾರವನ್ನು ಪಡೆದುಕೊಂಡಿತ್ತು. ಅಷ್ಟೇ ಅಲ್ಲದೆ ಶಾಸನ ಮಾಡುವ ಅಧಿಕಾರವನ್ನು ಸಹ ಅದು ವಿಪುಲವಾಗಿ ಹೊಂದಿತ್ತು. ನ್ಯಾಯಾಂಗ ವಿಷಯಗಳಲ್ಲಿ ಅದಕ್ಕೆ ಗೌರವಾರ್ಹ ಸ್ಥಾನ ನೀಡಲಾಗಿತ್ತು. ರಾಜಕೀಯಕ್ಕೆ ಸಾರ್ವತ್ರಿಕ ರೂಪ ಕೊಡಲಾಗಿತ್ತು. ಇದೆಲ್ಲದಕ್ಕೂ ನ್ಯಾಯಶಾಸ್ತ್ರಪಾರಂಗತರೇ ಕಾರಣವಾಗಿದ್ದರು. ಯೂರೋಪಿಯನ್ ರಾಜಕೀಯ ಸಿದ್ಧಾಂತ ಅನಂತರ ಹೇಗೆ ವಿಕಾಸಗೊಂಡಿತು ಎಂಬುದನ್ನು ಪರಿಶೀಲಿಸುವುದರ ಅಗತ್ಯ ನಮಗಿಲ್ಲ. ಏಕೆಂದರೆ, ಭಾರತವು ರಾಜ್ಯದ ಸ್ವರೂಪ ಹೇಗಿರಬೇಕೆಂಬ ವಿಚಾರವನ್ನು ಈಗಾಗಲೇ ಯೂರೋಪ್‌ನಿಂದ ಪಡೆದುಕೊಂಡಿದೆ. ನ್ಯಾಯಾಂಗಕ್ಕೆ ಮತ್ತು ಕಾರ್ಯಾಂಗಕ್ಕೆ ಅತ್ಯಧಿಕ ಅಧಿಕಾರವಿರುವ ಮತ್ತು ಸಾಮಾಜಿಕ ಚಟುವಟಿಕೆಗಳ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿರುವಂತಹ ರಾಜ್ಯ ವ್ಯವಸ್ಥೆ ಅದಾಗಿತ್ತು.

ಭಾರತದ ಹೊಸ ರಾಜ್ಯ ವ್ಯವಸ್ಥೆಯಲ್ಲಿ ಸರಿಸಮಾನ ಅಧಿಕಾರ ಹೊಂದಿದ್ದ ಕೇಂದ್ರಗಳು, ಸಾರ್ವಜನಿಕಾಭಿಪ್ರಾಯ, ಕಾರ್ಮಿಕ ಸಂಘಗಳು ಮತ್ತು ಇತರ ಕಾರ್ಮಿಕ ಸಂಸ್ಥೆಗಳು, ಕೋಮು ಹಕ್ಕುಗಳ ಭಾವನೆ, ಪತ್ರಿಕೆಗಳು ಮುಂತಾದವು ಸಹ ತಮ್ಮ ಮೂಲಕ್ಕೆ ಕಾರಣ, ಹಳೆಯ ಜಾನಪದಗಳು ಎಂದಾಗಲಿ ಅಥವಾ ಅವುಗಳೊಡನೆ ಯಾವ ಸಂಬಂಧವಿದೆಯೆಂದಾಗಲಿ ಹೇಳಿಕೊಳ್ಳುವುದಿಲ್ಲ. ಶ್ರೇಣಿಗಳು ಮತ್ತು ಗಣಗಳಂತಹ ವೃತ್ತಿಪರ ಸಂಸ್ಥೆಗಳೊಡನೆ ಇಂತಹ ಯಾವ ಸಂಬಂಧವೂ ಇಲ್ಲವೆಂದು ಅವು ಹೇಳುತ್ತವೆ. ಹಿಂದೆ ಇದ್ದ ಜಾತಿಪದ್ಧತಿಗಳ ಸಮಾಜವು ಸಹ ತಮ್ಮ ಮೂಲಕ್ಕೆ ಕಾರಣವಲ್ಲವೆಂದು ಅವು ತಿಳಿಸುತ್ತವೆ. ಇಂದು ಸಾರ್ವಜನಿಕ ಅಭಿಪ್ರಾಯವು, ಏನನ್ನಾಗಲಿ ನಿರ್ದೇಶಿಸುವ ಹಕ್ಕು ಜನರಿಗಿರಬೇಕೆಂಬ ಸಿದ್ಧಾಂತದ ಮೇಲೆ ಆಧಾರಿತವಾಗಿದೆಯೇ ಹೊರತು, ಈ ಬಗ್ಗೆ ಸಲಹೆ ನೀಡುವ ಬುದ್ಧಿವಂತನ ಹಕ್ಕಿನ ಆಧಾರದ ಮೇಲಲ್ಲ. ಹಿಂದೂ ಸಿದ್ಧಾಂತದ ಮೇರೆಗೆ, ಪೌರರಿಗೆ ಮತ್ತು ಜನಪದರಿಗೆ ತಮ್ಮಿಂದ ಸಲಹೆ ಪಡೆಯುವ ಹಕ್ಕು ಇತ್ತು. ಅವರು ಜಾತಿಗಳ ಮತ್ತು ಗುಂಪುಗಳ ವಕ್ತಾರರಾಗಿದ್ದರು. ಅವರಿಗೆ ಪ್ರಾತಿನಿಧಿಕ ಸ್ಥಾನವಿತ್ತೆಂದು ಹೇಳಬಹುದು. ಇಂದಿನ ಸಾರ್ವಜನಿಕಾಭಿಪ್ರಾಯ, ರಾಜಕೀಯ ಜೀವನದ ಒಂದು ಭಾಗವಾಗಿದೆ.

ಧೋರಣೆಗಳು ಮತ್ತು ವಿದ್ಯಮಾನಗಳ ವಿಷಯದಲ್ಲಿ ಜನರಲ್ಲಿ ಭಾವನೆ ಹುಟ್ಟಿಸುವ ಒಂದು ಪ್ರಜ್ಞಾಪೂರ್ವಕ ಪ್ರಯತ್ನ ಇದಾಗಿದೆ. ಶ್ರೇಣಿಗಳು ಮತ್ತು ಗಣಗಳು ಪ್ರಭಾವಶಾಲಿಯಾಗಿದ್ದವೆಂಬುದರಲ್ಲಿ ಸಂಶಯವಿಲ್ಲ. ಅವು ಬಹುಮಟ್ಟಿಗೆ ಸ್ವಯಮಾಡಳಿತ ಹೊಂದಿದ್ದವು, ಕೆಲವು ವಿಷಯಗಳಲ್ಲಿ ಅವು ನ್ಯಾಯ ತೀರ್ಮಾನವನ್ನು ಸಹ ಕೊಡುತ್ತಿದ್ದವು. ಒಂದು ರೀತಿಯಲ್ಲಿ ಅವು ನಮ್ಮ ಕಾರ್ಮಿಕ ಸಂಘಗಳಿಗೆ ಮತ್ತು ಉದ್ಯೋಗಪತಿಗಳಿಗೆ ಮಾರ್ಗದರ್ಶನ ಸಹ ನೀಡುತ್ತಿದ್ದವು. ಆದರೆ ಅವು ಕರಕುಶಲ ವಸ್ತುಗಳ ಸಂಘವೊಂದನ್ನು ಪ್ರತಿನಿಧಿಸುತ್ತಿದ್ದವು. ಅವುಗಳಿಗೆ ಅದರಲ್ಲಿ ಆಸಕ್ತಿ ಬೆಳೆದು ತಮ್ಮ ಕ್ಷೇತ್ರದೊಳಗೆ ತುಂಬ ಪ್ರಭಾವಶಾಲಿಯಾಗಳಾದವು. ಆದರೆ ರಾಜಕೀಯ ಕ್ಷೇತ್ರದಲ್ಲಿ ಅವುಗಳಿಗೆ ಪರಿಣಾಮಕಾರಿಯಾದ ಪಾತ್ರವಿರಲಿಲ್ಲ. ಬಂಡವಾಳಶಾಹೀ ಕೈಗಾರಿಕಾ ಸಂಸ್ಥೆ ಬೆಳೆಯುತ್ತಾ ಹೋದುದರ ಪರಿಣಾಮವಾಗಿ ಅವಕ್ಕೆ ಇಂತಹ ಪರಿಸ್ಥಿತಿ ಒದಗಿತು. ಈ ಕೈಗಾರಿಕಾ ಬೆಳವಣಿಗೆ ಪಾಶ್ಚಾತ್ಯ ದೇಶದಲ್ಲೇ ಆರಂಭವಾಯಿತು.

ಜಾತಿ ಪದ್ಧತಿ ಇನ್ನೂ ಪ್ರಭಾವಶಾಲಿಯಾಗಿಯೇ ಇದೆಯೆಂಬುದರಲ್ಲಿ ಸಂದೇಹವಿಲ್ಲ. ಆದರೂ ಅದರ ಪ್ರಭಾವ ಸ್ವಲ್ಪ ಕಡಿಮೆಯಾಗುತ್ತಿದೆ. ಹಳೆಯ ಹಿಂದೂ ಸಾಮಾಜಿಕ ಸಂಸ್ಥೆ, ಈಗಲೂ ಈ ಪದ್ಧತಿಯನ್ನೇ ಗೌರವಿಸುತ್ತದೆ. ಆದರೆ ಹೊಸ ಭಾರತ, ಜಾತಿ ಪದ್ಧತಿಯನ್ನು ಅದರ ಎಲ್ಲ ರೂಪಗಳಲ್ಲೂ ವಿರೋಧಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ವಯಸ್ಕ ಮತದಾನದ ಮೇಲೆ ಚುನಾವಣೆ ನಡೆಯುತ್ತದೆ. ಆದ್ದರಿಂದ ಜಾತಿ ಮತಗಳ ಪ್ರಭಾವವನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ. ಜನತೆಯ ದರ್ಜೆಗನುಗುಣವಾದ ವರ್ಗೀಕರಣಕ್ಕೂ ಈಗ ಆಸ್ಪದವಿಲ್ಲ. ಕಾನೂನಿನ ಎದುರು ಎಲ್ಲರೂ ಸಮಾನರು, ಸಾರ್ವಜನಿಕ ಸೇವೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ, ಅಧಿಕಾರವನ್ನು ಹಂಚಿಕೊಳ್ಳಲು ಎಲ್ಲರಿಗೂ ಸಮಾನ ಹಕ್ಕು– ಇವೆಲ್ಲವೂ ಪ್ರಜಾಸತ್ತೆಯ ಮುಖ್ಯ ಲಕ್ಷಣಗಳಾಗಿವೆ. ಇವೆಲ್ಲವೂ ಜಾತಿ ಪದ್ಧತಿಯ ಮೂಲಸಿದ್ಧಾಂತಕ್ಕೆ ವಿರುದ್ಧವಾಗಿವೆ. ಹಿಂದೂ ರಾಜ್ಯವು ಇಂತಹ ಧರ್ಮವನ್ನು ಈ ಮುಂಚೆ ಎತ್ತಿ ಹಿಡಿದಿತ್ತು. ಇದೇ ಅದರ ಧ್ಯೇಯವೂ ಆಗಿತ್ತು.

ಆಧುನಿಕ ಭಾರತದಲ್ಲಿ ರಾಜ್ಯದ ಸ್ವರೂಪ ಮತ್ತು ವ್ಯವಸ್ಥೆ – ಎಲ್ಲವೂ ಮೂಲತಃ ಪಾಶ್ಚಾತ್ಯ ಮಾದರಿಗಳಿಂದ ಬಂದಂತಹವು. ಅವುಗಳ ಮೂಲ ಪಾಶ್ಚಾತ್ಯ ದೇಶಗಳು. ಆದ್ದರಿಂದ ಹಿಂದೂ ರಾಜಕೀಯ ಚಿಂತನೆಯಲ್ಲಾಗಲಿ ಅಥವಾ ಅನುಷ್ಠಾನದಲ್ಲಿ ಯಾಗಲಿ, ನಮಗೆ ಉತ್ತಮವಾದಂತಹವು ಏನಿವೆ? ನಮ್ಮ ಸಂಸ್ಥೆಗಳಲ್ಲಿ ಮತ್ತು ಚಿಂತನೆಯಲ್ಲಿ ಇನ್ನೂ ಜೀವಂತವಾಗಿರುವ ಮೌಲ್ಯಗಳಿವೆಯೇ? ಜನರ ಮನಸ್ಸಿನಲ್ಲಿ ಇಷ್ಟು ಕಾಲದಿಂದಲೂ ಬೇರೂರಿದ್ದ ಭಾವನೆಗಳು ಮತ್ತು ಚಿಂತನೆಗಳು, ಹೊರದೇಶಗಳಲ್ಲಿ ಹುಟ್ಟಿಕೊಂಡ ಹೊಸ ವಿಚಾರಗಳನ್ನು ಒಪ್ಪಿಕೊಂಡು, ಅನುಷ್ಠಾನಕ್ಕೆ

ತಂದ ಪರಿಣಾಮವಾಗಿ, ಮಾಯವಾಗಿ ಹೋಗುತ್ತವೆ ಎಂದು ನಿರೀಕ್ಷಿಸುವುದು ಸರಿಯಲ್ಲ. ಸ್ವತಂತ್ರ ಭಾರತದಲ್ಲಿ ಭಾರತದ ಪ್ರಾಚೀನ ರಾಜಕೀಯ ಚಿಂತನೆಗಳು ಮತ್ತು ಅನುಭವಗಳು ನಶಿಸಿ ಹೋಗದೆ ಇನ್ನೂ ಜೀವಂತವಾಗಿವೆ. ಇವುಗಳಲ್ಲಿ ಅತ್ಯಂತ ಗಮನಾರ್ಹವಾದುದೆಂದರೆ ಆಡಳಿತ ವ್ಯವಸ್ಥೆ ಹೊಂದಿರುವ ರಾಜ್ಯ. ಇದರ ಒಂದು ಸಮಗ್ರ ಭಾಗವಾಗಿ ರಾಷ್ಟ್ರಾದ್ಯಂತ ಅಧಿಕಾರಿ ವರ್ಗವಿದೆ. ಈ ಸಿವಿಲ್ ಸೇವೆಯ ಅಧಿಕಾರಿಗಳು ಕಂದಾಯವನ್ನು ವಸೂಲು ಮಾಡುವುದಷ್ಟೇ ಅಲ್ಲದೆ ಕಾನೂನು ಮತ್ತು ಶಿಸ್ತನ್ನು ಕಾಪಾಡಿಕೊಂಡು ಬರುತ್ತಾರೆ. ಅವರು ಜೀವನದ ಪ್ರತಿಯೊಂದು ಅಂಶದ ಮೇಲ್ವಿಚಾರಣೆ ನಡೆಸುತ್ತಾರೆ. ಕೈಗಾರಿಕಾ ಸಂಸ್ಥೆಗಳನ್ನು ನಿರ್ವಹಿಸುತ್ತಾರೆ. ಆರ್ಥಿಕಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ನೀರಾವರಿ ಸೌಲಭ್ಯಗಳನ್ನು ನಿರ್ಮಿಸಿ, ನೀರಾವರಿ ಕೆಲಸಗಳನ್ನು ನಿಯಂತ್ರಿಸುತ್ತಾರೆ. ಗಣಿಗಳಲ್ಲಿ ಅದಿರು ತೆಗೆಯುವ ಕಾರ್ಯ ಕೈಗೊಳ್ಳುತ್ತಾರೆ. ಸರ್ಕಾರಿ ವ್ಯಾಪಾರ ವಹಿವಾಟು ಹಾಗೂ ಇತರ ಅನೇಕ ಬಗೆಯ ಕೆಲಸ ಕಾರ್ಯಗಳನ್ನು ನಡೆಸುತ್ತಾರೆ. ಇವೆಲ್ಲವೂ ಕೌಟಿಲ್ಯನ ಕಾಲದಲ್ಲಿದ್ದ ರಾಜ್ಯದಿಂದ ಬಂದಂತಹವಾಗಿವೆ. ಭಾರತದ ಪರಂಪರಾಗತ ಆಡಳಿತ ವ್ಯವಸ್ಥೆಯನ್ನು, ಮುಸ್ಲಿಮರು, ಹಿಂದೆ ಅಧಿಕಾರದಲಿಲದ್ದವರಿಂದ ಪಡೆದುಕೊಂಡರು. ಇದೇ ಆಡಳಿತ ವ್ಯವಸ್ಥೆಯನ್ನು ಸ್ವಲ್ಪ ಬದಲಾವಣೆಗಳೊಂದಿಗೆ ಈಸ್ಟ್ ಇಂಡಿಯಾ ಕಂಪೆನಿ ವಹಿಸಿಕೊಂಡಿತು.

ಈ ಎಲ್ಲ ಸೇವೆಗಳಿಗೆ ಬ್ರಿಟಿಷರು ವ್ಯವಸ್ಥಾತ್ಮಕ ಸ್ವರೂಪವನ್ನು ನೀಡಿದರು. ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತಂದರು. ತರಬೇತಿಗಾಗಿ ವಿಶೇಷ ಕಾರ್ಯವಿಧಾನಗಳನ್ನು ಅಭಿವೃದ್ಧಿ ಪಡಿಸಿದರು. ವ್ಯಾಪಕವಾದ ನಿಯಮಾವಳಿಯನ್ನು ರೂಪಿಸಿದರು. ಕೆಲಸದ ಗುಣಮಟ್ಟವನ್ನು ನಿರ್ದಿಷ್ಟಪಡಿಸಲು ಕೈಪಿಡಿಗಳನ್ನು ಸಿದ್ಧಪಡಿಸಿದರು. ಇಷ್ಟಾದರೂ, ಆಡಳಿತ ವ್ಯವಸ್ಥೆಯನ್ನು ಅವರು, ಭಾರತದ ಭೂಮಿಗೆ ಅತಿಸಹಜವಾದಂತಹ ಮತ್ತು ಭಾರತೀಯ ಪರಂಪರೆಗೆ ಅನುಗುಣವಾದಂತಹ ರೀತಿಯಲ್ಲಿ ರೂಪಿಸಿಕೊಂಡರೇ ಹೊರತು, ಯೂರೋಪ್‌ನ ಮಾದರಿಯನ್ನು ಅನುಸರಿಸಲಿಲ್ಲ. ಈ ವ್ಯವಸ್ಥೆಯಲ್ಲಿ ಏಳು ಪ್ರಕಾರಗಳ ಅಥವಾ ರಾಜ್ಯದ ಘಟಕಾಂಶಗಳ ಭಾರತೀಯ ಪರಂಪರೆ ಸರ್ವಸಮ್ಮತವಾಗಿ ಪರಿಣಮಿಸಿತು.

ಹೊಸ ಭಾರತೀಯ ರಾಜ್ಯವು, ಹಿಂದಿನ ರಾಜಕೀಯ ವಿಚಾರಗಳಿಂದ ಪಡೆದುಕೊಂಡಿದ್ದು, ಸಿವಿಲ್ ಸೇವೆಗಳು ಮಾತ್ರವಾಗಿರಲಿಲ್ಲ. ಭಾರತದಲ್ಲಿ ಸರ್ಕಾರವು ವ್ಯಾಪಕವಾದ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿದೆ. ಈ ಚಟುವಟಿಕೆಗಳನ್ನು ಎರಡು ಮೂಲಗಳನ್ನು ದೃಷ್ಟಿಯಲ್ಲಿಟ್ಟು ನಡೆಸಲಾಗುತ್ತಿದೆ. ಒಂದು ಮೂಲ ಭಾರತವಾದರೆ, ಮತ್ತೊಂದು ಮೂಲ ಯೂರೋಪ್. ಈ ವಿಷಯದಲ್ಲಿ, ಭಾರತೀಯ

ಪರಂಪರೆ, ಅನಿರ್ಬಂಧವಾಗಿ ಮುಂದುವರಿದುಕೊಂಡು ಬಂದಿದೆ. ಇದು ಮೌರ್ಯ ಸಾಮ್ರಾಜ್ಯ ಕಾಲದಿಂದಲೂ ಸಾಗಿಬಂದಿದೆ. ಈ ಪರಂಪರೆ, ನೀತಿಶಾಸ್ತ್ರ ಬರಹಗಾರರ ಬೋಧನೆಯಲ್ಲಿ ಅಡಗಿದೆ. ಇದರಲ್ಲಿರತಕ್ಕ ವಿಚಾರದಲ್ಲಿ ಯೂರೋಪಿಯನ್ ಲಕ್ಷಣಗಳಿವೆ. ಇದಕ್ಕೆ ಮೂಲ ಮಾರ್ಕ್ಸಿಯಿಯನ್ ಚಿಂತನೆ ಮತ್ತು ಸುಖಿರಾಜ್ಯ ಸ್ಥಾಪನೆಯ ಒಂದು ಕಲ್ಪನೆ. ಎಲ್ಲ ಅರ್ಥಿಕ ಶಕ್ತಿಗಳನ್ನು ರಾಜ್ಯವೇ ನಿಯಂತ್ರಿಸ ಬೇಕೆಂಬುದೇ ಮಾರ್ಕ್ಸಿಯಿಯನ್ ಸಮಾಜವಾದದ ಒಂದು ಮೂಲತತ್ತ್ವ ಭಾರತದಲ್ಲಿನ ಸಮಾಜವಾದಿ ಆಧಾರಿತ ರಾಜ್ಯ. ಅದನ್ನು ಮತ್ತು ಆಯೋಜನಾ ತಂತ್ರವನ್ನು ಯೂರೋಪ್‌ನಲ್ಲಿ ನಡೆದ ಸಮಾಜವಾದಿ ಪ್ರಯೋಗಗಳ ಅನುಭವದಿಂದ ಪಡೆದುಕೊಂಡಿದೆ. ಭಾರತಕ್ಕೂ ಕಮ್ಯೂನಿಸ್ಟ್ ದೇಶಗಳಿಗೂ ಇರುವ ವ್ಯತ್ಯಾಸವೆಂದರೆ, ಕಮ್ಯೂನಿಸ್ಟ್ ದೇಶಗಳಲ್ಲಿ, ಧೋರಣೆಗಳನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆಯನ್ನು ಪಕ್ಷವೇ ನಿಯಂತ್ರಿಸುತ್ತದೆ. ಆದರೆ ಭಾರತದಲ್ಲಿ ರಾಷ್ಟ್ರೀಯ ಆಡಳಿತಾತ್ಮಕ ಸೇವಾ ವ್ಯವಸ್ಥೆಯ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತದೆ. ಭಾರತ ಪರಂಪರೆಯಿಂದಲೂ ಬಂದಿರುವ, ಈ ವ್ಯವಸ್ಥೆಯನ್ನೇ ಅನುಸರಿಸಿಕೊಂಡು ಹೋಗುತ್ತದೆ.

ಭಾರತದ ರಾಜಕೀಯ ಚಿಂತನೆಯ ಮತ್ತೊಂದು ಅಂಶವೆಂದರೆ ಪಂಚಾಯತ್ ರಾಜ್. ಇದು ಭಾರತದ ಸ್ವಂತ ಅನುಭವದಿಂದ ರೂಪಿಸಿಕೊಂಡ ಒಂದು ವ್ಯವಸ್ಥೆ. ಇದನ್ನು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವೆಂದು ಸಹ ಹೇಳಬಹುದು. ದೊಡ್ಡ ದೊಡ್ಡ ಸಾಮ್ರಾಜ್ಯಗಳಿದ್ದ ಕಾಲದಲ್ಲೂ, ಭಾರತದ ರಾಜಕೀಯ ವ್ಯವಸ್ಥೆ, ಹಳ್ಳಿಗಳು ಮತ್ತು ಹಳ್ಳಿಯ ಗುಂಪುಗಳ ಮೇಲೆ (ಗ್ರಾಮಗಳು ಮತ್ತು ಜನಪದಗಳು) ಆಧರಿಸಿತ್ತು. ಭಾರತದ ಹೊಸ ಸಂವಿಧಾನವು ಫೆಡರಲ್ ಸ್ವರೂಪವನ್ನು ಹೊಂದಿತ್ತು. ಇದು ರಾಜ್ಯಘಟಕಗಳ ಮೇಲೆ ಆಧರಿಸಿತ್ತು. ಆರಂಭದಲ್ಲಿ ಈ ಫೆಡರಲ್ ವ್ಯವಸ್ಥೆಯು ಗ್ರಾಮಗಳು ಮತ್ತು ಗ್ರಾಮೀಣ ಘಟಕಗಳೊಂದಿಗೆ ಯಾವ ನೇರ ಸಂಬಂಧವನ್ನೂ ಹೊಂದಿರಲಲ್ಲ. ಆದ್ದರಿಂದ ಆಡಳಿತವು ಸಿವಿಲ್ ಸರ್ವಿಸಸ್‌ಗಳ ಕೈಯಲ್ಲೇ ಕೇಂದ್ರೀಕೃತವಾಗಿ, ದೇಶವು ಬರಿ ಔಪಚಾಚಾರಿಕ ಪ್ರಜಾಸತ್ತೆಯಾಗಿ, ಪರಿಣಮಿಸುವ ಒಂದು ಪ್ರವೃತ್ತಿ ಉಂಟಾಗಿತ್ತು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ, ಕೆಳಮಟ್ಟದಲ್ಲಿರುವ ಚುನಾಯಿತ ಸಂಸ್ಥೆಗಳಿಗೆ ಅಧಿಕಾರವನ್ನು ನೀಡಲಾಗುತ್ತದೆ. ಇದರಿಂದ ಪ್ರಜಾಪ್ರಭುತ್ವವನ್ನು ಗ್ರಾಮೀಣ ಪ್ರದೇಶಗಳಿಗೆ ಕೊಂಡೊಯ್ಯಲು ಅನುಕೂಲವಾಗುತ್ತದೆ. ಇದೊಂದು ಭಾರತದಲ್ಲಿ ನಡೆದಿರುವ ಮಹತ್ವಪೂರ್ಣ ಪ್ರಯೋಗವೆಂದು ಪರಿಗಣಿಸಬಹುದು. ಇದು ಭಾರತದ ಸ್ವಂತ ರಾಜಕೀಯ ಚಿಂತನೆ ಮತ್ತು ಅನುಭವದ ಮೇಲೆ ಆಧಾರಿತವಾಗಿರುವ ಒಂದು ವ್ಯವಸ್ಥೆ.

ಬ್ರಿಟಿಷರ ಕಾಲದಲ್ಲಿ, ರಾಜಕೀಯ ವಿಜ್ಞಾನ ಕುರಿತಂತೆ, ಭಾರತ, ಸ್ವತಂತ್ರವಾಗಿ

ಚಿಂತಿಸುವ ಸ್ಥಿತಿಯಲ್ಲಿ ಇರಲಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರವನ್ನು ಕಂಡುಹಿಡಿದ ಬಳಿಕ, ಭಾರತೀಯ ವಿದ್ವಾಂಸರು ಮತ್ತು ಪಂಡಿತರು ಸಂಶೋಧನೆ ಮತ್ತು ಅದರ ವಿವರಣೆಯಲ್ಲಿ ಆಸಕ್ತಿ ತೋರಿಸಿದರು. ಈ ಸಮಸ್ಯೆಗಳ ಬಗ್ಗೆ ಪ್ರಾಚೀನ ಕಾಲದ ಜನರ ಚಿಂತನೆ ಹೇಗಿತ್ತು ಎಂಬುದನ್ನು ಅವರು ಅರಿತುಕೊಳ್ಳಲು ಪ್ರಯತ್ನಿಸಿದರು. ಅದಕ್ಕಾಗಿ ಅವರು ಪ್ರಾಚೀನ ಗ್ರಂಥಗಳ ಅಧ್ಯಯನದಲ್ಲಿ ತೊಡಗಿದ್ದರು. ಆದರೆ ಭಾರತೀಯ ರಾಜಕೀಯ ಚಿಂತನೆಯಲ್ಲಿ ಪಾಶ್ಚಿಮಾತ್ಯ ವಿಚಾರಗಳೇ ಮೇಲುಗೈ ಪಡೆದಿದ್ದನು. ಆದ್ದರಿಂದ ನಿಜವಾದ ಅನುಭವಕ್ಕೂ ಅದಕ್ಕೂ ಯಾವ ಸಂಬಂಧವೂ ಇರಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದ ಅನೇಕ ಪ್ರಾಚೀನ ಗ್ರಂಥಗಳ ಅಧ್ಯಯನವನ್ನು ಸಹ ಅವರ ನಡೆಸಿದರು. ಈ ಎಲ್ಲ ಕಾರಣಗಳಿಂದ, ಈ ವಿಷಯದಲ್ಲಿ ಆಧುನಿಕ ಭಾರತದ ಕೊಡುಗೆ ಬಹಳ ಕಡಿಮೆ ಎಂದು ಹೇಳಬಹುದು. ಭಾರತೀಯರ ರಾಜಕೀಯ ಚಿಂತನೆಯಲ್ಲಿ ಒಂದು ಹೊಸ ಹಾಗೂ ಸ್ವಕಲ್ಪಿತ ಅಧ್ಯಾಯ ಆರಂಭವಾಗಬೇಕಾಗಿದೆ. ಸ್ವತಂತ್ರ ರಾಜಕೀಯ ಸಮುದಾಯದಲ್ಲಿ, ಭಾರತದ ಅನುಭವ ಹೆಚ್ಚಿದಂತೆ, ಈ ಹೊಸ ಅಧ್ಯಾಯ ಆರಂಭವಾಗುತ್ತದೆ. ಆಗ ನಮ್ಮ ರಾಜಕೀಯ ಚಿಂತನಕಾರರು ನಮ್ಮ ಸಮಸ್ಯೆಗಳ ಬಗ್ಗೆ ಹೆಚ್ಚು ಗಮನಹರಿಸಲು ಸಾಧ್ಯವಾಗುತ್ತದೆ.

* * * *

ಟಿಪ್ಪಣಿಗಳು

೧. *ಹಿಂದು ಪಾಲಿಟಿ* (ಪರಿಷ್ಕೃತ ಆವೃತ್ತಿ) ಪುಸ್ತಕದ ಪ್ರಸ್ತಾವನೆ.

೨. ವಿಲ್ಲರಿ: *ಲೈಫ್ ಅಂಡ್ ಟೈಮ್ಸ್ ಆಫ್ ಮೆಕಿಯವೆಲ್ಲಿ*, ಪು.೩

೩. ಬೇನೀಪ್ರಸಾದ್: *ಸ್ಟೇಟ್ ಇನ್ ಏನ್ಷಂಟ್ ಇಂಡಿಯ*, ಪು.೯೮

೪. ಹಾಬ್ಸ್: *ಲೆವಿಯಥನ್*, ಪು. ೬೪–೬೫

೫. *ಹಿಂದೂ ಪೊಲಿಟಿಕಲ್ ಥಿಯರೀಸ್*, ಪು.೩೦

೬. *ಸಮ್ ಆಸ್ಪೆಕ್ಟ್ಸ್ ಆಫ್ ಹಿಂದೂ ಪಾಲಿಟಿ*, ಪು.೧೬೪

೭. *ಶಾಂತಿಪರ್ವ*, ಅಧ್ಯಾಯ ೧೨೧, ಶ್ಲೋಕಗಳು ೫–೭

೮. ಈ ಇಡೀ ಪ್ರಶ್ನೆಯ ಬಗ್ಗೆ ನೋಡಿ: ಘೋಷಾಲ್ ಅವರ *ಎ ಹಿಸ್ಟರಿ ಆಫ್ ಇಂಡಿಯನ್ ಪೊಲಿಟಿಕಲ್ ಐಡಿಯಾಸ್*, ಆಕ್ಸ್‌ಫರ್ಡ್ ೧೯೫೯, ಪು.೨೦೭.

೯. *ಎಪಿಗ್ರಾಫಿಯ ಇಂಡಿಕ*, ಸಂ.೮, ಪು.೮೨–೮೮

೧೦. ಬೇನೀಪ್ರಸಾದ್‌ರವರ *ಥಿಯರಿ ಆಫ್ ಗವರ್ನಮೆಂಟ್*ನಲ್ಲಿ ಉದಾಹೃತ, ಪು.೧೭೫.

೧೧. *ಮನು*, X, ೨೫೪

೧೨. *ಶಾಂತಿಪರ್ವ* ೧೩೯, ೧೦೦

೧೩. *ಶುಕ್ರನೀತಿಸಾರ*, ಅಧ್ಯಾಯ II, ೬೭

೧೪. *ಶುಕ್ರನೀತಿಸಾರ*, ಅಧ್ಯಾಯ I, ೪೨೦

೧೫. *ಶಾಂತಿಪರ್ವ*, ೧೩೯, ೧೦೦

೧೬. *ಶುಕ್ರ ನೀತಿಸಾರ*, ಪಾಣಿನಿ ಆಫೀಸ್ ಆವೃತ್ತಿ, ಪು.೭೩

* * * *